ಸ್ತ್ರೀ ಕಥನ

ಡಾ. ಶೈಲಜ ಹಿರೇಮಠ

ಸ್ತ್ರೀ ಕಥನ

ಡಾ. ಶೈಲಜ ಹಿರೇಮಠ

ಭುವನ ಪ್ರಕಾಶನ
ಹೊಸಪೇಟೆ ೫೮೩ ೨೦೧

STREE KATHANA
A Collection of
Research Articles & Interviews
BY
Dr. Shailaja Hiremath
Lecturer
Dept. of Women Studies
Kannada University, Hampi
Vidyaranya - 583 276
Hospet Taluk, Bellary District
Publiser
Bhuvana Prakashana
'Nudi', Near Arch
M.P.Prakash Nagar, Hospet-583 201
Ph : 08394 441919
© Author
First Print : 2003
Pages : xii+132 Price : Rs. 75-00

DTP
Rachana Graphics, Hospet
Cell : 94481 65160, 94482 17600

COVER PAGE DESIGN
Makali K.K.
Cell : 94481 65162

PRINTER
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
Chamarajpet
Bangalore - 560 018
✆ 6613123, 6618752

ಅರ್ಪಣೆ

ಸದಾ ನಮ್ಮೊಳಗಿರುವ
ಅಗಲಿದ
ತಮ್ಮ



ವೈಜನಾಥನಿಗೆ

ಕನ್ನಡ ಮಹಿಳಾ ಚಿಂತನೆಯ ವಿಸ್ತರಣೆ

ಕನ್ನಡದ ವೈಚಾರಿಕತೆಯ ವಿಕಾಸದಲ್ಲಿ ಸ್ತ್ರೀ ಕೇಂದ್ರಿತ ಅಧ್ಯಯನಗಳು ಬಹುರೂಪಿಯಾದ ದೇಶೀಯ ಸಂವೇದನೆಗಳಿಗೆ ತೆರೆದುಕೊಳ್ಳಬೇಕಾದ ಕಾಲವಿದಾಗಿದೆ. ಹಾಗೆಯೇ ಪಶ್ಚಿಮದ ಸ್ತ್ರೀ ವಾದಿ ಆಲೋಚನೆಗಳನ್ನು ನಮ್ಮ ಸಾಮಾಜಿಕ ಸಂದರ್ಭಕ್ಕೆ ಪೂರಕವಾಗುವಂತೆ ಪುನರ್ ಪರಿಶೀಲಿಸಿ ಸಂಬಂಧ ಮಾಡಿಕೊಳ್ಳ ಬೇಕಾಗಿದೆ. ಇಂತಹ ಬೌದ್ಧಿಕ ಸಂಬಂಧವು ಮಹಿಳೆಯರ ಸ್ಥಾನೀಯವಾದ ಹಾಗು ಭಿನ್ನ ಸಾಮಾಜಿಕ ಸಾಂಸ್ಕೃತಿಕ ಚಾರಿತ್ರಿಕ ನೆಲೆಗಳನ್ನು ಸೂಕ್ಷ್ಮವಾಗಿ ಪ್ರತ್ಯೇಕವಾಗಿ ವಿಶ್ಲೇಷಿಸಲು ಬೇಕಾಗುತ್ತವೆ. ಸ್ತ್ರೀ ಕೇಂದ್ರಿತ ಆಲೋಚನೆಗಳು ಈಗ ಏಕಾಕಾರದ ಕ್ರಮದಲ್ಲುಳಿಯಬೇಕಾದ ಸ್ಥಿತಿಯಲ್ಲಿಲ್ಲ. ಭಾರತೀಯ ಸಮಾಜದ ಧಾರ್ಮಿಕ ವ್ಯವಸ್ಥೆಯು ಮಹಿಳೆಯರನ್ನು ಬಹುರೂಪಿ ಶೋಷಣೆಯ ಬಲೆಯಲ್ಲಿ ಅತ್ಯಂತ ಸಂಕೀರ್ಣವಾಗಿ ಸಿಲುಕಿಸಿ ರುವ ಕಾರಣ ಎಲ್ಲರ ಸಮಸ್ಯೆಗಳನ್ನು ಒಂದೇ ತಕ್ಕಡಿಯಲ್ಲಿ ತೂಗಲಾಗದು. ಯಾವುದೇ ನಿರ್ವಚನ ಅಧ್ಯಯನ ತಾತ್ವಿಕ ನೆಲೆಗಳು ಲಿಂಗತಾರತಮ್ಯದ ಆಚೆಗೆ ಹೋಗಿ ಮಾನವೀಯ ತುಡಿತಗಳನ್ನು ಸಮಷ್ಟಿಯಾಗಿ ಗ್ರಹಿಸಿದಾಗ ಮಾತ್ರ ಅದು ಎಲ್ಲರಿಗೂ ಬೇಕಾದ ಅರಿವಾಗಿ ವಿಕಾಸವಾಗುವುದು.

ಸ್ತ್ರೀವಾದಿ ಚಿಂತನೆಯು ಭಾರತೀಯ ಸಮಾಜದಲ್ಲಿ ಈಗತಾನೆ ವೈಚಾರಿಕ ಅರಿವಿನ ದಾಹದಲ್ಲಿ ಸಂಸ್ಕೃತಿಯ

ಬೇರುಗಳನ್ನು ಹುಡುಕುತ್ತಿದೆ. ಯಾವುದೇ ಒಂದು ಸಮಾಜವು ಅತ್ಯಂತ ತೃಪ್ತ ಸ್ಥಿತಿಯಲ್ಲಿ ಇದ್ದಾಗ ಅದರ ಲಿಂಗಸಂಬಂಧಗಳು ತಾರತಮ್ಯ ರಹಿತವಾಗಿರುತ್ತವೆ ಎಂಬುದು ಒಂದು ಪ್ರಮೇಯ. ಸಂಸ್ಕೃತಿಯ ವಿಕಾಸದಲ್ಲಿ ಕೂಡ ಇದು ನಿಜವಿರಬಹುದು. ಆದರೆ ಎಲ್ಲ ಕಾಲದಲ್ಲೂ ಸಮಾಜಗಳು ತೃಪ್ತ ಸ್ಥಿತಿಯಲ್ಲಿ ಇರಲಿಕ್ಕೆ ಸಾಧ್ಯವೇ ಇಲ್ಲ ಎಂಬುದು ಮತ್ತೊಂದು ಪ್ರಮೇಯ. ಸ್ತ್ರೀ ಸಂವೇದನೆಯು ಕುಟುಂಬ ಮತ್ತು ಸಮಾಜದ ಎರಡು ಪ್ರಧಾನ ಧಾರೆಗಳಿಂದ ಸಂಸ್ಕೃತಿಯ ಮಾನವೀಯ ಸಂಬಂಧಗಳನ್ನು ಹಡೆಯುವ ಬೆಳೆಸುವ ವಿಕಸಿಸುವ ಪ್ರವೃತ್ತಿಗೆ ಒಳಪಟ್ಟು ಸರ್ವೋದಯದ ತೃಪ್ತ ಸಮಾಜಕ್ಕೆ ಬೇಕಾದ ಮೌಲ್ಯಗಳನ್ನು ರೂಪಿಸುತ್ತಿದ್ದರೆ ಇದಕ್ಕೆ ವೈರುಧ್ಯ ಎಂಬಂತೆ ಯಾವಾಗಲೂ ಅತೃಪ್ತ ಸ್ಥಿತಿಯಲ್ಲಿ ಭೋಗದ ಗುರಿಯಲ್ಲಿ ಯಜಮಾನ್ಯದ ದಾಹದಲ್ಲಿ ಸದಾ ತನ್ನ ಅಸ್ತಿತ್ವಕ್ಕೆ ಬೇಕಾದ ಮಾನದಂಡಗಳನ್ನು ರೂಪಿಸಿಕೊಳ್ಳುವಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ಕ್ರಿಯಾಶೀಲವಾಗಿರುತ್ತದೆ. ಇಂತಹ ಎರಡು ಪ್ರಮೇಯಗಳ ಆಕರ್ಷಣೆ ಮತ್ತು ವಿಕರ್ಷಣೆಯ ಪರಿಣಾಮವಾಗಿಯೆ ಮಾನವೀಯ ಸಂಬಂಧಗಳು ಸಂಸ್ಕೃತಿಯಲ್ಲಿ ಹುಟ್ಟಿಕೊಳ್ಳುವುದು. ಇಂತಹ ಮೌಲ್ಯಗಳು ಲಿಂಗತಾರತಮ್ಯದ ಆಚೆಗಿನ ಪರಂಪರೆಗಳಿಗೆ ದಾರಿ ನೋಡುತ್ತ ಬಂದಿರುತ್ತವೆ. ಮೌಖಿಕ ಪರಂಪರೆಯಲ್ಲಿ ಈ ಬಗೆಯ ವಿಕಾಸವಿದ್ದು ಜನಪದ ಸಂಸ್ಕೃತಿಗಳು ಸ್ತ್ರೀ ಸಂವೇದನೆಯ ರೂಪಕ ನೀತಿಯನ್ನು ಅಭಿವ್ಯಕ್ತಿಸುತ್ತವೆ. ಹೀಗಾಗಿಯೇ ಸ್ತ್ರೀವಾದಿ ವಿವೇಚನೆಯು ಲಿಂಗತಾರತಮ್ಯದ ಸಂಕೀರ್ಣವಾದ ಸಂಸ್ಕೃತಿಯ ಒಳನೇಯ್ಗೆಯನ್ನು ಸೂಕ್ಷ್ಮ ಸಂವೇದನೆಯ ಮೂಲಕ ಬಿಡಿಸಿ ಅರ್ಥಗಳ ಬಂಧುತ್ವವನ್ನು ಸಮಷ್ಠಿಯಾಗಿ ಬೆಸೆಯಬೇಕಾದ ಜವಾಬ್ದಾರಿ ಇರುವುದು. ಇಂತಹ ಸವಾಲನ್ನು ಒಬ್ಬೊಬ್ಬರೂ ಅವರವರು ಬಂದ ನೆಲೆಯಿಂದ ಮಾತ್ರ ದಕ್ಷಿಸಿದರೆ ಸಾಲದು. ಈ ಬಗೆಯ ಕ್ರಮ ಪ್ರಾಥಮಿಕವಾದುದು. ನಾವು ಬಂದ ಸಾಮಾಜಿಕ ವಿನ್ಯಾಸದ ಒಳಗೆ ನಿಂತು ಮೊದಲು ಅದರ ಮಿತಿಗಳನ್ನು ದಾಟಿ ಆಮೇಲೆ ಉಳಿದ ಸ್ತರಗಳ ಲೋಪಗಳನ್ನು ಮುರಿದು ಅಂತಿಮವಾಗಿ ಸಮಷ್ಠಿಯಾದ ಜೈವಿಕ ಸಹಜವಾದ ತಾಯ್ತನದ ಶಕ್ತಿಯಲ್ಲಿ ಇಡೀ ಸಮಾಜದ ಸಮಸ್ತ ಸ್ಥಿತಿಗೆ ಬೇಕಾದ ವೈಚಾರಿಕ ಮಂತ್ರಗಳನ್ನು ಕಟ್ಟಬೇಕಾಗಿದೆ. ಇದು ಅತ್ಯಂತ ಜಟಿಲವಾದ ಕಾರ್ಯ. ಅನೇಕರು ಭಾವಿಸಿರುವಂತೆ ಮಹಿಳಾ ಚಿಂತನೆಯು ಸರಳವಾದ ಸ್ತ್ರೀ ಕೇಂದ್ರಿತವಾದ ಒಂದು ಇತ್ತೀಚಿನ ಸಮಸ್ಯೆ ಅಲ್ಲ. ವಾಸ್ತವವಾಗಿ ನಿಜಕ್ಕೂ ಮಹಿಳಾ ಚಿಂತನೆಯ ಸವಾಲುಗಳಿಗೆ ಪುರುಷನಿಷ್ಠ ಸಮಾಜವೆ ಹೊಣೆಯಾಗಬೇಕಾಗಿದ್ದು ಮಹಿಳೆಯರಿಗಿಂತಲೂ ಮಿಗಿಲಾಗಿ ಪುರುಷರೇ ಈ ಬಗ್ಗೆ ಗಂಭೀರ ಅಧ್ಯಯನ ಮತ್ತು ಪರ್ಯಾಯ ಕ್ರಮಗಳನ್ನು ಹುಡುಕಬೇಕಾಗಿದೆ. ಸಮಸ್ಯೆಯನ್ನು ಸೃಷ್ಠಿಸಿದವರೇ ಸಮಸ್ಯೆಯನ್ನು ಕೊನೆಗಾಣಿಸಿದರೆ ಅದು ಹೆಚ್ಚು ಅರ್ಥಪೂರ್ಣ ಹಾಗು ಆ ಸವಾಲು ನಿಜಕ್ಕೂ ಪರಿಹಾರ ಕಾಣಲು ಸಾಧ್ಯ. ಜಾತಿ ವ್ಯವಸ್ಥೆಯನ್ನು ಸೃಷ್ಠಿಸಿದವರೇ ಜಾತಿಯನ್ನು ಬಿಡಬೇಕಾಗಿದೆಯೆ ವಿನ: ಜಾತಿ ಸೃಷ್ಠಿಗೆ ಯಾವ ರೀತಿಯಲ್ಲೂ ಕಾರಣರಾಗದವರು ಜಾತಿಯನ್ನು ಬಿಡಬೇಕಾದ ಸ್ಥಿತಿ ಇರುವುದಿಲ್ಲ. ಅಂದರೆ ಜಾತಿಯೆ ಇಲ್ಲದವರು ಜಾತಿಯನ್ನು ಬಿಡಬೇಕು ಎಂಬುದು

ಮೌಲ್ಯವಾಗಲಾರದು. ಮಹಿಳೆಯರ ಮೇಲಿನ ಶೋಷಣೆಯ ಧಾರ್ಮಿಕ ಕುತಂತ್ರಗಳನ್ನು ಸೃಷ್ಟಿಸಿದ ಪುರುಷರೆ ಅಂತಹ ವ್ಯಾಧಿಗಳಿಂದ ಬಿಡಿಸಿಕೊಂಡು ಮಹಿಳೆಯರ ವಿವೇಕದ ಜೊತೆಗೆ ಸಂಯೋಗವಾಗಬೇಕಾದ್ದಿದೆಯೆ ಹೊರತು ಮಹಿಳೆ ಮಾತ್ರವೆ ಇಂತಹ ಜಟಿಲ ಸವಾಲುಗಳಿಂದ ಬಿಡಿಸಿಕೊಂಡರೆ ಸಾಲದು. ಯಾಕೆಂದರೆ ಮಹಿಳೆಯರನ್ನು ಪಂಜರದೊಳಿಟ್ಟು ಬಂಧಿಸುವ ಕುತಂತ್ರದಲ್ಲಿ ಧಾರ್ಮಿಕ ಅಂಧಕಾರದಲ್ಲಿ ತನ್ನ ಯಜಮಾನ್ಯದ ಅಮಲಿನಲ್ಲಿ ಸ್ವತಃ ಪುರುಷನೇ ಬಂಧಿಯಾಗಿ ಬಿಟ್ಟಿರುತ್ತಾನೆ. ಹಾಗಾಗಿ ಏಕಕಾಲಕ್ಕೆ ಇಬ್ಬರೂ ಮುಕ್ತರಾಗಬೇಕಾದ ಮಾನವೀಯ ಕಥನಗಳನ್ನು ನಮ್ಮ ನಮ್ಮ ಜನಪದ ಸಂಸ್ಕೃತಿಯ ಒಳಗಿಂದಲೂ ಶಿಷ್ಟ ಪರಂಪರೆಯ ವಿವೇಕದಿಂದಲೂ ಪುರುಷ ಮತ್ತು ಸ್ತ್ರೀ ಸಂವೇದನೆಗಳೆರಡರಿಂದಲೂ ಸಂಯೋಗ ಮಾರ್ಗದಿಂದ ಕಂಡುಕೊಳ್ಳಬೇಕಾದ್ದಿದೆ. ಇಲ್ಲವಾದರೆ ಸ್ತ್ರೀ ಕೇಂದ್ರಿತ ಚಿಂತನೆಗಳು ಮತ್ತೆ ಪುರುಷ ವ್ಯವಸ್ಥೆಯ ರಾಜಕಾರಣದಲ್ಲಿ ಪರ್ಯವಶಾನವಾಗಬೇಕಾದ ಅಪಾಯವಿದೆ. ಈ ಬಗೆಯ ಅಪಾಯವನ್ನು ಜನಪದ ಸಂಸ್ಕೃತಿಯಲ್ಲಿ ತಳ ಸಮುದಾಯಗಳ ಸ್ತ್ರೀ ಕಥನಗಳು ತುಂಬ ಸೂಕ್ಷ್ಮವಾಗಿ ಮೌನದನಿಯಲ್ಲಿ ತಮಗೆ ಬೇಕಾದ Space ಮತ್ತು Time ಗಳನ್ನು ರೂಢಿಸಿಕೊಂಡಿರುವುದನ್ನು ಗಮನಿಸಬೇಕಾದ್ದಿದೆ. ಈ ಮೇಲಿನ ಹಿನ್ನೆಲೆಗಳಲ್ಲಿ ಡಾ. ಶೈಲಜ ಹಿರೇಮಠ ಅವರ 'ಸ್ತ್ರೀ ಕಥನ' ಕೃತಿಯನ್ನು ಪರಿಶೀಲಿಸಬಹುದು.

ಶೈಲಜ ಹಿರೇಮಠ ಅವರು ತಮ್ಮ ಪಾತರದವರು ಕೃತಿಯ ಮೂಲಕ ಸ್ತ್ರೀ ಸಂವೇದಿ ಬರಹಗಳಿಗೆ ಹೊಸ ಬಗೆಯ ಮಾಹಿತಿಯ ಕಥನಗಳನ್ನು ತುಂಬ ಸೂಕ್ಷ್ಮವಾಗಿ ಸಮರ್ಥವಾಗಿ ನಿರೂಪಿಸಿದಾಗಲೆ ಈ ಲೇಖಕಿಯ ಒಟ್ಟು ಬರಹದ ವ್ಯಾಪ್ತಿಯು ಸ್ತ್ರೀ ಸಂಸ್ಕೃತಿ ಚರಿತ್ರೆಯ ರೂಪ ಮತ್ತು ವಿರೂಪಗಳ ವೈರುಧ್ಯವನ್ನು ಬಿಡಿಸಿ ಹುಡುಕುವ ಸ್ವಭಾವಕ್ಕೆ ಒಳಪಟ್ಟಿದೆ ಎಂಬ ಅಂಶ ಕಂಡಿತ್ತು. ಇದೇ ಧ್ಯಾನವನ್ನು ಲೇಖಕಿ ಈ ಕೃತಿಯಲ್ಲು ಮುಂದುವರಿಸಿರುವುದು ಗಮನಾರ್ಹವಾಗಿದೆ. ಸಾಂಸ್ಕೃತಿಕ ಅಧ್ಯಯನಗಳಿಗೆ ತುಡಿಯುವ ಲೇಖಕಿಯ ಧೋರಣೆಯು ಕೇವಲ ಲಿಂಗತಾರತಮ್ಯದ ಏಕಮುಖ ತರ್ಕಗಳಿಗೆ ನಿಲ್ಲದಿರುವುದು ಮೆಚ್ಚತಕ್ಕ ಅಂಶವಾಗಿದೆ. "ವಸಾಹತು ಕಣ್ಣುಗಳಿಂದಲೆ ಸಾಂಸ್ಕೃತಿಕ ಹುಡುಕಾಟ ನಡೆಸಿರುವ ನಾವು ನಮ್ಮ ಅಸಲಿ ಚೈತನ್ಯವನ್ನು ಗುರುತಿಸಿಕೊಳ್ಳಬೇಕಾದರೆ ಚರಿತ್ರೆಯ ಪದರುಗಳನ್ನು ಬಿಡಿಸಿ ನೋಡಬೇಕಾದ ಅಗತ್ಯವಿದೆ" ಎಂದು ಶೈಲಜ ನಿಖರವಾಗಿ ತಮ್ಮ ಹುಡುಕಾಟದ ತಾತ್ವಿಕತೆಯನ್ನು ಬಹುಪಾಲು ಎಲ್ಲ ಲೇಖನಗಳಲ್ಲೂ ಸೂಚಿಸುತ್ತಲೆ ಆ ಬಗೆಯ ಯತ್ನಕ್ಕೆ ತೊಡಗುತ್ತಾರೆ. ನಿರ್ವಸಾಹತೀಕರಣಗೊಳ್ಳುವ ಹಂಬಲ ಲೇಖಕಿಯ ಹಠವೂ ಆಗಿರುವುದು ಗಮನಿಸಬೇಕಾಗಿದೆ.

'ಮಂತ್ರವಿದ್ಯೆ ಮತ್ತು ಮಹಿಳೆ' ಎಂಬ ಈ ಬರಹದ ಉದ್ದಕ್ಕೂ ಲೇಖಕಿಯು ಲಿಂಗತಾರತಮ್ಯದ ವಿವರಗಳಲ್ಲಿ ತೊಡಗಿದರೂ ಕೂಡ ಸಂಸ್ಕೃತಿಯ ಒಳವಿನ್ಯಾಸದಲ್ಲಿ ಆಗಿರುವ ಗುಪ್ತ ಪ್ರತಿರೋಧ ಚೈತನ್ಯಗಳನ್ನು ಆಧುನಿಕ ಯುಗದ ಸ್ಥಿತಿಯಲ್ಲಿ ಹೇಗೆ ಸಬಲೀಕರಣದ ವಿವೇಕವನ್ನಾಗಿ ಮರು ರೂಪಿಸಿಕೊಳ್ಳಬೇಕು ಎಂಬ ಉಪಾಯಗಳನ್ನು

ಆಲೋಚಿಸುತ್ತಾರೆ. ಲೇಖಕಿಯು ಈ ಬಗೆಯ ಹಾದಿಯಲ್ಲಿ ಮಾತೃಮೂಲ ಪರಂಪರೆಯ ಆಚರಣೆ ಮತ್ತು ದೈವಿಕ ನೆಲೆಯ ನಂಬಿಕೆಗಳನ್ನು ತುಂಬ ವಿಶ್ವಾಸದಿಂದ ವ್ಯಾಖ್ಯಾನಕ್ಕೆ ಒಳಪಡಿಸುವುದು ವಿಶೇಷವಾಗಿದೆ. ಇಲ್ಲಿನ ಬಹಳಷ್ಟು ಲೇಖನಗಳಲ್ಲೆಲ್ಲ ಸಂಸ್ಕೃತಿ ನಿಷ್ಠವಾದ ತುಡಿತಗಳಿಗೆ ಶೈಲಜ ಹೆಚ್ಚಿನ ಗಮನ ಕೊಟ್ಟಿರುವುದು ಅವರ ತಾತ್ವಿಕ ತಳಹದಿ ಧರ್ಮ ರಹಿತವಾದದ್ದು ಎಂಬುದನ್ನು ತಿಳಿಸುತ್ತದೆ. ಮಾನವಶಾಸ್ತ್ರೀಯ ಶಿಸ್ತಿನಿಂದ ಮಹಿಳಾ ನಿರ್ವಚನವನ್ನು ಬೆಳೆಸುವ ಇವರ ಕ್ರಮವು ಈ ಹೊತ್ತಿನಲ್ಲಿ ಬರೆಯುತ್ತಿರುವ ಬಹುಬಗೆಯ ಸ್ತ್ರೀವಾದಿ ಲೇಖಕಿಯರಿಗಿಂತ ಭಿನ್ನವಾಗಿದೆ. ಪುರುಷ ವ್ಯವಸ್ಥೆಯ ಉಪಟಳ ಕುತಂತ್ರ ವೈದಿಕ ಧರ್ಮದ ವಕ್ರ ತರ್ಕಗಳ ಬಗ್ಗೆ ಶೈಲಜ ಸಹಜವಾಗಿಯೆ ಒರಟಾದ ಗದ್ಯದಲ್ಲಿ ಪುರುಷ ವಿರೋಧಿಯಂತೆ ಕಾಣುವ ಶೈಲಿಯಲ್ಲಿ ಬರೆಯುವವರಾಗಿದ್ದರೂ ಅಂತಹ ಮಿತಿಯನ್ನು ಅವರ ಬರಹಗಳು ಸಂಸ್ಕೃತಿ ನಿಷ್ಠವಾದ ಮಾನವೀಯ ಮೌಲ್ಯಗಳ ಪ್ರತಿಪಾದನೆಯಿಂದಾಗಿ ಮರೆಯಾಗುತ್ತವೆ. ಶೈಲಜ ವಿಶೇಷವಾಗಿ ಜನಪದ ಪರಂಪರೆಯ ಸಾಧ್ಯತೆಗಳ ಮೂಲಕ ಸ್ತ್ರೀ ವಿವೇಚನೆಯನ್ನು ವಿಸ್ತರಿಸುತ್ತಿರುವುದು ಅವರ ಬರಹಗಳಿಗೆ ವಿಶಿಷ್ಟವಾದ ಸಾಂಸ್ಕೃತಿಕ ಸ್ವಭಾವವನ್ನು ತಂದುಕೊಟ್ಟಿದೆ.

ಈ ಹಿನ್ನೆಲೆಯಲ್ಲಿ ಚರಿತ್ರೆಯ ಪುನರವಲೋಕನಕ್ಕೆ ಈ ಬರಹಗಳು ಒತ್ತಾಯಿಸುತ್ತವೆ. ಲೇಖಕಿಯ ಸಮರ್ಥವಾದ ನಿರೂಪಣೆ ಖಚಿತ ತಾರ್ಕಿಕ ಮಂಡನೆ ಅವೈದಿಕ ತಾತ್ವಿಕತೆಗಳು ಗಮನೀಯವಾಗಿವೆ. ಲೈಂಗಿಕ ಶೋಷಣೆಯ ಸುತ್ತ ಹೇಗೆ ಒಂದು ಧರ್ಮ ಅದರ ಪ್ರಭುತ್ವ ಮತ್ತು ಅದರ ಯಜಮಾನನಾದ ಪುರುಷ ವ್ಯವಸ್ಥೆಗಳು ಸಮಾನವಾಗಿ ಸೇರಿಕೊಂಡು ಯಾವತ್ತು ಕೂಡ ಹಿಂಸೆ ಮತ್ತು ಆಕ್ರಮಣಶೀಲತೆಯನ್ನು ಚರಿತ್ರೆಯಲ್ಲಿ ಹೇಗೆ ದಿಗ್ವಿಜಯಿಸಿವೆ ಎಂಬುದನ್ನು ಪ್ರತಿರೋಧ ಗದ್ಯದಲ್ಲಿ ಲೇಖಕಿಯು ನಿರೂಪಿಸಿರುವುದು ಚರ್ಚೆ ಮತ್ತು ವಾಗ್ವಾದಗಳನ್ನು ಬೆಳೆಸುವಂತಿವೆ. 'ವಿವಾಹ-ವೈಧವ್ಯ-ವಾಟರ್' ಎಂಬ ಲೇಖನದಲ್ಲಿ ಇಂತಹ ಸಂಗತಿಗಳನ್ನು ಸೂಚ್ಯವಾಗಿ ಚರ್ಚಿಸಿ ಇದೇ ದನಿಯನ್ನು 'ಮಹಿಳಾ ಜನಪದ ಕಲೆಗಳು' ಬರಹದಲ್ಲೂ ಬೆಳೆಸಿ "ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗ ಸಮಾನತೆಯ ಪ್ರಶ್ನೆ. ಪಾತರದವರನ್ನು ಜೋಗತಿಯರನ್ನು ಅನುಲಕ್ಷಿಸಿ" ಎಂಬ ದೀರ್ಘವಾದ ಲೇಖನದಲ್ಲಿ ವಿವರವಾಗಿ ವಿಶ್ಲೇಷಿಸಿದ್ದಾರೆ. ಈ ಲೇಖನ ತುಂಬ ಮಹತ್ವದ ಪ್ರಶ್ನೆಗಳ ಜೊತೆಗೆ ವಿವರವಾದ ಮಾಹಿತಿಗಳ ನೇಯ್ಗೆಯಲ್ಲಿ ಇಡೀ ಭಾರತೀಯ ಸಮಾಜದ ಲಿಂಗತಾರತಮ್ಯದ ವ್ಯಂಗ್ಯ ದುರಂತ ವಿಪರ್ಯಾಸ ಮತ್ತು ಭಯಾನಕವಾದ ರೂಪ ಜಗತ್ತನ್ನು ಪರಿಚಯಿಸುತ್ತದೆ. ಇಡೀ ಸಂಕಲನದಲ್ಲಿ 'ಮಂತ್ರವಿದ್ಯೆ ಮತ್ತು ಮಹಿಳೆ' ಹಾಗೂ ಮೇಲೆ ಸೂಚಿಸಿದ ಈ ಲೇಖನವು ಕನ್ನಡ ಮಹಿಳಾ ಚಿಂತನೆಯ ವಿಸ್ತರಣೆಗೆ ಹೊಸದಾಗಿ ಸೇರ್ಪಡೆಯಾದ ಬರಹಗಳೆಂದು ಭಾವಿಸಬಹುದು. ಭಾಗಶಃ ಪಾತರದ ಮತ್ತು ಜೋಗತಿಯ ಸ್ತ್ರೀಯರ ಖಾಸಗಿ ಸಂಕಟ ಅಪಮಾನಗಳನ್ನು ಮೊದಲ ಬಾರಿಗೆ ಶೈಲಜ ಸಂಗ್ರಹಿಸಿ ಲಿಂಗ ಸಮಾನತೆಯ ಚೋದ್ಯ ಮತ್ತು ದುರಂತದ ಎಳೆಗಳನ್ನು ವಿವರವಾಗಿ ಬಿಡಿಸಿ ಹೇಳಿರುವುದು ಇದೇ

ಮೊದಲಿರಬೇಕು. ಇಂತಹ ಬರಹಗಳನ್ನು ರೂಪಿಸುವುದು ತುಂಬ ಕಷ್ಟದ ಕೆಲಸ. ಮಧ್ಯಮ ವರ್ಗದ ನಗರ ಕೇಂದ್ರದ ಉನ್ನತ ವೈದಿಕ ಮಹಿಳಾ ಚಿಂತಕಿಯರಿಗೆ "ಮಹಿಳೆ ಮತ್ತು ವಿರಾಮ" ಎಂತಲೊ "ಉದ್ಯೋಗಸ್ತ ಮಹಿಳೆಯರ ಬಿಡುವಿನ ಚಟುವಟಿಕೆಗಳು" ಎಂತಲೊ ವಿಷಯ ಸೃಷ್ಟಿಸಿ ಅದಕ್ಕೆ ಒಂದಿಷ್ಟು ಉಪ್ಪುಕಾರ, ಇಂಗು, ತೆಂಗು, ಹುಳಿ ಹಿಂಡಿ ಮಸಾಲೆ ಬೆರೆಸಿ ವಗ್ರಣೆಕೊಟ್ಟು ಶೈಕ್ಷಣಿಕ ಶಿಸ್ತನ್ನು ಅಲಂಕಾರಿಕವಾಗಿ ಮಾಡಿ ರಾಷ್ಟ್ರೀಯ ಅಂತರ ರಾಷ್ಟ್ರೀಯ ಸೆಮಿನಾರುಗಳಲ್ಲಿ ಉಣಬಡಿಸಿ ತಾವೂ ಗಡದ್ದಾಗಿ ತೇಗಿ ಮಹಿಳಾ ಸಮಾನತೆಯ ಮಾತನಾಡುವುದು ಬಹಳ ಬಹಳ ಸುಲಭ. ಅಂತವರು ಈ ಬಗೆಯ ತಳಸಮುದಾಯಗಳ ಮಹಿಳಾ ದುರಂತಗಳ ಕಥನಗಳನ್ನು ಗಮನಿಸಬೇಕು. 'ದೇವಸ್ತ್ರೀಯರು' ಲೇಖನ ಕೂಡ ಇಂತದೆ ಧ್ವನಿಯ ಲೇಖನವಾಗಿದ್ದು ಸ್ವತಃ ಲೈಂಗಿಕ ಶೋಷಣೆಗೆ ಒಳಗಾದ ಮಹಿಳೆಯರ ಅನುಭವ ಕಥನಗಳನ್ನು ಮಂಡಿಸುತ್ತದೆ. ಜೊತೆಗೆ ದೇವದಾಸಿ ವಿಮೋಚನಾ ಸಂಸ್ಥೆಯ ಬಿ.ಎಲ್.ಪಾಟೀಲರ ಜೊತೆಗೆ ಮಾಡಿರುವ ಸಂದರ್ಶನ ಕೂಡ ಟಿಪ್ಪಣಿ ಮಾದರಿಯ ಲೇಖನದಂತಿದ್ದು ಈ ಬಗೆಯ ಸಮಸ್ಯೆಯ ಪರಿಹಾರಗಳ ಕಡೆ ಆಲೋಚಿಸುವ ಸಂಬಂಧಗಳ ಬಗ್ಗೆ ಗಮನ ಹರಿಸುತ್ತಾರೆ. ಈ ಬಗೆಯ ಬರಹಗಳಿಗೆ ಭಿನ್ನವಾಗಿ ಕಾಣುವ ಲೇಖನವೆಂದರೆ "ಸ್ವಾತಂತ್ರ್ಯ ಯುದ್ಧ : ಮಹಿಳಾ ಜನಪದ ಸಾಹಿತ್ಯ". ಇದರಲ್ಲಿ ಲೇಖಕಿಯು ಸ್ವಾತಂತ್ರ್ಯ ಚಳುವಳಿಯಲ್ಲಿ ಕಿತ್ತೂರುರಾಣಿ ಚೆನ್ನಮ್ಮ ಮತ್ತು ಈರಮ್ಮರ ಬಗೆಗಿನ ಪ್ರತಿರೋಧಗಳನ್ನು ಜನಪದ ಸಾಹಿತ್ಯದ ವಿವರಣೆಗಳ ಮೂಲಕ ವಿವರಿಸುತ್ತಾರೆ. ವಶಾಹತು ಶಾಹಿ ವಿರುದ್ಧದ ಪ್ರತಿರೋಧ ದೇಶೀಯವಾಗಿ ಜನಪದ ಸಮಾಜದಲ್ಲಿ ಅದರಲ್ಲೂ ಸ್ತ್ರೀಯರ ಮೂಲಕ ಹೇಗೆ ಎದುರಾಯಿತು ಎಂಬುದನ್ನು ವಿವರವಾಗಿ ತಿಳಿಸುತ್ತಾರೆ. ಹಾಗೆಯೆ ಹೇಗೆ ಜನಪದ ಸಾಹಿತ್ಯದಲ್ಲಿ ಮಹಿಳೆ ಹಾಗೂ ಪುರುಷರ ಪ್ರತಿನಿಧೀಕರಣವೂ ಆಗಿದೆ ಎಂಬ ಚರ್ಚೆಗಳಿಗೂ ಇಳಿಯುತ್ತಾರೆ. ಈ ಲೇಖನವು ಏಕಕಾಲಕ್ಕೆ ಹಲವಾರು ಸಮಸ್ಯೆಗಳನ್ನು ಒಂದೇ ತೆಕ್ಕೆಯಲ್ಲಿ ಸೇರಿಸಿಕೊಂಡು ಬರುವುದರಿಂದ ಅನೇಕ ಜಾಳು ವಿವರ ಮತ್ತು ಗೊಂದಲಗಳಿಂದ ತನ್ನ ಉದ್ದೇಶವನ್ನು ಸಮರ್ಥವಾಗಿ ನಿರ್ವಹಿಸಲು ಆಗಿಲ್ಲ. ಲೇಖಕಿಯು ತುಂಬ ವಿಶ್ವಾಸದಿಂದ ವಿವರಗಳನ್ನು ಮಂಡಿಸಿದರೂ ಕೂಡ ಸೂಕ್ಷ್ಮವಾದ ವಿಶ್ಲೇಷಣೆಯಲ್ಲಿ ಆ ಎಲ್ಲ ವಿವರಗಳನ್ನು ಸಂಯೋಗಿಸುವ ಹಂತದಲ್ಲಿ ಪೆಡಸಾದ ವಾಕ್ಯ ಮತ್ತು ಮಾತುಗಳಲ್ಲಿ ನಿಂತುಬಿಡುತ್ತಾರೆ. ಈಗ ತಾನೆ ವೈಚಾರಿಕ ಎಚ್ಚರ ಮಾಗುವ ಸ್ಥಿತಿಯಲ್ಲಿ ಕನ್ನಡದ ಸ್ತ್ರೀ ಕಥನವು ಸಾಗಬೇಕಾದಲ್ಲಿ ಶೈಲಜ ಅವರು ತಾಳ್ಮೆಯಿಂದ ಮತ್ತಷ್ಟು ಸಂವೇದನಾಶೀಲರಾಗಿ ಅತ್ಯಂತ ಸೂಕ್ಷ್ಮ ಗ್ರಹಿಕೆಗಳ ಆಳದ ದನಿಗಳ ಮೂಲಕ ಬಹುರೂಪಿ ಸ್ತ್ರೀ ನಿರ್ವಚನಗಳನ್ನು ಭಾಷೆಯ ಪ್ರಬುದ್ಧ ಶೈಲಿಯಲ್ಲಿ ಪ್ರತಿಸೃಷ್ಟಿಸಬೇಕಾಗಿದೆ. ಅಂತಹ ಸಾಧ್ಯತೆಯ ಸೂಚನೆ ಅವರ ಈ ಕೃತಿಯಲ್ಲಿ ಕಾಣುತ್ತಿದೆ.

❑ ಡಾ. ಮೊಗಳ್ಳಿ ಗಣೇಶ್

ನನ್ನ ಮಾತು

ಸ್ತ್ರೀ ಕಥನದಲ್ಲಿರುವ ಸಂಶೋಧನಾ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದವು. ಇತ್ತೀಚೆಗೆ ಬರೆದ ಲೇಖನಗಳೂ ಇಲ್ಲಿವೆ. ಇವೆಲ್ಲವುಗಳನ್ನು ಒಟ್ಟು ಸೇರಿಸಿ ಪುಸ್ತಕ ರೂಪದಲ್ಲಿ ತರಲು ಆತ್ಮೀಯ ಗೆಳತಿ ಸಿದ್ಧಗಂಗಮ್ಮ ಒತ್ತಡ ತರುತ್ತಿದ್ದಳು. ಅವಳ ಪ್ರೀತಿಯ ಒತ್ತಾಯದ ಫಲವೇ ಈ **ಸ್ತ್ರೀ ಕಥನ** ಕೃತಿ.

ಇಲ್ಲಿನ ಕೆಲವು ಲೇಖನಗಳು ಕ್ಷೇತ್ರಕಾರ್ಯವನ್ನು ಅವಲಂಬಿಸಿ ರೂಪಪಡೆದವುಗಳಾಗಿವೆ. ಮತ್ತೆ ಕೆಲವು, ಓದು ಹಾಗೂ ಬಾಲ್ಯದಿಂದಲೂ ಸೂಕ್ಷ್ಮವಾಗಿ ಗ್ರಹಿಸಿಕೊಂಡು ಬಂದ ಸಾಮಾಜಿಕ ತಿಳುವಳಿಕೆಯ ಹಿನ್ನೆಲೆಯಲ್ಲಿ ಮೂಡಿಬಂದವುಗಳಾಗಿವೆ. ಇಲ್ಲಿನ ಎಲ್ಲ ಲೇಖನಗಳೂ ಸ್ತ್ರೀವಾದದ ಗ್ರಹಿಕೆಯಲ್ಲಿಯೇ ಮೈದಾಳಿವೆ.

ಡಾ. ಮೊಗಳ್ಳಿ ಗಣೇಶ್ ಅವರು, ನಾನು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಆರಂಭದಿಂದಲೂ ನನ್ನಲ್ಲಿಯ ವೈಚಾರಿಕತೆಯನ್ನು ಪ್ರೋತ್ಸಾಹಿಸಿ ಬೆಳೆಸಿದವರು. ಬರಹಕ್ಕೆ ಒಂದು ಶಕ್ತಿಯನ್ನು ಒದಗಿಸಿಕೊಟ್ಟವರು. ಪಾತರದವರು ಕೃತಿಯನ್ನೊಳಗೊಂಡಂತೆ ಸ್ತ್ರೀ ಕಥನದಲ್ಲಿರುವ ಹಲವಾರು ಲೇಖನಗಳಿಗೆ ಅವರ ಮಹತ್ವಪೂರ್ಣ ಸಲಹೆ ಸೂಚನೆಗಳು ದೊರೆತಿವೆ. ಅಂಥವರು ಬೆಲೆಯುಳ್ಳ ಮುನ್ನುಡಿ ಬರೆದು, ನನ್ನ ಅಕ್ಯಾಡೆಮಿಕ್ ಬೆಳವಣಿಗೆಗೆ ಹಾರೈಸಿದ್ದಾರೆ. ಅವರಿಗೆ ಪ್ರೀತಿಪೂರ್ವಕ ಕೃತಜ್ಞತೆಗಳು.

ನನ್ನ ಬರವಣಿಗೆಯನ್ನು ಸದಾ ಪ್ರೋತ್ಸಾಹಿಸುತ್ತಾ ಬಹುಮುಖ್ಯವಾದ ಸಲಹೆ ಸೂಚನೆಗಳನ್ನು ನೀಡುತ್ತ ಶೈಕ್ಷಣಿಕ ಬೆಳವಣಿಗೆಗೆ ಕಾರಣರಾದ ಡಾ. ಹಿ.ಚಿ.ಬೋರಲಿಂಗಯ್ಯ ಅವರು ಪ್ರೀತಿಯಿಂದ ಮೌಲಿಕವಾದ ಬೆನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಸಹೋದ್ಯೋಗಿ ಮಿತ್ರರಾದ ವಿ.ಬಿ.ತಾರಕೇಶ್ವರ ಅವರು ನನ್ನ ವೈಚಾರಿಕ ಚಿಂತನೆಗೆ ನಿರ್ದಿಷ್ಟ ದಿಕ್ಕುದೆಸೆಗಳನ್ನು ತೋರಿಸಿಕೊಟ್ಟಿದ್ದಾರೆ. ಇಲ್ಲಿರುವ ಅನೇಕ ಲೇಖನಗಳಿಗೆ ಹಲವಾರು ಅತ್ಯುಪಯುಕ್ತ ಸಲಹೆ ಸೂಚನೆಗಳನ್ನು ಕೊಟ್ಟು ಸಹಕರಿಸಿದ್ದಾರೆ. ಅವರಿಗೆ ಹೃದಯಪೂರ್ಣ ಕೃತಜ್ಞತೆಗಳು.

ಸ್ತ್ರೀ ಕಥನದಲ್ಲಿನ ಲೇಖನಗಳ ಬರಹದುದ್ದಕ್ಕೂ ಮುಖ್ಯವಾದ ಸಲಹೆ ಸೂಚನೆಗಳನ್ನು ನೀಡುತ್ತ ಪ್ರೋತ್ಸಾಹಿಸಿದ ಡಾ. ಟಿ.ಆರ್.ಚಂದ್ರಶೇಖರ್, ಡಾ. ಶಿವಾನಂದ ವಿರಕ್ತಮಠ ಡಾ. ಬಿ.ಎಂ.ಪುಟ್ಟಯ್ಯ ಹಾಗೂ ಸಿ.ವೆಂಕಟೇಶ ಅವರನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ.

ನನ್ನವ್ವ, ಅಪ್ಪಾಜಿ ಹಾಗೂ ತಮ್ಮ ಗಿರೀಶ ಇವರು ನನ್ನ ಬದುಕು ಮತ್ತು ಬರಹಕ್ಕೆ ಜೀವ ಚೈತನ್ಯವನ್ನು ತುಂಬಿದವರು. ಈ ಇಳಿವಯಸ್ಸಿನಲ್ಲಿಯೂ ಎಲ್ಲ ಜವಬ್ದಾರಿಗಳನ್ನು ತಾವೇ ಹೊತ್ತುಕೊಂಡು ಸಹಕರಿಸುತ್ತಿರುವ ನನ್ನ ತಂದೆ ತಾಯಿಗಳಿಗೆ ಏನೆಂದು ಕೃತಜ್ಞತೆ ಹೇಳಲಿ? ತನ್ನ ತುಂಟಾಟಗಳ ಮಧ್ಯೆಯೂ ಓದು ಬರಹಕ್ಕೆ ಬಿಡುವು ಮಾಡಿಕೊಡುತ್ತಿರುವ ಮಗ ಭುವನನಿಗೆ, ನನ್ನ ಶೈಕ್ಷಣಿಕ ಪ್ರಗತಿಗೆ ಸದಾ ಬೆಂಬಲಿಸುತ್ತಿರುವ ಪತಿ ಅರುಣಸ್ವಾಮಿ ಅವರಿಗೆ ಪ್ರೀತಿಪೂರ್ವಕ ನೆನಕೆಗಳು.

ಅಕ್ಷರ ಜೋಡಣೆ ಮಾಡಿದ ಸೋಮನಾಥ ಕುಡಿತಿನಿ, ಅಂದವಾಗಿ ಮುಖಪುಟ ವಿನ್ಯಾಸ ಮಾಡಿದ ಮಕಾಳಿ ಹಾಗೂ ಅಚ್ಚುಕಟ್ಟಾಗಿ ಮುದ್ರಿಸಿದ ಲಕ್ಷ್ಮಿ ಮುದ್ರಣಾಲಯ ಇವರೆಲ್ಲರಿಗೂ ಕೃತಜ್ಞತೆಗಳು.

❑ **ಡಾ. ಶೈಲಜ ಹಿರೇಮಠ**

ಪರಿವಿಡಿ

ಕನ್ನಡ ಮಹಿಳಾ ಚಿಂತನೆಯ ವಿಸ್ತರಣೆ i

ನನ್ನ ಮಾತು vii

ಭಾಗ ಒಂದು

೧. ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗಸಮಾನತೆಯ ಪ್ರಶ್ನೆ : ಪಾತರದವರನ್ನು ಜೋಗತಿಯರನ್ನು ಅನುಲಕ್ಷಿಸಿ ೧

೨. ವಿವಾಹ - ವೈಧವ್ಯ - ವಾಟರ್ ೧೬

೩. ವಿಭಿನ್ನ ಸ್ತ್ರೀವಾದಗಳು : ದಲಿತ ಸ್ತ್ರೀವಾದದ ಅಗತ್ಯತೆ ಮತ್ತು ಪ್ರಸ್ತುತತೆ ೨೬

೪. ಮಂತ್ರವಿದ್ಯೆ ಮತ್ತು ಮಹಿಳೆ ೩೫

೫. ಸ್ವಾತಂತ್ರ್ಯ ಯುದ್ಧ : ಮಹಿಳಾ ಜನಪದ ಸಾಹಿತ್ಯ ೪೧

೬. ದೇವಸ್ತ್ರೀಯರು ೬೦

೭. ಸಿರಿ - ಸ್ತ್ರೀಶಕ್ತಿ ಚೈತನ್ಯ ೭೫

೮. ಮಹಿಳಾ ಜನಪದ ಕಲೆಗಳು : ಹೊಸ ಹುಡುಕಾಟ ೮೦

ಭಾಗ ಎರಡು

೯. ಅಥಣಿ ದೇವದಾಸಿ ವಿಮೋಚನಾ ಸಂಸ್ಥೆ ೮೮

೧೦. ರಂಗಭೂಮಿಯ ಅಂಗಳದಲ್ಲಿ ಸುಭದ್ರಮ್ಮ ಮನ್ಸೂರು ೧೧೩

ಪಾತ್ರದವರು ಕೃತಿಯ ಬಗ್ಗೆ ೧೨೫

ಲೇಖನಗಳ ಸಂದರ್ಭ ಸೂಚಿ ೧೩೦

೧

ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗ ಸಮಾನತೆಯ ಪ್ರಶ್ನೆ : ಪಾತರದವರನ್ನು ಜೋಗತಿಯರನ್ನುಅನುಲಕ್ಷಿಸಿ

ಇತ್ತೀಚಿನ ದಿನಗಳಲ್ಲಿ ಲಿಂಗಸಂಬಂಧಿ ಚರ್ಚೆಗಳು ಬಹುವಾಗಿ ಕೇಳಿ ಬರುತ್ತಿವೆ. ಜಾತಿ, ಧರ್ಮ, ದುಡಿಮೆ, ಉದ್ಯೋಗ, ಸಂಸ್ಕೃತಿ, ಸಮಾಜ, ರಾಜಕೀಯ ಈ ಮೊದಲಾದ ವಿಷಯಗಳಲ್ಲಿ ಲಿಂಗಸಂಬಂಧಿ ನೆಲೆಗಳನ್ನು ಹಾಗೂ ತಾರತಮ್ಯಕ್ಕೆ ಕಾರಣವಾದ ಸಂಗತಿಗಳನ್ನು ತೀವ್ರವಾದ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೆಳವರ್ಗದ ಮಹಿಳೆಯ ಕುರಿತಂತೆ ಗಂಭೀರವಾದ ಅಧ್ಯಯನಗಳು ಅಷ್ಟಾಗಿ ನಡೆದಿಲ್ಲ. ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗಸಮಾನತೆ ಇದೆಯೇ ಎನ್ನುವ ಹುಡುಕಾಟದ ಪ್ರಯತ್ನ ನಮ್ಮಲ್ಲಿ ನಡೆದೇ ಇಲ್ಲ. ಹೀಗಾಗಿ ಈ ಬಗೆಯ ಅಧ್ಯಯನದ ಅಗತ್ಯವಿದೆ. ನಮ್ಮ ಅಧ್ಯಯನಗಳು ಅಲಕ್ಷಿತ ಮಹಿಳಾ ಸಮುದಾಯಗಳ ಕಡೆಗೆ ಅದರಲ್ಲೂ ಖಾಸಗಿ ಬದುಕಿನ ಈ ಬಗೆಯ ವಿವರಗಳ ಕಡೆಗೆ ಸಾಗಬೇಕಿದೆ. ಕಾರಣ 'ಖಾಸಗಿ' ಎನ್ನುವ ಹೆಸರಿನಲ್ಲಿ ಇಂತಹ ಸಂಗತಿಗಳನ್ನು ಕೈಬಿಟ್ಟರೆ, ಅವರ ಕನಸುಗಳನ್ನು ಕೊಯ್ಯುವ, ಅವರ ಭಾವನೆಗಳನ್ನಾಳುವ ವಿಷಯಗಳನ್ನು ಪೋಷಿಸಿದಂತಾಗುತ್ತದೆ. ಅವರ 'ಖಾಸಗಿ' ವಿವರಗಳಲ್ಲಿ ಸಮಾಜಕ್ಕೆ ಮಾದರಿಯಾಗುವ ವಿಷಯಗಳಿದ್ದರೆ, ಅದರಿಂದ ಇಡೀ ಜಗತ್ತೇ ವಂಚಿತವಾದಂತಾಗುತ್ತದೆ.

ವಿವಾಹ ಸಂಸ್ಥೆ ಲಿಂಗತಾರತಮ್ಯವನ್ನು ಪೋಷಿಸುತ್ತದೆ ಎಂಬುದನ್ನು ಈಗಾಗಲೇ ನಡೆದ ಅಧ್ಯಯನಗಳು ಸಾಬೀತು ಮಾಡಿವೆ. ವಿವಾಹ ವ್ಯವಸ್ಥೆಯೇತರ ಸಂಬಂಧಗಳಲ್ಲಿ ಲಿಂಗ ಸಮಾನತೆಯ ಹುಡುಕಾಟ ನಡೆಯಬೇಕಿದೆ. ಇಟ್ಟುಕೊಂಡವಳು ಗಂಡಸಿನ ಸಂಪತ್ತು, ಯೌವನ, ಆರೋಗ್ಯ ಇರುವವರೆಗೆ ಮಾತ್ರ ಆತನಿಗೆ ವಿಧೇಯಳಾಗಿ, ನಿಷ್ಠಳಾಗಿ ನಡೆದುಕೊಳ್ಳುವಳು. ಹಣದ ದುರಾಶೆಯ ಜೊತೆಗೆ ತೀವ್ರವಾದ ಲೈಂಗಿಕ ಅತೃಪ್ತಿ ಅವಳನ್ನು ಕಾಡುತ್ತಿರುತ್ತದೆ. ಲೈಂಗಿಕ ಲಾಲಸೆ ಅವಳಿಗೆ ರಕ್ತಗತವಾಗಿಯೇ ಬಂದಿದೆ. ಹೀಗಾಗಿ ಇಟ್ಟುಕೊಂಡವನು ಸಂಪತ್ತು, ಯೌವನ, ಆರೋಗ್ಯ ಈ ಮೂರು ಸಂಗತಿಗಳಲ್ಲಿ ಯಾವುದಾದರೊಂದನ್ನು ಕಳೆದುಕೊಂಡರೆ ಅವನೊಂದಿಗಿನ ಸಂಬಂಧವನ್ನು ಸಡಿಲಗೊಳಿಸಿಕೊಳ್ಳುತ್ತಾಳೆ. ಹಣವೊಂದಿದ್ದರೆ ಅವನ ಆರೋಗ್ಯ, ಯೌವನವನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ದುಡ್ಡು, ಬೆಳ್ಳಿ, ಬಂಗಾರ, ಭೂಮಿ ಇವುಗಳನ್ನು ಕಳೆದುಕೊಂಡರೆ ಇಟ್ಟುಕೊಂಡವನನ್ನು ಸಂಪೂರ್ಣವಾಗಿ ತ್ಯಜಿಸಿ ಬಿಡುತ್ತಾಳೆ. ಹೀಗೆ ಕಾಮುಕಿಯನ್ನಾಗಿ, ದುರಾಸೆಯವಳನ್ನಾಗಿ, ಕುಟಿಲೆಯನ್ನಾಗಿ ಚಿತ್ರಿಸುವ ನಮ್ಮ ಸಮಾಜವು ಈ ಮಾನದಂಡಗಳಿಂದಲೇ ಅವಳನ್ನು ಕತ್ತಲಲ್ಲಿರಿಸಿದೆ. ಹಾಗೂ ಸಾಮಾಜಿಕ ಅಪರಾಧಿಯನ್ನಾಗಿಸಿದೆ. 'ಹೆಂಡತಿ'ಯ ಕುರಿತು ಬೇರೆಯದೇ ಆದ ಪರಿಕಲ್ಪನೆಗಳಿವೆ. ಪತ್ನಿಯಾದವಳು ಕಾಯಾ, ವಾಚಾ, ಮನಸಾ ಗಂಡನಿಗೆ ನಿಷ್ಠಳಾಗಿರಬೇಕಾಗುತ್ತದೆ. ಹಾಗಿರುವುದನ್ನೇ ನಮ್ಮ ಸಮಾಜ ಸ್ತ್ರೀಧರ್ಮವೆಂದು ಕರೆದಿದೆ. ಇಟ್ಟುಕೊಂಡವಳ ಹಾಗೂ ಕಟ್ಟಿಕೊಂಡವಳ ಕುರಿತಂತಿರುವ ಸಮಾಜದ ಈ ಗ್ರಹಿಕೆ ಅವರಿಗೆ ಶ್ರೇಷ್ಠ, ಕನಿಷ್ಠತೆಯ ಸ್ಥಾನವನ್ನು ನಿರ್ಧರಿಸಿಬಿಟ್ಟಿರುತ್ತದೆ. ಇದರ ಪ್ರತಿಫಲನವನ್ನು 'ಇಟ್ಟುಕೊಂಡವಳು ಇರುತನಕ, ಕಟ್ಟಿಕೊಂಡವಳು ಕೊನೆಯತನಕ' ಎನ್ನುವ ಗಾದೆಮಾತಿನಲ್ಲಿ ಕಾಣಬಹುದು. ಆದರೂ ಅವರ ಖಾಸಗಿ ಬದುಕಿನ ವಿವರಗಳು ಈ ಮಾತಿಗೆ ತದ್ವಿರುದ್ಧವಾದ ಬೇರೆಯದೇ ಜಗತ್ತನ್ನು ತೆರೆದಿಡಬಹುದಲ್ಲ ಎನ್ನುವ ಕುತೂಹಲವೇ ಈ ಲೇಖನಕ್ಕೆ ಸ್ಫೂರ್ತಿಯಾಗಿದೆ. ಈ ಅಧ್ಯಯನದಲ್ಲಿ ಜೋಗತಿ ಮತ್ತು ಪಾತರದವರನ್ನು ಮಾತ್ರ ಅನುಲಕ್ಷಿಸಿರುವೆ. ಬಸವಿಯರನ್ನು, ಸೂಳೆಯರನ್ನು ಉದ್ದೇಶ ಪೂರ್ವಕವಾಗಿಯೇ ಕೈಬಿಟ್ಟಿರುವೆ. ಮದುವೆಯಾಗದೆ ಗಂಡು, ಹೆಣ್ಣು ಸಂಬಂಧ ಬೆಳೆಸಲು ಸಮಾಜ ಒಪ್ಪಿಗೆ ನೀಡಿದ ಸಂಸ್ಥೆಗಳೆಂದರೆ ಜೋಗತಿಯರು, ಪಾತರದವರು, ಬಸವಿಯರು, ಸೂಳೆಯರು. ಪಾತರ ಜನಾಂಗ ಮೂಲದಲ್ಲಿ ಮಾತೃ ಪ್ರಧಾನವಾಗಿತ್ತು[೧] (ಗಮನಿಸಿ, ಶೈಲಜ ಹಿರೇಮಠ: ೧೯೯೯; ಪು. ೨೬-೨೭). ಜೋಗತಿ[೨]ಯರಲ್ಲಿ ಪ್ರಚಲಿತವಿರುವ ಅನೇಕ ಸಂಪ್ರದಾಯ, ಆಚರಣೆಗಳಲ್ಲಿ ಮಾತೃಪ್ರಧಾನ ಮೌಲ್ಯಗಳೂ ಇಂದಿಗೂ ಉಳಿದುಕೊಂಡು ಬಂದಿವೆ. ಆದರೆ ವಾಸ್ತವದಲ್ಲಿ ಅದು ಪ್ರಧಾನ ಸಮಾಜದ ಉದ್ದೇಶಗಳ ಜೊತೆಗೆ ಹೊಂದಿಕೊಂಡಿದೆ. ಬಸವಿಯರನ್ನು[೩] ಮತ್ತು ಸೂಳೆಯರನ್ನು ಪುರುಷ ಪ್ರಧಾನ ಸಮಾಜವೇ ಹುಟ್ಟುಹಾಕಿ ಅಧಿಕೃತ ಸಂಸ್ಥೆಗಳನ್ನಾಗಿಸಿದೆ. ಇಲ್ಲಿ ಹೆಣ್ಣು ಕೇವಲ ಉಪಭೋಗದ ಪದಾರ್ಥ ವಸ್ತು. ಹೀಗಾಗಿ ಇವುಗಳಲ್ಲಿ ಲಿಂಗಸಮಾನತೆಯ ಹುಡುಕಾಟದ ಪ್ರಶ್ನೆಯೇ ಬರುವುದಿಲ್ಲ. ಆದ್ದರಿಂದಲೇ

ಈ ಲೇಖನದಲ್ಲಿ ಮಾತೃಮೂಲ ಹಿನ್ನೆಲೆಯುಳ್ಳ ಜೋಗತಿಯರು ಮತ್ತು ಪಾತರದವರನ್ನು ಮಾತ್ರ ಕೇಂದ್ರವಾಗಿರಿಸಿಕೊಂಡಿದೆ. ಪಾತರದವರು ಎನ್ನುವ ಕೃತಿ ಪ್ರಕಟವಾಗಿದೆ. ಅದರಲ್ಲಿ ದಾಖಲುಗೊಳಿಸದೇ ಇರುವ ಮಾಹಿತಿಯನ್ನು ಈ ಲೇಖನದಲ್ಲಿ ಬಳಸಿಕೊಂಡಿರುವೆ. ಜೋಗತಿಯರ ಕುರಿತಂತೆ ಅಧ್ಯಯನ ನಡೆಸಿರುವೆ. ಕ್ಷೇತ್ರಕಾರ್ಯಾಧ್ಯಯನದಲ್ಲಿ ದೊರೆತ ಮಾಹಿತಿಗಳನ್ನು ಇಲ್ಲಿ ಬಳಸಿಕೊಂಡಿರುವೆ. ಹುನಗುಂದ, ಕಮಲಾಪುರ, ಮರಿಯಮ್ಮನಹಳ್ಳಿ (ಹೊಸಪೇಟೆ), ಚಿಗಟೇರಿ, ಕೂಲಹಳ್ಳಿ (ಹರಪನಹಳ್ಳಿ), ಅಥಣಿ, ತೇರದಾಳ, ಸಂಕೇಶ್ವರ, ಲಕ್ಷ್ಮೇಶ್ವರ ಮೊದಲಾದ ಸ್ಥಳಗಳಲ್ಲಿ ಕ್ಷೇತ್ರಕಾರ್ಯ ನಡೆಸಿರುವೆ. ಕ್ಷೇತ್ರಕಾರ್ಯ ಪ್ರಧಾನವಾದ ಲೇಖನವಿದಾದರೂ ಅಗತ್ಯವೆನಿಸಿದಲ್ಲಿ ಅಲ್ಲಲ್ಲಿ ಪ್ರಕಟಿತ ಕೃತಿಗಳನ್ನು ಗಮನಿಸಿರುವೆ.

ವಿವಾಹ : ಸ್ತ್ರೀ

ಪಾತಿವ್ರತ್ಯವನ್ನು ಕೇಂದ್ರವಾಗಿರಿಸಿಕೊಂಡು ವಿವಾಹ ಸಂಸ್ಥೆ ಹುಟ್ಟಿದರೆ, ಪುರುಷರ ಲೈಂಗಿಕ-ಸ್ವೇಚ್ಛಾಚಾರವನ್ನು ನೈತಿಕವಾಗಿಸುತ್ತ ಬಸವಿ, ಸೂಳೆಯಂತಹ ಸಂಸ್ಥೆಗಳು ಬೆಳೆದು ಕೊಂಡು ಬಂದವು. ಈ ಹಂತದಲ್ಲಿಯೇ ಹೆಣ್ಣನ್ನು ಜೈವಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಕನಿಷ್ಠಗೊಳಿಸುತ್ತಾ ಪುರುಷ ತಾನು ಮಾತ್ರ ಶ್ರೇಷ್ಠನಾಗಿ ಬೆಳೆದು, ಉಳಿದುಕೊಂಡು ಬಂದನು. ವಿವಾಹ ಎಂಬ ಸಂಸ್ಥೆಯೇ ಹೆಣ್ಣಿನ ಪಾವಿತ್ರತೆ ಮತ್ತು ವಿಧೇಯತೆಯನ್ನು ನಿರೀಕ್ಷಿಸುತ್ತದೆ. ಗಂಡ ಹೆಂಡತಿಯರಲ್ಲಿ ಹೆಣ್ಣು ಗಂಡು ಎನ್ನುವ ನೈಸರ್ಗಿಕ ಭಿನ್ನತೆಯ ಜೊತೆಗೆ ಸಾಮಾಜಿಕ ಭಿನ್ನತೆಯೂ ಇದೆ.

ಮಾನವ ಶಾಸ್ತ್ರಜ್ಞರ ಪ್ರಕಾರ ವಿವಾಹ ಎನ್ನುವುದು ಹೆಣ್ಣು-ಗಂಡಿನ ನಡುವೆ ಏರ್ಪಡುವ ಲೈಂಗಿಕದ ಶಾಶ್ವತ ಸಂಬಂಧ, ಮಕ್ಕಳ ಸೃಷ್ಟಿ ಹಾಗೂ ಅವುಗಳ ಪೋಷಣೆಗಾಗಿ ಮಾಡಿಕೊಂಡಿ ರುವ ಒಪ್ಪಂದ. ಸಮಾಜ ಶಾಸ್ತ್ರಜ್ಞರ ಪ್ರಕಾರ ಶಾಶ್ವತ ಲೈಂಗಿಕ ಸಂಬಂಧದೊಂದಿಗೆ ಕುಟುಂಬ ವನ್ನು ಕಟ್ಟುವುದು, ಸಂತಾನ ಸೃಷ್ಟಿ ಹಾಗೂ ಅವುಗಳ ಪಾಲನೆ ಮಾಡುವುದಾಗಿದೆ. ಒಟ್ಟಿನಲ್ಲಿ ವಿವಾಹ ಎನ್ನುವುದು ಹೆಣ್ಣು-ಗಂಡಿನ ಸಂಬಂಧಕ್ಕೆ ಶಾಶ್ವತ ಸ್ವರೂಪವನ್ನು ನೀಡುತ್ತದೆ. ಅದಕ್ಕೆ ಕೌಟುಂಬಿಕ ರಚನೆಯನ್ನು ನೀಡಿ ವ್ಯಕ್ತಿಗಳನ್ನು ಅದರೊಳಗೆ ಬಂಧಿಸುತ್ತದೆ. ಇದರೊಳಗೆ ನಿಜಕ್ಕೂ ಬಂಧಿಯಾಗುವವಳು ಹೆಣ್ಣು ಮಾತ್ರ. ಹುಟ್ಟಿದ ಮಕ್ಕಳು ತನ್ನವೇ ಎಂದು ಗಂಡಸಿಗೆ ನಿಖರವಾಗಿ ಗುರುತಿಸಿಕೊಳ್ಳಲು ಮತ್ತು ಸಮಾಜಕ್ಕೆ ಅದನ್ನು ಸ್ಪಷ್ಟಪಡಿಸಲು ವೈವಾಹಿಕ ಸಂಸ್ಥೆ ಹುಟ್ಟಿಕೊಂಡಿದೆ. ಅದು ಸ್ತ್ರೀಯಿಂದ ಲೈಂಗಿಕ ನಿಷ್ಠೆಯನ್ನು ಬಲವಾಗಿ ನಿರೀಕ್ಷಿಸುತ್ತದೆ. ಸಮಾಜಶಾಸ್ತ್ರಜ್ಞರು ಹಾಗೂ ಮಾನವ ಶಾಸ್ತ್ರಜ್ಞರಿಗಿಂತಲೂ ಭಿನ್ನವಾಗಿ ಸ್ತ್ರೀವಾದಿಗಳು ವಿವಾಹವನ್ನು ವ್ಯಾಖ್ಯಾನಿಸುತ್ತಾರೆ. ಇಂದಿರಾ ಅವರ ಪ್ರಕಾರ "ವಿವಾಹ ಎನ್ನುವ ಸಂಬಂಧ ಏರ್ಪಡುವುದರಿಂದ ಒಟ್ಟಿಗೆ ಇರುವ ವ್ಯಕ್ತಿಗಳೂ ಅವರವರ ವಯಸ್ಸು, ಲಿಂಗ ಮತ್ತು ಏರ್ಪಟ್ಟಿರುವ ಸಂಬಂಧದ ಸ್ವರೂಪದ ಆಧಾರದ ಮೇಲೆ ಅವರಿಗೆ ಬೇರೆ-ಬೇರೆಯಾದ ಪಾತ್ರಗಳನ್ನು ವಿವಾಹ ಎನ್ನುವ ಸಾಂಸ್ಥಿಕ ಚೌಕಟ್ಟಿನ ಒಳಗೆ ನಿರ್ವಹಿಸ

ಬೇಕಾಗುತ್ತದೆ. ಈ ಪಾತ್ರ ಹಂಚಿಕೆ ಬಹುತೇಕ ಸಂದರ್ಭಗಳಲ್ಲಿ ಸ್ತ್ರೀ ಪುರುಷರ ನಡುವೆ ಈಗಾಗಲೇ ಇರುವಂಥ ಅಸಮಾನತೆಯನ್ನು ಇನ್ನಷ್ಟು ಬಲಗೊಳಿಸುವುದರ ಜೊತೆಗೆ, ಸ್ತ್ರೀಯರಿಂದಲೇ ವಿಶೇಷವಾದಂಥ ನಡವಳಿಕೆಯನ್ನು ನಿರೀಕ್ಷಿಸುತ್ತದೆ. ವಿವಾಹದ ಅನೇಕ ಆಚರಣೆಗಳೂ ಕೂಡ ವಿವಾಹವಾಗಲಿರುವ ಸ್ತ್ರೀ ಮತ್ತು ಪುರುಷರ ಹಾಗೂ ಅವರ ಸಂಬಂಧಿ ಗಳನ್ನು ಪ್ರಧಾನ್ಯತೆ, ಪರಾಧೀನತೆಯ ವರ್ತುಲದಲ್ಲಿ ಸಿಲುಕಿ ಹಾಕಿಸುತ್ತವೆ. ಉದಾಹರಣೆ 'ಹೆಣ್ಣನ್ನು ಒಪ್ಪಿಸುವುದು', ಗಂಡಿಗೆ ಹೆಣ್ಣನ್ನು ಒಪ್ಪಿಸುವಾಗ ಆಕೆಯ ಮೇಲೆ ಆತನ, ತನ್ಮೂಲಕ ಆತನ ಇಡೀ ಕುಟುಂಬದ ಅಧಿಕಾರವನ್ನು ಸ್ಥಾಪಿಸುವಂತಹ ಒಂದು ವ್ಯವಸ್ಥೆ ಯನ್ನು ವಿವಾಹ ಸೃಷ್ಟಿಸುತ್ತದೆ. ವಿವಾಹ ಸಂಬಂಧ ಆಚರಣೆಗಳು ವಿವಾಹ ಎನ್ನುವ ಸಂಬಂಧಕ್ಕೆ ಸಾಮಾಜಿಕ ಮಾನ್ಯತೆಯನ್ನು ನೀಡುತ್ತವೆ. ಹಾಗೂ ಆ ಸಂಬಂಧವನ್ನು ಪ್ರವೇಶಿಸಿ ದವರಿಗೆ ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವನ್ನು ಮೂಡಿಸುತ್ತವೆ ಎನ್ನುವುದು ನಿಜವಾದರೂ ಈ ಆಚರಣೆಗಳೇ ಅನೇಕ ಸಂದರ್ಭಗಳಲ್ಲಿ ಸ್ತ್ರೀ ಶೋಷಣೆಗೆ ಕಾರಣವಾಗುತ್ತವೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕಾಗಿದೆ" (ಇಂದಿರಾ ಆರ್: ೨೦೦೦; ಪು. ೨೮). ಹೈದಿಹಾರ್ಟಮನ್‌ರು "ಮಹಿಳೆಯರ ಲೈಂಗಿಕತೆ, ಸಂತಾನೋತ್ಪತ್ತಿಯ ಸಾಮರ್ಥ್ಯ, ಆರ್ಥಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಮೂಲಕ ಮಹಿಳೆ ಯರನ್ನು ನಿಯಂತ್ರಿಸಲಾಗುತ್ತದೆ. ಇದು ಏಕಸತಿ ವಿವಾಹ ಪದ್ಧತಿ, ಮಕ್ಕಳ ಪೋಷಣೆ ಮತ್ತು ಮನೆಗೆಲಸದ ಜವಾಬ್ದಾರಿ, ಪುರುಷರು, ರಾಜಕೀಯ ವ್ಯವಸ್ಥೆ, ಮತ್ತಿತರ ಸಂಘ ಸಂಸ್ಥೆಗಳ ಮೇಲಿನ ಆರ್ಥಿಕಾವಲಂಬನೆ ಮುಂತಾದವುಗಳಲ್ಲಿ ವ್ಯಕ್ತವಾಗುತ್ತದೆ ಎಂದು ಹೇಳಿದ್ದಾರೆ" (ಹೈದಿ ಹಾರ್ಟಮನ್, ಉದೃತ: ವನಜ ವೆಂ: ೨೦೦೦; ಪು. ೪೮). ವಿವಾಹ ಸಂಬಂಧ ಮಹಿಳೆಯನ್ನು ಕೌಟುಂಬಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ದುರ್ಬಲಳನ್ನಾಗಿಸು ತ್ತದೆ. ಮದುವೆಯ ಸಂದರ್ಭದಲ್ಲಿ ನಡೆಯುವ ಆಚರಣೆಗಳೂ ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠಳು ಎನ್ನುವ ಶ್ರೇಣೀಕರಣವನ್ನು ಕಾಯ್ದುಕೊಂಡು ಬಂದಿರುತ್ತವೆ. ಹೆಂಡತಿಯಾದವಳು ಗಂಡನ ಹಾಗೂ ಆತನ ಕುಟುಂಬದ ಇತರ ಸದಸ್ಯರ ದೌರ್ಜನ್ಯವನ್ನು, ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಕುಟುಂಬದೊಳಗೆ ನಡೆಯುವ ಈ ಬಗೆಯ ತಾರತಮ್ಯ ಹಾಗೂ ಹಿಂಸೆಗಳನ್ನು 'ಖಾಸಗಿ' ಎಂದು ಪರಿಗಣಿಸುವುದರಿಂದ ಮಹಿಳೆ ಅನಿವಾರ್ಯವಾಗಿ ಅವುಗಳೊಂದಿಗೆ ರಾಜಿ ಮಾಡಿಕೊಂಡು ಬದುಕಬೇಕಾಗುತ್ತದೆ.

ವಿವಾಹಬಾಹಿರ ಸಂಬಂಧಗಳು : ಲಿಂಗ ಸಮಾನತೆ?

ವಿವಾಹಪೂರ್ವದ ಸಂಬಂಧಗಳು, ವಿವಾಹ ನಂತರದ ಸಂಬಂಧಗಳ ಕುರಿತಿರುವ ದಾಖಲಾತಿಗಳು ಜನಪದ ಗೀತೆಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಇಂತಹ ಸಂಬಂಧ ಗಳನ್ನು ನಮ್ಮ ಪುರುಷ ಪ್ರಧಾನ ಸಮಾಜ 'ಹಾದರ'ವೆಂದು ಕರೆದು ಅದನ್ನು ಅನೈತಿಕ ಸಂಬಂಧವಾಗಿಸಿದೆ. ವೈವಾಹಿಕ ಚೌಕಟ್ಟಿಗೆ ಒಳಪಡುವ ಇಲ್ಲವೆ ಒಳಪಟ್ಟಿರುವ ಹೆಣ್ಣು

ಪರಪುರುಷರೊಂದಿಗೆ ಸಂಬಂಧ ಹೊಂದುವುದನ್ನು 'ಹಾದರ'ವೆಂದು ನಮ್ಮ ಸಮಾಜ ಕರೆದಿದೆ. ಲೈಂಗಿಕ ದಾಸಿಯರೊಂದಿಗೆ ಮದುವೆಯಾಗಿರದ ಇಲ್ಲವೆ ವಿವಾಹಿತ ಗಂಡು ಸಂಬಂಧವಿಟ್ಟುಕೊಳ್ಳುವುದನ್ನು ಸಹಜಗೊಳಿಸಿದ್ದು, ಅದನ್ನು ಪುರುಷತ್ವವನ್ನು ಹೆಚ್ಚಿಸುವ ಮೌಲ್ಯವನ್ನಾಗಿ ನಿರ್ವಚಿಸಿದೆ. ಲೈಂಗಿಕ ದಾಸಿಯರನ್ನು ಅತೃಪ್ತ ಕಾಮುಕಿಯರನ್ನಾಗಿ ನಮ್ಮ ಸಮಾಜ ವ್ಯಾಖ್ಯಾನಿಸಿದೆ. ಈ ತೆರನಾದ ಸಂಬಂಧಗಳಲ್ಲಿ ಹೆಣ್ಣನ್ನು ಕೇಂದ್ರವಾಗಿರಿಸಿದಾಗ 'ಹಾದರ'ವೆನಿಸುತ್ತದೆ. ಗಂಡು ಕೇಂದ್ರವಾದಾಗ ಅದು ಪುರುಷತ್ವದ ಪ್ರತಿಷ್ಠೆಯಾಗಿ ಪ್ರತಿಬಿಂಬಿತವಾಗುತ್ತದೆ.

ಪಾತರದ ಮಹಿಳೆಯರು ಹಾಗೂ ಜೋಗತಿಯರು ಮತ್ತು ಅವರೊಡನೆ ಸಂಬಂಧ ವಿಟ್ಟುಕೊಂಡ ಪುರುಷರು, ಇವರಲ್ಲಿ ಲಿಂಗ ಸಮಾನತೆ ಇದೆಯೇ ಎನ್ನುವ ಕುತೂಹಲದ ಹುಡುಕಾಟ ನಡೆಸಿದೆ. ಕ್ಷೇತ್ರಕಾರ್ಯದಲ್ಲಿ ಅವರ ಖಾಸಗಿ ಬದುಕಿನ ಕುರಿತು ಮಾತನಾಡಿಸಲು ನಾನು ಪ್ರಯತ್ನಪಟ್ಟಾಗಲೆಲ್ಲಾ ಅವರು ನುಣುಚಿಕೊಳ್ಳಲು ಪ್ರಯತ್ನಿಸಿದ್ದೇ ಹೆಚ್ಚು. 'ತಮ್ಮ ಹೆಂಡ್ತಿಯ್ಹಂಗ ನನ್ನೂ ಚೆಂದಾಗಿ ನೋಡಿಕೊಂಡ್ರು' ಎಂದಷ್ಟೇ ಹೇಳಿ ಮೌನದ ಮೊರೆಹೋಗುತ್ತಿದ್ದರು. ಒಮ್ಮೊಂದೊಮ್ಮೆಲೆ ಮಂಕಾಗಿ ಬಿಡುತ್ತಿದ್ದರು. ಕತ್ತಲು ತುಂಬಿದ ಆ ಮೌನದಲ್ಲಿ ಬಚ್ಚಿಟ್ಟ ಅನೇಕ ಸಂಗತಿಗಳು ಮಿನುಗುತ್ತಿದ್ದವು. ಮದುವೆಯ ಬಂಧನಕ್ಕೆ ಒಳಪಟ್ಟ ಮಹಿಳೆಯರೇ ತಮ್ಮ 'ಖಾಸಗಿ' ಬದುಕಿನ ಕುರಿತಂತೇ ಹೇಳಲು ಮುಜುಗರ ಪಟ್ಟುಕೊಳ್ಳುತ್ತಾರೆ. ಹೇಳಿದರೂ ಗಂಡನ ವ್ಯಕ್ತಿತ್ವಕ್ಕೆ ಕುಂದುಬರದ ರೀತಿಯಲ್ಲಿ ನಯವಾಗಿ ಸುಳ್ಳು ಹೇಳುತ್ತಾರೆ. ಇಂಥ ಸಾಮಾಜಿಕ ಪರಿಸರದಲ್ಲಿ ಪಾತರದವರ, ಜೋಗತಿಯರ ಖಾಸಗಿ ಬದುಕಿನ ಬಗ್ಗೆ ನಿಖರವಾದ ಮಾಹಿತಿಯನ್ನು ಕಲೆಹಾಕುವುದು ಅಷ್ಟು ಸುಲಭವಲ್ಲ.

ಒಂದು ಬಾರಿ ಗಂಡಾ ಕಟ್ಟಿಸಿಕೊಂಡವರು, (ಗಮನಿಸಿ, ಶೈಲಜ ಹಿರೇಮಠ: ೧೯೯೫; ಪು. ೫೧-೫೨) ಮುತ್ತು ಕಟ್ಟಿಸಿಕೊಂಡವರು ಮದುವೆಯಾಗುವಂತಿಲ್ಲ. ಆದರೆ ಮೇಲ್ವರ್ಗದ, ಮೇಲ್ಜಾತಿಯ ಪುರುಷನೊಬ್ಬನಿಗೆ ಅವರು ಮೀಸಲಾಗಿರಬೇಕು. ಇಂತಹ ಸಂಬಂಧಗಳು ಪುರುಷಪ್ರಧಾನ ಸಮಾಜದಲ್ಲಿ ಅನೈತಿಕವಾದವುಗಳಲ್ಲವಾದರೂ, ಇತ್ತೀಚಿಗೆ ಅವುಗಳನ್ನು ಗೌರವಿಸುತ್ತಿಲ್ಲ. ಹೀಗಾಗಿ ಪಾತರದವರು, ಜೋಗತಿಯರು ತಮ್ಮೊಂದಿಗೆ ಸಂಬಂಧವಿಟ್ಟು ಕೊಂಡ ಗಂಡಸಿನ ಬಗ್ಗೆ ಸರಿಯಾಗಿ ಪ್ರತಿಕ್ರಿಯಿಸಲಿಲ್ಲ. ಇಟ್ಟುಕೊಂಡವನು ಸತ್ತಿದ್ದರೆ ಮಾತ್ರ ಅಂತವರ ಕುರಿತು ಹೆಚ್ಚಿನ ವಿವರಣೆಯನ್ನು ನೀಡಿದರು. ಜೋಗತಿಯರಿಗೆ, ಪಾತರದವರಿಗೆ ಒಂದು ಬಗೆಯ ಗೌರವಿದ್ದ ಕಾಲದಲ್ಲಿ, ಅವರ ಸಂಬಂಧಗಳಲ್ಲಿ ಲಿಂಗಸಮಾನತೆಯ ಹುಡುಕಾಟ ನಡೆಸಿದ್ದರೆ ಬೇರೆ ಬಗೆಯ ಮಾಹಿತಿಗಳು ದೊರೆಯುತ್ತಿದ್ದವೇನೋ! ಜೋಗತಿಯ ರೆಂದರೆ, ಪಾತರದವರೆಂದರೆ ಮೂಗು ಮುರಿಯುವ ಇವತ್ತಿನ ಸಂದರ್ಭದಲ್ಲಿ ಇಂಥ ಪರಿಕಲ್ಪನೆಯ ಹುಡುಕಾಟ ಅಷ್ಟು ಸುಲಭವಲ್ಲ. ಈ ಬಗೆಯ ಸಂಬಂಧಗಳಲ್ಲಿ ಇಬ್ಬರೂ ಸುಖವಾಗಿದ್ದಾರೆಯೆ, ಅಪಮಾನ ಎದುರಿಸಬೇಕಾಗಿ ಬಂದಾಗ ಯಾರು ಇದಕ್ಕೆ ಮುಖಾಮುಖಿ ಯಾಗಬೇಕಾಯಿತು ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಗೌಪ್ಯತೆ?

ಜೋಗತಿಯಾಗಲಿ ಪಾತರದವಳಾಗಲಿ ತಾವು ಇಟ್ಟುಕೊಂಡ ಗಂಡಸರ ಕುರಿತು ಹೇಳಿಕೊಂಡಂತೆ ಪುರುಷರು ತಮ್ಮ ಸಂಬಂಧದ ಬಗ್ಗೆ ಮಾತನಾಡಿದ್ದು ಅಪರೂಪ. ಅಷ್ಟೇ ಅಲ್ಲ ಇಬ್ಬರ ಸ್ನೇಹಸಂಬಂಧವನ್ನು ನೋಡಿದವರೂ ಕೂಡ ಸಾಕ್ಷಿದಾರರಾಗಿ ನಿಲ್ಲಲಿಲ್ಲ. "ಅವರು ದೊಡ್ಡೋರು ಪಾತರದವರ ಕೂಡ ಸಂಬಂಧ ಐತಿ, ಜೋಗತೇರ ಕೂಡ ಸಂಬಂಧ ಐತಿ ಅಂದರ ಅವರ ವ್ಯಕ್ತಿತ್ವಕ್ಕೆ ಕುಂದು ಬರತೈತಿ. ಏನೋ ಒಂದು ಕಾಲಕ್ಕ ಆಗಿದ್ದು ಆಗಿ ಹೊಯ್ತು, ಅದನ್ನು ಹೆಚ್ಚು ಮಾತನಾಡಬಾರದು" ಎಂದವರೇ ಹೆಚ್ಚು. ಆದರೆ ಜೋಗತಿಯ, ಪಾತರದವಳ ಲೈಂಗಿಕ ನಿಷ್ಠೆಯನ್ನು ಮಾತ್ರ ಒತ್ತಿ ಹೇಳುತ್ತಿದ್ದರು. ಹೀಗಾಗಿ ಇವರಿಬ್ಬರ ಸ್ನೇಹಸಂಬಂಧದ ಹಿನ್ನೆಲೆ ಹಾಗೂ ಅದರ ಸ್ವರೂಪ ಎಂಥದ್ದು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಯಾಕೆಂದರೆ ಈ ಬಗೆಯ ವಿವಾಹಬಾಹಿರ ಸಂಬಂಧಗಳು ನಮ್ಮ ಸಮಾಜದಲ್ಲಿ ಮುಕ್ತವಾಗಿಲ್ಲ.

ಪುರುಷ, ವಿವಾಹಬಾಹಿರ ಸಂಬಂಧಗಳನ್ನು ಹೊಂದುವುದು ಹಿರಿಮೆ, ಸಾಮರ್ಥ್ಯ ಮತ್ತು ಘನತೆಯೆನ್ನುವಂತೆ ನಟಿಸುತ್ತಾನೆ. ಇದು ಫ್ಯೂಡಲ್ ಸಮಾಜದ ಪಳಯುಳಿಕೆ. ಜೋಗತಿಯರನ್ನು, ಪಾತರದವರನ್ನು ಇಟ್ಟುಕೊಳ್ಳುವುದೇ ಪ್ರತಿಷ್ಠೆಯಾಗಿದ್ದ ಕಾಲದಲ್ಲಿ ಈ ಬಗೆಯ ಸಂಬಂಧಗಳು ಗೌಪ್ಯವಾಗಿರಲಿಲ್ಲ. ಹೊರನೋಟಕ್ಕೆ ಮುಕ್ತವಾಗಿಯೇ ಇದ್ದವು ಎನಿಸಿದರೂ ಅಂತರ್ಯದಲ್ಲಿ ಗುಪ್ತತೆಯನ್ನು ಬಯಸುತ್ತಿದ್ದವು. ಇಂಥವಳು ಇಂಥವನಿಗೆ ಸೇರಿದವಳು ಎನ್ನುವ ಸಂಗತಿ ಮಾತ್ರ ಬಹಿರಂಗವಾಗುತ್ತಿತ್ತು. ಯಾಕೆಂದರೆ ಅವಳ ಮೇಲೆ ತನ್ನನ್ನು ಬಿಟ್ಟು ಪರಪುರುಷರು ಕಣ್ಣು ಹಾಕಬಾರದು ಎನ್ನುವ ಉದ್ದೇಶ ಅದರಲ್ಲಿ ಪ್ರಧಾನವಾಗಿತ್ತು. "ನಮ್ಮ ಮಗಾ ಪಾತರದಕಿನ ಇಟ್ಕೊಂಡಿದ್ದಾ. ಅಂವಾ, ನಾವು ರಾತ್ರಿ ಎಲ್ಲರೂ ಮಲಗಿದಾಗ ಕಳ್ಳತನದಿಂದ ಯಾವಾಗ ಹೋಗುತ್ತಿದ್ದನೋ ಗೊತ್ತಾಗುತ್ತಿದ್ದಿಲ್ಲ. ಬೆಳಕ ಹರಿಗೂಡದ ಮತ್ತ ಮನ್ಯಾಗ ಬಂದ್ ಮಲಗಿರ್‍ತಿದ್ದ. ನೋಡಿದವರಿಗಿ ಅಂವಾ ಮನಿಬಿಟ್ಟು ಎಲ್ಲೂ ಹೋಗಿಲ್ಲ ಅಂತ ಅನಿಸ್ತಿತ್ತು. ಅವನ ಹ್ಯಾಣ್ತಿಗೂ ಗೊತ್ತಾಗ್ತಿದ್ದಿಲ್ಲ" ಎಂದು ಹೇಳಿದ ಲಕ್ಷ್ಮೇಶ್ವರದ ಬಾಲು ಕುಲಕರ್ಣಿ ಅವರ ಮಾತುಗಳು ಅಂತರ್ಯದಲ್ಲಿ ಅದು ಕಾಯ್ದುಕೊಂಡು ಬಂದ ಗೌಪ್ಯತೆಗೆ ಸಾಕ್ಷಿಯಾಗಿದೆ. ಗಂಡಸರು ಜೋಗತಿಯರೊಂದಿಗೆ, ಪಾತರದವರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ತಪ್ಪಲ್ಲ. ಆದರೆ ಅಂತಹ ಸಂಬಂಧಗಳ ಕುರಿತು ಸಾರ್ವಜನಿಕವಾಗಿ ಚರ್ಚಿಸುವಂತಿಲ್ಲ. ಪ್ರಸ್ತುತ ಸಮಾಜದಲ್ಲಿ ಇಂಥವರನ್ನು ಇಟ್ಟುಕೊಂಡಿದ್ದಾನೆ ಎನ್ನುವ ಮಾತೇ, ಪುರುಷ ವ್ಯಕ್ತಿತ್ವಕ್ಕೆ ಕಪ್ಪುಚುಕ್ಕೆಯನ್ನಿಡುವಂಥದ್ದಾಗಿದೆ. ಗಂಡಸಿನ ಸಾಧನೆಗಳನ್ನು ರಾಜರೋಷವಾಗಿ ಹೇಳಿದಂತೆ, ಅವನೊಂದಿಗೆ ಪಾತರದವರು, ಜೋಗತಿಯರು ಸಂಬಂಧವಿಟ್ಟುಕೊಂಡಿದ್ದಾರೆ ಎಂದು ಹೇಳುವಂತಿಲ್ಲ. ಇವತ್ತಿನ ಸಮಾಜವು ಇಂತಹ ಸಂಬಂಧಗಳನ್ನು ಉಪೇಕ್ಷಿಸುವುದರಿಂದ ಅದು ಗೌಪ್ಯತೆಯನ್ನು ಬಯಸುತ್ತದೆ. ಜೋಗತಿಯರು ಮತ್ತು ಪಾತರದವರು ತಾವು ಸಂಬಂಧವಿಟ್ಟುಕೊಂಡ ಪುರುಷರ ಜೊತೆಗೆ

ಗಟ್ಟಿಯಾದ ಸಂಬಂಧ ಹೊಂದಲು ಸಾಧ್ಯವಾಗದೆ ಇರುವುದಕ್ಕೆ ಇನ್ನೂ ಕೆಲವಾರು ಸಾಮಾಜಿಕ ಸಂಗತಿಗಳು ಕ್ಷೇತ್ರ ಕಾರ್ಯದಲ್ಲಿ ದೊರೆತವು. ಪಾತರದವರೊಂದಿಗೆ ಸಂಬಂಧವಿಟ್ಟುಕೊಂಡ ಪುರುಷರು ಮೇಲ್ವರ್ಗದವರು, ಮೇಲ್ಜಾತಿಯವರೇ ಆಗಿರುತ್ತಿದ್ದರು. ಹೀಗಾಗಿ ಅವರು ಹಗಲುಹೊತ್ತಿನಲ್ಲಿ ತಮ್ಮ ಹೊಲಗದ್ದೆಗಳಲ್ಲಿ, ಮಳಿಗೆಗಳಲ್ಲಿ ಮೇಲುಸ್ತುವಾರಿಯನ್ನು ಮಾಡುತ್ತಿದ್ದರು. ಇದರಲ್ಲಿಯೇ ಸ್ವಲ್ಪ ಸಮಯ ಇಟ್ಟುಕೊಂಡು ಸಮಾಜಸೇವಾ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದರು. ಜೋಗತಿಯರೊಂದಿಗೆ ಸಂಬಂಧವಿಟ್ಟುಕೊಂಡವರು ಹೆಚ್ಚಾಗಿ ಮಧ್ಯಮವರ್ಗದ, ಕೆಳವರ್ಗದ ಪುರುಷರು. ಅವರು ನೇರವಾಗಿ ತಾವೇ ಶ್ರಮವಹಿಸಿ ಕೆಲಸ ಮಾಡಬೇಕು. ಹಗಲು ಹೊತ್ತಿನಲ್ಲಿ ದುಡಿಯುವ ಇವರು ರಾತ್ರಿ ವೇಳೆಯಲ್ಲಿ ಜೋಗತಿಯರೊಂದಿಗೆ ಇರುವರು. ದಿನದ ವೇಳೆಯಲ್ಲಿ ಪಾತರದವರ, ಜೋಗತಿಯರ ಮನೆಯಲ್ಲಿ ಅವರೊಂದಿಗೆ ಸಂಬಂಧವಿಟ್ಟುಕೊಂಡ ಗಂಡಸು ಕಾಣಿಸಿಕೊಂಡರೆ, ಅಂಥವರನ್ನು ಸಮಾಜವು ತಿರಸ್ಕಾರದಿಂದ ನೋಡುತ್ತದೆ. "ಮೂರು ಹೊತ್ತು ಪಾತರದಕಿ ಮನ್ಯಾಗ ಇರತ್ಯಾನ. ಇಜ್ಜತ್ತಿನ ಮನಸ್ಯಾ ಅಲ್ಲ ತಗಿ ಅಂವಾ. ಗಂಡ್ಸಾದವನು ಯಾ ವ್ಯಾಳಿ ಹೋಗಬೇಕು ಅನ್ನುದನ್ನ ತಿಳಿಕೊಂಡಿರಬೇಕು" ಎಂದು ಹೀಗಳೆಯುವರು. ಜೋಗತಿಯರು, ಪಾತರದವರು ದೈಹಿಕ ಸುಖವನ್ನು ನೀಡುವರು. ಅದನ್ನು ಪಡೆಯಲು ಈ ಸಮಾಜ ಒಂದು ವೇಳೆಯನ್ನು ನಿಗದಿಪಡಿಸಿದೆ. ಆ ಸಮಯದಲ್ಲಿ ಗಂಡಸು ಅವರಲ್ಲಿಗೆ ಹೋಗಿ ಬರುವುದನ್ನು ತಪ್ಪೆಂದು ಭಾವಿಸುವುದಿಲ್ಲ. ರಾಜ ಮಹಾರಾಜರು ನೂರಾರು ಸೂಳೆಯರನ್ನಿಟ್ಟುಕೊಳ್ಳುವುದು ಪ್ರತಿಷ್ಠೆಯಾಗಿತ್ತು. ಹಾಗೆಂದ ಮಾತ್ರಕ್ಕೆ ಹಗಲು ರಾತ್ರಿ ಅವರ ಜೊತೆಯಲ್ಲಿಯೇ ಇದ್ದರೆ ವಿಷಯ ಲೋಲುಪರಾಗಿ ಕಾಣಿಸಿಕೊಳ್ಳುತ್ತಾರೆ. ಪುರುಷರು ವಿವಾಹಬಾಹಿರ ಸಂಬಂಧ ಹೊಂದುವುದರಲ್ಲಿ ತಪ್ಪಿಲ್ಲ. ಆದರೆ ಅದರಲ್ಲೇ ಹಗಲು-ರಾತ್ರಿ ಕರಗಿಹೋಗುವುದನ್ನು ಸಮಾಜ ಖಂಡಿಸುತ್ತದೆ. ಹಗಲಿನಲ್ಲಿ ಪಾತರದವಳ, ಜೋಗತಿಯ ಮನೆಯಲ್ಲಿದ್ದಾನೆಂದರೆ, ಲೈಂಗಿಕ ಸುಖಕ್ಕಾಗಿಯೇ ಎಂದು ಸಮಾಜ ಗ್ರಹಿಸುತ್ತದೆ. ದೈಹಿಕ ಸುಖದಾಚೆ ಅವರ ಸಂಬಂಧಗಳು ವಿಸ್ತಾರಿಸಿಕೊಂಡಿರಬಹುದು ಎಂಬುದನ್ನು ನಮ್ಮ ಸಮಾಜ ಒಪ್ಪುವುದಿಲ್ಲ. ಹೀಗಾಗಿ ಇವರಿಬ್ಬರ ಸಂಬಂಧವು ಅಷ್ಟು ಗಾಢವಾಗುತ್ತಿರಲಿಲ್ಲ. ಇದಕ್ಕೆ ಅಪವಾದವಾಗಿರುವ ಉದಾಹರಣೆಗಳು ಅಪರೂಪಕ್ಕೆ ದೊರೆಯಬಹುದು. ಆದರೆ ಅದನ್ನೇ ಸಾಮಾನ್ಯೀಕರಿಸಿ ಒಂದು ನಿರ್ಧಾರಕ್ಕೆ ಬರಲಾಗುವುದಿಲ್ಲ. ಪಾತರದವರಲ್ಲಿ, ಜೋಗತಿಯರಲ್ಲಿ ಹೆಚ್ಚಾಗಿ ಗುರುತಿಸಿದ್ದುದು ಎಲ್ಲರೊಡನೆಯೂ ಸರಳವಾಗಿ, ಸಹಜವಾಗಿ ಬೆರೆಯುವ ಅವರ ಸ್ನೇಹಸ್ವಭಾವ. ಹೀಗಾಗಿ ಅವರು ತಾವು ಸಂಬಂಧ ಇಟ್ಟುಕೊಂಡವನ ಕುರಿತಂತೆ ಹೆಚ್ಚಿನ ವಿವರಣೆಯನ್ನು ನೀಡಬಾರದು ಎನ್ನುವ ಧೋರಣೆ ಹೊಂದಿದವರಲ್ಲ. ಪ್ರಧಾನ ಧಾರೆಯ ಸಾಂಸ್ಕೃತಿಕ ಮೌಲ್ಯಗಳಿಂದ ಅವರು ಎದುರಿಸುತ್ತಿರುವ ಹತಾಶೆ, ನಿರಾಶೆ, ಅಪಮಾನ ಹಾಗೂ ಅಭದ್ರತೆಗಳು ಈ ಬಗೆಯ ಒತ್ತಡಗಳನ್ನು ಅವರ ಮೇಲೆ ಹೇರುತ್ತವೆ.

ಸೌಂದರ್ಯ - ದೇಹ

ಪಾತರದವರಲ್ಲಿ ಯೌವನ, ಸೌಂದರ್ಯ ಹಾಗೂ ಅವರಲ್ಲಿಯ ಗಾಯನ ಇಲ್ಲವೆ ನೃತ್ಯ ಪ್ರತಿಭೆ ಪ್ರಧಾನ ಆಕರ್ಷಕ ಗುಣಗಳಾಗಿವೆ. ಜೋಗತಿಯರಲ್ಲಿ ಸೌಂದರ್ಯ, ಯೌವನ ಆಕರ್ಷಕ ಕೇಂದ್ರಗಳಾಗಿವೆ. ಇವರೊಂದಿಗೆ ಸಂಬಂಧವಿಟ್ಟುಕೊಂಡ ಪುರುಷರ ಜಾತಿ ಅಂತಸ್ತುಗಳೇ ಥಾಳಾಗಿ ನಿಲ್ಲುತ್ತವೆ. ಗಂಡಸರಲ್ಲಿ ದೈಹಿಕ ಆಕಾಂಕ್ಷೆ ಪ್ರಧಾನವಾಗಿದ್ದರೆ, ಪಾತರದವರಲ್ಲಿ, ಜೋಗತಿಯರಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಅಂತಸ್ತು ಪಡೆಯುವ ಉದ್ದೇಶ ಪ್ರಮುಖವಾಗಿರುತ್ತದೆ. ಇವು ಹೊರನೋಟಕ್ಕೆ ನಿಚ್ಚಳವಾಗಿ ಕಾಣುವ ಸಂಗತಿಗಳು. ಆದರೆ ಇದಕ್ಕೆ ವ್ಯತಿರಿಕ್ತವಾದ ಸಂಗತಿಗಳು ಅವರ ಸಂಬಂಧಗಳಲ್ಲಿ ಬೆಸೆದುಕೊಂಡಿರುತ್ತವೆ. ಜೋಗತಿಯಾದ ಯಮನವ್ವ "ಅವನಿಗಿ ದೇಹಾ ಕೊಟ್ನಿ, ಸುಖಾ ಕೊಟ್ನಿ, ಕಷ್ಟದಾಗ ನನ್ನ ಹಂತ್ಯಾಕ ಇದ್ದ ಬಂಗಾರ ದುಡ್ಡೂ ಕೊಟ್ನಿ. ಆಕಿ ನನ್ನಕಿ ಅಂತ ಒಂದ ಕಡೆನೂ ಹೇಳಿಲ್ಲ. ಎಷ್ಟ ಮಾಡಿದ್ರೂ ನಾನು ಅವನ ಹೆಣ್ತಿ ಆಗಂಗಿಲ್ಲ" ಎಂದು ದೊಡ್ಡದಾದ ನಿಟ್ಟುಸಿರು ಬಿಟ್ಟಳು. ತೇರದಾಳದ ಅಲ್ಲಾಸಾನಿ "ವಯಸ್ಸಿರುತನ ದಿನಾ ಬಿಟ್ಟ ದಿನಾ ಬರ್ತಿದ್ದ. ಪ್ರೀತಿಯಿಂದ ನೋಡ್ಕೋತ್ತಿದ್ದ. ಮುಪ್ಪ್ ಬಂದ ಮ್ಯಾಲೆ ಯಾಕ ಬರುತಾನ? ಹರೆವಿದ್ದಾಗ ಇಂಥಕಿನ ಇಟಗೊಂಡಿನಿ ಅನ್ನಾಕ ನಮ್ಮಂಥವರು ಬೇಕಾಗ್ತಿದ್ರು. ಇತ್ತಿತ್ತಲಾಗಿ ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ಬರ್ತಿದ್ದಾ. ಅದರ ನೆನಪು ಬ್ಯಾಡ ತಗಿ ಅಕಾಡಿ" ಎಂದು ಎದ್ದು ಹೋದಳು. ತಮ್ಮನ್ನು ಶೃಂಗಾರ ವಸ್ತುವಾಗಿ, ಪದಾರ್ಥಜೀವಿಯಾಗಿ ಪರಿಗಣನೆ ಮಾಡಿರುವುದರ ಕುರಿತಂತೆ ಅವರಲ್ಲಿ ವಿರೋಧವಿತ್ತು. ತಮ್ಮೊಂದಿಗೆ ಸಂಬಂಧವಿಟ್ಟುಕೊಂಡ ಪುರುಷನ ಪ್ರಾಮಾಣಿಕ ಪ್ರೀತಿಗಾಗಿ ಹಪಾಹಪಿಸಿದ ಜೋಗತಿಯರು, ಪಾತರದವರು ತಾವು ಕೂಡಿಟ್ಟ ಹಣವನ್ನು, ಬಂಗಾರವನ್ನು, ಅವನ ಕಷ್ಟಕಾಲದಲ್ಲಿ ಕೊಟ್ಟಿದ್ದಿದೆ. ಅವನ ಬರುವಿಕೆಗಾಗಿ ದಿನವೀಡಿ ಕಾತರಿಸಿದ್ದಿದೆ. ಅವರ ಈ ನಿರೀಕ್ಷೆಯನ್ನು ಕೇವಲ ದೈಹಿಕ ಸುಖಕ್ಕೆ ಸಿಮೀತಗೊಳಿಸಲಾಗುವುದಿಲ್ಲ. ಆ ಕಾತರಿಸುವಿಕೆಯಲ್ಲಿ ಗಂಡಸು ಅವಳೊಂದಿಗೆ ಇಟ್ಟುಕೊಳ್ಳಬಯಸುವ ರಾತ್ರಿ ಸಂಬಂಧದಾಚೆಗಿನ ಕನಸುಗಳಿವೆ. ಬಹುಪಾಲು ಗಂಡಸರು ತಮ್ಮ ಹರೆಯದ ಹಾಗೂ ಹಣದ ಪ್ರತಿಷ್ಠೆಯನ್ನು ಸಾರಲು, ಜೋಗತಿಯ ರೊಂದಿಗೆ, ಪಾತರದವರೊಂದಿಗೆ ಸಂಬಂಧವಿಟ್ಟುಕೊಳ್ಳುತ್ತಾರೆ. ಅವರ ಯೌವನ ಜಾರಿವಿಕೆ ಯಲ್ಲಿ ಈ ಎಲ್ಲ ಹುಸಿ ಪ್ರತಿಷ್ಠೆಗಳು ಕರಗಿ ಹೋಗಿರುತ್ತವೆ. ಹೆಣ್ಣಿನ ಬಗೆಗಿನ ಲಾಲಸೆ, ವ್ಯಾಮೋಹಗಳು ತಣ್ಣಗಾಗುತ್ತವೆ. ಜೋಗತಿಯರು, ಪಾತರದವರು ಇಟ್ಟುಕೊಂಡವ ನೊಟ್ಟಿಗಿನ ಸಂಬಂಧವನ್ನು, ಗಂಡಸರಂತೆ ಯಾಂತ್ರಿಕವಾಗಿ ಸ್ವೀಕರಿಸಲಾಗುವುದಿಲ್ಲ. ಸಮಾಜ ಗ್ರಹಿಸಿದ ಹಾಗೆ ಪುರುಷರ ಸಂಪತ್ತಿಗೆ, ದೈಹಿಕ, ಸೌಷ್ಠವಕ್ಕೆ ಮನಸೋತವರಲ್ಲ. ಜೋಗತಿಯರ, ಪಾತರದವರ ಭಾವನೆಗಳು ಅಷ್ಟು ಕೃತ್ರಿಮವಾಗಿರುವುದಿಲ್ಲ. ವ್ಯಾಪಾರಿ ಧೋರಣೆಯನ್ನು ಹೊಂದಿರುವುದಿಲ್ಲ.

ಪಾತರದವರಲ್ಲಿಯ ಪ್ರತಿಭೆಗಿಂತಲೂ ಸೌಂದರ್ಯದ ಜೊತೆಗೆ ಹೆಣ್ತನ, ಸೇವಾ ಮನೋಭಾವ, ಪುಕ್ಕಲುತನ, ಭಯ ಮೊದಲಾದ ಗುಣಗಳು ಆಕರ್ಷಣೀಯವಾಗಿದ್ದವು. "ಇಬ್ಬರ ಹೆಣತ್ಯಾರ ಜೊತಿಗಿ ಪಾತರದಕಿನ ಸಾಕುದಂದರ ಬಾಳ ಕಷ್ಟ. ಅದಕ್ಕೂ ಒಂದ್ ತಾಕತ್ತ್ ಬೇಕಾಗ್ತೈತಿ. ತಾತೆಪ್ಪನವರು ಗಂಡಸು ಅಂದ್ರೆ ಗಂಡ್ಸು, ಮೂರು ಮಂದಿಗೂ ಸಮನಾಗಿ ನೋಡ್ಕೊತಾ ಇದ್ರು. ಅವ್ರೂ ಹಂಗ ಇರತಿದ್ರು. ಗುಲಾಬಸಾನಿ ಒಂದ ದಿವ್ಸಾನೂ ಎದರ ಮಾತನಾಡಿದಕಿ ಅಲ್ಲ. ಬಲೆ ಪುಕ್ಕಿ ಹೆಣ್ಣುಮಗಳು. ಹೊರಗ ಹೋಗಬೇಕಿದ್ರ ತಾತೆಪ್ಪನವರ ಒಪ್ಪಿಗಿ ತಗೊಂಡ ಹೋಗತಿದ್ಲು. ಅವ್ರ ಬಗ್ಗಿ ಬಾಳಾ ಭಯಾ ಭಕ್ತಿ ಇಟ್ಕೊಂಡಿದ್ದಳು" ಎಂದು ಲಕ್ಷ್ಮೇಶ್ವರದ ಬಾಬುರಾವ್ ಕುಲಕರ್ಣಿ ಅವರ ಮಾತುಗಳು ಪುರುಷ ಪ್ರಧಾನ ಸಮಾಜದ ಮನೋಭಾವವನ್ನು ಸಾಬೀತುಪಡಿಸುತ್ತವೆ. ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ಸದೃಢವಾಗಿರುವ ಗಂಡಸಿಗೆ ಮಾತ್ರ ಹೆಂಡತಿಯರನ್ನು, ಇಟ್ಟುಕೊಂಡವರನ್ನು ನಿಭಾಯಿಸಲು ಸಾಧ್ಯ. ಪತ್ನಿಯರು, ಇಟ್ಟುಕೊಂಡವರು ಪುರುಷನಂತೆ ಯಾವ ಸಮಸ್ಯೆಗಳನ್ನು ಎದುರಿಸಬೇಕಿಲ್ಲ. ಅವರು ಗಂಡಸಿನ ಆಶ್ರಯದಲ್ಲಿ ಸುಖವಾಗಿರುತ್ತಾರೆ ಎನ್ನುವ ಗ್ರಹಿಕೆಯೇ ಮೇಲ್ನೋಟಕ್ಕೆ ಕಾಣುತ್ತದೆ. ಮನೆಯ ಒಳಗೆ ಮತ್ತು ಹೊರಗೆ ಹಂಚಿಹೋಗುವ ಗಂಡಸಿನ ಪ್ರೀತಿಯನ್ನು ತನ್ನೆಡೆಗೆ ಕೇಂದ್ರೀಕರಿಸಿಕೊಳ್ಳಲು, ಹೆಂಡತಿಯರು, ಇಟ್ಟುಕೊಂಡವರು ಸದಾ ಹೆಣಗಾಡುತ್ತಾರೆ. ಜೊತೆಗೆ ಆರ್ಥಿಕ ಅಭದ್ರತೆಯು ಅವರನ್ನು ಕಾಡುತ್ತಿರುತ್ತದೆ. ಆದರೆ ಪುರುಷಪ್ರಧಾನ ಸಮಾಜ ಹೆಣ್ಣಿನ ಈ ಒಳ ಹೊಯ್ದಾಟಗಳನ್ನು, ಸಂಕಟಗಳನ್ನು ಕಂಡೂ ಕಾಣದಂತಿರುತ್ತದೆ. ಕಷ್ಟ ಗಂಡಸಿಗೆ, ಸುಖ ಹೆಂಗಸಿಗೆ ಎನ್ನುವ ಚಿತ್ರಣವನ್ನೇ ನೀಡಿದೆ. ಹೆಣ್ಣು ಮೃದು ಸ್ವಭಾವದವಳು, ಜೊತೆಗೆ ಕಾಮುಕಿ, ದುರಾಸೆಯುಳ್ಳವಳು. ಗಂಡು, ಗಟ್ಟಿಮನಸ್ಸುಳ್ಳವನು, ಗಟ್ಟಿ ದೇಹವುಳ್ಳವನು ಜೊತೆಗೆ ಸಂಪಾದಿಸುವವನು ಕೂಡ. ಹೀಗಾಗಿ ಆತನು ಹೆಂಡತಿಯರನ್ನು, ಇಟ್ಟುಕೊಂಡವರನ್ನು ನಿಭಾಯಿಸಬಲ್ಲನು ಮತ್ತು ನಿಯಂತ್ರಿಸ ಬಲ್ಲನು ಎಂದೇ ಪುರುಷ ಪ್ರಧಾನ ಸಮಾಜ ಪ್ರಚಾರ ನೀಡಿದೆ. ಕಟ್ಟಿಕೊಂಡವಳಷ್ಟೇ ಅಲ್ಲ ಇಟ್ಟುಕೊಂಡವಳು ಕೂಡ ಧೈರ್ಯವಂತೆಯಾಗಿರಕೂಡದು. ಪ್ರತಿಯೊಂದಕ್ಕೂ ತನ್ನನ್ನೇ ಆಶ್ರಯಿಸಬೇಕು. ತನ್ನ ಅಣತಿಯಂತೆಯೇ ನಡೆದುಕೊಳ್ಳಬೇಕು. ಲೈಂಗಿಕ ನಿಷ್ಠೆಯನ್ನು ಸದಾ ಕಾಯ್ದುಕೊಂಡಿರಬೇಕು. ಹೀಗೆ ಪುರುಷಶಾಹಿ ಸಮಾಜ ತನ್ನ ಪ್ರಾಬಲ್ಯಕ್ಕೆ ಅನುಕೂಲವಾಗು ವಂತೆ ಸ್ತ್ರೀಯನ್ನು ನಿರ್ವಚಿಸಿದೆ.

ನೈತಿಕ ಆಸರೆ?

ಇಟ್ಟುಕೊಂಡವನ ಸುಖದು:ಖಗಳನ್ನು ತಾನು ವಿಚಾರಿಸಿಕೊಂಡಂತೆ, ಸಾಧ್ಯವಾದರೆ ಸಹಾಯ ಮಾಡಿದಂತೆ, ಆತನೂ ತನ್ನ ಕಷ್ಟನಷ್ಟಗಳಿಗೆ ಹಣಕ್ಕಿಂತಲೂ ಹೆಚ್ಚಾಗಿ ನೈತಿಕ ಆಸರೆಯನ್ನು ನೀಡುತ್ತಾನೆಂದು ನಿರೀಕ್ಷಿಸಿ ನಿರಾಶರಾದವರೇ ಹೆಚ್ಚು. ಅದನ್ನು ತನ್ನ ಹಣೆಬರಹವೆಂದು ನುಂಗಿಕೊಂಡವರು ಬಹಳ. ಒಂದು ಮಗುವಾದ ತಕ್ಷಣ ಗೆಳೆಯನ

ತಿರಸ್ಕಾರಕ್ಕೆ ಒಳಗಾದ ಸಂಕೇಶ್ವರದ ಗೋಹರಜಾನ್, ಆತನಿಗಾಗಿ ಹಗಲು ರಾತ್ರಿ ಅತ್ತತ್ತಿದೆ. ಅರೆ ಹೊಟ್ಟೆಯಲ್ಲಿ ಮಲಗಿದ್ದಿದೆ; ಆತ್ಯಹತ್ಯೆಗೆ ಪ್ರಯತ್ನಿಸಿದ್ದಿದೆ. ಬರಿ ಶಂಕೆ, ಭಯ, ಅಪಮಾನಗಳನ್ನು ತುಂಬಿಕೊಂಡ ಗೋಹರಜಾನ್‌ನಂಥವರು ಬರುಬರುತ್ತ ನಿಷ್ಕ್ರೀಯರಾಗಿ ಬಿಡುವರು. ತಮ್ಮಲ್ಲಿಯ ಕಲಾಪ್ರತಿಭೆಯ ಉಜ್ವಲ ಭವಿಷತ್ತಿಗಾಗಿ ಶ್ರಮಿಸುವ ಮಾನಸಿಕ ದೃಢತೆಯನ್ನು ಕಳೆದುಕೊಳ್ಳುವರು. ಈ ಯಾವ ಘಟನೆಗಳು ಗಂಡಸರನ್ನು ಮಂಕಾಗಿಸು ವುದಿಲ್ಲ. ಅವರ ಭವಿಷತ್ತಿಗೆ, ಕೌಟುಂಬಿಕ, ಸಾರ್ವಜನಿಕ ಬದುಕಿಗೆ ತೊಡಕಾಗುವುದಿಲ್ಲ.

ತಮ್ಮ-ತಮ್ಮ ಸಂಬಂಧದ ಕುರಿತು ಪರಸ್ಪರರಲ್ಲಿ ಗೌರವವಿದ್ದರೆ, ಆತ್ಮವಿಶ್ವಾಸವಿದ್ದರೆ, ಅಂಥಲ್ಲಿ ಲಿಂಗಸಮಾನತೆ ಇರುತ್ತದೆ. ಜೋಗತಿಯರು, ಪಾತರದವರು ತಮ್ಮೊಡನೆ ಸಂಬಂಧವಿಟ್ಟುಕೊಂಡ ಪುರುಷರ ಕುರಿತಂತೆ ಅಪಾರ ಗೌರವ ಹಾಗೂ ವಿಶ್ವಾಸವನ್ನಿಟ್ಟಿದ್ದರು. ಆದರೆ ಅದೇ ಭಾವನೆಯನ್ನು ಆ ಗಂಡಸರು ಹೊಂದಿರಲಿಲ್ಲ. ಅವರ ಪಾಲಿಗೆ ಅವಳು 'ಇಟ್ಟುಕೊಂಡವಳು' ಅಷ್ಟೇ.

ಜೋಗತಿಯರಿಗೆ, ಪಾತರದವರಿಗೆ ತಮ್ಮ ಸಂಬಂಧದ ಕುರಿತಂತೆ ಸಮಾಜದಲ್ಲಿ ಅಷ್ಟೇ ಯಾಕೆ, ತಮ್ಮೊಡನೆ ಸಂಬಂಧ ಹೊಂದಿದ ಗಂಡಸರೇ ತಮ್ಮನ್ನು ಗೌರವಿಸುವುದಿಲ್ಲ ಎನ್ನುವುದು ಅತಿ ನೋವಿನ ಸಂಗತಿಯಾಗಿತ್ತು. ಮದುವೆಯಾದರೆ ಸಮಾಜ ಮತ್ತು ಗಂಡ ಇಬ್ಬರೂ ತಮ್ಮನ್ನು ಆದರಿಸುವವರು ಎಂದುಕೊಂಡ ಅವರು ವಿವಾಹಕ್ಕಾಗಿ ಹಪಾಹಪಿಸಿದ್ದಿದೆ. "ನಾವು ನಮ್ಮ ಜೀಂವಾ ಅಂವಗ ಕೊಟ್ರೂ ಇಟಗೊಂಡಕಿ ಅನ್ನು ಪಟ್ಟಾ ತಪ್ಪುವುದಿಲ್ಲ. ಈ ಗಂಡಸರs ಅಷ್ಟs. ಹರೆವ ಇರುತನಕ ನಾವು ಮಜಾ ಮಾಡಾಕಬೇಕು. ಸಮಾಜದವರಂಗ ಅವರೂ ನಮ್ಮನ್ನ ಹಗುರಾಗಿ ಕಾಣ್ತಾರ. ಕುಣಿಗೆ ಹೋಗುತನಕ ಈ ಗಂಡಸರ ಜೊತಿಗಿ, ಈ ಸಮಾಜದ ಜೊತಿಗಿ ಗುದ್ದಾಡ್ತ ಹೋಗಬೇಕು" ಎಂದು ನಿಟ್ಟುಸಿರಿಟ್ಟ ಕಮಲಾಪುರದ ಎಲ್ಲಮ್ಮ ಅಂಥ ಸ್ತ್ರೀವರ್ಗದ ಹತಾಶೆಯ ಪ್ರತಿನಿಧಿಯಾಗಿ ನಿಲ್ಲುತ್ತಾಳೆ. ತಾವು ಗಂಡ ಹೆಂಡಂದಿರಂತೆ ಸಮಾಜದಲ್ಲಿ ಮುಕ್ತವಾಗಿರಬೇಕು ಎಂಬುದು ಅವರ ಮುಖ್ಯ ತುಡಿತವಾಗಿತ್ತು. ಜೋಗತಿಯರು, ಪಾತರದವರು ಈ ಹೆಸರುಗಳೇ ಅವರ ಬಗೆಗೆ ಸಮಾಜ ಹಗುರವಾದ ಧೋರಣೆಯನ್ನು ಹೊಂದಲು ಕಾರಣವಾಗಿದೆ. ಹಲವರ ಹಸಿದ ಕಾಮುಕ ಕಣ್ಣುಗಳಿಂದ ತಪ್ಪಿಸಿಕೊಳ್ಳಲು ಒಬ್ಬನ ತೋಳ್ತೆಕ್ಕೆಯನ್ನು ಆಶ್ರಯಿಸಬೇಕಾಯಿತು. ಇಟ್ಟುಕೊಂಡವನು ಆಕಸ್ಮಾತ್ ಬಿಟ್ಟು ಬಿಟ್ಟರೆ, ಮತ್ತೆ ಹಲವರ ಆಕ್ರಮಣ ಎದುರಿಸಬೇಕಲ್ಲ ಎನ್ನುವ ಆತಂಕವನ್ನು ಮುಪ್ಪು ಬಂದು ಅಪ್ಪಿಕೊಳ್ಳುವವರೆಗೂ ಎದುರಿಸುತ್ತಾರೆ. ಇಟ್ಟುಕೊಂಡವಳು ಎನ್ನುವ ಪದವೇ ಸಾಮಾಜಿಕ ನಿರ್ಲಕ್ಷ್ಯಕ್ಕೆ ಒಳಗಾದವಳು ಎನ್ನುವುದನ್ನೇ ಧ್ವನಿಸುತ್ತದೆ. ಹಣ ಹಾಗೂ ದೈಹಿಕ ಸುಖಕ್ಕಿಂತಲೂ ಅವರಿಗೆ ಮುಖ್ಯವಾಗಿ ಬೇಕಾದುದು ಸಾಮಾಜಿಕ ಭದ್ರತೆ ಹಾಗೂ ಗೌರವ.

ತೃಪ್ತ ಜೋಡಿಗಳು

ಹುಕ್ಕೇರಿಯ ಅಮಿನಾ, ಹುನಗುಂದದ ಹುಲಿಗೆಮ್ಮ ಇವರಿರ್ವರೂ ತಮ್ಮೊಡನೆ ಸಂಬಂಧ ಹೊಂದಿದ ಪುರುಷರ ಕುರಿತು ಸಂತೃಪ್ತಿ ಭಾವನೆಯನ್ನು ಹೊರಗೆಡುಹಿದರು. ಈ ಗೆಳೆಯರು ಇವರಿಗಾಗಿಯೇ ರಕ್ತಸಂಬಂಧಗಳನ್ನು ಬಿಟ್ಟುಕೊಟ್ಟವರು. ಮದುವೆಯಾಗದೇ ಇವರೊಂದಿಗೆ ಇನಿಯರಾಗಿ ಜೀವನ ಸವೆಸಿದವರು. ತಮ್ಮ ಗೆಳತಿಯರನ್ನು ಸಮಾನ ಗೌರವ, ಪ್ರೀತಿಯಿಂದ ಕಂಡವರು. ಎದುರಾದ ಅಪಮಾನವನ್ನು ಸಮಸಮವಾಗಿ ಹಂಚಿಕೊಂಡು ನುಂಗಿದವರು. ಇಡೀ ನನ್ನ ಕ್ಷೇತ್ರಕಾರ್ಯದಲ್ಲಿ ಎದುರಾದ ಅಪರೂಪದ ಸಂಬಂಧಗಳೆಂದರೆ ಇವರಿಬ್ಬರದೇ. ಇವರ ಸಂಬಂಧಗಳು, ಬದುಕುವ ಕ್ರಮಗಳು ಹೊಸ ವ್ಯಾಖ್ಯಾನಗಳಾಗಿದ್ದವು. ಈ ಎರಡೂ ಜೋಡಿಗಳು ಪ್ರಧಾನ ಸಮಾಜದ ಮೌಲ್ಯಗಳನ್ನು ಹುಸಿಗೊಳಿಸಿವೆ. ಪ್ರಸ್ತುತ ಸಮಾಜದ ಯಾವ ಒತ್ತಡಗಳು ಇವರ ಸಂಬಂಧಗಳನ್ನು ಸಡಿಲುಗೊಳಿಸಿಲ್ಲ. ಕುಟುಂಬದವರು, ಸಮಾಜದವರು ಹೀಗಳೆದರೂ ಅದಕ್ಕೆ ಕಿವಿಕೊಟ್ಟವರಲ್ಲ. ಅಮೀನಾ ಹಾಗೂ ಹುಲಿಗೆಮ್ಮನ ಗೆಳೆಯರು ಅವರನ್ನು ಮದುವೆಯಾಗಲು ಇಷ್ಟಪಟ್ಟವರು. ಅವರಿಗಾವ ಜಾತಿ ಹಾಗೂ ಸಿರಿವಂತಿಕೆಯ ಹಂಗು ಕಾಡಿಲ್ಲ. ಅವರ ಗೆಳತಿಯರು ಹೊಂದಿದ ಧರ್ಮದೀಕ್ಷೆಯೇ ಅವರನ್ನು ಮದುವೆಯಾಗದಂತೆ ತಡೆಹಿಡಿದುದು. ಹಾಗಂತ ಅವರಿಗೆ, ಪರಸ್ಪರ ಗೌರವಿಸುವಲ್ಲಿ, ಸುಖ ಅನುಭವಿಸುವಲ್ಲಿ, ಮನಬಿಚ್ಚಿ ಮಾತನಾಡಿಕೊಳ್ಳುವಲ್ಲಿ ಈ ಯಾವ ಸಂಗತಿಗಳೂ ತೊಡಕಾಗಿಲ್ಲ. ಪ್ರೀತಿ, ಗೌರವ ತುಂಬಿದ ಅಪ್ಪಟ ಮೈತ್ರಿ ಸಂಬಂಧ ಅವರದು. ಅವರ ನಡವಳಿಕೆಯಲ್ಲಿ, ಸಂಬಂಧದಲ್ಲಿ ಎಲ್ಲಿಯೂ ಅಶ್ಲೀಲತೆಯ ಎಳೆ ಕಾಣಿಸಲೇ ಇಲ್ಲ.

ಇಂದ್ರಿಯ ಭೋಗ

ಬಹುಪಾಲು ಜೋಗತಿಯರು, ಪಾತರದವರು ತಾವು ಸಂಬಂಧಹೊಂದಿದ ಗಂಡಸಿಗೆ ದೈಹಿಕವಾಗಿ, ಮಾನಸಿಕವಾಗಿ ಅರ್ಪಿಸಿಕೊಂಡವರು. ಆದರೆ ಇವರು ನಂಬಿದ ಪುರುಷರು ಮಾತ್ರ ತಮ್ಮ ಸಂಸಾರಿಕ ಸಂಬಂಧಕ್ಕೆ ತೊಂದರೆಯಾಗದಂತೆ, ತಮ್ಮ ಮಾನಸಿಕ ಸ್ವಾಸ್ಥ್ಯವನ್ನು ಜತನದಿಂದ ಕಾಯ್ದುಕೊಂಡು, ಒಂದು ಮಿತಿಯಲ್ಲಿಯೇ ಇವರೊಡನೆ ಸಂಬಂಧ ಹೊಂದಿರುವರು. ಮದುವೆಯ ಮುಂಚೆ ಇವರೊಡನಿದ್ದರೂ ಸಾಂಪ್ರದಾಯಿಕವಾಗಿ ತಮ್ಮ ಜಾತಿಯ ಹುಡುಗಿಯೊಡನೆ ಲಗ್ನವಾಗುವುದನ್ನು ಬಿಡುವುದಿಲ್ಲ. ಅಮಿನಾ ಹಾಗೂ ಹುಲಿಗೆಮ್ಮನ ಗೆಳೆಯರಂತೆ ಇವರಿಗಾಗಿ ಮನೆಬಿಟ್ಟು ಬಂದವರಿಲ್ಲ. ಎಲ್ಲರೂ ತಮ್ಮ ತಮ್ಮ ಸಾಂಸಾರಿಕ ಚೌಕಟ್ಟಿನೊಳಗೆ ಬೆಚ್ಚಗಿದ್ದವರೇ ಹೆಚ್ಚು. ಜೋಗತಿಯರನ್ನು, ಪಾತರದವರನ್ನು ಹೊಂದಿಯೂ ಹೆಂಡತಿಯನ್ನು ನೋಯಿಸಿದವರಲ್ಲ. ತಮಗೆ ಅನುಕೂಲವಿದ್ದಾಗ, ಅಗತ್ಯವಿದ್ದಾಗ ಮಾತ್ರ ಇವರಲ್ಲಿಗೆ ಹೋಗುವರು. ಉಳಿದೆಲ್ಲ ವೇಳೆ ತಮ್ಮ ಕರಿಯರ್ ಹಾಗೂ ಸಾಂಸಾರಿಕ ಜೀವನಕ್ಕೆ ಮೀಸಲು. ಪಾತರದವರು, ಜೋಗತಿಯರು

ತಂದೆಯಿದ್ದೂ ಅನಾಥತೆಯನ್ನು, ಜೊತೆಗಾರನಿದ್ದೂ ಒಂಟಿತನವನ್ನು ಅನುಭವಿಸುವರು. ಇವರೊಂದಿಗಿರುವ ಪುರುಷರಿಗೆ ಏಕಾಂಗಿತನ ಕಾಡುವುದಿಲ್ಲ. ಯಾಕೆಂದರೆ ಅವನಿಗೆ ಹೆಂಡತಿ ಮಕ್ಕಳಿದ್ದಾರೆ. ದಾಂಪತ್ಯಾತೀತ ಈ ಸಂಬಂಧವನ್ನು ಹೊರಗಿನ ಸಂಬಂಧವಾಗಿಯೇ ಪರಿಗಣಿಸುವ ಇವರು, ಈ ಹೆಣ್ಣು ಮಕ್ಕಳೊಂದಿಗೆ ಗಟ್ಟಿಯಾದ ಸಂಬಂಧವನ್ನು ಹೊಂದಲು ಆಸಕ್ತಿಯನ್ನು ತೋರಿಸುವುದಿಲ್ಲ. ಅವಳ ಮೇಲೆ ಹಕ್ಕಿನ ಪುರುಷನಂತೆ ನಡೆದುಕೊಳ್ಳುತ್ತ ಒಂದು ಬಗೆಯ ಅಂತರವನ್ನು ಜಾಗ್ರತೆಯಿಂದ ಕಾಯ್ದುಕೊಂಡಿರುವರು. ಪುರುಷಪ್ರಧಾನ ಸಮಾಜದಲ್ಲಿ ಜೋಗತಿಯರ, ಪಾತರದವರ ಸಹವಾಸವು ಸುಖಾಪೇಕ್ಷೆಯುಳ್ಳದ್ದು. ಬೇಡವೆನಿಸಿದರೆ ಬಿಟ್ಟು ಬಿಡುವಂತಹದ್ದು. ಗಂಡಸರಿಗೆ ಕಾಮ ಎನ್ನುವುದು ಹಸಿವು ನೀರಡಿಕೆಗೆ ಸಮನಾದುದು. ಹೆಂಗಸಿನ ಬದುಕಿನಲ್ಲಿ ಅದು ತಾತ್ಕಾಲಿಕ ಅಗತ್ಯಕ್ಕೆ ಮುಗಿಯುವುದಿಲ್ಲ, ಮುಂದುವರೆಯುತ್ತದೆ. ಇಂದ್ರಿಯ ಭೋಗ ಎಂದು ಗಂಡಸರಂತೆ ಹೆಂಗಸರಿಗೆ ವಿಚಾರಿಸಲಾಗು ವುದಿಲ್ಲ. ಹೀಗಾಗಿ ಗಂಡಸರು ಕಟ್ಟಿಕೊಟ್ಟ ಮಾದರಿಯನ್ನು ಹೆಂಗಸರು ಯಥಾವತ್ತಾಗಿ ತೆಗೆದುಕೊಳ್ಳಲಾಗುವುದಿಲ್ಲ. ಈ ಮಾತುಗಳು ಜೋಗತಿ, ಪಾತರದವಳು, ಬಸವಿ, ಸೂಳೆಯರಿಗೂ ಅನ್ವಯಿಸುತ್ತದೆ. ಜೋಗತಿ, ಪಾತರದವಳು, ಬಸವಿ, ಸೂಳೆ ಇವರೆಲ್ಲರೂ ಅತಿಯಾದ ಭೋಗಾಸಕ್ತಿ ಉಳ್ಳವರು ಎನ್ನುವ ಗ್ರಹಿಕೆಯನ್ನು ಸಮಾಜ ಕಟ್ಟಿಕೊಟ್ಟಿದೆ. ಅಂದರೆ ಗಂಡಸಿನಂತೆ ಅವರಿಗೆ ಕಾಮವೆನ್ನುವುದು ತಾತ್ಕಾಲಿಕ ಅಗತ್ಯವೆಂದೇ ನಂಬಿದೆ. ಆದರೆ ವಾಸ್ತವವಾಗಿ ಅವರು ಕಾಮವನ್ನು ಕೇವಲ ಇಂದ್ರಿಯಭೋಗ ಎನ್ನುವ ಅರ್ಥದಲ್ಲಿ ಸ್ವೀಕರಿಸುವುದಿಲ್ಲ. ಕಾರಣ, ನಿಸರ್ಗ ಹೆಣ್ಣಿಗೆ ಕೊಡ ಮಾಡಿದ ದೈಹಿಕ ಸಂರಚನೆಯೇ ಹಾಗಿದೆ.

ಗಂಡ ಹೆಂಡತಿಯಂತೆ ಜೋಗತಿಯರು, ಬಸವಿಯರು ತಮಗೆ ಒಪ್ಪಿಗೆಯಾದ ಪುರುಷನೊಡನೆ ಒಂದೇ ಸೂರಿನಡಿ ಬಾಳಲು ಸಮಾಜ ಅಧಿಕೃತ ಒಪ್ಪಿಗೆಯನ್ನು ನೀಡಿಲ್ಲ. ಇವರಿಬ್ಬರೂ ಮಾತೃ ಮೂಲ ಹಿನ್ನೆಲೆಯನ್ನು ಹೊಂದಿದ್ದರೂ ಪುರುಷ ಪ್ರಧಾನ ಸಂಸ್ಕೃತಿಯ ಪ್ರಭಾವದಡಿಯಲ್ಲಿ ಶೃಂಗಾರ ವಸ್ತುವಾಗಿದ್ದಾರೆ. ಅವಳಿಗೆ ಜೀವ, ಭಾವ, ಆತ್ಮಗೌರವಗಳು ಇರುತ್ತವೆಂದು ಪರಿಗಣಿಸುವುದೇ ಇಲ್ಲ. ರಂಭೆ - ಊರ್ವಸಿ ಸಿದ್ಧಾಂತದ ಸಾಕಾರ ರೂಪವೇ ಇವರಾಗಿದ್ದಾರೆ. ಜೋಗತಿಯರು, ಪಾತರದವರು ಹಾಗೂ ಅವರೊಂದಿಗೆ ಸಂಬಂಧವಿಟ್ಟು ಕೊಂಡ ಪುರುಷರಲ್ಲಿ ಪ್ರೇಮವಿದೆ, ನೋವಿದೆ, ಅಪಮಾನವಿದೆ, ಪುರುಷಾಧಿಕಾರದ ಕ್ರಮವಿದೆ, ಸಾಂಸ್ಕೃತಿಕ ಯಜಮಾನಿಕೆಯ ಹೆಜ್ಜೆಗಳಿವೆ. ಜೋಗತಿ ಪಾತರದವಳು ತನ್ನನ್ನು ಅವಮಾನ ಕ್ಕೀಡು ಮಾಡುವ ಪುರುಷಾಧಿಕಾರದ ನೆಲೆಗಳೊಂದಿಗೆ ಅನಿವಾರ್ಯವಾಗಿ ರಾಜಿ ಮಾಡಿ ಕೊಂಡಿರುವವಳು. ಅಗಾಧ ವಿಷಾದವನ್ನು ಅವಗಾಹನೆ ಮಾಡಿಕೊಂಡ ಅವಳು 'ಇದು ನನ್ನ ಕರ್ಮ' ಎಂದು ನಿಟ್ಟುಸಿರು ಬಿಡುತ್ತ ವಸ್ತುಸ್ಥಿತಿಯೊಂದಿಗೆ ಅನಿವಾರ್ಯದ ಹೊಂದಾಣಿಕೆ ಯನ್ನು ಮಾಡಿಕೊಂಡಿರುವವಳು. ಇವರ ಕುರಿತಂತೆ ಹಾಗೂ ಇವರು ಹೊಂದಿರುವ ಸಂಬಂಧಗಳ ಕುರಿತಂತೆ ಸಮಾಜ ಹುಟ್ಟು ಹಾಕಿದ ನೇತ್ಯಾತ್ಮಕ ಲಕ್ಷಣಗಳನ್ನು ಇತ್ಯಾತ್ಮಕ ವಾಗಿಸುವ ಹಾಗೂ ಅದನ್ನು ತಾತ್ವೀಕರಿಸುವ ನಿಟ್ಟಿನಲ್ಲಿ ಆ ಸಂಬಂಧಗಳು ನನಗೆ ಕಂಡು ಬರಲಿಲ್ಲ.

ಆರ್ಥಿಕತೆ

ಜೋಗತಿಯರ, ಪಾತರದವರ ಕೌಟುಂಬಿಕ ವ್ಯವಸ್ಥೆ ಮಾತೃಪ್ರಧಾನ ನೆಲೆಯನ್ನು ಹೊಂದಿಲ್ಲ. ಅದು ಮಾತೃವಂಶೀಯವಾದದ್ದು. ಒಳಗಡೆ ಅದು ಪಿತೃಪ್ರಧಾನಸತ್ತೆಯನ್ನು ಎಚ್ಚರಿಕೆಯಿಂದ ಕಾಯ್ದುಕೊಂಡಿದೆ. ಇವರಿಗೆ ಹೊಲ ಮನೆಗಳಿದ್ದರೆ ಅವುಗಳ ಮೇಲುಸ್ತುವಾರಿಯನ್ನು ಇಟ್ಟುಕೊಂಡ ಗಂಡಸರೇ ನೋಡಿಕೊಳ್ಳುತ್ತಾರೆ. ಕುಟುಂಬಕ್ಕೆ ಅಗತ್ಯವಿದ್ದ ಕಾಳು-ಕಡಿ, ಪಾತ್ರೆ-ಪಗಡೆ, ಉಡುಗೆ-ತೊಡುಗೆ, ಈ ಗಂಡಸರೇ ತಂದು ಹಾಕುತ್ತಾರೆ. ಇವುಗಳಲ್ಲೇ ಜಾಣತನದಿಂದ ಸಂಸಾರ ತೂಗಿಸಿಕೊಂಡು, ಮಾತಾಪಿತೃಗಳಿಬ್ಬರ ಪಾತ್ರವನ್ನು ಏಕಕಾಲದಲ್ಲಿ ಒಬ್ಬಳೇ ನಿಭಾಯಿಸುತ್ತ ಬದುಕನ್ನು ಸಾಗಿಸುತ್ತಾಳೆ. ತಾಯಿ ಮೂಲದಿಂದ ಮಕ್ಕಳನ್ನು ಗುರುತಿಸುತ್ತಾರೆ ಎಂದಾಕ್ಷಣ ಹೆಮ್ಮೆಪಡಬೇಕಾಗಿಲ್ಲ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಲೈಂಗಿಕ ನಿರ್ಬಂಧ ಇಲ್ಲದೆ ಇರುವುದರಿಂದ ತಂದೆಯನ್ನು ಗುರುತಿಸುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ಪುರುಷ ಪ್ರಧಾನ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ರಾಜಿಮಾಡಿಕೊಂಡು ಬದುಕುತ್ತಿರುವ ಇವರ ಮಕ್ಕಳಿಗೆ ತಂದೆಯಾರೆನ್ನುವುದು ಆತನಿಗಷ್ಟೇ ಅಲ್ಲ, ಇಡೀ ಸಮಾಜಕ್ಕೆ ಗೊತ್ತಿರುತ್ತದೆ. ಆದರೂ ಇವರ ಮಕ್ಕಳ ತಂದೆ ನೇಪಥ್ಯದಲ್ಲಿ ನಿಲ್ಲುತ್ತಾನೆ. ಪುರುಷ ಪ್ರಧಾನ ಹಾಗೂ ಊಳಿಗಮಾನ್ಯ ವ್ಯವಸ್ಥೆಯು ಇವರಿಗಾಗಿಯೇ ರೂಪಿಸಿದ ನಿಯಮವಿದಾಗಿದೆ. "ಸಮಾಜವು ಪರಿಗಣಿಸಿದ ನೈತಿಕಬಾಹಿರ ಮಕ್ಕಳಿಗೆ ತಾನೇ ತಂದೆ ಎನ್ನುವ ಸತ್ಯದ ಬಾಧ್ಯತೆಯಿಂದ ನುಣುಚಿಕೊಳ್ಳುವ, ತನ್ನಾಸ್ತಿ ಅವಳ ಮಕ್ಕಳಿಗೆ ಹಂಚಿ ಹೋಗದಂತೆ ನೋಡಿಕೊಳ್ಳುವ ರಾಜಕೀಯ ಕುತಂತ್ರ ಪಾತರದವರ ಮಾತೃಮೂಲ ಕುಟುಂಬದಲ್ಲಡಗಿದೆ" (ಶೈಲಜ ಹಿರೇಮಠ: ೧೯೯೯; ಪು. ೬೫). ಇದೇ ಮಾತು ಜೋಗತಿಯರ ಕುಟುಂಬಕ್ಕೂ ಅನ್ವಯಿಸುತ್ತದೆ. ಇವರೊಂದಿಗೆ ಸಂಬಂಧವಿಟ್ಟುಕೊಂಡ ಪುರುಷರಿಗೆ ಲೈಂಗಿಕ ಸುಖ ಬೇಕು, ಜವಾಬ್ದಾರಿ ಬೇಡ. ಜೋಗತಿಯರಿಗೆ, ಪಾತರದವರಿಗೆ ಇಟ್ಟುಕೊಂಡವನು ಆರ್ಥಿಕ ಸಹಾಯವನ್ನು ತಾನೇ ಮಾಡುತ್ತಿರುವಂತೆ ನಟಿಸುತ್ತಾನೆ. ಹಾಗೆಂದರೆ, ಪಾತರದವರು, ಜೋಗತಿಯರು ದುಡಿಯುವುದಿಲ್ಲವೆಂದಲ್ಲ. ಸಂಗೀತ, ನೃತ್ಯ ಈ ವೃತ್ತಿಯಿಂದಲೇ ಹಣಗಳಿಸುತ್ತಾರಾದರೂ, ಇಲ್ಲೆಲ್ಲ ಅವರ ದುಡಿಮೆ ಅದೃಶ್ಯವಾಗಿ ನಿಲ್ಲುತ್ತದೆ. ಆರ್ಥಿಕವಾಗಿ ಪ್ರಬಲವಾದ ಆತನೇ ಅವಳ ಒಟ್ಟು ಕುಟುಂಬದ ಹೊಣೆ ಹೊತ್ತಂತೆ ನಟಿಸುತ್ತಾನೆ. ಸಮಾಜ ಅದು ಸತ್ಯವೆನ್ನುವಂತೆ ಪ್ರಚಾರ ನೀಡುತ್ತದೆ. ಹಣದ ಜೊತೆಗೆ ತನ್ನ ಪ್ರೀತಿಯನ್ನು ಅವಳಿಗೆ ದಾನವಾಗಿ ನೀಡುವಂತೆ ನಡೆದುಕೊಳ್ಳುತ್ತಾನೆ, ಅವಳ ಯೌವನ ಜಾರುವವರೆಗೆ. ಅದರಲ್ಲಿ ಪ್ರಾಮಾಣಿಕತೆಯಿರುವುದಿಲ್ಲ. ಈ ನಟನೆ ಕೂಡ ತಾತ್ಕಾಲಿಕವಾಗಿರುತ್ತದೆ. ಹಾಗೂ ಕೃತಕವಾಗಿರುತ್ತದೆ.

ಲಿಂಗಸಮಾನತೆ

ಪುರುಷ ಈ ಬಗೆಯ ಲೈಂಗಿಕ ಸಂಬಂಧಗಳಲ್ಲಿ ಅನೇಕ ಸಂದರ್ಭಗಳಲ್ಲಿ ಲಿಂಗ

ಸಮಾನತೆಯನ್ನು ನಟಿಸುತ್ತಾನೆ. ಇದು ನಿಜವೆಂದು ಆಕೆ ಲಿಂಗಸಮಾನತೆಯನ್ನು ಭ್ರಮಿಸುತ್ತಾಳೆ. ಬಹಳ ಕ್ರೂರವೆಂದರೆ ಖಾಸಗಿಯಾದ ಈ ಸಾಮಾಜಿಕ ಸಂಬಂಧವನ್ನು ಒಟ್ಟು ಸಮಾಜ ಉಪೇಕ್ಷಿಸುತ್ತದೆ, ಕಡೆಗಣಿಸಿ ನೋಡುತ್ತದೆ, ತಿರಸ್ಕರಿಸುತ್ತದೆ. ಅಂದರೆ ಒಟ್ಟು ನಟಿಸುವ, ಭ್ರಮಿಸುವ, ಉಪೇಕ್ಷಿಸುವ ಈ ಮೂರು ಪ್ರಕ್ರಿಯೆಗಳು ಲಿಂಗಸಮಾನತೆಯನ್ನು ಎಲ್ಲೂ ನ್ಯಾಯೋಚಿತವಾಗಿ ಒಪ್ಪಿಕೊಳ್ಳುವುದೇ ಇಲ್ಲ ಎನ್ನುವ ಹಾಗೆ ಕಾಣುತ್ತದೆ.

ಗಂಡ ಹೆಂಡತಿಯನ್ನು ಶ್ರೇಷ್ಠ, ಕನಿಷ್ಠವೆಂದು ವಿಭಾಗಿಸುವ ಸಂಪ್ರದಾಯ ಆಚರಣೆಗಳು ಇವರ ಸಂಬಂಧಗಳಲ್ಲಿ ಬರುವುದಿಲ್ಲವಾದರೂ ಜೈವಿಕತೆಯನ್ನೇ ಕೇಂದ್ರ ಸಂಗತಿಗಳನ್ನಾಗಿಸಿಕೊಂಡು ಪ್ರಧಾನ, ಅಧೀನವಾಗಿಸುವ ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳು ಜೋಗತಿಯರ, ಪಾತರದವರ ಬದುಕಿನಲ್ಲಿಯೂ ಪ್ರಧಾನ ಪಾತ್ರ ವಹಿಸುತ್ತದೆ. ಹೆಂಡತಿಯರಂತೆ ಇವರಲ್ಲಿಯೂ ಲೈಂಗಿಕ ನಿಷ್ಠೆಯನ್ನು ಅಪೇಕ್ಷಿಸುತ್ತಾರೆ. ವಿಧೇಯತೆಯನ್ನು ನಿರೀಕ್ಷಿಸುತ್ತಾರೆ. ಅವರ ಆಶೆ-ಆಕಾಂಕ್ಷೆ, ಕನಸು ಇತ್ಯಾದಿಗಳನ್ನೆಲ್ಲ ನಿಯಂತ್ರಣದಲ್ಲಿಟ್ಟಿರುತ್ತಾರೆ. ಒಂಟಿಯಾಗಿ ಹೊರಗೆ ಹೋಗುವಂತಿಲ್ಲ. ಬೇರೆ ಪುರುಷರೊಡನೆ ಮಾತನಾಡುವಂತಿಲ್ಲ. ಕಟ್ಟೆಗೆ ಕೂತು ಹರಟೆ ಹೊಡೆಯುವಂತಿಲ್ಲ. ತಲೆಯ ಮೇಲಿನ ಸೆರಗು ಕೆಳಗೆ ಜಾರುವಂತಿಲ್ಲ. ಅವನಿಗೆ ಎದುರಾಡುವಂತಿಲ್ಲ. ಹೀಗೆ, ಪುರುಷರು ತಮ್ಮ ಘನತೆಯನ್ನು ಕಾಪಾಡಿಕೊಳ್ಳಲು ತಾವೇ ನಿರ್ಮಿಸಿಕೊಂಡ ಇಂತಹ ನೈತಿಕ ಮೌಲ್ಯಗಳನ್ನು ಜೋಗತಿಯರು, ಪಾತರದವರು ಅನುಸರಿಸುವಂತೆ ಒತ್ತಾಯಿಸುತ್ತಾರೆ. ಪುರುಷ ಪ್ರಧಾನ ಸಮಾಜದ ಸಾಂಸ್ಕೃತಿಕ ಚೌಕಟ್ಟಿನೊಳಗೆ ಬದುಕುವ ಅವರಿಗೆ ಈ ಬಂಧನಗಳಿಂದ ಮುಕ್ತಿ ಇಲ್ಲ. ಇವರೊಂದಿಗೆ ಸಂಪರ್ಕವಿಟ್ಟುಕೊಂಡ ಪುರುಷರು ತಮ್ಮ ಮೌಲ್ಯಗಳಿಗೆ ಬದ್ಧರಾಗಿಯೇ ಸಂಬಂಧ ಹೊಂದುತ್ತಾರೆ. ಹೊರನೋಟಕ್ಕೆ ವಿವಾಹಿತ ಸ್ತ್ರೀಗಿದ್ದಂತೆ ಸಾಂಸ್ಕೃತಿಕ ಕಟ್ಟಳೆಗಳು ಇಲ್ಲವೆನಿಸಿದರೂ, ಆಳದೊಳಗೆ ಇಂಥವೇ ನೀತಿ ನಿಯಮಗಳು ಇವರನ್ನಾಳುತ್ತಿರುತ್ತವೆ. ಹಾಗೂ ಪುರುಷನ ಅಹಂಕಾರವನ್ನು ಪೋಷಿಸುತ್ತಿರುತ್ತವೆ.

ಟಿಪ್ಪಣಿಗಳು

೧. ನಟುವರಲ್ಲಿ ಹೆಣ್ಣು-ಗಂಡು ಎನ್ನುವ ತಾರತಮ್ಯವಿರಲಿಲ್ಲ. ಅದು ಮಾತೃಪ್ರಧಾನ ಸಂಸ್ಕೃತಿಯುಳ್ಳದ್ದಾಗಿತ್ತು. ಕಾಡು ಬಿಟ್ಟು ನಾಡು ಸೇರಿದಾಗ ಪುರುಷ ಪ್ರಧಾನ ಸಂಸ್ಕೃತಿಗೆ ಒಳಗಾದರು (ವಿವರಣೆಗೆ ನೋಡಿ, ಶೈಲಜ ಹಿರೇಮಠ: ೧೯೯೯; ಪಾತರದವರು, ಪುಟ ೨೬, ೨೭)

೨. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ರೂಪ ಪಡೆದ ತಾಳಿಯನ್ನು ತಿರಸ್ಕರಿಸುವ ಇವರು ಮುತ್ತನ್ನು ಕಟ್ಟಿಕೊಳ್ಳುವರು.

೩. ಜನಸಾಮಾನ್ಯರಿರಬಹುದು, ವಿದ್ವಾಂಸರಿರಬಹುದು, ಬಸವಿಯರನ್ನು ಮತ್ತು ಜೋಗತಿಯರನ್ನು ಸಾಮಾನ್ಯೀಕರಿಸಿ ಬಸವಿಯರೆಂದೇ ಗುರುತಿಸುವರು. ನಾನು ಕೂಡಾ 'ಬಸವಿಯರು' ಎನ್ನುವ ಲೇಖನವನ್ನು ಇವರಿಬ್ಬರನ್ನು ಸಮೀಕರಿಸಿಯೇ ಬರೆದಿದ್ದೆ. ಇದು

ಮಹಿಳಾ ಅಧ್ಯಯನ ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಕೂಡಾ. ಕ್ಷೇತ್ರಕಾರ್ಯಧ್ಯಯನದ ಆಳಕ್ಕಿಳಿದಂತೆಲ್ಲಾ ಇವೆರಡೂ ಭಿನ್ನ ಭಿನ್ನ ಸಾಂಸ್ಕೃತಿಕ ಕಥನವನ್ನು ಹೊಂದಿರುವುದು ಗೊತ್ತಾಯಿತು. ಜೋಗತಿ ಪರಂಪರೆ, ಬಸವಿ ಸಂಪ್ರದಾಯಕ್ಕಿಂತ ಸಂಪೂರ್ಣವಾಗಿ ಭಿನ್ನವಾದದ್ದು. ಶಂಖ, ಚಕ್ರ, ಪದ್ಮ ಈ ಮೂರು ಮುದ್ರೆಗಳನ್ನು ಹಾಕಿಸಿಕೊಳ್ಳುವ 'ಬಸವಿ' ವೈಷ್ಣವ ಸಂಸ್ಕೃತಿಯಲ್ಲಿ ಕಾಣಿಸುತ್ತಾಳೆ. ಮಾಧ್ವ ಸಂಪ್ರದಾಯದಲ್ಲಿ ಕಾಣಿಸಿಕೊಳ್ಳುವ ಆಂಜನೇಯ ದೇವಸ್ಥಾನಗಳಿಗೆ ಮಾತ್ರ ಬಸವಿಯರನ್ನು ಬಿಡುತ್ತಾರೆ. ಕರಿಮಣಿಯ ಜೊತೆಗೆ ಒಂಟಿ ಹನುಮತಾಳಿಯನ್ನು ಕಟ್ಟಿಕೊಳ್ಳುವ ಇವರು ಪುರುಷ ಪ್ರಧಾನ ಮೌಲ್ಯಗಳಲ್ಲಿ ರೂಪಪಡೆದವರು. ಹದಿನೈದನೆಯ ಶತಮಾನದಲ್ಲಿಯ ವಿಜಯನಗರದ ಕೃಷ್ಣದೇವರಾಯನ ಕಾಲಾವಧಿಯಲ್ಲಿಯೇ 'ಬಸವಿ' ಸಂಪ್ರದಾಯ ಅಸ್ತಿತ್ವಕ್ಕೆ ಬಂದಿತು.

ಉಲ್ಲೇಖಗಳು

ಇಂದಿರಾ ಆರ್: ೨೦೦೦; **ಮಹಿಳಾ ಸಮಾಜ ಸಂಸ್ಕೃತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವನಜ ವೆಂ: ೨೦೦೦; 'ಕುಟುಂಬ ಮತ್ತು ಮಹಿಳೆ', **ಮಹಿಳಾ ಅಧ್ಯಯನ ಸಂಪುಟ-೨, ಸಂಚಿಕೆ-೨**, ಜುಲೈ

ಶೈಲಜ ಹಿರೇಮಠ: ೧೯೯೯; **ಪಾತರದವರು**, ಕನ್ನಡ ವಿಶ್ವವಿದ್ಯಾಲಯ, ಹಂಪಿ

❖ ❖

೨

ವಿವಾಹ - ವೈಧವ್ಯ - ವಾಟರ್

'ವಾಟರ್' ಚಿತ್ರದಿಂದ ಸೃಷ್ಟಿಯಾದ ಬೆಂಕಿ ಹೊರಗಡೆ ಈಗ ತಣ್ಣಗಾಗಿರಬಹುದು. ಆದರೆ ನನ್ನೊಳಗೆ ಅದಿನ್ನೂ ಆರಿಲ್ಲ. ಬಾಲ್ಯದಲ್ಲಿ ನಾ ಕಂಡ ದೃಶ್ಯ ಪದೇ ಪದೇ ನನ್ನನ್ನು ಕಾಡುತ್ತಿದೆ. ನಾನಾಗ ಮಹಾಲಿಂಗ ಪುರದಲ್ಲಿ ಆರನೆಯ ತರಗತಿಯಲ್ಲಿ ಓದುತ್ತಿದ್ದೆ. ನನ್ನ ಸಹಪಾಠಿ ಪದ್ಮಾ ವೈದಿಕ ಪರಂಪರೆಗೆ ಸೇರಿದವಳು. ಅವಳ ಮನೆಗೆ ಒಂದೆರಡು ಬಾರಿ ಹೋಗಿದ್ದೆನು. ಎಪ್ಪತ್ತರ ಹರೆಯದ ಬೋಡು ತಲೆಯ ಸಣಕಲು ದೇಹದ ಅಜ್ಜಿಯೊಬ್ಬಳು ಮನೆಯವರೆಲ್ಲರ ಅಗತ್ಯಗಳನ್ನು ಪೂರೈಸುತ್ತ ಓಡಾಡುತ್ತಿದ್ದಳು. ಅವಳು ಕುಳಿತು ನಗುವುದನ್ನು, ಹರಟೆ ಹೊಡೆಯುವುದನ್ನು ನಾನು ಕಾಣಲೇ ಇಲ್ಲ. ಮನೆತುಂಬ ಯಂತ್ರದಂತೆ ಓಡಾಡಿಕೊಂಡು ಕೆಲಸ ಮಾಡಿಕೊಂಡಿದ್ದಳು. ಕಣ್ಣಲ್ಲಿ ನೋವನ್ನು ಬಚ್ಚಿಟ್ಟುಕೊಂಡ ಅವಳು ಜೀವಂತ ಹೆಣದಂತೆ ಕಾಣುತ್ತಿದ್ದಳು. ಏ! ಬೋಳಿ ನನ್ನ ಸಾಕ್ಸ ಎಲ್ಲಿದೆ? ಊಟಕ್ಕೆ ನೀಡು ಬಾ ರಂಡೆ, ಏಯ್ ಬೋಳಿ ನನ್ನ ತಲೆದಿಂಬು ಎಲ್ಲಿಟ್ಟಿರುವೆ? ಎಂದು ಪ್ರತಿಯೊಂದಕ್ಕೂ ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಕೇಳುತ್ತಿದ್ದರು. ಅದೇ ತಾನೆ ಮಾತು ಕಲಿಯುತ್ತಿರುವ ಮಗುವಿನಿಂದ ಹಿಡಿದು ಹಿರಿಯವರೆಗೆ ಅವಳನ್ನು 'ಬೋಳಿ', 'ರಂಡೆ' ಎಂದೇ ಕರೆಯುತ್ತಿದ್ದರು. ಅವಳು ಅದಕ್ಕೆ ಎಷ್ಟು ನಿರ್ಲಿಪ್ತಾಗಿ ಒಗ್ಗಿಕೊಂಡಿದ್ದಳೆಂದರೆ ಹೆಸರು ಅಥವಾ ಸಂಬಂಧಗಳಿಂದ ಅಜ್ಜಿ, ಅತ್ತೆ ಎಂದು ಕೂಗಿ ಕರೆದರೆ ತಿರುಗಿಯೂ ನೋಡುತ್ತಿರಲಿಲ್ಲವೇನೊ! ಒಡಲಲ್ಲಿ ಅಪಮಾನ, ನೋವಿನ

ಕೆಂಡವನ್ನು ಕಟ್ಟಿಕೊಂಡು ಹೊರಗಡೆ ತಣ್ಣಗೆ ಪ್ರತಿಕ್ರಿಯಿಸುತ್ತಿದ್ದ ಅವಳ ವರ್ತನೆ ಆ ಎಳೆವಯಸ್ಸಿನಲ್ಲಿಯೇ ನನ್ನನ್ನು ಆಘಾತಕ್ಕೆ ಒಳಪಡಿಸಿತ್ತು. ನನಗಾಗ ವೈಧವ್ಯದ ಪರಿಕಲ್ಪನೆಯೇ ಇರಲಿಲ್ಲ. ನಾನು ನನ್ನ ಅವ್ವ, ಅಪ್ಪನಿಗೆ ಆ ಅಜ್ಜಿಗೆ ತಲೆಯನ್ನು ಯಾಕೆ ಬೋಳಿಸಿದ್ದಾರೆ? ಮಾತೆತ್ತಿದರೆ ಬೋಳಿ, ರಂಡಿ ಎಂದು ಆಕೆಯನ್ನು ಯಾಕೆ ಬೈಯುತ್ತಾರೆ? ಎಂದು ಪದೇ ಪದೇ ಕಾಡಿ ಕೇಳಿದ್ದೆನು. ನನಗೆ ಅದನ್ನು ಅರ್ಥಮಾಡಿಸಲು ಅವರು ಸಾಕಷ್ಟು ಹೆಣಗಾಡಿದರು. ಕೊನೆಗೆ ಸೋತ ಅವರು ನನ್ನನ್ನೇ ಗದರಿಸಿದರು, ಸುಮ್ಮನಾಗಿಸಿದರು. ಗೆಳತಿ ಪದ್ಮಾಳ ಮನೆಗೆ ಹೋಗಕೂಡದು, ಇನ್ನೊಮ್ಮೆ ಅಂಥ ಪ್ರಶ್ನೆಗಳನ್ನು ಕೇಳಕೂಡದು ಎಂಬುದು ನನ್ನ ತಂದೆ ತಾಯಿಗಳ ಕಟ್ಟಾಜ್ಞೆ. ಈಗಲೂ ಆ ಅಜ್ಜಿ ನನ್ನೊಳಗೆ ಜೀವಂತ ವಾಗಿದ್ದಾಳೆ. ಅವಳ ತಣ್ಣನೆಯ ನೋಟ ನಿತ್ಯವೂ ನನ್ನನ್ನು ಸುಡುತ್ತಿದೆ.

ಇಂದು, ದೇಶದಲ್ಲಿ ಫ್ಯಾಸಿಸ್ಟ್ ಶಕ್ತಿಗಳು ರಾಜಕೀಯ ಪಕ್ಷವನ್ನು ಆಳುತ್ತಿವೆ. ಹಿಂದೂ ಸಮಾಜದ ರೂವಾರಿ ಎಂಬಂತೆ ಅವರು ವರ್ತಿಸುತ್ತಿದ್ದಾರೆ. ಮತ್ತು ಹಿಂದೂ ಸಮಾಜ, ಹಿಂದೂ ಸಂಸ್ಕೃತಿಯನ್ನು ತಮಗನುಕೂಲವಾಗುವ ನೆಲೆಯಲ್ಲಿ ನಿರ್ವಚಿಸುತ್ತಿದ್ದಾರೆ. ಇಂಥವರ ಮಧ್ಯದಲ್ಲಿದ್ದುಕೊಂಡು ಸಮಾಜದಲ್ಲಿಯ ಕ್ರೂರವಾಸ್ತವ ಸತ್ಯವನ್ನು ಹೇಗೆ ಎದುರಿಸಬೇಕೆಂಬ ಸವಾಲು ನಮ್ಮೆಲ್ಲರೆದುರಿಗಿದೆ. ಇಂಥ ಸಂದರ್ಭದಲ್ಲಿ ಪ್ರಜ್ಞಾವಂತರೆನಿಸಿ ಕೊಂಡವರು ಮೌನದಿಂದಿರುವುದು ಆರೋಗ್ಯಕರವಲ್ಲ. ಅಪರಾಧ ಮಾಡುವುದಕ್ಕಿಂತಲೂ, ಅಪರಾಧವನ್ನು ಸಹಿಸುವುದು ಮಹಾಪರಾಧ ಎನ್ನುವುದನ್ನು ಮರೆಯಬಾರದು. ಅದಕ್ಕಾಗಿ ಮೌನ ಮುರಿದು ಮಾತನಾಡಬೇಕು. ವಾಟರ್ ಚಿತ್ರದಲ್ಲಿ ವೈದಿಕ ಸಂಸ್ಕೃತಿಯನ್ನು, ವಿಧವೆಯ ರನ್ನು, ವಾರಣಾಸಿಯನ್ನು ಅತ್ಯಂತ ಕಳಪೆಯಾಗಿ ತೋರಿಸಲಾಗಿದೆ, ಅಪಮಾನಿಸಲಾಗಿದೆ ಎಂಬುದು ಈ ಎಲ್ಲ ಕೋಮುವಾದಿ ಶಕ್ತಿಗಳ ಆರೋಪ. ಇವರೆಲ್ಲರೂ ಸೇರಿಕೊಂಡು ೬೫ ವರ್ಷ ವಯಸ್ಸಿನ ವೃದ್ಧ ವಿಧವೆಯಿಂದ 'Water go back' ಎನ್ನುವ ಫಲಕ ಪ್ರದರ್ಶಿಸಿರುವುದು, ನಾಡಿನ ಅನೇಕ ಪತ್ರಿಕೆಗಳು ಅದಕ್ಕೆ ಪ್ರಚಾರ ನೀಡಿರುವುದು ಈ ಶತಮಾನದ ದೊಡ್ಡ ತಮಾಷೆಯಂತೆ ಕಾಣುತ್ತದೆ.

ಒಂದು ಕಾದಂಬರಿಯೇ ವಾಟರ್ ಚಿತ್ರಕ್ಕೆ ಆಧಾರ. ೧೯೩೦ರಲ್ಲಿ ಪ್ರಚಲಿತದಲ್ಲಿದ್ದ ವಿಧವೆಯರ ಬದುಕಿನ ಚಿತ್ರಣವೇ ಇದರ ಕಥಾವಸ್ತು. ಚಿತ್ರದಲ್ಲಿ ಇದೆ ಎನ್ನಲಾದ ಎರಡು ಸಂಭಾಷಣೆಗಳನ್ನು ಕುರಿತಂತೆ ಸಂಸ್ಕೃತಿ ಸುರಕ್ಷಾ ಸಂಘವು ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿದೆ. ಅದರಲ್ಲಿ ಒಂದು ಮಧುಮತಿ ಹೇಳಿದ್ದು, ಮತ್ತೊಂದು ಶಕುಂತಲೆ ಮತ್ತು ಪಂಡಿತನ ನಡುವಿನ ಸಂಭಾಷಣೆ.

ಮಧುಮತಿ : ಇಲ್ಲಿ ಸೂಳೆಗೂ ವಿಧವೆಗೂ ವ್ಯತ್ಯಾಸವೇ ಇಲ್ಲ.

ಶಕುಂತಲೆ : ಪಂಡಿತರೇ ಹಿಂದೂಧರ್ಮದ ಗ್ರಂಥಗಳನ್ನೆಲ್ಲಾ ಓದಿದ್ದೀರಾ? ಅವುಗಳು ವಿಧವೆಯ ಕುರಿತಂತೆ ಏನು ಮಾತನಾಡುತ್ತವೆ? ಅವರನ್ನು ಕ್ರೂರವಾಗಿ ನಡೆಸಿಕೊಳ್ಳಬೇಕು ಎಂದೇನಾದರೂ ಹೇಳಿದೆಯಾ?

ಪಂಡಿತ : ಹಿಂದೂ ಧರ್ಮವು ವಿಧವೆಯರಿಗೆ ಸೂಚಿಸಿರುವುದು ಎರಡು ದಾರಿಗಳನ್ನು ಮಾತ್ರ. ಬದುಕಿದರೆ ಅಲೌಕಿಕವಾಗಿ ಬದುಕಬೇಕು, ಇಲ್ಲದಿದ್ದರೆ ಗಂಡನ ಜೊತೆ ಚಿತೆಯೇರಬೇಕು.

ಇಂತಹ ಹೇಳಿಕೆಗಳು ಹಿಂದೂ ಸಂಸ್ಕೃತಿಗೆ ಧಕ್ಕೆಯನ್ನುಂಟು ಮಾಡುತ್ತವೆ ಎಂಬುದು ಫ್ಯಾಸಿಸ್ಟ್ ಶಕ್ತಿಗಳ ಅಬ್ಬರ. ಹಿಂದೂ ಸಂಸ್ಕೃತಿ ಎನ್ನುವುದು ಇದೆಯೇ? ಹಾಗೂ ಯಾವುದನ್ನು ಹಿಂದೂ ಸಂಸ್ಕೃತಿಯೆಂದು ಕರೆಯಬೇಕು ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಇಂತಹ ಅಪಾಯಕಾರಿ ಫ್ಯಾಸಿಸ್ಟ್ ಶಕ್ತಿಗಳು ಕಟ್ಟಿಕೊಟ್ಟದ್ದೇ ಸಂಸ್ಕೃತಿಯಾಗಿ ನಿಲ್ಲುತ್ತದೆ. ವೈದಿಕ ಮೂಲದ ಸಂಗತಿಗಳನ್ನೇ ಭಾರತೀಯ ಸಂಸ್ಕೃತಿ, ಹಿಂದೂ ಸಂಸ್ಕೃತಿ ಎಂದು ಬಿಟ್ಟಿ ಪ್ರಚಾರ ನೀಡುತ್ತಿದ್ದಾರೆ. ವೈದಿಕ ಸಮುದಾಯದ ಸಂಸ್ಕೃತಿ ಇಡೀ ದೇಶದ ಸಂಸ್ಕೃತಿಯಾಗಿ ನಿಲ್ಲಲು ಹೇಗೆ ಸಾಧ್ಯ? ಭಾರತದಲ್ಲಿ ಹಲವಾರು ಧರ್ಮಗಳಿವೆ. ನೂರಾರು ಜಾತಿಗಳಿವೆ. ಹಾಗಿದ್ದರೆ ಇವುಗಳು ಯಾವ ಸಂಸ್ಕೃತಿಯ ಪಟ್ಟಿಗೆ ಸೇರುತ್ತವೆ? ಎಲ್ಲ ಧರ್ಮ, ಜಾತಿಯವರನ್ನು ಕೈಬಿಟ್ಟು ವೈದಿಕ ಸಂಸ್ಕೃತಿಯನ್ನು ಹಿಂದೂ ಸಂಸ್ಕೃತಿಯೆಂದು ಕರೆಯುವುದರ ಔಚಿತ್ಯವನ್ನು, ಅದರ ಹಿಂದಿನ ರಾಜಕಾರಣವನ್ನು ಪ್ರಶ್ನಿಸಬೇಕಿದೆ. ಹಿಂದೂ ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎಂದು ಅಬ್ಬರಿಸುವ ಆ ಶಕ್ತಿಗಳು ಮೊದಲು ಸರಿಯಾದ ನೆಲೆಯಲ್ಲಿ ಸಂಸ್ಕೃತಿಯನ್ನು ನಿರ್ವಚಿಸಿಕೊಳ್ಳಲಿ. ಸಂಸ್ಕೃತಿ ಯಾವಾಗಲೂ ಜೀವಪರವಾಗಿರಬೇಕು. ಜೀವ ವಿರೋಧಿಯಾದ ಯಾವ ಸಂಗತಿಗಳೂ ಸಂಸ್ಕೃತಿಯಾಗಿ ನಿಲ್ಲುವುದಿಲ್ಲ. ಅಂಥದ್ದನ್ನು ಸಂಸ್ಕೃತಿಯಾಗಿ ಪರಿಗಣಿಸಲೂಬಾರದು. 'ವಾಟರ್' ಚಿತ್ರದಲ್ಲಿಯ ಮಧುಮತಿಯ ಮಾತಿಗಾಗಿ ಅವರು ನೊಂದುಕೊಳ್ಳಬೇಕಾಗಿಲ್ಲ. ಅಥವಾ ಅದನ್ನು ಅಪಮಾನವಾಗಿ ಸ್ವೀಕರಿಸಬೇಕಾಗಿಲ್ಲ. ವಾಸ್ತವದಲ್ಲಿ ಭಾರತದಲ್ಲಿಯ ಅನೇಕ ವಿಧವೆಯರು ಅದೇ ಬದುಕನ್ನು ಸಾಗಿಸುತ್ತಿದ್ದಾರೆ. ಹಿಂದೆಯೂ ಅದೇ ರೂಪದಲ್ಲಿ ಬದುಕಿದ್ದರು ಎನ್ನುವುದಕ್ಕೆ ಸಾಹಿತ್ಯಿಕ ಹಾಗೂ ವಿದೇಶಿ ಪ್ರವಾಸಿಗರ ಪತ್ರಗಳ ಉಲ್ಲೇಖಗಳು ಜೀವಂತ ಸಾಕ್ಷಿಯಾಗಿವೆ. ವಿನುಕೊಂಡ ವಲ್ಲಭರಾಯ ವಿರಚಿತ ಕ್ರೀಡಾಭಿರಾಮದಲ್ಲಿ ಉಲ್ಲೇಖಿತವಾದ ವಿಪ್ರನ ವಿಧವೆಯರ ಚಿತ್ರಣ ಗಮನಾರ್ಹವಾದುದು. ೧೪ನೇ ಶತಮಾನದಲ್ಲಿದ್ದ ವಲ್ಲಭರಾಯನು ಅಂದಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ವ್ಯವಸ್ಥೆಯ ಜೀವಂತ ಚಿತ್ರಣವನ್ನು ನೀಡಿದ್ದಾನೆ. ಊಟದ ಮನೆಯ ಬಗ್ಗೆ ವಿಚಾರಿಸಿದ ಮಂಚನನಿಗೆ ಬ್ರಾಹ್ಮಣನು 'ನಿಮಗೆ ಆಹಾರ ಬೇಕೊ? ವಿಹಾರ ಬೇಕೊ?' ಎಂದು ಪ್ರಶ್ನಿಸುತ್ತ ವಿಹಾರದ ಕುರಿತು ಈ ಕೆಳಗಿನಂತೆ ವಿವರಣೆ ನೀಡುತ್ತಾನೆ.

"ಸಣ್ಣದೇಹ ದೊಡ್ಡ ಸ್ತನ, ಹೊಳೆಯುವ ಕಣ್ಣು, ಕೂದಲಿಲ್ಲದ ತಲೆ ಆ ವಿಧವಾ ರತ್ನವನ್ನು ಸ್ವೇಚ್ಛೆಯಾಗಿ ಬಿಟ್ಟ ಬ್ರಹ್ಮನಿಗೆ ಜಯಜಯ. ವಿಪ್ರ ವಿಧವೆಯರು ಈ ಭೂಮಂಡಲದಲ್ಲಿ ಎಷ್ಟು ಜನ ಇಲ್ಲ! ಆದರೆ ಆಕೆಯ ವಿಭ್ರಮ! ವಿಲಾಸ! ಕಲಾವರ್ಗ! ಇವೆಲ್ಲ ಹಾಗಿರಲಿ. ಆ ವಿಧವೆಯ ದೇಹಕಾಂತಿಯ ನವಲಕ್ಷಾಧೀಶನ ಹಣೆಯಲ್ಲಿರುವ ಚಿನ್ನದ ಪಟಬಂಧನ ಸೌಭಾಗ್ಯಲಕ್ಷ್ಮಿಯನ್ನು ನೋಡಿ ನಗುವಂತಿದೆ" (ವಿನುಕೊಂಡ ವಲ್ಲಭರಾಯ: ೨೦೦೦; ಪು. ೧೬).

ಬ್ರಾಹ್ಮಣನ ಈ ಮಾತಿನ ಅರ್ಥವನ್ನು ಬಿಚ್ಚಿ ಹೇಳಬೇಕಾಗಿಲ್ಲ. ವಿಧವೆಯರಿಗೆ ಲೈಂಗಿಕ ನಿರ್ಬಂಧವೇನಿರಲಿಲ್ಲ. ತಮಗೆ ಬೇಕಾದ ಗಂಡಸರನ್ನು ಕೂಡಿಕೊಳ್ಳುವ ಸ್ವಾತಂತ್ರ್ಯ ಅವರಿಗಿತ್ತು. ಅಂದಿನ ಸಮಾಜದಲ್ಲಿ ಅದು ಅನೈತಿಕ ಸ್ವರೂಪವನ್ನು ಪಡೆದುಕೊಂಡಿರಲಿಲ್ಲ. ಅದೊಂದು ಒಪ್ಪಿತ ಸಾಮಾಜಿಕ ಮೌಲ್ಯವಾಗಿತ್ತು.

ವಲ್ಲಭರಾಯನ ಅದೇ ಕೃತಿಯಲ್ಲಿ ವಿಧವೆಯರ ಲೈಂಗಿಕ ಸ್ವಾತಂತ್ರ್ಯದ ಕುರಿತಂತೆ ಮತ್ತೊಂದು ಉಲ್ಲೇಖ ಸಿಗುತ್ತದೆ. ಅದಕ್ಕೆ ಸಾಂಸ್ಕೃತಿಕ ಸ್ವರೂಪದ ಕವಚವಿದೆ. ಶ್ರೀ ಕಾಕುಳೇಶ್ವರ ಉತ್ಸವದಲ್ಲಿ ಗರುಡಗಂಭವನ್ನು ಪ್ರತಿಷ್ಠಾಪಿಸುವ ದಿನದಂದು ಹಿಡಿದುಕೊಂಡು ಪುಷ್ಪಯಾಗದವರೆಗಿನ ಪರ್ವಕಾಲದವರೆಗೆ ವಿಧವೆಯರು ಲೈಂಗಿಕ ಸ್ವಾತಂತ್ರ್ಯವನ್ನು ಹೊಂದಿರುತ್ತಿದ್ದರು. ಈ ಅವಧಿಯಲ್ಲಿ ತಮ್ಮ ಲೈಂಗಿಕ ಅಗತ್ಯವನ್ನು ಪೂರೈಸಿಕೊಳ್ಳುವುದು ಅವರ ಹಕ್ಕೂ ಆಗಿತ್ತು. ಕೃತಿಕಾರ ಈ ಆಚರಣೆಯ ಇಡಿಯಾದ ವರ್ಣನೆಯನ್ನು ಮಂಚನನ ಮೂಲಕ ಹೇಳಿಸುತ್ತಾನೆ.

"ದವನ ಹುಣ್ಣಿಮೆ ದಿನ ಶ್ರೀಕಾಕುಳದಲ್ಲಿರುವ ತೆಲಗುರಾಯನೆಂಬ ಹೆಸರಿನ ದೇವತಾಧೀಶ್ವರನಿಗೆ ಲೋಕ ಹಿತಕ್ಕಾಗಿ ಉತ್ಸವ ಮಾಡಿದರು. ನಾವು ಕಳೆದ ವರ್ಷ ಅಲ್ಲಿಗೆ ಹೋಗಿದ್ದೆವು. ಕಲ್ಪವಲ್ಲಿಯಾದ ಕಾರವೆಲ್ಲಿ ತಾಯಿ ಪ್ರೀತಿಯಿಂದ ಹೆತ್ತ ಮಗು ಅವನು. ಆ ತೆಲುಗರಾಯ ಜಾರಚೋರ ಧೂರ್ತ ಚಕ್ರವರ್ತಿ ದೇವವೇಶ್ಯಾಭುಜಂಗ. ಅವನು ಚಿನ್ನದ ಪಾತ್ರೆಯಲ್ಲಿ ಬಿಸಿಹಾಲನ್ನು ಕುಡಿದು ಹುಳಿಯಾದ ತನ್ನ ಅಧರ ಪಲ್ಲವದಿಂದ ವಿಪ್ರಕನ್ಯೆಯರೊಂದಿಗೆ ಸರಸವಾಡುತ್ತಿದ್ದಾನೆ.

ನಾಗದೇವ ಭಟ್ಟಾರಕನ ಮನೆಯಲ್ಲಿ ಹುಟ್ಟಿದ ಶ್ರೀ ಕಾಕುಳೇಶ್ವರನ ಉತ್ಸವವನ್ನು ಆಚರಿಸುವಾಗ ವೇದ, ಪುರಾಣ, ಉಪನಿಷತ್ತುಗಳು ಇಷ್ಟವಾಗುವುದಿಲ್ಲ. ಆಗಮಗಳು ಬೇಡವೆನಿಸುತ್ತವೆ. ಗರುಡಗಂಬವನ್ನು ಪ್ರತಿಷ್ಠಾಪಿಸುವ ದಿನ ಮೊದಲುಗೊಂಡು ಪುಷ್ಪಯಾಗದವರೆಗಿನ ಪರ್ವಕಾಲದಲ್ಲಿ ಕೃಷ್ಣಾನದಿ ತೀರದ ಹನ್ನೆರಡು ಕ್ರೋಶ ವ್ಯಾಪಕ ಭೂಮಿಯಲ್ಲೆಲ್ಲ ಭಗವದನು ಮತಿಯಿಂದ ಪರನಾರಿ ಸಂಗ ಮಾಡುವುದು ಪಾಪವಲ್ಲ. ಶ್ರೀ ಕಾಕುಳದ ಜಾತ್ರೆಗೆ ಬರುವ ಕಾಮಾಂಧರಾದ ವೆಲನಾಡಿನ ತರುಣ ವಿಧವೆಯರನ್ನು ತೃಪ್ತಿಗೊಳಿಸಲು ಉಗ್ರಕಾಮಶಕ್ತಿಯುಳ್ಳ ಭೀಮಸೇನನಂಥ ಹಿಡಿಂಬಾಧೀಶ್ವರರು ಬೇಕಷ್ಟೇ. ಅವರನ್ನು ಬೇರೆಯವರಿಂದ ತಣಿಸಲು ಸಾಧ್ಯವಿಲ್ಲ.

ಯುವಕರು ಈ ಜಾತ್ರೆಯಲ್ಲಿ ಯುವತಿಯರಿಗೆ ಮುತ್ತಿಡುವುದು, ಅಪ್ಪಿಕೊಳ್ಳುವುದು, ನದೀತೀರಕ್ಕೆ ಅವರನ್ನು ಎಳೆದುಕೊಂಡು ಹೋಗುವುದು ಸರ್ವೇಸಾಮಾನ್ಯ. ಶ್ರೀ ಕಾಕುಳ ಉತ್ಸವದಲ್ಲಿ ಸೌಂದರ್ಯವತಿಯಾದ ವಿಧವೆಯರು ಎಷ್ಟೋ ಜನ ಸಿಕ್ಕುವಾಗ ವೇಶ್ಯೆಯರನ್ನು ಹುಡುಕಿಕೊಂಡು ಹೋಗುವುದೇಕೆ? ಅಲ್ಲಿ ಕಾಮನು ಯುವತಿಯನ್ನು ನೋಡಿದ ಸನ್ಯಾಸಿಯ ಮೇಲೆ ದರ್ಭವಲ್ಲದ ಕತ್ತಿಯನ್ನು ಝಳಪಿಸುತ್ತಾನೆ. ಮೇದರ ಕನ್ಯೆಯನ್ನು ನೋಡಿದ ರೈತನನ್ನು ಮುಳ್ಳುಗೋಲಿನಿಂದ ಚುಚುತ್ತಾನೆ. ಅಕ್ಕಸಾಲಿಗನನ್ನು

ನೋಡಿದ ತರುಣಿಯ ಮೇಲೆ ಪುಷ್ಪಾಗ್ನಿ ಬಾಣ ಬಿಡುತ್ತಾನೆ. ಹೀಗೆ ಒಂದೊಂದು ಜಾತಿಗೆ ತಕ್ಕಂತೆ ಜಾತ್ರೆಯ ಎಲ್ಲಾ ದಿನಗಳಲ್ಲೂ ಮನ್ಮಥನು ಸರಿಯಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುತ್ತಾನೆ ಎಂದು ಹೇಳಿ ಆ ಕಡೆ ಬರುತ್ತಿದ್ದ ವಿಧವಾ ಸಮೂಹವನ್ನು ಆಶೀರ್ವದಿಸಲು ಮುಂದೆ ಹೋಗಿ

ಅಂದವಾಗಿ ಸಣ್ಣ ಸೀರೆ ಉಟ್ಟು ತಿರುಗಾಡುವ ಮಾಚಕಮ್ಮನಿಗೆ ದೀರ್ಘಾಯುರಸ್ತು! ಮತ್ತೆ-ಮತ್ತೆ ದೇವಾಲಯಕ್ಕೆ ಹೋಗುವ ಕುಲಟೆಗೆ ಸಂಕಲ್ಪಸಿದ್ಧಿರಸ್ತು! ನಿತ್ಯವೂ ವ್ಯಭಿಚಾರ ನಿಷ್ಠೆಯಿಂದಿರುವ ವಿಧವೆಗೆ ಪುತ್ರಾಭಿವೃದ್ಧಿ ಪ್ರಾಪ್ತಿರಸ್ತು! ತುಲಸಿಮಾಲೆಯನ್ನು ಧರಿಸಿರುವವಳಿಗೆ ಆರೋಗ್ಯ ವಿಭವಮಸ್ತು! ವಿಧವೆಗೆ ಸಂಪತ್ಸಮೃದ್ಧಿರಸ್ತು! ತಿರುಗಾಡುವ ಹೆಣ್ಣಿಗೆ ನಿತ್ಯ ಸೌಭಾಗ್ಯಮಸ್ತು .....! (ವಿನುಕೊಂಡ ವಲ್ಲಭರಾಯ: ೨೦೦೦; ಪು. ೨೦-೨೧).

ಪ್ರವಾಸಿಕಂಡ ಇಂಡಿಯಾದಲ್ಲಿ ಭಿನ್ನ ರೀತಿಯ ಅನೇಕ ಉಲ್ಲೇಖಗಳು ದೊರೆಯುತ್ತವೆ. ದುಆರ್ತೆ ಬಾರ್ಬೊಸಾನು "ಸಹಗಮನ ಮಾಡದ ಹೆಂಗಸರನ್ನು ಬಹಳ ಅಗೌರವದಿಂದ ಕಾಣುತ್ತಾರೆ. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳ, ಅಗೌರವವೆಂದು ಹೊರಗಟ್ಟುತ್ತಾರೆ. ಹೀಗೆ ಮನೆಯಿಂದ ಅಟ್ಟಲ್ಪಟ್ಟ ವಿಧವೆಯರು ದಿಕ್ಕಿಲ್ಲದೆ ಅಲೆಯುತ್ತಾರೆ. ಅತಿ ಚಿಕ್ಕ ವಯಸ್ಸಿನ ವಿಧವೆಯರ ಬಗ್ಗೆ ದಯಾದಾಕ್ಷಿಣ್ಯ ತೋರಿಸಿದ ಪಕ್ಷದಲ್ಲಿ, ಅವರನ್ನು ದೇವಸ್ಥಾನಗಳಿಗೆ ಕಳುಹಿಸಿ ಅಲ್ಲಿ ದೇವಸ್ಥಾನಕ್ಕಾಗಿ ಹಣಗಳಿಸಲು ದೇವದಾಸಿಯರಾಗಿ ಬಿಡುತ್ತಾರೆ" (ದುಆರ್ತೆ ಬಾರ್ಬೊಸಾ : ೧೯೬೬; ಪು. ೨೧೬-೧೭).

ಸಾಹಿತ್ಯದಲ್ಲಿ, ವಿದೇಶಿ ಪ್ರವಾಸಿಗರ ಪತ್ರಗಳಲ್ಲಿ ಉಲ್ಲೇಖಿತವಾದ ಇಂತಹ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಗತಿಗಳನ್ನು ಯಾರೂ ಅಪಮಾನವೆಂದು ಸ್ವೀಕರಿಸಬಾರದು. ಚರಿತ್ರೆಯಲ್ಲಿರುವ ಇಂತಹ ಸತ್ಯಗಳನ್ನು ಅರ್ಥಮಾಡಿಕೊಳ್ಳಬೇಕು, ಅರಗಿಸಿಕೊಳ್ಳಬೇಕು, ಅಂತಹ ತಪ್ಪುಗಳು ಮುಂದೆ ಜರುಗದಂತೆ ನೋಡಿಕೊಳ್ಳಬೇಕು. ಯಾವುದೇ ಸಾಂಸ್ಕೃತಿಕ ಸಂಗತಿಗಳ ಅಧ್ಯಯನದ ಸಂದರ್ಭದಲ್ಲಿ ಚರಿತ್ರೆಯ ಪುನರಾವಲೋಕನ ಅತ್ಯಗತ್ಯವಾದುದು. ಮೇಲೆ ನೀಡಿದ ಮೊದಲ ಮತ್ತು ಎರಡನೆಯ ಉಲ್ಲೇಖಗಳು ತೆಲುಗು ನಾಡಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಪ್ರಚಲಿತದಲ್ಲಿದ್ದವುಗಳೇ ಆಗಿರಬೇಕು. ಇಲ್ಲದೆ ಹೋಗಿದ್ದರೆ ಕೃತಿಕಾರನಿಗೆ ಧಾರ್ಮಿಕ ಮುಂಚೂಣಿಯಲ್ಲಿದ್ದ ವೈದಿಕರ ಕುರಿತಂತೆ ಈ ರೀತಿಯ ಚಿತ್ರಣ ನೀಡುವುದು ಸಾಧ್ಯವಾಗುತ್ತಿರಲಿಲ್ಲ. ೧೪ನೆಯ ಶತಮಾನದಲ್ಲಿ ಕೃಷ್ಣಾನದಿಯ ತೀರದಲ್ಲಿ ಇಂತಹ ಆಚರಣೆಗಳು ಸಮಾಜ ಒಪ್ಪಿತ ಮೌಲ್ಯಗಳೇ ಆಗಿದ್ದವು. ವೈದಿಕ ಸಂಸ್ಕೃತಿಯಿರಬಹುದು, ಅವೈದಿಕ ಸಂಸ್ಕೃತಿಯಿರಬಹುದು. ಅವುಗಳಲ್ಲಿ ಕೃತಕ ಹಾಗೂ ಸಹಜ ಸಂಗತಿಗಳೆರಡೂ ಇರುತ್ತವೆ. ಮೇಲಿನ ಎರಡು ಉಲ್ಲೇಖಗಳು ಸಹಜ ಸಂಸ್ಕೃತಿಯಲ್ಲಿ ಬರುತ್ತವೆ. ಸತಿಸಹಗಮನ ಹಾಗೂ ವೈಧವ್ಯ ಕೃತಕವಾಗಿರುತ್ತವೆ. ನಮ್ಮಲ್ಲಿ ಸಹಜ ಶ್ರೇಷ್ಠತೆಗಿಂತಲೂ ಕೃತಕ ಶ್ರೇಷ್ಠತೆಗೆ ಹೆಚ್ಚಿನ ಗೌರವವಿದೆ.

ಕೋಮುವಾದಿ ಸಂಘಪರಿವಾರದವರು ಚಿತ್ರಕಥೆಯನ್ನಷ್ಟೇ ಅಲ್ಲ, ಅದರ ಶೀರ್ಷಿಕೆಯನ್ನೂ ವಿರೋಧಿಸುತ್ತಿದ್ದಾರೆ. ಅವರ ಪ್ರಕಾರ ಪವಿತ್ರ ಗಂಗಾನದಿಯ ಹೆಸರನ್ನು ಕುಲಗೆಡಿಸುವ ಉದ್ದೇಶ ಚಿತ್ರದ ಶೀರ್ಷಿಕೆಯಲ್ಲಿದೆ. ಅದಕ್ಕಾಗಿ ಅದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಭಾರತೀಯರಲ್ಲಿ ಜಲಸಂಸ್ಕೃತಿ ಅತ್ಯಂತ ಪ್ರಬಲವಾಗಿದೆ. ನಮ್ಮಲ್ಲಿ ನೀರು ಕೇವಲ ನೀರಲ್ಲ. ಮಾತೃದೇವತೆಯಾದ ಅದು ಹೆಣ್ತನದ, ತಾಯ್ತನದ, ಫಲವಂತಿಕೆಯ ಸಂಕೇತ. ಒಟ್ಟಾರೆ ಅದು ಜೀವನದ ಸಂಕೇತ. ಆರ್ಯರಿಗೆ ಅಗ್ನಿ ಶ್ರೇಷ್ಠವಾದರೆ, ದ್ರಾವಿಡರಿಗೆ ನೀರು ಶ್ರೇಷ್ಠ. ಇವರು ಹೆಣ್ಣನ್ನು ಅತ್ಯಂತಿಕ ಶಕ್ತಿಯೆಂದು ನಂಬುತ್ತಾರೆ. "ವಿಧವೆ ನೀರು ಹೊತ್ತುಕೊಂಡು ಎದುರಿಗೆ ಬಂದರೆ ಅಶುಭ, ಮುತ್ತೈದೆ ಬಂದರೆ ಶುಭ" ಎನ್ನುವ ನಂಬಿಕೆ ನಮ್ಮಲ್ಲಿ ಪ್ರಚಲಿತದಲ್ಲಿದೆ. ಅದಕ್ಕಾಗಿ, ಅಶುಭದ ಸಂಕೇತವಾದ ವಿಧವೆಯರ ಕುರಿತಿರುವ ಚಲನಚಿತ್ರಕ್ಕೆ 'ವಾಟರ್' ಎಂಬ ಶೀರ್ಷಿಕೆ ಏಕೆ ಎಂಬುದು ಅವರ ಪ್ರಶ್ನೆ. ಭಾರತೀಯ ಸಮಾಜದಲ್ಲಿ ನೀರನ್ನು ಯಾರು ಮುಟ್ಟುತ್ತಾರೋ ಅದರ ಮೇಲೆ ನೀರಿನ ಗುಣಾವಗುಣಗಳು, ಲಕ್ಷಣಗಳು ನಿರ್ಧರಿತವಾಗುತ್ತವೆ.

ಅರ್ಥ, ಫೈರ್ ಚಲನಚಿತ್ರಗಳು ಬಿಡುಗಡೆಗೊಂಡ ನಂತರ ವಿವಾದವನ್ನೆಬ್ಬಿಸಿದರೆ, 'ವಾಟರ್ ' ಚಿತ್ರೀಕರಣದ ಸಂದರ್ಭದಲ್ಲಿಯೇ ವಿರೋಧವನ್ನೆದುರಿಸುತ್ತಿದೆ. ಚಿತ್ರದ ಸುತ್ತ ಎರಡು ಪ್ರಮುಖ ಪ್ರಮೇಯಗಳು ಹುಟ್ಟಿಕೊಂಡಿವೆ. 'ಚಿತ್ರಕಥೆ ಹಿಂದೂ ಸಂಸ್ಕೃತಿಗೆ ಧಕ್ಕೆಯನ್ನುಂಟು ಮಾಡುತ್ತದೆ' ಎನ್ನುವದೊಂದು. ಮತ್ತೊಂದು 'ನಮ್ಮ ಸಂಸ್ಕೃತಿಯಲ್ಲಿಯ ತಪ್ಪನ್ನು ಒಪ್ಪಿಕೊಳ್ಳುವದರಿಂದ ನಮ್ಮ ಘನತೆ ಹೆಚ್ಚಾಗುತ್ತದೆ' ಈ ಪ್ರಮೇಯಗಳು ಸಿನಿಮಾ ದಲ್ಲಿದೆಯೋ, ಸಿನಿಮಾ ತೆಗೆಯುವವರ ಮನಸ್ಸಿನಲ್ಲಿದೆಯೋ ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಬಹಳ ಬಾರಿ ಅವರೇ ಕಟ್ಟಿದ ಪ್ರಮೇಯಕ್ಕೆ, ಅವರೇ ವಿರೋಧ ವನ್ನು ಸೃಷ್ಟಿಸಿಕೊಳ್ಳುತ್ತಿರುತ್ತಾರೆ. ಇದು ಪ್ರಚಾರ ಮಾಧ್ಯಮದ 'ತಂತ್ರ'. ಅದಕ್ಕಾಗಿ ದೀಪಾ ಮೆಹ್ತಾಳನ್ನು ಮುಗ್ಧವಾಗಿ ನಾವು ನಂಬುವಂತಿಲ್ಲ. ಅವಳ ಉದ್ದೇಶ ಒಳ್ಳೆಯದಿರಬಹುದು. ಆದರೆ ಆಕೆಯ ಮನೋಭಾವವನ್ನು ನಂಬುವಂತಿಲ್ಲ.

ಉತ್ತರ ಪ್ರದೇಶದ ಸರಕಾರ ಹಾಗೂ ಜನತೆಯಿಂದ ಚಿತ್ರೀಕರಣಕ್ಕೆ ವಿರೋಧ ಎದುರಿಸುತ್ತಿರುವ ದೀಪಾ ಮೆಹ್ತಾ, ನರ್ಮದ ನದಿ ತೀರದಲ್ಲಿ, ಹೂಗ್ಲಿ ನದಿ ದಂಡೆಯಲ್ಲಿ ವಾಟರ್ ಚಿತ್ರೀಕರಣಕ್ಕೆ ಆಯಾ ರಾಜ್ಯದ ಮುಖ್ಯಮಂತ್ರಿಗಳಿಂದ ಆಹ್ವಾನವನ್ನು ಪಡೆದು ಕೊಂಡಿದ್ದಾಳೆ. ಬಿಹಾರ ಸರಕಾರವೂ ಕೂಡಾ ಹಸಿರು ನಿಶಾನೆಯನ್ನು ಬೀಸಿ ಚಿತ್ರೀಕರಣಕ್ಕೆ ಸ್ವಾಗತಿಸಿದೆ. ಚಿತ್ರೀಕರಣಕ್ಕೆ ಆಹ್ವಾನ ನೀಡಿದ ಮೂರು ಪಕ್ಷಗಳು ಬಿ.ಜೆ.ಪಿ.ಯೇತರ ಸರಕಾರಗಳು ಎಂಬುದನ್ನು ಮರೆಯಬಾರದು. ದೀಪಾ ಮೆಹ್ತಾಳನ್ನೊಳಗೊಂಡಂತೆ ಇವರಾರೂ ವಿಧವಾ ಸಮಸ್ಯೆಯ ಕುರಿತು ತಲೆಕೆಡಿಸಿಕೊಂಡವರಲ್ಲ. ಅದು ಅವರಿಗೆ ತೀವ್ರವಾಗಿ ಕಾಡಿಯೂ ಇಲ್ಲ. ನಮ್ಮ ಪತ್ರಿಕೆಗಳು ಚಿತ್ರದ ನಿರ್ದೇಶಕಿಗೆ, ನಟಿಯರಿಗೆ, ರಾಜಕೀಯ ನಾಯಕರಿಗೆ ಹಾಗೂ ಕೋಮುವಾದಿ ಶಕ್ತಿಗಳಿಗೆ ಬಿಟ್ಟಿ ಪ್ರಚಾರವನ್ನು ನೀಡಿದವು. ನಿಜವಾದ ವಿಧವೆಯ ಆಕ್ರಂದನವನ್ನು ಯಾರಿಗೂ ಕೇಳಿಸಿದಂತೆ ಮುಚ್ಚಿಹಾಕಿದವು.

ಭಾರತದಲ್ಲಿ ಹೆಣ್ಣಿನ ಮೇಲೆ ಎರಡು ನಿಟ್ಟಿನಲ್ಲಿ ಶೋಷಣೆ ನಡೆದಿದೆ. ೧. ಬಹುಪತ್ನಿತ್ವ, ೨. ಮಹಾ ಮಾಸ್ತಿತ್ವ. ಮೊದಲನೆಯದರಲ್ಲಿ ಹೆಣ್ಣನ್ನು ತಾನಿರುವವರೆಗೂ ಭೋಗದ ವಸ್ತುವನ್ನಾಗಿ ಮಾಡಿಕೊಳ್ಳುವನು. ಅದು ಬಹು ಆಗುವವರೆಗೂ ಮಾಡಿಕೊಳ್ಳುವನು. ಎರಡನೆಯದರಲ್ಲಿ ಒಂದು ವೇಳೆ ತಾನು ಸತ್ತರೆ ತನ್ನ ಜೊತೆಗೆ ಅವರನ್ನು ನಾಶಮಾಡುವ ಪ್ರವೃತ್ತಿ ಕಂಡುಬರುತ್ತದೆ. ವೈಧವ್ಯ ಹೊತ್ತುಕೊಂಡು ಈ ಸಮಾಜದಲ್ಲಿ ಮೌನದಿಂದ ಬದುಕುವುದು ಅಷ್ಟು ಸುಲಭವಲ್ಲ.

ವೈದಿಕ ಮೂಲದಿಂದಲೇ ವೈಧವ್ಯದ ಪರಿಕಲ್ಪನೆ ಮೂಡಿದೆ. ಮಾತೃಪ್ರಧಾನ ಘಟ್ಟದಲ್ಲಿ ವಿವಾಹ, ವೈಧವ್ಯ ಎರಡೂ ರೂಪಗಳು ಅಸ್ತಿತ್ವದಲ್ಲಿರಲಿಲ್ಲ. ವೈದಿಕ ಸಂಸ್ಕೃತಿ ಪ್ರಬಲವಾಗಿ ಶ್ರೇಷ್ಠತೆಯ ಹಣೆಪಟ್ಟಿ ಕಟ್ಟಿಕೊಂಡು ಮರೆಯತೊಡಗಿದಾಗ ಮಾತೃಪ್ರಧಾನ ಘಟ್ಟದ ಎಲ್ಲ ಆಚರಣೆಗಳು ಕಣ್ಮರೆಯಾದವು. ಭಾರತದಲ್ಲಿನ ಅನೇಕ ಜಾತಿ ಧರ್ಮಗಳಿಗೆ, ವೈದಿಕ ಸಂಪ್ರದಾಯದ ಪ್ರಭಾವಲಯದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಇದರ ಪರಿಣಾಮದಿಂದಲೇ ಭಾರತದಲ್ಲಿ ವೈಧವ್ಯ ಎನ್ನುವುದು ತೀವ್ರತರ ಸಮಸ್ಯೆಯಾಗಿ ಕಾಡಿದೆ. ಹೀಗಾಗಿ ಈ ಸಮಸ್ಯೆಯ ಕುರಿತಂತೆ ಅನೇಕ ಚಳುವಳಿಗಳು ನಡೆದವು. ರಾಜಾರಾಮ್ ಮೋಹನರಾಯ, ದಯಾನಂದ ಸರಸ್ವತಿ, ಈಶ್ವರಚಂದ್ರ ವಿದ್ಯಾಸಾಗರ ಮೊದಲಾದವರೆಲ್ಲ ವಿಧವಾ ಸಮಸ್ಯೆಗೆ ತೀವ್ರವಾಗಿ ಹೋರಾಟ ನಡೆಸಿದರು. ವಿಧವಾ ವಿವಾಹದ ಚಳುವಳಿಯ ನೇತಾರರೆಲ್ಲರೂ ಬ್ರಾಹ್ಮಣ ಸಮಾಜಕ್ಕೆ ಸೇರಿದವರು ಎಂಬುದು ಗಮನಿಸಬೇಕಾದ ಸಂಗತಿ. ತಮ್ಮ ಜನಾಂಗದಲ್ಲಿಯ ವಿಧವಾ ಸಮಸ್ಯೆಯ ತೀವ್ರತೆಯನ್ನು ಮನಗಂಡಿದ್ದರಿಂದಲೇ, ಅದನ್ನೇ ತಮ್ಮ ಹೋರಾಟದ ಅಂತಿಮ ಧ್ಯೇಯವಾಗಿಸಿಕೊಂಡರು. ಆದರೂ ಅವುಗಳು ಸಮಾಜದಿಂದ ಕಣ್ಮರೆಯಾಗಿಲ್ಲ. ಧಾರ್ಮಿಕ ಪರಿಧಿಯೊಳಗೆ ಸ್ತ್ರೀಕೇಂದ್ರವಾಗಿಟ್ಟುಕೊಂಡು ಹೆಣೆದ ಇಂತಹ Sadist ಆಚರಣೆಗಳು ಅಷ್ಟು ಸುಲಭವಾಗಿ ಸಮಾಜದಿಂದ ಕಣ್ಮರೆಯಾಗುವುದಿಲ್ಲ. ಅವುಗಳನ್ನು ಇಲ್ಲವಾಗಿಸಲು ಪ್ರಯತ್ನಿಸಿದಷ್ಟು, ಅವು ಪ್ರಬಲವಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತವೆ.

ವೈಧವ್ಯದ ವಿಧಿ ಆಚರಣೆಗಳು ಬ್ರಾಹ್ಮಣರಲ್ಲಿ ಉಗ್ರವಾಗಿದ್ದರೆ, ಬ್ರಾಹ್ಮಣೇತರರಲ್ಲಿ ಆ ಕ್ರೂರತೆ ಸ್ವಲ್ಪ ಸೌಮ್ಯವಾಗಿರುತ್ತವೆ ಅಷ್ಟೆ. ಹೀಗಾಗಿ ವಿಧವೆಯರ ನೋವನ್ನು ಎದುರಿಗಿಟ್ಟುಕೊಂಡು ಯಾವುದು ಸಹ್ಯ ಯಾವುದು ಸಹ್ಯವಲ್ಲ ಎಂದು ತಕ್ಕಡಿಯಲ್ಲಿಟ್ಟು ನೋಡುವುದು ಅಷ್ಟು ಉಚಿತವಲ್ಲ. ವೈದಿಕ ಸಂಸ್ಕೃತಿ ಹಾಗೂ ಅದರ ಪ್ರಭಾವ ವಲಯಕ್ಕೊಳಗಾದ ವೈದಿಕೇತರ ಸಂಸ್ಕೃತಿಗಳು ವಿಧವೆಯರ ಕುರಿತಂತೆ ಮಾನವೀಯ ನೆಲೆಗಳಿಂದಾಚೆ ನಿಂತು ಮಾತನಾಡಿವೆ. ತಲೆಯನ್ನು ಬೋಳಿಸಿಕೊಳ್ಳುವುದು, ರವಿಕೆ ಹಾಕಿಕೊಳ್ಳದಿರುವುದು, ಒಂದೊತ್ತು ಮಾತ್ರ ಊಟ ಮಾಡುವುದು ವಿಪ್ರ ವಿಧವೆಯರ ಲಕ್ಷಣಗಳು. ಇವುಗಳು, ಸಾಮಾಜಿಕ ಅಪರಾಧವೆಸಗಿದ ವ್ಯಕ್ತಿಗೆ ನೀಡುವ ಕಠಿಣ ಶಿಕ್ಷೆಗಳಂತಿವೆ. ವೈದಿಕೇತರ ಬಹುಪಾಲು ಜಾತಿ ಧರ್ಮಗಳಲ್ಲಿ ಈ ಯಾವ ಆಚರಣೆಗಳಿಲ್ಲ

ದಿದ್ದರೂ, ವಿಧವೆಯನ್ನು ಗೌರವದಿಂದ ಕಂಡಿಲ್ಲ. ಮರುಮದುವೆಗೆ ಅವಕಾಶವನ್ನು ನೀಡಿಲ್ಲ. ಹೀಗಾಗಿ ಇವರಿಬ್ಬರಲ್ಲಿ ಯಾರ ನೋವು ಹೆಚ್ಚು ಎಂದು ಪ್ರತ್ಯೇಕಿಸಿ ನೋಡುವ ಬದಲು, ಅವರನ್ನೆಲ್ಲ ಒಂದೆಡೆ ಇಟ್ಟು ಸಮಸ್ಯೆಯ ಸ್ವರೂಪವನ್ನು ಗ್ರಹಿಸಬೇಕಿದೆ. ಮಹಿಳಾ ಸಮಸ್ಯೆಗಳನ್ನು ಬಿಡಿ-ಬಿಡಿಯಾಗಿ ನೋಡುವ ಬದಲು, ಇಡಿಯಾಗಿ ಗಮನಿಸುವ ಅಗತ್ಯವಿದೆ. ಹೀಗಾದಾಗ ಅವುಗಳಿಗೆ ಸಮಗ್ರ ಸ್ವರೂಪ ದೊರೆಯುತ್ತದೆ. ಇದರಿಂದಾಗಿ, ಮಹಿಳಾ ಹೋರಾಟಕ್ಕೆ ಹೆಚ್ಚಿನ ಬಲ ಬಂದಂತಾಗುತ್ತದೆ. ಹೀಗಾದರೆ ಸ್ತ್ರೀ ಮೇಲಿನ ಶೋಷಣೆಯ ತೀವ್ರತೆ ಇಳಿಮುಖವಾಗಬಹುದು.

ಅಧ್ಯಯನದ ಅನುಕೂಲಕ್ಕಾಗಿ ಉತ್ತರ ಭಾರತದ ವಿಧವೆಯರು, ದಕ್ಷಿಣ ಭಾರತದ ವಿಧವೆಯರು ಎಂದು ಎರಡು ಬಗೆಗಳಲ್ಲಿ ವಿಂಗಡಿಸಿಕೊಂಡಿದೆ. 'ವಾಟರ್ ' ಚಿತ್ರಕಥೆಯ ತೀವ್ರವಾದ ವಿವಾದ ಹಾಗೂ ವಿರೋಧ ಹುಟ್ಟಿಕೊಂಡಿದ್ದು ಉತ್ತರ ಭಾರತದಲ್ಲಿಯೇ. ಈಗಲೂ ಉತ್ತರಭಾರತ ಆರ್ಯ ಸಂಸ್ಕೃತಿ ಪ್ರಧಾನವಾದುದಾಗಿದೆ. ಅದನ್ನು 'ಕೃಷ್ಣ ಸಂಸ್ಕೃತಿ' ಎಂದು ಗುರುತಿಸಬಹುದು. ರಾಜತ್ವ ಬಂದ ತಕ್ಷಣ ವಿಷ್ಣು ಹುಟ್ಟಿಕೊಂಡನು. ವಿಷ್ಣುವಿನ ಅವತಾರವಾಗಿರುವ ಕೃಷ್ಣನು ಪ್ರಬಲವಾಗಿ ಬೆಳೆದು ನಿಂತನು. ಅವನು ಕನ್ಯೆಯರನ್ನು, ಗಂಡುಳ್ಳ ಬಾಲೆಯರನ್ನು, ವಿಧವೆಯರನ್ನು ಕೆಣಕುತ್ತಾನೆ, ಛೇಡಿಸುತ್ತಾನೆ. ಕೃಷ್ಣಪರಿಕಲ್ಪನೆಯೇ ಹೆಣ್ಣಿನ ಸ್ಥಾನವನ್ನು ಭೋಗದ ಸರಕಿಗೆ ಇಳಿಸಿತು. ವಿಲಾಸ ಜೀವನದ ಜನರು ಅದನ್ನು ವೈಭವೀಕರಿಸಿದರು. ಅದರಿಂದಾಗಿ ಮಹಿಳಾ ಸ್ಥಾನಮಾನಗಳು ಏಕದಂ ಎಂಬಂತೆ ಜರ್ಝನೆ ಇಳಿದವು. ಹೀಗಾಗಿ ಉತ್ತರ ಭಾರತದಲ್ಲಿ ವಿಧವೆಯರು ಮನೆಯಿದ್ದೂ ಅನಾಥರಾಗುತ್ತಾರೆ. ದೇವಾಲಯಗಳಲ್ಲಿ, ವಿಧವಾ ಆಶ್ರಮಗಳಲ್ಲಿ ಆಶ್ರಯ ಪಡೆಯುತ್ತಾರೆ. ಇದು ಅಲ್ಲಿರುವ ವಾಸ್ತವ ಭೀಕರ ಸತ್ಯ. ದಕ್ಷಿಣ ಭಾರತದಲ್ಲಿ ದ್ರಾವಿಡ ಸಂಸ್ಕೃತಿಯ ಸೊಗಡಿದೆ. ಹೀಗಾಗಿ ಅಲ್ಲಿ 'ವೈಧವ್ಯ' ಎನ್ನುವುದು ಎಷ್ಟೇ ಕ್ರೂರ ಸ್ವರೂಪವನ್ನು ಪಡೆದುಕೊಂಡಿದ್ದರೂ, ವಿಧವೆಯರನ್ನು ಮನೆಯೊಳಗೆ ಇಟ್ಟುಕೊಳ್ಳುವ ಉದಾರತೆಯನ್ನು ಉಳಿಸಿಕೊಂಡಿವೆ. ಆ ದೊಡ್ಡಸ್ತಿಕೆಯ ಮುಸುಕಿನಲ್ಲಿಯೇ ಅವರನ್ನು ತೊತ್ತಿನಂತೆ ದುಡಿಸಿಕೊಳ್ಳುತ್ತದೆ. ಆ ಮಾತು ಬೇರೆ. ಫಣಿಯಮ್ಮನಂತಹ ವಿಧವಾ ಕೇಂದ್ರಿತ ಚಲನಚಿತ್ರಗಳು ಕನ್ನಡದಲ್ಲಿ ಮೂಡಿಬಂದಿದ್ದರೂ, ಅವುಗಳು 'ವಾಟರ್ 'ನಷ್ಟು ಗಲಾಟೆಯನ್ನೆಬ್ಬಿಸಲಿಲ್ಲ.

ಭಾರತೀಯ ದೃಷ್ಟಿಕೋನದಲ್ಲಿ ವಿಧವೆಯರನ್ನು ಮೊದಲಿನಿಂದಲೂ ಸಹಜವಾಗಿ ನೋಡಿಲ್ಲ. 'ವೈಧವ್ಯ' ಎನ್ನುವುದು ಭೀಕರವಾದುದು, ನರಕಮಯವಾದುದು. ಗಂಡ ಇದ್ದೂ ಯಾತನೆಯನ್ನು ಅನುಭವಿಸುವುದು ಬೇರೆಯಾಗುತ್ತದೆ. ಅದು ಅಷ್ಟು ಭೀಕರವಾಗಿರುವುದಿಲ್ಲ. ವೃದ್ಧಾಪ್ಯದಲ್ಲಿ ವೈಧವ್ಯ ಬಂದರೆ ಅದು ಅಷ್ಟು ತೀವ್ರ ಸಮಸ್ಯೆಯಾಗಿ ಕಾಡಲಾರದು. ಕಾರಣ ಅವಳಲ್ಲಿರುವ ದೈಹಿಕ ಹಸಿವು ಇಂಗಿ ಹೋಗಿರುತ್ತದೆ. ಹೊಟ್ಟೆ ಹಸಿವು ಅಷ್ಟಾಗಿ ಕಾಡಿಸದು. ಯೌವ್ವನದಲ್ಲಿ ವೈಧವ್ಯ ಪ್ರಾಪ್ತವಾದರೆ ಸಹ್ಯವಾಗದ ಜೀವನವನ್ನು ಸಾಗಿಸಬೇಕಾಗುತ್ತದೆ. ಹೊಟ್ಟೆ ಹಸಿವು ಹಾಗೂ ದೈಹಿಕ ಹಸಿವು ಅವಳನ್ನು ತೀವ್ರವಾಗಿ

ಕಾಡುತ್ತಿರುತ್ತದೆ. ಇದರಲ್ಲಿ ಮೊದಲನೆಯದನ್ನು ತುಂಬಬಹುದು. ಆದರೆ, ಎರಡನೆಯದನ್ನು ತುಂಬಲಾಗುವುದಿಲ್ಲ. ಇವೆರಡರ ಜೊತೆಗೆ ಸಾಮಾಜಿಕ ಅಪಮಾನವು ಅವಳನ್ನು ಆಳವಾಗಿ ಚುಚ್ಚುತ್ತಿರುತ್ತದೆ. ಶರಣರು ಪ್ರಮುಖವಾಗಿ ಮೂರು ಸಂಗತಿಗಳನ್ನು ಪ್ರಸ್ತಾಪಿಸುತ್ತಾರೆ. ೧. ಪ್ರಾಣ, ೨. ಅರ್ಥ, ೩. ಅಭಿಮಾನ. ಮೊದಲಿನ ಎರಡು ಸಂಗತಿಗಳನ್ನು ಕಳೆದುಕೊಂಡರೆ ಏನೂ ಕಳೆದುಕೊಂಡಂತಾಗುವುದಿಲ್ಲ. ಇಲ್ಲಿ ಅಭಿಮಾನದ ಪ್ರಶ್ನೆ ಬಹುಮುಖ್ಯವಾಗಿ ನಿಲ್ಲುತ್ತದೆ. ಅಭಿಮಾನ ಹೋದರೆ ಬದುಕೇ ಕ್ಷುಲ್ಲಕವಾಗುತ್ತದೆ. ಅದಕ್ಕಾಗಿಯೇ ಗರತಿ 'ಕರುಣ ಬಂದರೆ ಕಾಯೋ, ಮರಣ ಬಂದರೆ ಒಯ್ಯೊ! ಕರುಣಿ ಕಲ್ಯಾಣಿ ಬಸವಣ್ಣ! ಕಡೆತನಕ ಕಾಯೋ ಅಭಿಮಾನ" ಎಂದಿರುವಳು.

ವೈಧವ್ಯದ ಕ್ರೂರಮುಖಗಳು ಸಮಾಜದಲ್ಲಿ ಜೀವಂತವಾಗಿದ್ದರೂ ಅವುಗಳು ಈ ಫ್ಯಾಸಿಸ್ಟ್ ಶಕ್ತಿಗಳಿಗೆ ಅಪಮಾನಗೊಳಿಸುವುದಿಲ್ಲ, ಕೆರಳಿಸುವುದಿಲ್ಲ. ಬದಲಾಗಿ ಸಂಸ್ಕೃತಿಯ ವರ್ಚಸ್ಸನ್ನು ಹೆಚ್ಚಿಸುತ್ತವೆ.

ಗಂಡನ ಸಾವಿನ ನಂತರ ಆಕೆಯನ್ನು ವಿಕಾರಗೊಳಿಸಿ ವಿಕರ್ಷಣೆಗೆ ಈಡು ಮಾಡುವುದೇ ವಿಧವಾ ಸಂಪ್ರದಾಯದ ಮೂಲ ಉದ್ದೇಶ. ಕಲ್ಪನೆಗೂ ಕೈಗೆಟುಕದ ಈ ನೀಚ ಆಚರಣೆ ಈ ಫಾಸಿಸ್ಟ್ ಹೃದಯಗಳಿಗೆ ತಾಕಿಲ್ಲ.

ಒಮ್ಮೆ ವೈಧವ್ಯ ಬಂತು ಎಂದರೆ ಅವಳು ಸಾರ್ವಜನಿಕರ ಸರಕಾಗುತ್ತಾಳೆ. ಆಗ ಯಾವನೋ ಒಬ್ಬ ಇಲ್ಲವೇ ಆಯ್ದ ಕೆಲವರು ಅಥವಾ ಹಲವರು ಅವಳ ಮೇಲೆ ಅಧಿಕಾರ ಸ್ಥಾಪಿಸಲು ಪ್ರಯತ್ನಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಅವಳು ಒಬ್ಬನ ಸರಕಾರಗಬಹುದು ಅಥವಾ ಆಯ್ದ ಕೆಲವರ ಸರಕಾಗಬಹುದು. ಇಲ್ಲವೆ ಸರ್ವರ ಸರಕಾಗಬಹುದು. ಕ್ರೀಡಾಭಿ ರಾಮದಲ್ಲಿ ಮೂರು ಬಗೆಗಳ ವಿಧವೆಯರು ನಮಗೆ ದೊರೆಯುತ್ತಾರೆ ಕ್ರೀಡಾಭಿರಾಮದಲ್ಲಿ ವಿಧವೆಯರ ಜೀವನ ಮೇಲ್ನೋಟಕ್ಕೆ, ಅವಳ ಲೈಂಗಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಂತೆ ಕಾಣಬಹುದು. ಪುರುಷರ ಲೈಂಗಿಕ ದಬ್ಬಾಳಿಕೆಗೆ ಒಳಗಾದ ಕಹಿಸತ್ಯ ಅದರ ಅಂತರ್ಯದಲ್ಲಡಗಿದೆ. ಆದ್ದರಿಂದ ಇಂತಹ ಸಂಪ್ರದಾಯಾಚರಣೆಗಳನ್ನು ಕೈಬಿಟ್ಟು ಅವಳಿಗೆ ಮರುವಿವಾಹ ಅವಕಾಶವನ್ನು ಕಲ್ಪಿಸಿಕೊಡಬೇಕು. ಅಂತಹ ಮದುವೆಗಳನ್ನು ಗೌರವಿಸಬೇಕು. ಹೀಗಾದರೆ ವಿಧವೆಗೆ ಕೌಟುಂಬಿಕ ಹಾಗೂ ಸಾಮಾಜಿಕ ಗೌರವವನ್ನು ನೀಡಿದಂತಾಗುತ್ತದೆ. ನಾನು ಪುರುಷಶಾಹಿ ವ್ಯವಸ್ಥೆ ರೂಪಿಸಿದ ವೈವಾಹಿಕ ಚೌಕಟ್ಟನ್ನು ವೈಭವೀಕರಿಸುತ್ತಿದ್ದೇನೆ, ಅನಿವಾರ್ಯವಾಗಿಸುತ್ತಿದ್ದೇನೆ ಎಂದಲ್ಲ. ಪ್ರತಿಯೊಬ್ಬ ವ್ಯಕ್ತಿಗೂ 'ಒಂದು ವಯಸ್ಸಿನಲ್ಲಿ ಸಂಗಾತಿಯ ಅಗತ್ಯವಿರುತ್ತದೆ. ಅದನ್ನು ಸಮಾಜದಲ್ಲಿ ಸಮ್ಮತವಾಗಿಸಲು 'ವಿವಾಹ' ಒಂದು ನೆಪ ಮಾತ್ರ. ಈ ನಿಟ್ಟಿನಲ್ಲಿ ವೈವಾಹಿಕ ಪರಿಕಲ್ಪನೆಯನ್ನು ಸ್ವೀಕರಿಸಬೇಕು. ಗಂಡು ಹೆಣ್ಣುಗಳ ನಡುವೆ ಶ್ರೇಣೀಕರಣ ಇಲ್ಲದ ಮದುವೆಗಳು ಆರೋಗ್ಯಕರ ಸಮಾಜಕ್ಕೆ ಬುನಾದಿಯಾಗ ಬಲ್ಲವು.

ವಾಟರ್ ಚಿತ್ರಕಥೆಯನ್ನಾಗಲಿ, ಅದನ್ನು ನಿರ್ದೇಶಿಸುತ್ತಿರುವ ದೀಪಾ ಮೆಹ್ತಾ ಬಗೆಗಾಗಲಿ, ವಿರೋಧಿಸುತ್ತಿರುವ ಫ್ಯಾಸಿಸ್ಟ ಶಕ್ತಿಗಳ ಕುರಿತಾಗಲಿ, ಅದಕ್ಕೆ ಹಸಿರು ನಿಶಾನೆ ತೋರಿಸುವ ರಾಜಕೀಯ ಪಕ್ಷಗಳ ಬಗೆಗಾಲಿ ಚರ್ಚಿಸುವುದರಿಂದ ಯಾವುದೇ ರೀತಿಯ ಸಾಮಾಜಿಕ ಹಾಗೂ ಶೈಕ್ಷಣಿಕ ಲಾಭ ದೊರೆಯದು. ಇಲ್ಲಿ ಬಹುಮುಖ್ಯವಾಗಿ ಚರ್ಚೆಗೊಳ ಪಡಿಸಬೇಕಾಗಿರುವುದು ವಿಧವೆಯರ ಬದುಕು ಹಾಗೂ ಭಾವನೆಗಳನ್ನು. ನಮ್ಮ ಅಧ್ಯಯನ ಗಳು ಇಂತಹ ಸಾಮಾಜಿಕ ವಸ್ತುಸ್ಥಿತಿಯ ಜೊತೆಗೆ ಹೇಗೆ ಸಮೀಕರಣಗೊಳ್ಳಬೇಕೆಂಬ ಸವಾಲು ನಮ್ಮೆದುರಿಗಿದೆ. ಮಹಿಳೆಯರು ಅಧ್ಯಯನದ ವಸ್ತುವಾಗುವ ಬದಲು, ಅವರಲ್ಲಿಯೇ ಸ್ವಯಂ ಜಾಗೃತಿ ಮೂಡಬೇಕಿದೆ. ಅವರೇ ತಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಿಕೊಳ್ಳಬೇಕಿದೆ. ಒಂದು ವೇಳೆ ಮಹಿಳೆ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡರೂ ಅದು ಈ ಪುರುಷಶಾಹಿ ಸಮಾಜದಲ್ಲಿ ಅಷ್ಟು ಸುಲಭವಾಗಿ ಚಲಾವಣೆಗೊಳ್ಳುತ್ತದೆ ಎಂದು ಹೇಳಲಿಕ್ಕಾಗದು. ಅದರರ್ಥ ಆ ನಿಟ್ಟಿನಲ್ಲಿ ಪ್ರಯತ್ನಪಡುವುದು ವ್ಯರ್ಥ ಎಂದು ಹೇಳುತ್ತಿಲ್ಲ. ಅದರ ಫಲಿತಾಂಶ ಬಹಳ ತಡವಾಗಿ ದೊರೆಯುತ್ತದೆ. ಅಲ್ಲಿಯವರೆಗೂ ಸಹನೆಯಿಂದ ಆಶಾದಾಯಕ ಮನೋಭಾವದಿಂದ ಹೋರಾಟ ಮುಂದುವರಿಸಬೇಕಿದೆ.

ಉಲ್ಲೇಖಗಳು

ದುಆರ್ತೆ ಬಾರ್ಬೋಸಾ: ೧೯೬೬; **ಪ್ರವಾಸಿ ಕಂಡ ಇಂಡಿಯಾ : ಸಂಪುಟ ೨**, ನಾಗೇಗೌಡ ಎಚ್.ಎಲ್. (ಅನು), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ವಿನುಕೊಂಡ ವಲ್ಲಭರಾಯ: ೨೦೦೦; **ಕ್ರೀಡಾಭಿರಾಮ**, ಆರ್ಶ್ವಿಯಸ್ ಸುಂದರಂ (ಅನು), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

❖ ❖

೩

ವಿಭಿನ್ನ ಸ್ತ್ರೀವಾದಗಳು : ದಲಿತ ಸ್ತ್ರೀವಾದದ ಅಗತ್ಯತೆ ಮತ್ತು ಪ್ರಸ್ತುತತೆ

ಭಾರತವೂ ಸೇರಿದಂತೆ ಜಗತ್ತಿನ ಬೇರೆ-ಬೇರೆ ದೇಶಗಳಲ್ಲಿ ಸ್ತ್ರೀವಾದಗಳ ಕುರಿತು ಅನೇಕ ಬಗೆಯ ಚರ್ಚೆಗಳು ನಡೆಯುತ್ತಿವೆ. ಸ್ತ್ರೀವಾದಗಳ ಕುರಿತು ಎಷ್ಟು ಬಗೆಯ ಚರ್ಚೆಗಳಿವೆಯೋ ಅಷ್ಟು ಬಗೆಯ ಸ್ತ್ರೀವಾದ ಅಧ್ಯಯನ ಮಾದರಿಗಳಿವೆ. ಜಗತ್ತಿನ ಮಹಿಳಾ ಚಿಂತನೆಯ ಒಟ್ಟಾರೆ ಇತಿಹಾಸವನ್ನು ಗಮನಿಸಿದರೆ, ಅದರಲ್ಲಿ ಮಹಿಳೆಯರ ಬಹುರೂಪಿ ಕಥನಗಳಿವೆ.

ಸ್ತ್ರೀವಾದವನ್ನು ಪಶ್ಚಿಮದಿಂದ ಆಮದಾದ ವಿಚಾರವೆಂದು ಮೂಗು ಮುರಿಯುತ್ತಾರೆ. ನಾವು ಪಡೆಯುತ್ತಿರುವ ಶಿಕ್ಷಣ, ಮಾತನಾಡುತ್ತಿರುವ ಬಹುತೇಕ ಚಿಂತನೆಗಳು ಪಶ್ಚಿಮದಿಂದ ಆಮದಾಗಿದ್ದರೂ ಪುರುಷಶಾಹಿ ಧೋರಣೆಯುಳ್ಳ ಸುಶಿಕ್ಷಿತ ಗಂಡಸರಿಗೆ ಇವ್ಯಾವವೂ ಹೊರಗಿನಿಂದ ಬಂದ ವಿಚಾರಧಾರೆಗಳು ಎಂದನಿಸಿಲ್ಲ. ಸ್ತ್ರೀವಾದದ ಭೂಮಿಕೆಯಲ್ಲಿ ಹೊರಬರುತ್ತಿರುವ ಮಹಿಳಾ ಅಭಿವ್ಯಕ್ತಿಯನ್ನು ಮಟ್ಟ ಹಾಕಲು ಪಶ್ಚಿಮದ ವಿಚಾರಗಳೆಂದು ತಕರಾರು ಎತ್ತುತ್ತಾರೆ. ಆದರೆ ಈ ಎಲ್ಲ ಅಡೆತಡೆಗಳನ್ನು ಮೀರಿ ಇಂದು ಸ್ತ್ರೀವಾದಗಳು ವ್ಯಾಪಕವಾಗಿ ಬೆಳೆಯುತ್ತಿವೆ.

ವಸಾಹತುಶಾಹಿ ವಿರುದ್ಧದ ಹೋರಾಟದ ಸಂದರ್ಭದಲ್ಲಿ ವಸಾಹತುಶಾಹಿ ಶಿಕ್ಷಣದ ಪ್ರಭಾವಕ್ಕೊಳಗಾದ ಮೇಲ್ಜಾತಿಯ ಮಧ್ಯಮವರ್ಗದ ಪುರುಷರೇ ರಾಷ್ಟ್ರೀಯತೆಯ ಹೆಸರಿನಲ್ಲಿ ಭಾರತೀಯತೆಯನ್ನು ಕಟ್ಟಿಕೊಟ್ಟರು. ಮೇಲ್ಜಾತಿಯ ಮಧ್ಯಮವರ್ಗದ ಮಹಿಳೆಯರನ್ನು ಭಾರತೀಯ ಸಂಸ್ಕೃತಿಯ ರಕ್ಷಕಳನ್ನಾಗಿಯೇ ಚಿತ್ರಿಸಿದರು. ಆರಂಭದಲ್ಲಿ ಶಿಕ್ಷಣಕ್ಕೆ ಮೈತೆರೆದುಕೊಂಡವರೆಂದರೆ ಮೇಲ್ಜಾತಿಯ ಮಧ್ಯಮ ವರ್ಗದ ಮಹಿಳೆಯರು. ಇವರ ಎದುರಿಗೆ ಈಗಾಗಲೇ ತಮ್ಮ ಜಾತಿಯ ಪರುಷರು ಕಟ್ಟಿಕೊಟ್ಟ 'ಭಾರತೀಯ ಮಹಿಳೆ' ಎನ್ನುವ ಏಕರೂಪದ ಮಾದರಿಯಿತ್ತು. ಅದನ್ನವರು ತಿರಸ್ಕರಿಸಲಿಲ್ಲ. ವೈದಿಕಶಾಹಿ ಸಂಸ್ಕೃತಿಯ ಭೂಮಿಕೆಯಲ್ಲಿ ಬೆಳೆದುಬಂದ ಈ ಮಹಿಳೆಯರು ತಮ್ಮ ಸಂಸ್ಕೃತಿಯ ಪ್ರಭಾವದಿಂದ ಹೊರಬಂದವರಲ್ಲ. ವೈದಿಕರು ಸಂಸ್ಕೃತಿಗಿರುವ ಬಹುತ್ವ ಆಯಾಮಗಳನ್ನು ಬದಿಗೆ ಸರಿಸಿ ತಮ್ಮ ಸಂಸ್ಕೃತಿಯನ್ನೇ ಇಡೀ ದೇಶದ ಸಂಸ್ಕೃತಿಯೆನ್ನುವಂತೆ ಚಿತ್ರಿಸುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀವಾದಿಗಳೂ ಅಷ್ಟೇ. ತಮ್ಮ ಸಮಸ್ಯೆಯನ್ನು ದೇಶದ ಇಡೀ ಮಹಿಳಾ ಸಮಸ್ಯೆ ಎನ್ನುವಂತೆ ಚಿತ್ರಿಸುತ್ತಾರೆ. ಸಮಾಜದ ಅಂಚಿನಲ್ಲಿ ಅತಂತ್ರವಾಗಿ ಬದುಕುತ್ತಿರುವ ದಲಿತ ಮಹಿಳೆಯರ ಬಗ್ಗೆ ಮಾತನಾಡುವುದನ್ನು ಅವರಿಗರಿವಿಲ್ಲದಂತೆಯೇ ಮರೆತುಬಿಟ್ಟಿರುತ್ತಾರೆ.

"ಗಂಡಸರ ಯಜಮಾನ್ಯ ಮತ್ತು ಹೆಂಗಸರ ಅಧೀನತೆ ಅನ್ನುವುದು ಭಾರತದಲ್ಲಿ ಎಲ್ಲ ಆಸ್ತಿ ಸಂಬಂಧಗಳನ್ನು ನಿಯಂತ್ರಿಸುತ್ತದೆ. ಸರಕಾರ ಮತ್ತು ಕಾನೂನುಗಳು ಇದನ್ನು ಅನುಮೋದಿಸುತ್ತದೆ. ಉದಾಹರಣೆಗೆ ವಿವಾಹಿತ ಸ್ತ್ರೀಯೊಬ್ಬಳು ಗಂಡನ ಅನುಮತಿ ಇಲ್ಲದೆ ಪಾಸ್ ಪೋರ್ಟ್‌ಗೆ ಅರ್ಜಿಹಾಕುವುದು ಹೆಚ್ಚು ಕಡಿಮೆ ದುಸಾಧ್ಯ. ಇದೇ ತರಹ ಗಂಡ ಜೀವಂತವಾಗಿದ್ದು, ಹೆಂಡತಿ ಇರುವ ಊರಿನಲ್ಲೇ ಇದ್ದರೆ ಪಡಿತರ ಚೀಟಿಯನ್ನು ಗಂಡನ ಹೆಸರಿನಲ್ಲಿ ಮಾತ್ರ ಕೊಡುತ್ತಾರೆ. ಸಾಮಾಜಿಕ ಜೀವನದಲ್ಲಿ ಗಂಡನ ಹೆಸರಿನ ಹಂಗಿಲ್ಲದೆ ಹೆಂಗಸರು ತಾನು ಸ್ವತಂತ್ರವಾಗಿ ರೂಪಿಸಿಕೊಳ್ಳಬಲ್ಲ ಸಂಬಂಧವಾಗಲಿ, ಕರಾರಾಗಲಿ ಇಲ್ಲವೇ ಇಲ್ಲ ಅನ್ನಬಹುದು" (ಮಧುಕೀಶ್ವರ್ : ೧೯೯೭; ಪು. ೨೮-೨೯) ಎಂದು ಹೇಳುವ ಭಾರತದ ಬಹುಪಾಲು ಸ್ತ್ರೀವಾದಿಗಳು ವರದಕ್ಷಣೆ, ಮದುವೆ, ಉದ್ಯೋಗ, ಆಸ್ತಿಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ, ವಿಚ್ಛೇದನ ಮೊದಲಾದ ಸಮಸ್ಯೆಗಳನ್ನು ಇಡೀ ಭಾರತದ ಮಹಿಳೆಯರ ಸಮಸ್ಯೆಗಳನ್ನಾಗಿ ಚಿತ್ರಿಸುತ್ತಾರೆ. ಅವರು ದಲಿತ ಮಹಿಳೆಯರ ಬಗ್ಗೆ ಮಾತನಾಡಿದ್ದು ಕಡಿಮೆ. ನಿತ್ಯ ದುಡಿದು ಅರೆಹೊಟ್ಟೆ ಉಣ್ಣುವ, ಅಂಗೈ ಅಗಲ ಜಾಗದಲ್ಲಿ ಮಲಗುವ ದಲಿತ ಮಹಿಳೆಗೆ ಆಸ್ತಿಹಕ್ಕಿನ ಪರಿಕಲ್ಪನೆ ಎಲ್ಲಿಂದ ಬರಬೇಕು? ಕಟ್ಟಿಕೊಂಡ ಗಂಡ, ಮಕ್ಕಳನ್ನು ಹುಟ್ಟಿಸಿ ಎಲ್ಲಿಯೋ ಹೋಗಿಬಿಟ್ಟಿರುತ್ತಾನೆ. ಮಕ್ಕಳಿಗಾಗಿ ನಿತ್ಯವೂ ತಿರುದುಣ್ಣುವ ಅವಳಿಗೆ ವಿಚ್ಛೇದನ ಎನ್ನುವ ಮಾತೇ ಅಪರಿಚಿತ. ಶಿಕ್ಷಣ, ರಾಜಕೀಯ ಮೀಸಲಾತಿ, ಆರ್ಥಿಕ ಸಬಲೀಕರಣ ಈ ಯಾವ ಪರಿಕಲ್ಪನೆಗಳು ಅವಳ ಪರಿಚಯದ ಪರಿಧಿಗೆ ಬಂದಿಲ್ಲ. ಅಶ್ಲೀಲ ಜಾಹಿರಾತಿನ ವಿರುದ್ಧ ಪ್ರತಿಭಟಿಸುವ ಸ್ತ್ರೀವಾದಿಗಳು ಸಾರ್ವಜನಿಕರ ಎದುರಿನಲ್ಲೇ

ಮೇಲ್ಜಾತಿಯ ಪುರುಷರಿಂದ ನಿತ್ಯ ಬೆತ್ತಲಾಗುತ್ತಿರುವ ದಲಿತ ಮಹಿಳೆಯ ಅಳಲನ್ನು ಕೇಳಿಸಿಕೊಳ್ಳಬೇಕಿದೆ.

ಕೌಟುಂಬಿಕವಾಗಿ ಸುರಕ್ಷಿತವಾಗಿದ್ದು, ಸಾಮಾಜಿಕ ಸ್ಥಾನಮಾನವನ್ನು ಅನುಭವಿಸುತ್ತಿರುವ ಮಹಿಳೆಯರು ಕಟ್ಟುವ ಸ್ತ್ರೀವಾದವು ಒಂದು ಮಿತಿಯನ್ನು ಕಾಯ್ದುಕೊಂಡಿದೆ. ಬಹುಪಾಲು ಸ್ತ್ರೀವಾದಿಗಳು ಕೌಟುಂಬಿಕ ವ್ಯವಸ್ಥೆಯೊಳಗಿನ ಪುರುಷ ಪ್ರಧಾನ್ಯತೆಯ ವಿರುದ್ಧ ಕೆಂಡಕಾರುತ್ತಾರೆ. "ಊಟ ಬಡಿಸುವಾಗಿನ ತಾರತಮ್ಯಕ್ಕೂ ಪೂರಕವಾದ ಹಲವು ಜನಪದ ನಂಬಿಕೆಗಳಿವೆ. ಇರುವ ಆಹಾರದಲ್ಲಿ ಉತ್ಕೃಷ್ಟವಾದ ಭಾಗವನ್ನು ಮಗನಿಗೋಸ್ಕರ ತೆಗೆದಿಟ್ಟು ಉಳಿದ ಭಾಗವಷ್ಟೇ ಮಗಳಿಗೆ ನೀಡುತ್ತಾಳೆ. ಉಡಿಗೆ ತೊಡಿಗೆಗಳ ವಿಷಯದ ತಾರತಮ್ಯವೂ ಬಾಲ್ಯದಿಂದಲೇ ಪ್ರಾರಂಭ. ಗಂಡು ಹುಡುಗ ಬಿಗಿಯಾದ ಚಲನವಲನಗಳಿಗೆ ಅನುಕೂಲವಾದ ಚಲ್ಲಣ ಧರಿಸಿದರೆ, ಹುಡುಗಿಗೆ ತುಂಬುನಿರಿಗೆಯ ಲಂಗಗಳು ರಭಸವಾಗಿ ನಡೆದರೆ ಎಡವುವಂಥ ಜಿಗಿದು ನೆಗೆದು ಆಡಲಾಗದ ಉಡುಗೆಗಳನ್ನು ಒದಗಿಸಲಾಗುತ್ತದೆ. ಊಟದಲ್ಲಷ್ಟೇ ಅಲ್ಲ ಆಟದಲ್ಲೂ ಹೀಗೆ ....." (ಧರಣಿದೇವಿ ಮಾಲಗತ್ತಿ: ೧೯೯೮; ಪು. ೧೧೪) ಇವುಗಳಲ್ಲದೆ ಮಹಿಳೆಯಾಗಿದ್ದ ಕಾರಣಕ್ಕೆ ವೇದವನ್ನೋದುವ ಅವಕಾಶದಿಂದ ವಂಚಿತವಾದದ್ದು. ಮುಟ್ಟನ್ನು ಮೈಲಿಗೆಯನ್ನಾಗಿ ಪರಿಗಣಿಸಿದ್ದುದು, ಮನೆಗೆಲಸಕ್ಕೆ ಮೌಲ್ಯವಿಲ್ಲದ್ದುದು, ಮೊದಲಾದವುಗಳನ್ನು ಚರಿತ್ರೆಯಲ್ಲಿ ತಮ್ಮ ಮೇಲೆ ನಡೆದ ಹಾಗೂ ವರ್ತಮಾನದಲ್ಲೂ ಮುಂದುವರೆಯುತ್ತಿರುವ ಬಹುದೊಡ್ಡ ಅನ್ಯಾಯಗಳೆಂದು ನಿರ್ವಚಿಸುತ್ತಾರೆ. ಮತ್ತು ಅದಕ್ಕಾಗಿ ವಿಷಾದ ಪಡುತ್ತಾರೆ. ಹೀಗೆ ಮೇಲುಜಾತಿ ಮಹಿಳೆಯರು ತಮ್ಮ ಬವಣೆಗಳನ್ನೇ ಕೇಂದ್ರವಾಗಿರಿಸಿಕೊಂಡು ಸ್ತ್ರೀವಾದವನ್ನು ಕಟ್ಟುತ್ತಾರೆ. ವಿಷಾದದ ಸಂಗತಿಯೆಂದರೆ ಅಲ್ಲಿ ದಲಿತ ಹಾಗೂ ಬುಡಕಟ್ಟು ಸ್ತ್ರೀಯರು ಇರುವುದೇ ಇಲ್ಲ.

ಪ್ರಧಾನ ಧಾರೆಯಲ್ಲಿರುವ ಸ್ತ್ರೀವಾದಿಗಳು ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿಯಂತಹ ಸಾಮಾಜಿಕ ಸಂಗತಿಗಳ ಕುರಿತು ಮಾತನಾಡಿದರೂ ಅವರಿಗರಿವಿಲ್ಲದಂತೆಯೇ ದಲಿತ ಮಹಿಳೆಯರನ್ನು ಕೈಬಿಟ್ಟಿರುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀಯರನ್ನು ಕೇಂದ್ರವಾಗಿರಿಸಿಕೊಂಡು ಬೆಳೆಸಿದ ಚಿಂತನೆಗೆ ಸಾರ್ವತ್ರಿಕ ಸ್ವರೂಪವನ್ನು ಲೇಪಿಸುತ್ತಾರೆ. ಸಾಮಾಜಿಕವಾಗಿ ಅತ್ಯಂತ ಕೆಳಸ್ತರದಲ್ಲಿದ್ದು, ದಾರಿದ್ರ್ಯತೆಯಿಂದ ಬಳಲುತ್ತಿರುವ, ಅಕ್ಷರ ಲೋಕವನ್ನೇ ಅರಿಯದ ದಲಿತ ಮಹಿಳೆಯರ ಕಷ್ಟನಷ್ಟಗಳನ್ನು, ಮಾನಾಪಮಾನಗಳನ್ನು ಕನಿಷ್ಠಪಕ್ಷ ಕೇಳಿಸಿಕೊಳ್ಳುವ ಸೌಜನ್ಯವನ್ನು ತೋರುವುದಿಲ್ಲ. ಹೀಗಾಗಿ ಮೇಲ್ಜಾತಿಯ ಸ್ತ್ರೀವಾದಿಗಳಿಗೆ ದಲಿತ ಮಹಿಳೆಯ ಶೋಷಣೆಯ ಒಳಹರಿವುಗಳು ಕೈಗೆಟುಕದೇ ಹೋಗಿಬಿಡುತ್ತವೆ.

ರ‍್ಯಾಡಿಕಲ್ ಎಂದೆನಿಸಿಕೊಂಡ ಕೆಲವು ಸ್ತ್ರೀವಾದಿಗಳು ಶೂದ್ರ ಮಹಿಳೆಯ ಕುರಿತು ಅಲ್ಲಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ. ಉಮಾ ಚಕ್ರವರ್ತಿಯವರು 'ವ್ಹಾಟ್ ಎವರ್ ಹ್ಯಾಪನ್ಡ್ ಟು ದ ವೈದಿಕ್ ದಾಸಿ' ಎನ್ನುವ ಲೇಖನದಲ್ಲಿ ಕೊನೆಯಲ್ಲಿ ಹೇಳಿದ ಮಾತುಗಳನ್ನು

ಗಮನಿಸಬೇಕು. "ಸಮಾಜದ ಮೇಲ್ವರ್ಗಗಳ ಬಗೆಗೆ ಮಾತ್ರ ಗಮನವಿಟ್ಟು, ಇನ್ನೆರಲ್ಲರನ್ನೂ ನಿರ್ಲಕ್ಷಿಸುವ ಈ ಗುಣ ದಯಾನಂದ ಅವರ ಅಭಿಪ್ರಾಯಗಳಲ್ಲೂ ಕಾಣುತ್ತದೆ. 'ಆರ್ಯ ತಾಯಿಯರು ತಮ್ಮ ಮಕ್ಕಳ ಪೋಷಣೆಯನ್ನು ಮಾಡಬಾರದು. ಬದಲಾಗಿ ಅವರನ್ನು ದಾದಿಯರ ಕೈಗೊಪ್ಪಿಸಿ, ತಾವು ತಮ್ಮ ಆರೋಗ್ಯವನ್ನು ಸರಿಪಡಿಕೊಳ್ಳಬೇಕು. ಏಕೆಂದರೆ ಮತ್ತೆ ಅವರು ಬಲಿಷ್ಠ ಪುತ್ರರನ್ನು ಹೇರುವುದಕ್ಕೆ ತಯಾರಾಗಬೇಕಾಗುತ್ತದೆ.' ಹಾಗಾದರೆ ದಾದಿಯರ ಗತಿಯೇನು? ಅವಳು ಯಾರು? ಸಂತಾನೋತ್ಪತ್ತಿಯ ವ್ಯವಸ್ಥೆಯಲ್ಲಿ ಅವಳ ಪಾತ್ರವೇನು? ಅವಳು ಬಲಿಷ್ಠ ಪುತ್ರರರನ್ನು ಹೆರಬೇಕಾಗಿಲ್ಲವೆ? ಇಲ್ಲಿ ದಯಾನಂದ ಅವರು ಒಂದು ವರ್ಗದ ಖರ್ಚಿನಲ್ಲಿ ಇನ್ನೊಂದು ವರ್ಗಕ್ಕೆ ಲಾಭ ಮಾಡಿಕೊಡುತ್ತಿರುವುದು ಸ್ಪಷ್ಟವಾಗಿದೆ. ೧೯ನೇ ಶತಮಾನದ ರಾಷ್ಟ್ರೀಯವಾದಿಗಳ ಮಟ್ಟಿಗೆ ಬಹಳಷ್ಟು ವರ್ಗಗಳ ಹೆಂಗಸರು ಅಸ್ತಿತ್ವದಲ್ಲೇ ಇರಲಿಲ್ಲ. ವೈದಿಕ ಸುವರ್ಣ ಯುಗದಲ್ಲಿ ವೈದಿಕ ದಾಸಿ ಮತ್ತು ಅವಳಂತವರಿಗೆ ಯಾವ ಹಕ್ಕುಗಳಿದ್ದವು ಎಂಬುದರ ಬಗೆಗೆ ತಿಳಿದುಕೊಳ್ಳಲು ಯಾರೂ ಪ್ರಯತ್ನಿಸಲಿಲ್ಲ." (ಉಮಾ ಚಕ್ರವರ್ತಿ, ಉದ್ಧೃತ : ಮನುಚಕ್ರವರ್ತಿ: ೧೯೯೯; ಪು. ೯೧-೯೨) ಶೂದ್ರ ಮಹಿಳೆಯ ಕುರಿತು ಉಮಾ ಚಕ್ರವರ್ತಿ ಅವರಿಗೆ ಇರುವ ಕಾಳಜಿ ಕಕ್ಕುಲಾತಿಯನ್ನು ಗೌರವಿಸಬೇಕಿದೆ. ನಮ್ಮ ಚಿಂತನೆಗೆ ಈ ಬಗೆಯ ವಿಚಾರಧಾರೆಯನ್ನು ಮಾದರಿಯಾಗಿಟ್ಟುಕೊಳ್ಳಬೇಕಿದೆ. ಶೂದ್ರ ಮಹಿಳೆಯರ ಜೊತೆಜೊತೆಗೆ ಅತ್ಯಂತ ತಿರಸ್ಕಾರಕ್ಕೆ ಒಳಗಾದಂತಹ ಪಂಚಮ ಸ್ತ್ರೀಯರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ನಮ್ಮ ಇವತ್ತಿನ ಸ್ತ್ರೀವಾದಿ ಅಧ್ಯಯನವು ದಲಿತರಲ್ಲಿ ದಲಿತರಾದ ಪಂಚಮ ಮಹಿಳೆಯರತ್ತ ಸಾಗಬೇಕಿದೆ. ಅವರ ಮೇಲೆ ನಡೆಯುತ್ತಿರುವ ಶೋಷಣೆಗಳತ್ತ ಗಮನಹರಿಸುವ ಅಗತ್ಯವಿದೆ.

ನಮ್ಮ ಭಾರತದಲ್ಲಿ ಪಿತೃಪ್ರಧಾನ ವ್ಯವಸ್ಥೆಯೆನ್ನುವುದು ಏಕರೂಪಿಯಾಗಿಲ್ಲ. ಆಯಾ ಜಾತಿ, ಧರ್ಮಕ್ಕನುಗುಣವಾಗಿ ಪಿತೃಪ್ರಧಾನ ವ್ಯವಸ್ಥೆಗಳು ಬೇರೆ ಬೇರೆ ಸ್ವರೂಪ ಹಾಗೂ ಸಂರಚನೆಯನ್ನು ಹೊಂದಿವೆ. ಜಾತಿಗೊಂಡ ಪಿತೃಪ್ರಧಾನ ವ್ಯವಸ್ಥೆಗಳ ಹುನ್ನಾರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಆಯಾ ಜಾತಿಗಳ ನೆಲೆಗಳಲ್ಲಿಯೇ ಸ್ತ್ರೀವಾದಗಳು ಹುಟ್ಟಿಕೊಳ್ಳಬೇಕಿದೆ. ವೈದಿಕ ಸ್ತ್ರೀವಾದದಂತೆ, ದಲಿತ ಹೆಣ್ಣುಮಕ್ಕಳು ದಲಿತ ಸ್ತ್ರೀವಾದವನ್ನು ಶೂದ್ರ ಮಹಿಳೆಯರು, ಶೂದ್ರ ಸ್ತ್ರೀವಾದವನ್ನು ಕಟ್ಟಿಕೊಳ್ಳುವ ಅಗತ್ಯವಿದೆ. ಹಾಗೆ ಮುಸ್ಲಿಂ ಸ್ತ್ರೀವಾದ, ಕ್ರಿಶ್ಚಿಯನ್ ಸ್ತ್ರೀವಾದ, ಜೈನ ಸ್ತ್ರೀವಾದ ಮೊದಲಾದ ಸ್ತ್ರೀವಾದಗಳು ರೂಪ ಪಡೆಯಬೇಕಿದೆ.

ಎರಡು ಮೂರು ತಲೆಮಾರುಗಳವರೆಗೆ ಮೀಸಲಾತಿ ಪಡೆದ ದಲಿತ ಮಹಿಳೆಯ ಸಮಸ್ಯೆಗಳ ಸ್ವರೂಪ ಬೇರೆಯಾಗಿದ್ದರೆ, ಮೀಸಲಾತಿ ಪಡೆಯದೇ ಇರುವ ದಲಿತ ಮಹಿಳೆಯ ಸ್ವರೂಪವೇ ಬೇರೆ. ಮೀಸಲಾತಿ ಸವಲತ್ತನ್ನು ಹೊಂದದೆ ಇರುವ ದಲಿತ ಮಹಿಳೆಯರು ಜಾತಿಗೊಂಡ ಊಳಿಗಮಾನ್ಯಶಾಹಿ ಪಿತೃಪ್ರಧಾನ ವ್ಯವಸ್ಥೆಯನ್ನು ಎದುರಿಸುತ್ತಿರುತ್ತಾಳೆ.

ಅದಕ್ಕಾಗಿ ದಲಿತ ಮಹಿಳೆ ಎಂದ ತಕ್ಷಣ ಏಕರೂಪ ಮಾದರಿಯನ್ನಾಗಿ ಗ್ರಹಿಸುವುದು ಅಪಾಯಕಾರಿಯಾಗುತ್ತದೆ. ಹೀಗಾಗಿ ದಲಿತ ಎನ್ನುವ ಪದವನ್ನು ಅತ್ಯಂತಿಕವಾಗಿ ಬಳಸದೇ ವಿಶ್ಲೇಷಣಾತ್ಮಕ ಪರಿಕಲ್ಪನೆಯನ್ನಾಗಿ ಬಳಸುವುದು ಸೂಕ್ತವೆನಿಸುತ್ತದೆ. ಪ್ರಮುಖವಾಗಿ ಮೀಸಲಾತಿ ಪಡೆಯದೇ ಇರುವ ಮಹಿಳೆಯರನ್ನು ಕೇಂದ್ರವಾಗಿರಿಸಿಕೊಂಡೇ ಈ ಲೇಖನ ರೂಪುಗೊಂಡಿದೆ.

"ಆಳದಲ್ಲಿ ಎಲ್ಲ ಜಾತಿಗಳ ಮಹಿಳೆಯರ ಸಮಸ್ಯೆಗಳು ಒಂದೇ ಎಂದು ತಾತ್ವಿಕವಾಗಿ ನಾವು ಒಪ್ಪಿಕೊಂಡರೂ ಇದು ಮಾತಿನಲ್ಲಿ ಕಂಡಂತೆ ಬದುಕಿನಲ್ಲಿ ಕಾಣಲಾರದು. ಜಾತಿನಾಶವಾಗಬೇಕು ಎಂದು ದಲಿತ ಮಹಿಳೆ ಅಂದಾಗ ಅದರಾಳಕ್ಕಿರಬಹುದಾದ ತಲ್ಲಣ, ಆಕ್ರೋಶ, ಅವಮಾನ, ನೋವು ಹಾಗೂ ಆದ್ರತೆ ಅದೇ ಬ್ರಾಹ್ಮಣ ಹೆಣ್ಣುಮಗಳು ಅದೇ ಮಾತನ್ನು ಜಾತಿಯ ಬಗ್ಗೆ ಹೇಳುವಾಗ ಅಂತಾದ್ದೇ ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆಂದು ಹೇಳಲಾಗದು. ವಿಚಿತ್ರ ಎಂದರೆ ಭಾರತೀಯ ಜಾತಿ ಪರಂಪರೆ ಮಹಿಳಾ ಸಮಾಜಕ್ಕೂ ಬಡಿದು ಅದು ಅವರವರನ್ನು ಮಾತ್ರ ಪ್ರಧಾನವಾಗಿ ಕಂಡುಕೊಂಡು ಅವರಲ್ಲದ ಹೊರಗಿನವರನ್ನು ದೂರವಾಗಿಯೇ ಕಾಣುವಂತೆ ಮಾಡಿದೆ. ಭಾರತದ ಉದ್ದಕ್ಕೂ ಇರುವ ಇಂತಹ ಅಸಮಾನ ಜಾತಿ ಮನಸ್ಸು ಮಹಿಳಾ ವಾದವನ್ನು ಬಿಚ್ಚಿಕೊಳ್ಳದಂತೆ ಮಾಡಿದೆ." (ಮೊಗಳ್ಳಿ ಗಣೇಶ್: ೧೯೯೮; ಪು. ೩-೪) ಸಂಕುಚಿತವಾಗಿ ಬೆಳೆಯುತ್ತಿರುವ ಸ್ತ್ರೀವಾದವು ಮೈಚಳಿಬಿಟ್ಟು ನಿಜವಾದ ಅರ್ಥದಲ್ಲಿ ವಿಸ್ತಾರತೆಯನ್ನು ಪಡೆದುಕೊಳ್ಳಬೇಕಾದರೆ ದಲಿತ ಮಹಿಳೆಯ ಮೇಲೆ ನಡೆಯುವ ಶೋಷಕ ಸಂರಚನೆಯನ್ನು ಗುರುತಿಸಬೇಕಿದೆ. ಮೇಲ್ಜಾತಿಯ ಹಾಗೂ ಮಧ್ಯಮ ಜಾತಿಗೆ ಸೇರಿದ ನಮ್ಮಂಥ ಮಹಿಳೆಯರು ಬೀದಿ-ಬೀದಿಗಳಲ್ಲಿ ಬೆತ್ತಲೆ ಮಾರಾಟವಾದ ಮಹಿಳಾ ಗುಲಾಮರ ಬದುಕಿನ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಒತ್ತಡವನ್ನು ನಿರ್ಮಿಸಿಕೊಳ್ಳಬೇಕಿದೆ. ವಿದೇಶಿ ಪ್ರವಾಸಿಗರು ಮಹಿಳಾ ಗುಲಾಮರ ದಾರುಣಸ್ಥಿತಿಯನ್ನು ವಿವರಿಸಿದ್ದಾರೆ. ಸ್ಟ್ರಾಬೋ "ಬಡತನದಲ್ಲಿ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಲು ಸಾಧ್ಯವಿಲ್ಲದವರು ಅವರನ್ನು ಪೇಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಶಂಖ ಊದಿ ಡಂಗುರ ಹೊಡೆದರೆ ಜನ ನೆರೆಯುತ್ತಿದ್ದರು. ಕೊಂಡುಕೊಳ್ಳುವವರು ಬೆತ್ತಲೆ ಬೆನ್ನು ಭುಜಗಳನ್ನು ಪರೀಕ್ಷಿಸಿ ತನಗೆ ಒಪ್ಪಿಗೆಯಾದ ಆಕೆಯನ್ನು ಕೊಂಡುಕೊಂಡು ತನ್ನ ಸಂಗಾತಿಯನ್ನಾಗಿ ಮಾಡಿಕೊಳ್ಳುತ್ತಿದ್ದರು. ಸತ್ತವರನ್ನು ರಣಹದ್ದುಗಳಿಗೆ ಬಿಸಾಡುತ್ತಿದ್ದರು" (ಸ್ಟ್ರಾಬೋ : ೧೯೬೪; ಪು. ೬೪) ಎಂದು ಹೇಳಿದರೆ, ವಾಸ್ಕೊದ ಗಾಮಾ ಮತ್ತಿತರರು "ಗುಲಾಮರನ್ನು ಪ್ರಾಣಿಗಳಂತೆ ಕೊಲ್ಲುವುದು ಮಾರುವುದು ನಡೆಯುತ್ತಿತ್ತು. ಗೋವೆಯ ಚೌಕದಲ್ಲಿ ಹೆಂಗಸರನ್ನು ಗಂಡಸರನ್ನು ಬೆತ್ತಲೆ ನಿಲ್ಲಿಸಿ ಹರಾಜು ಮಾಡುತ್ತಿದ್ದರು. ಕನ್ಯೆಯೆಂದು ಹೇಳಿಕೊಂಡು ಬಂದವಳನ್ನು ಕನ್ನೆಯೇ ಅಲ್ಲವೆ ಎಂಬುದನ್ನು ಹೆಂಗಸರ ಮೂಲಕ ಪರೀಕ್ಷೆ ಮಾಡಿಸಿದ ಮೇಲೆ ಕೊಂಡುಕೊಂಡು ಇಟ್ಟುಕೊಳ್ಳುತ್ತಿದ್ದರು" (ವಾಸ್ಕೋದ ಗಾಮಾ : ೧೯೬೬; ಪು. ೨೪೧) ಎಂದಿದ್ದಾರೆ. ಜಾತಿಕಾರಣದಿಂದಾಗಿಯೇ ಕೌಟುಂಬಿಕ

ಚೌಕಟ್ಟಿನೊಳಗೆ ಈ ಸಮಾಜದಲ್ಲಿ ಸುರಕ್ಷಿತವಾಗಿರುವ ಮೇಲ್ಜಾತಿಯ ಸ್ತ್ರೀಯರಿಗೆ ದಲಿತ ಮಹಿಳೆಯರಿಗಿದ್ದಂತೆ ಈ ಬಗೆಯ ದುರಂತ ಚರಿತ್ರೆಯಿಲ್ಲ. ಪ್ರಧಾನ ಧಾರೆಯಲ್ಲಿರುವ ಸ್ತ್ರೀವಾದಿಗಳು ತಮ್ಮ ಮೇಲೆ ನಡೆಯುತ್ತಿರುವ ಶೋಷಣೆಗಳನ್ನು ಹಾಗೂ ಶೋಷಕ ವ್ಯವಸ್ಥೆಯ ಸಂರಚನೆಗಳನ್ನು ಗುರುತಿಸಿ ಪ್ರತಿಭಟಿಸುವಷ್ಟು ಪ್ರಜ್ಞಾವಂತರಾಗಿದ್ದಾರೆ. ದಲಿತಳಾಗಿ ಹುಟ್ಟಿದ್ದು ಪಾಪವಾಗಿ, ಬಾಳಿನುದ್ದಕ್ಕೂ ನರಕಯಾತನೆಯನ್ನು ಅನುಭವಿಸುತ್ತಿದ್ದರೂ, ತನ್ನ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಯುತ್ತಿದೆ ಎನ್ನುವುದರ ಪರಿವೆ ಇಲ್ಲದೆ ಅಮಾಯಕಳಾಗಿ ಬದುಕುತ್ತಿದ್ದಾಳೆ. ಜೀವಂತ ಶವವಾಗಿರುವ ದಲಿತ ಮಹಿಳೆಯರ ಅಸಹಾಯಕತೆಯನ್ನು, ನೋವಿನ ಒಳದನಿಗಳನ್ನು ಎಲ್ಲ ಮಹಿಳೆಯರು ಮೊದಲು ಕೇಳಿಸಿಕೊಳ್ಳಬೇಕಿದೆ. ಶೂದ್ರಳಾಗಿ ನಾನು ಅನೇಕ ಬಗೆಯ ಶೋಷಣೆಗಳಿಗೆ ಒಳಗಾಗಿದ್ದೇನೆ, ಒಳಗಾಗುತ್ತಿದ್ದೇನೆ. ನನಗಿಂತಲೂ ಭೀಕರ ಗಾಡಾಂಧಕಾರದಲ್ಲಿ ಕೊಳೆಯುತ್ತಿರುವ ದಲಿತ ಮಹಿಳೆಯ ಅಪಮಾನಗಳನ್ನು ಆಪ್ತವಾಗಿ ಆಲಿಸುವುದು ಮುಖ್ಯವೆನಿಸುತ್ತದೆ. ಎಲ್ಲ ಮಹಿಳೆಯರೂ ದಲಿತರೇ ನಿಜ. ಆದರೆ ಯಾರ ನೋವು ಮೊದಲು, ಯಾರ ಅಪಮಾನ ಮೊದಲು, ಈ ದೇಶದಲ್ಲಿ ಮೊದಲು ಯಾರು ಅಕ್ಷರಲೋಕಕ್ಕೆ ಒಳಗಾದರು ಈ ಪ್ರಶ್ನೆಗಳು ಇವತ್ತು ಪ್ರಸ್ತುತ. ಮಹಿಳೆಯರಾದ ನಾವೆಲ್ಲರೂ ಅಪಮಾನಗಳಿಗೆ, ಹಿಂಸೆಗಳಿಗೆ, ಶೋಷಣೆಗಳಿಗೆ ಒಳಗಾದವರಾದರೂ ನಮ್ಮೊಳಗೆ ಅತ್ಯಂತ ಹಿಂಸೆಗೆ ಒಳಗಾದ ದಲಿತ ಮಹಿಳೆಯರ ಅಪಮಾನಗಳನ್ನು, ನಮ್ಮ ಕಣ್ಣುಗಳಿಂದಲೇ ನಿಚ್ಚಳವಾಗಿ ನೋಡಬೇಕಿದೆ, ನಮ್ಮ ಕಿವಿಗಳಿಂದಲೇ ಪ್ರಾಮಾಣಿಕವಾಗಿ ಆಲಿಸಬೇಕಿದೆ, ನಮ್ಮ ಹೃದಯಾಂತರಾಳದಿಂದಲೇ ಮಾನವೀಯತೆಯ ದೀಪದ ಬೆಳಕಲ್ಲಿ ಅವರ ನೋವುಗಳನ್ನು ಗ್ರಹಿಸಬೇಕಿದೆ. ಅತ್ಯಂತ ಕ್ರೂರವಾದ ಭಾರತೀಯ ಜಾತಿ ವ್ಯವಸ್ಥೆಗಳಲ್ಲಿ ಕೊನೆಯ ಅಂಚಿನಲ್ಲಿರುವ ಮಹಿಳೆಯರು ಜಾತಿಯ ಶಾಪದ ಜೊತೆಗೆ ಲಿಂಗ, ವರ್ಗ ಹಾಗೂ ವರ್ಣದ ಕಾರಣಗಳಿಂದಾಗಿ ಪುರುಷ ವಿಕಾರಗಳನ್ನು ಅಸಹಾಯಕತೆಯಿಂದ ಎದುರಿಸುತ್ತಿದ್ದಾರೆ. ಇವತ್ತಿನ ನಮ್ಮಂತಹ ವಿದ್ಯಾವಂತ, ಆಧುನಿಕ ಮಹಿಳೆಯರಿಗೆ ಹೊಸ ಬಗೆಯ ಆಲೋಚನೆ ಮಾಡುವಂಥವರಿಗೆ ಯಾವುದು ತಿರಸ್ಕೃತವಾಗಿತ್ತೊ ಅದೇ ಪ್ರಧಾನ ಆಕರವಾಗಬೇಕು. ಭಾರತೀಯ ಸಂಸ್ಕೃತಿಗಳಲ್ಲಿ ನಿರ್ಲಕ್ಷಕ್ಕೆ ಒಳಗಾದವರನ್ನು, ದಬ್ಬಾಳಿಕೆಗೆ ಬಲಿಯಾದವರನ್ನು ಇಟ್ಟುಕೊಂಡೇ ನಮ್ಮ ಅಧ್ಯಯನ ಸಾಗಬೇಕಿದೆ. ಮೇಲ್ಜಾತಿಯವರು ಸೃಷ್ಟಿಸಿದ ಜಾತಿ ಶ್ರೇಣಿಕರಣವನ್ನಿಟ್ಟುಕೊಂಡೇ ಮಹಿಳಾ ಸ್ಥಿತಿಗಳನ್ನು ಅವಲೋಕನ ಮಾಡಬೇಕಿದೆ. ಯಾವ ಯಾವ ಜಾತಿಗಳು, ಯಾವ ಯಾವ ಶ್ರೇಣಿಯಲ್ಲಿದ್ದವು, ಯಾವುವು ಅಧಿಕೃತವಾಗಿದ್ದವು, ಯಾವುವು ಸುರಕ್ಷಿತವಾಗಿದ್ದವು, ಯಾವುವು ಬೀದಿಗಿದ್ದವು, ಇಲ್ಲೆಲ್ಲ ಯಾವ ಜಾತಿಯ, ಯಾವ ವರ್ಗದ ಮಹಿಳೆ ಹೆಚ್ಚು ತಬ್ಬಲಿಯಾಗಿದ್ದಳು ಎನ್ನುವುದನ್ನು ವಿಶ್ಲೇಷಿಸಬೇಕಿದೆ. ಇಂದಿನ ಆಧುನಿಕ ಸಂದರ್ಭದಲ್ಲಿ ಪಿತೃಪ್ರಧಾನ ವ್ಯವಸ್ಥೆ, ಊಳಿಗಮಾನ್ಯ ವ್ಯವಸ್ಥೆ ಹೊಸರೂಪಗಳಲ್ಲಿ ತಮ್ಮ ನೆಲೆಗಳನ್ನು ವಿಸ್ತರಿಸಿಕೊಳ್ಳುತ್ತಿವೆ. ಹಿಂದೆಂದಿಗಿಂತಲೂ

ಇಂದು, ಮಹಿಳಾ ಸಮುದಾಯಗಳ ಮೇಲೆ ಅದರಲ್ಲೂ ದಲಿತ ಮಹಿಳೆಯರ ಮೇಲೆ ಅಡ್ಡ ಪರಿಣಾಮಗಳನ್ನು ಬೀರುತ್ತಿವೆ ಎನ್ನುವುದು ಸ್ಪಷ್ಟ. ಅದಕ್ಕಾಗಿ ಸ್ತ್ರೀವಾದಿಗಳು ಅತ್ಯಂತ ಎಚ್ಚರ ಹಾಗೂ ಜವಾಬ್ದಾರಿಯಿಂದ ಮಾತನಾಡಬೇಕಿದೆ.

ಹಿಂದೊಮ್ಮೆ ನನ್ನೊಂದಿಗೆ ವಾಸವಾಗಿದ್ದ ಕಾಲೇಜು ಉಪನ್ಯಾಸಕಿ ಯಾವುದೋ ಒಂದು ಸಂದರ್ಭದಲ್ಲಿ ವಿಷಾದದಿಂದ ಹೇಳಿದ ಮಾತುಗಳು ನೆನಪಿಗೆ ಬರುತ್ತಿವೆ. "ನನ್ನ ಜಾತಿ ಕೇಳಿದ ತಕ್ಷಣ ನನ್ನೊಂದಿಗೆ ಮಾತನಾಡುವ ಗಂಡಸರ ವರ್ತನೆಗಳು ಕ್ಷಣಾರ್ಧದಲ್ಲಿ ಬದಲಾಗಿ ಬಿಡುತ್ತವೆ. ಸುಲಭವಾಗಿ ನಾನು ಅವರಿಗೆ ಕೈಗೆ ಸಿಕ್ಕಿಬಿಡುವ ಹೆಣ್ಣೆಂದು ನಿರ್ಧರಿಸಿ ಬಿಡುತ್ತಾರೆ. ಸುಶಿಕ್ಷಿತರೆನಿಸಿಕೊಂಡ ಗಂಡಸರು ಹೊರಗಡೆ ಹೇಳಿಕೊಳ್ಳಲಾಗದ, ಒಳಗಡೆ ಸಹಿಸಿಕೊಳ್ಳಲಾರದ ರೀತಿಯಲ್ಲಿ ನಮ್ಮೊಂದಿಗೆ ವರ್ತಿಸುತ್ತಾರೆ." ಉನ್ನತಶಿಕ್ಷಣ, ಹುನ್ನತ ಹುದ್ದೆಯಲ್ಲಿರುವ ದಲಿತ ಮಹಿಳೆಯ ಸ್ಥಿತಿ ಹೀಗಿರಬೇಕಾದರೆ, ಮೀಸಲಾತಿ ಪಡೆಯದೇ ಜಾತಿಗೊಂಡ ಊಳಿಗಮಾನ್ಯಶಾಹಿ ಪಿತೃಪ್ರಧಾನ ವ್ಯವಸ್ಥೆಯಲ್ಲಿರುವ ದಲಿತ ಮಹಿಳೆಯ ಪರಿಸ್ಥಿತಿ ಹೇಗಿರಬೇಡ? ದಲಿತ ಮಹಿಳೆ ತನ್ನ ಜಾತಿಯಲ್ಲಿಯೇ ಇರುವ ಪಿತೃಪ್ರಧಾನ ವ್ಯವಸ್ಥೆಯಿಂದ ಘಾಸಿಗೊಂಡಿದ್ದಾಳೆ. ಅದರ ಜೊತೆಗೆ ಜಾತಿಗೊಂಡ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕ್ರೂರವಾಗಿ ನಲುಗಿ ಹೋಗಿದ್ದಾಳೆ. ಕೌಟುಂಬಿಕವಾಗಿ, ಸಾಮಾಜಿಕವಾಗಿ ಭೀಕರ ಹತ್ಯೆಗೊಳಗಾದ ದಲಿತ ಮಹಿಳೆಯ ವೇದನೆಗೂ, ಹೆಣ್ಣಾದ ಕಾರಣಕ್ಕೆ ನನಗೆ ಬಡ್ತಿ ಸಿಗುತ್ತಿಲ್ಲ. ನನ್ನ ಪ್ರತಿಭೆಯನ್ನು ಗೌರವಿಸುತ್ತಿಲ್ಲ ಎನ್ನುವ ಮೇಲ್ಜಾತಿಯ ಮಹಿಳೆಯ ವೇದನೆಗೂ ಅಜಗಜಾಂತರ ವ್ಯತ್ಯಾಸವಿದೆ.

ಸಮಾಜದ ಜಾತಿ ಶ್ರೇಣೀಕರಣದಲ್ಲಿ ದಲಿತ ಮಹಿಳೆಯರು ಮೇಲ್ಜಾತಿಯ, ಮೇಲ್ವರ್ಗದ ಪುರುಷರಿಂದ ಶೋಷಣೆಗೆ ಒಳಗಾಗಿದ್ದಾರೆ, ಒಳಗಾಗುತ್ತಿದ್ದಾರೆ. ಪಾತರದವರು, ಜೋಗತಿಯರು, ಬಸವಿಯರು, ಬಾಲಬಸವಿಯರು ಈ ಮೊದಲಾದ ಶೂದ್ರ ಹಾಗೂ ದಲಿತ ಮಹಿಳೆಯರ ಸಾಂಸ್ಕೃತಿಕ ಕಥನಗಳು ಇದನ್ನೇ ವಾಚ್ಯಗೊಳಿಸುತ್ತವೆ. ಪಾತರ, ಜೋಗತಿ, ಬಸವಿ ಬಿಡುವ ಆಚರಣೆಯ ಹೆಸರಿನಲ್ಲಿ ಪ್ರತಿವರ್ಷ ಏನಿಲ್ಲೆಂದರೂ ೫೦೦ ರಿಂದ ೧೦೦೦ ದವರೆಗೆ ದಲಿತ ಹುಡುಗಿಯರು ಲೈಂಗಿಕ ಮಾರುಕಟ್ಟೆಗೆ ತಳ್ಳಲ್ಪಡುತ್ತಿದ್ದಾರೆ. ಇದರ ಮೇಲೆ, ಕೆಳಜಾತಿಯಲ್ಲಿ ಹುಟ್ಟಿದ್ದ ಕಾರಣಕ್ಕಾಗಿಯೇ ಅನೇಕ ಕನ್ಯೆಯರು, ಮಹಿಳೆಯರು, ಮೇಲ್ಜಾತಿಯ, ಮೇಲ್ವರ್ಗದ ಪುರುಷರಿಂದ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ, ಬೆತ್ತಲೆಯಾಗಿ ಮೆರವಣಿಗೆಯಾಗುತ್ತಿದ್ದಾರೆ. ಈ ಬಗೆಯ ಘಟನೆಗಳು ನಮ್ಮ ವೃತ್ತಪತ್ರಿಕೆಗಲ್ಲಿ ಪ್ರತಿನಿತ್ಯ ಬರುತ್ತಲೇ ಇರುತ್ತವೆ. ಜಾತಿ ಕಾರಣದಿಂದಲೇ ಸುರಕ್ಷಿತ ವಾಗಿರುವ ಮೇಲ್ವರ್ಗದ, ಮೇಲ್ಜಾತಿಯ ಮಹಿಳೆಯರಿಗೆ, ದಲಿತ ಮಹಿಳೆಯರು ಅನುಭವಿಸುವ ಈ ಬಗೆಯ ಅಪಮಾನ, ಕಿರುಕುಳ, ನೋವು, ಹಿಂಸೆಗಳು ಅರ್ಥವಾಗುವು ದಿಲ್ಲ. ಮೇಲ್ಜಾತಿಯ ಮಹಿಳೆಯರಿಗೆ ವೈಧವ್ಯ, ಗೃಹಬಂಧನವೇ ತೀವ್ರ ಸಮಸ್ಯೆಗಳಾಗಿ ಕಾಡುತ್ತವೆ. ಹಾಗೆಂದು ಮೇಲ್ಜಾತಿಯ ಮಹಿಳೆಯರ ಸಮಸ್ಯೆಗಳನ್ನು ಸರಳೀಕರಣ

ಗೊಳಿಸುತ್ತಿದ್ದೇನೆಂದಲ್ಲ. ಮೊದಲು, ನಮಗಿಂತಲೂ ನೊಂದವರ ನೋವನ್ನು ಕೇಳಬೇಕಿದೆ. ಅವರ ಸಮಸ್ಯೆಗಳನ್ನು ಆಲಿಸುವ ಅಗತ್ಯವಿದೆ. ಸಮಾಜದಲ್ಲಿ, ಸಮುದಾಯಗಳಲ್ಲಿ ಇದ್ದುಕೊಂಡೂ ತಬ್ಬಲಿತನವನ್ನು ಅನುಭವಿಸುತ್ತಿರುವ ದಲಿತ ಮಹಿಳೆಯರ ಅಧ್ಯಯನ ನಡೆಯಬೇಕಿದೆ.

ಭಾರತೀಯ ಸ್ತ್ರೀ ವಾದಕ್ಕೆ ಏಕರೂಪವಿಲ್ಲ. ಇದರೊಳಗೆ ಬೇರೆ ಬೇರೆ ಜಾತಿಗಳ ಬೇರೆಬೇರೆ ಮಾದರಿಗಳಿವೆ. ಸಮಗ್ರವಾಗಿ ಹೆಣ್ಣು ಭಾರತದ ಪುರುಷಾಶಾಹಿ ವ್ಯವಸ್ಥೆಯಲ್ಲಿ ಒಂದೇ ಬಗೆಯಾಗಿ ತುಳಿತಕ್ಕೆ ಒಳಪಟ್ಟಿದ್ದರೂ ಕೂಡ ವರ್ಣಾಶ್ರಮದ ಕಾರಣವಾಗಿ ಮಹಿಳೆಯ ಮೇಲಿನ ಶೋಷಣೆಯ ನೆಲೆಗಳು ಅತ್ಯಂತ ಸಂಕೀರ್ಣವಾಗಿ ವ್ಯಾಪಿಸಿವೆ. ಈ ಶೋಷಣೆಯ ಸಂಕೀರ್ಣತೆಯನ್ನು ತಲಸ್ಪರ್ಶಿಯಾಗಿ ಶೋಧಿಸಬೇಕಾದರೆ, ಜಾತಿಪ್ರಣೀತವಾದ ಒಂದೊಂದು ಗುಂಪುಗಳನ್ನು ಭಿನ್ನವಾಗಿ ಪರಿಶೀಲಿಸಬೇಕಾಗುತ್ತದೆ. ಪಶ್ಚಿಮದಲ್ಲಿ ಕಪ್ಪು ಮತ್ತು ಬಿಳಿ ಮಹಿಳೆಯರ ಶೋಷಣೆಯ ಅಂತರವನ್ನು ಗುರುತಿಸಿಕೊಂಡಂತೆಯೇ ಜಾತಿನಿಷ್ಠ ವಾದ ಭಾರತದಲ್ಲಿ ವೈದಿಕ ಮಹಿಳಾಕಥನ, ಹಾಗೇ ಶೂದ್ರ ಮಹಿಳಾ ಕಥನ, ಮುಸ್ಲಿಂ ಮಹಿಳಾ ಕಥನ, ಕ್ರಿಶ್ಚಿಯನ್ ಮಹಿಳಾ ಕಥನ ಹಾಗೂ ದಲಿತ ಮಹಿಳಾ ಕಥನ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾದ ಜರೂರಿದೆ. ಈ ಪ್ರತ್ಯೇಕತೆ ವೈದಿಕ ಮಹಿಳಾ ಕಥನಕ್ಕೆ ವಿರುದ್ಧವಾದುದಲ್ಲ. ದಲಿತ ಮಹಿಳೆಯರ ಸಮಸ್ಯೆಗಳನ್ನು ವೈದಿಕ ಮಹಿಳೆಯ ಸಮಸ್ಯೆಗಳ ಜೊತೆಗೂಡಿಸಿ ಸಾಮಾಜಿಕ ನ್ಯಾಯವನ್ನು ಹುಡುಕುವುದಕ್ಕೆ, ಪ್ರತಿಪಾದಿಸುವುದಕ್ಕೆ ಬರುವುದಿಲ್ಲ. ಹೇಗೆ ಒಬ್ಬ ಜೋಗತಿ, ಬಸವಿಯ ಸಾಮಾಜಿಕ, ಧಾರ್ಮಿಕ ಶೋಷಣೆಗಳು ಭಿನ್ನವೊ, ಹಾಗೆಯೇ ವೈದಿಕ ಮಹಿಳೆಯರ ಸಾಮಾಜಿಕ, ಧಾರ್ಮಿಕ ಶೋಷಣೆಗಳು ಕೂಡ ಸೂಕ್ಷ್ಮವಾಗಿ ಬೇರೆ ಬೇರೆಯಾಗಿರುತ್ತವೆ. ಅಂದರೆ ಶೋಷಣೆಯ ಕೇಂದ್ರ ಒಬ್ಬೊಬ್ಬರಿಗೂ ಒಂದೊಂದು ಬಗೆಯ ತಾರತಮ್ಯವನ್ನು, ಹಿಂಸೆಯನ್ನು ಸೃಷ್ಟಿಸಿರುತ್ತದೆ. "ಜಾತಿಗೊಂಡ ಪಿತೃಪ್ರಧಾನ ಅಧಿಕಾರ ಸಂಬಂಧಗಳ ಒಳಗಿನ ವಿಭಿನ್ನ ನೆಲೆಗಳನ್ನು ಆಧರಿಸಿ, ನಮ್ಮ ವಿಭಿನ್ನ ಶೋಷಿತ ಸ್ಥಾನಗಳು ರೂಪಿತಗೊಂಡಿರುತ್ತವೆ. ಈ ಒಂದು ಸಂರಚನೆಯಲ್ಲಿ ನಾವು ಕೇವಲ ಮಹಿಳೆಯರಾಗಿರುವುದಿಲ್ಲ. ಬದಲಿಗೆ ಚಾಡುಮಾಲಿ ಮಹಿಳೆಯಾಗಿ, ರೈತಾಪಿ ಮಹಿಳೆಯಾಗಿ, ವೃತ್ತಿ ಮಹಿಳೆಯಾಗಿ ಅಸ್ತಿತ್ವದಲ್ಲಿರುತ್ತೇವೆ. ಈ ಪ್ರತಿಯೊಂದು ವಿವರಣೆಯೂ ನಮ್ಮ ಸಾಮಾಜಿಕ ಸ್ಥಿತಿಗತಿಗಳ ನಿರ್ದಿಷ್ಟತೆಯನ್ನು ಸೂಚಿಸುತ್ತದೆ. ಈ ಆಯಾಮಗಳು ಸಂಕೀರ್ಣ ರೀತಿಯಲ್ಲಿ ಒತ್ತರಿಸಿ ಆ ಮೂಲಕ ನಮ್ಮ ನಿಜದನಿಗಳನ್ನು ಪೃಥಕ್ಕರಿಸುತ್ತದೆ." (Alisamma women's collective: 2000; Pp. 45)

ಹಿಂದೆಂದಿಗಿಂತಲೂ ಇವತ್ತು, ಭಾರತೀಯ ಸಂಸ್ಕೃತಿಗಳಿಗೆ ಏಕರೂಪವನ್ನು ನೀಡುವ ಪ್ರಯತ್ನ ತೀವ್ರವಾಗಿ ನಡೆದಿದೆ. ಬಲಪಂಥಿಯರ ಈ ಧೋರಣೆಗಳಿಂದಾಗಿ ಮಹಿಳೆಯರು ಅದರಲ್ಲೂ ದಲಿತ ಮಹಿಳೆಯರು ನೇರವಾಗಿ ಪ್ರಪಾತಕ್ಕೆ ಬೀಳುವ ಅಪಾಯವಿದ್ದುದರಿಂದ,

ನಿರ್ಲಕ್ಷಿತ ಮಹಿಳಾ ಸಮುದಾಯಗಳ ಅಧ್ಯಯನವನ್ನು ಅತ್ಯಂತ ಎಚ್ಚರಿಕೆಯಿಂದ ಮಾಡಬೇಕಿದೆ. ಹಾಗೂ ಅವರಲ್ಲಿ ಜಾಗೃತಿಯನ್ನು ಮೂಡಿಸಬೇಕಿದೆ.

ಉಲ್ಲೇಖಗಳು

ಧರಣಿದೇವಿ ಮಾಲಗತ್ತಿ: ೧೯೯೮; **ಸ್ತ್ರೀವಾದ ಮತ್ತು ಭಾರತೀಯತೆ,** ಚೇತನ ಬುಕ್ ಹೌಸ್, ಮೈಸೂರು

ಮಧುಕೀಶ್ವರ್ : ೧೯೯೭; **ಮಾನುಷಿಯ ಮಾತು,** ಮೀರಾ ಎಲ್.ಜಿ. (ಅನು), ಅಕ್ಷರ ಚಿಂತನ ಪ್ರಕಾಶನ, ಹೆಗ್ಗೋಡು

ಮನು ಚಕ್ರವರ್ತಿ : ೧೯೯೯; **ಬಹುಮುಖಿ,** ಮೀರಾ ಎಲ್.ಜಿ. (ಅನು), ಅಕ್ಷರ ಚಿಂತನ ಪ್ರಕಾಶನ, ಹೆಗ್ಗೋಡು

ಮೊಗಳ್ಳಿ ಗಣೇಶ್: ೧೯೯೮; **ಸೊಲ್ಲು,** ಸಿ.ವಿ.ಜಿ. ಪ್ರಕಾಶನ, ಬೆಂಗಳೂರು

ವಾಸ್ಕೊದ ಗಾಮಾ ಮತ್ತಿತರರು: ೧೯೬೬; **ಪ್ರವಾಸಿ ಕಂಡ ಇಂಡಿಯಾ ಸಂಪುಟ ೨,** ನಾಗೇಗೌಡ ಎಚ್.ಎಲ್. (ಅನು), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಸ್ಟ್ರಾಬೋ: ೧೯೬೪; **ಪ್ರವಾಸಿ ಕಂಡ ಇಂಡಿಯಾ ಸಂಪುಟ ೧,** ನಾಗೇಗೌಡ ಎಚ್.ಎಲ್. (ಅನು), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

Alisamma Women's Collective: March- April 2002; 'Different Sisters', **The Dalit,** K.K.Nagar Chennai

❖ ❖

೪

ಮಂತ್ರವಿದ್ಯೆ ಮತ್ತು ಮಹಿಳೆ

ಮಾಟ - ಮಂತ್ರ ಮೋಡಿ ಶಕುನ ವಿದ್ಯೆಗಳು ಆದಿಮ ಯುಗದ ಸಾಂಸ್ಕೃತಿಕ ಸಂಗತಿಗಳು. ಯಾವುದೇ ಸಾಂಸ್ಕೃತಿಕ ಸಂಗತಿಗಳಿಗೂ ಭೌತಿಕ ಅಸ್ತಿತ್ವ, ಅಂತರಿಕ ಅಸ್ತಿತ್ವಗಳಿರುತ್ತವೆ. ವೈಜ್ಞಾನಿಕವಾಗಿ ಮಂತ್ರ ಒಳಗೊಂಡ ಸತ್ವ ಮತ್ತು ಪೊಳ್ಳುತನಗಳ ಚರ್ಚೆಗಿಂತಲೂ ಅದು ಪಡೆದುಕೊಂಡ ಸಾಮಾಜಿಕ ಆಯಾಮಗಳ ಚರ್ಚೆ ಮಹತ್ವಪೂರ್ಣವಾದದ್ದು. ಅದಕ್ಕೆಂದೇ ಅರ್ಥಕ್ಕೆ ಕೈ ಹಾಕಿದಷ್ಟೂ ನಿಗೂಢವಾಗಿ ಉಳಿಯುವ ಮಂತ್ರವಿದ್ಯೆಯ ಆಂತರಿಕ ಅಸ್ತಿತ್ವದ ವಿಶ್ಲೇಷಣೆಗಿಳಿಯುವ ವ್ಯರ್ಥಸಾಹಸ ಮಾಡದೇ, ಅದರ ಭೌತಿಕ ಅಸ್ತಿತ್ವವನ್ನು ಸಾಮಾಜಿಕ ಆಯಾಮಗಳೊಂದಿಗೆ ಮಹಿಳಾಪರ ನೆಲೆಯಲ್ಲಿ ಚರ್ಚಿಸಬಯಸುತ್ತೇನೆ. ಈ ಬಗೆಯ ಮೂಲಭೂತ ಚರ್ಚೆಗಳು ಸಾಂಸ್ಕೃತಿಕ ಅಧ್ಯಯನಗಳನ್ನು ಶ್ರೀಮಂತಗೊಳಿಸುತ್ತವೆ.

ವಸಾಹತು ಕಣ್ಣುಗಳಿಂದಲೇ ಸಾಂಸ್ಕೃತಿಕ ಹುಡುಕಾಟ ನಡೆಸಿರುವ ನಾವು ನಮ್ಮ ಅಸಲಿ ಚೈತನ್ಯವನ್ನು ಗುರುತಿಸಿಕೊಳ್ಳಬೇಕಾದರೆ ಸಹಸ್ರಾರು ವರ್ಷಗಳ ಚರಿತ್ರೆಯ ಪದರುಗಳನ್ನು ಬಿಡಿಸಿ ನೋಡಿಕೊಳ್ಳಬೇಕಾದ ಅಗತ್ಯವಿದೆ. ಈ ದೀರ್ಘ ಪರಂಪರೆ ಒಂದರೊಳಗೊಂದು ಮಿಳಿತವಾಗಿ ಬೆರೆತುಹೋಗಿದ್ದರೂ ಮಾಟ - ಮಂತ್ರ ವಿದ್ಯೆಯಂತಹ ಪ್ರಾಥಮಿಕ ಘಟ್ಟ, ಭಾರತೀಯ ಸ್ತ್ರೀತ್ವದ ನಿಜವಾದ ಮಾದರಿಯನ್ನು ಬಯಲುಗೊಳಿಸುತ್ತದೆ. ಆದಿಮ ಯುಗದಲ್ಲಿದ್ದ ಮಾತೃಪ್ರಧಾನ ವ್ಯವಸ್ಥೆಗೂ ಆ ಮಾಂತ್ರಿಕ

ವಿವರಗಳಿಗೂ ವಿಶೇಷ ವಾದ ಸಂಬಂಧವಿದೆ. ಧರ್ಮದಲ್ಲಿ ಮಹಿಳೆಗೆ ವಿಶೇಷ ಸ್ಥಾನವಿಲ್ಲದಿದ್ದರೂ ಮಾಟ-ಮಂತ್ರ-ಮೋಡಿ, ಶಕುನ ತರಹದ ವಿದ್ಯೆಗಳಲ್ಲಿ ಮಹತ್ವದ ಸ್ಥಾನವಿತ್ತು. ಹೀಗಾಗಿ ಸಮಕಾಲೀನ ಸ್ತ್ರೀವಾದಿ ಅಧ್ಯಯನಗಳು ಈ ನೆಲೆಯ ಮಾಹಿತಿಗಳನ್ನು ವಿಶೇಷವಾಗಿ ಪರಿಗಣಿಸಬೇಕು. ಹಾಗೆ ಕಂಡಾಗ ಇವತ್ತಿನ ಸ್ತ್ರೀ ಚಿಂತನೆಯ ಬಹುಮುಖೀ ನೆಲೆಯಲ್ಲಿ ಪರಂಪರೆಯನ್ನು ನಿರ್ವಚಿಸಿದಂತೆ ಮಾಡುತ್ತದೆ. ಈ ಬಗೆಯ ಚರ್ಚೆಗಳು ನಿಖರವಾಗಿ ಭಾರತೀಯ ಮಹಿಳಾ ಪ್ರತಿನಿಧಿಕರಣವನ್ನು ಗುರುತಿಸುತ್ತವೆ.

ಕೃಷಿ ಮತ್ತು ಮಾಟ - ಮಂತ್ರಗಳಿಗೆ ಸಂಬಂಧವಿದ್ದಂತೆ, ಮಾಟ - ಮಂತ್ರ ಹಾಗೂ ಮಹಿಳೆಗೆ ಅವಿನಾಭಾವ ಸಂಬಂಧವಿದೆ. ಚಾರಿತ್ರಿಕ ಬೆಳವಣಿಗೆಯ ಅವಸ್ಥೆಯಲ್ಲಿ ಕೃಷಿಯ ಕಾರ್ಯ ಮಾಟ - ಮಂತ್ರದ ಆಚರಣೆಯನ್ನು ಮಹತ್ವಪೂರ್ಣವಾಗಿ ಅವಲಂಬಿಸಿತ್ತೆನ್ನುವುದು ಜಾಗತಿಕ ಮಟ್ಟದಲ್ಲಿ ಗುರುತಿಸಿದ ಸತ್ಯ. ಮಾಟ-ಮಂತ್ರ ಮೊದಲಾದ ನಂಬಿಕೆಗಳು ಪ್ರಾಥಮಿಕ ಕೃಷಿ ಘಟ್ಟದಲ್ಲಿ ಹೆಚ್ಚಿನ ಮಹತ್ವ ಪಡೆದಿದ್ದನ್ನು ಅಲ್ಲಗೆಳೆಯಲಾಗುವುದಿಲ್ಲ. ಇಂದು, ಮಾಟ-ಮಂತ್ರಗಳು ಅಜ್ಞಾನದ ಫಲಗಳು ಎಂದು ಗುರುತಿಸಲಾಗುತ್ತಿದ್ದರೂ ಅಂದು, ಅವುಗಳು ಮಾನಸಿಕವಾಗಿ ಕ್ರಿಯಾತ್ಮಕವಾಗಿರಲು ಮಾರ್ಗದರ್ಶಿಯಾಗಿತ್ತು ಎಂಬುದನ್ನು ಮರೆಯಲಾಗುವುದಿಲ್ಲ. ಕೃಷಿ ಮಹಿಳೆಯ ಶೋಧನೆ. ಈ ತರ್ಕವನ್ನು ಒಪ್ಪುವುದಾದರೆ ಮಾಟ-ಮಂತ್ರಗಳ ಮೂಲಕರ್ತೃ ಮಹಿಳೆಯೇ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಮೊದಲು, ಮಂತ್ರ ಅಥವಾ ಧಾರ್ಮಿಕ ಸಂಸ್ಕಾರಗಳು ಭೂಮಿಯ ಫಲವತ್ತತೆಯನ್ನು ರಕ್ಷಿಸುವ ಉದ್ದೇಶವನ್ನು ಹೊಂದಿದ್ದವು. ಹೀಗಾಗಿ, ಕೃಷಿಯ ಜನನಿಯಾದ ಸ್ತ್ರೀಯು ಸಹಜವಾಗಿ ಇವುಗಳೊಂದಿಗೆ ವಿಶೇಷ ಸಮರ್ಥತೆಯನ್ನು ಪಡೆದುಕೊಂಡಳು. ಸ್ತ್ರೀ ಸ್ವಾಮಿತ್ವದಲ್ಲಿದ್ದ ಮಾಂತ್ರಿಕ ಕಾರ್ಯಗಳ ಪ್ರಧಾನ ಉದ್ದೇಶದ ಮೇಲೆ ಪುರುಷನ ಅತಿಕ್ರಮಣತೆ ಆಕಸ್ಮಿಕವಾಗಿ ನಡೆದಿರಬಹುದು. ಇಲ್ಲವೆ ಯಾವುದೇ ಸುಳಿವಿಲ್ಲದೆ ನಡೆದ ಪ್ರಾಚೀನ ಕಾರ್ಯವಾಗಿರಬಹುದು. ಕಾಲ ಕ್ರಮೇಣ ಮಾಂತ್ರಿಕೋ - ಧಾರ್ಮಿಕ ಕಾರ್ಯಗಳು ಪಿತೃಪ್ರಧಾನ ವ್ಯವಸ್ಥೆಗೆ ಹೊಂದಿಕೊಂಡವು. ಹೀಗೆ ಪುರುಷ ಪ್ರಧಾನ ಚರಿತ್ರೆಯ ಜಾಡು ಸ್ತ್ರೀ ಪ್ರಾಧ್ಯಾನ್ಯತೆಯನ್ನು ನಿಷೇಧಿಸಿ ದೃಢವಾಗಿ ಬೆಳೆದು ನಿಂತಿತು. ಪುರೋಹಿತಶಾಹಿ ತತ್ವಗಳಿಗೆ ತನ್ನನ್ನು ತಾನು ಅನುಕ್ರಮವಾಗಿ ಹೊಂದಿಸಿಕೊಳ್ಳಲು ತನ್ನ ಲಿಂಗವನ್ನು ಒಪ್ಪಿಸಿಬಿಟ್ಟು ತನ್ನತ್ವವನ್ನು ಸ್ತ್ರೀಯೊಂದಿಗೆ ಸಮೀಕರಿಸಿದನು. ಕರಾವಳಿಯ ನಾಗಮಂಡಲದ ಪಾತ್ರಿ, ಬಾದುಬ್ಬೆ (ಕಾವ್ಯ, ಶಾಸನ), ಜುಮಾದಿ (ಭೂತ), ಬನಶಂಕರಿ (ಶಿಲ್ಪ) ಮೊದಲಾದ ದೈವಗಳು ಉಭಯಲಿಂಗಿ ದೈವಗಳು. ಕಾರಣ, ಭಾರತೀಯ ಸಾಂಸ್ಕೃತಿಕ ಸಂವೇದನೆ ಪೂರ್ಣವಿರೋಧಗಳನ್ನು ಸ್ವೀಕರಿಸುವುದಿಲ್ಲ. ಹೀಗಾಗಿ ನಮ್ಮ ಸಾಂಸ್ಕೃತಿಕ ಒಡಲಲ್ಲಿ ಮೂಲಭೂತ ದ್ವಂದ್ವಗಳೇ ಇವೆ. ಉಭಯ ಲಿಂಗಿ ದೈವಗಳು ಮಾತೃಪ್ರಧಾನ ಘಟ್ಟದ ನಂತರದಲ್ಲಿ ಕಾಣಿಸಿಕೊಂಡವುಗಳು. ಈ ಎಲ್ಲ ಉಭಯಲಿಂಗಿ ದೈವಗಳು ಸ್ತ್ರೀ ಪುರುಷರ ಸಮಾನ ಅಸ್ತಿತ್ವವನ್ನು ಎತ್ತಿ ಹಿಡಿಯುತ್ತವೆ. ಇವುಗಳ ನಂತರದಲ್ಲಿ ಅಸ್ತಿತ್ವಕ್ಕೆ ಬಂದ 'ಅರ್ಧನಾರೀಶ್ವರ' ಪರಿಕಲ್ಪನೆ ಮೇಲ್ನೋಟಕ್ಕೆ ಗಂಡುಹೆಣ್ಣಿನ ಸಮಾನತೆಯನ್ನು

ಸೂಚಿಸು ವಂತೆ ಕಂಡುಬಂದರೂ ಆಂತರ್ಯದಲ್ಲಿ ಪುರುಷ ಪ್ರಾಧಾನ್ಯತೆಯನ್ನೇ ಧ್ವನಿಸುತ್ತದೆ. ಅರ್ಧನಾರೀಶ್ವರ ಪುರುಷ ಸೂಚಕ ಪದವಾಗಿದೆ. ಶಿವನೇ ಪಾರ್ವತಿಯನ್ನು ಒಡಲಲ್ಲಿರಿಸಿ ಕೊಂಡಂತೆ ತೋರುವ ಇದು ಅನುಗ್ರಹ ಮಾದರಿಯ ಸಂಸ್ಕೃತಿಯ ಸಂಕೇತ. ಪಾರ್ವತಿಯ ಹಾಜರಿಯೂ ಗೈರಾದಂತೆ ತೋರುವ ಇದು ಪಿತೃಪ್ರಾಧಾನ್ಯ ಘಟ್ಟವನ್ನು ಸೂಚಿಸುತ್ತದೆ. ಕೊನೆ ಕೊನೆಗೆ ಸ್ತ್ರೀ ಅಸ್ತಿತ್ವವನ್ನೇ ಅಳಿಸಿ ಹಾಕಿ ಪುರುಷ ಪ್ರಾಧಾನ್ಯತೆ ಎಷ್ಟು ಪ್ರಬಲವಾಗಿ ಬೆಳೆಯಿತೆಂದರೆ ಹನುಮಂತನು ಸಾತ್ವಿಕ ಮಾಂತ್ರಿಕ ವಿದ್ಯೆಯ ಅಧಿದೇವತೆಯಾದನು. ಕಾಳಿ ಚಂಡಿಯರನ್ನು ತಾಮಸ ಮಂತ್ರವಿದ್ಯೆಯ ಖಳನಾಯಕಿಯರನ್ನಾಗಿ ಚಿತ್ರಿಸಿದರು.

ಇವತ್ತು ಮಹಿಳಾ ಕಲೆಯೆಂದು ಗುರುತಿಸಿಕೊಳ್ಳುವ ರಂಗೋಲಿ ಮೂಲದಲ್ಲಿ ಸಾಂಕೇತಿಕ ಮಂತ್ರವಾಗಿದ್ದಿತು. ನಿಗೂಢ ಮಾಂತ್ರಿಕ ಭಾಷೆಯನ್ನೊಳಗೊಂಡ ಇದು ಕಲಾಪರಿಧಿಗೆ ಬಂದದ್ದು ನಂತರದಲ್ಲಿ. ಆದಿಮ ಯುಗದ ಸಾಂಸ್ಕೃತಿಕ ಸಂಗತಿಯಾದ ಇದು ತೀವ್ರವಾಗಿ ಮಾತೃಪ್ರಾಧಾನ್ಯತೆಯನ್ನೇ ಧ್ವನಿಸುತ್ತದೆ. ಮಾಟ - ಮಂತ್ರದ ಸಂದರ್ಭದಲ್ಲಿ ರಂಗೋಲಿಯನ್ನು ಹಾಕಿ ಅದರಲ್ಲಿ ಅತಿಮಾನುಷ ಶಕ್ತಿಗಳನ್ನು ಬಂಧಿಸಿ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಬಹುದೆಂಬ ನಂಬಿಕೆಯಿದೆ. ಮಾಂತ್ರಿಕ ಕಾರ್ಯದಲ್ಲಿ ತೆಗೆಯುವ ರಂಗೋಲಿ ಮಾಂತ್ರಿಕ ಸೂತ್ರಗಳನ್ನು ಒಳಗೊಂಡಿರುತ್ತದೆ. ಅತ್ಯಂತ ಕ್ಲಿಷ್ಟವಾದ ಸೂತ್ರಬದ್ಧವಾದ ಮಾಂತ್ರಿಕ ಭಾಷೆಯನ್ನು ಆಯಾ ಬುಡಕಟ್ಟಿನ ಹಿರಿಯ ಮಹಿಳೆ ಮಾತ್ರ ಅರ್ಥೈಸಿಕೊಳ್ಳಬಹುದಾಗಿತ್ತು. ಮಾತೃಮೂಲ ಮಂತ್ರವಿದ್ಯೆಯಲ್ಲಿ ಯಾವಾಗ ಪುರುಷ ಪ್ರವೇಶವಾಯಿತೋ ಅಂದೇ ರಂಗವಲ್ಲಿಯಲ್ಲಿ ಹಾಕುವ ಸಾಂಕೇತಿಕ ಸೂತ್ರಗಳ ಒಡೆತನ ಪುರುಷನದಾಯಿತು. ಇಂದು ಈ ಪರಂಪರೆಯ ಚಾಲನೆಯನ್ನು ಪುರುಷ ಪ್ರಾಧಾನ್ಯ ತಾಂತ್ರಿಕ ಪಂಥದಲ್ಲಿ ಗುರುತಿಸಬಹುದು.

ಮಾಂತ್ರಿಕ ವಿದ್ಯೆಯಲ್ಲಿ ಮಹಿಳೆ - ಪುರುಷ ಶಕ್ತಿಗಳು ಸಂಘರ್ಷಿಸಿ ಮೇಲ್ನೋಟಕ್ಕೆ ಪುರುಷ ಪ್ರಾಧಾನ್ಯತೆಯೇ ಕೈ ಮೇಲಾದಂತೆ ತೋರುವ ದ್ವಂದ್ವ ವಲಯಗಳನ್ನು ಪ್ರಸ್ತುತದಲ್ಲಿ ಜಾಗ್ರತೆಯಿಂದ ಪರಿಶೀಲಿಸಬೇಕು. ಇದರಲ್ಲಿ ಪುರುಷ ಪ್ರವೇಶವಾದಾಗಿನಿಂದ ಸಾಕಷ್ಟು ಪರಿವರ್ತನೆಗೆ ಒಳಪಟ್ಟಿದ್ದರೂ ಚಾಣಾಕ್ಷ ಬುದ್ಧಿಗೆ ಅದರಲ್ಲಿಯ ಸ್ತ್ರೀ ಪ್ರಾಧಾನ್ಯತೆ ಗೋಚರಿಸದೇ ಇರದು. ಆದಿಮ ಹಂತದ ಮಾಂತ್ರಿಕ ವಿದ್ಯೆಯಲ್ಲಿ ಮಂತ್ರವಿದ್ಯೆ ಆಕೆಯ ಪರವಾಗಿದ್ದರೆ ಪುರುಷ ಪ್ರಧಾನ ವ್ಯವಸ್ಥೆಯ ಹೊತ್ತಿಗೆ ಆಕೆಗೆ ವಿರುದ್ಧವಾದ ನಿಲುವನ್ನು ತಾಳಿದೆ.

ಮಂತ್ರವಿದ್ಯೆಯ ಮೂಲಶಕ್ತಿ ಮಹಿಳೆಯೇ ಆಗಿರುತ್ತಾಳೆ. ಕಾಳಿ, ಚಂಡಿ, ಚಾಮುಂಡಿ, ಆದಿಶಕ್ತಿ ತರದ ನಂಬಿಕೆಗೆ ಹೆಣ್ಣೇ ಮೂಲ. ಆಕೆಯೇ ಎಲ್ಲ ಮಹಾಶಕ್ತಿಯ ಕೇಂದ್ರ. ಅಲ್ಲಿ ಅಗಾಧ ಶಕ್ತಿಯ ಸಂಕೇತ ಮಹಿಳೆಯೇ. ಇಡೀ ಸೃಷ್ಟಿಯ ನಿಗೂಢವನ್ನು ಪ್ರತಿನಿಧಿಸುವವಳು ಆಕೆಯೇ. ಸೃಷ್ಟಿ - ಲಯಗಳ ನಿರ್ಧಾರಕಳೂ ಅವಳೇ ಎಂಬ ನಂಬಿಕೆ ಮಂತ್ರವಿದ್ಯೆಯಲ್ಲಿ ಇದೆ. ಪುರುಷ ಪ್ರಾಧಾನ್ಯ ತತ್ವಗಳು ಆ ಪಾತ್ರಗಳ ಅಂತರಾರ್ಥವನ್ನು ಅರ್ಥೈಸಿಕೊಳ್ಳದೆ

ಭೀಕರ, ಕ್ರೂರ ಮತ್ತು ಉಗ್ರ ಎಂದು ತಪ್ಪಾಗಿ ವ್ಯಾಖ್ಯಾನಿಸಿವೆ. ಇವತ್ತು ಸ್ತ್ರೀ ಶಕ್ತಿಯನ್ನು ಬಹುರೂಪಿ ಮತ್ತು ಸಮಷ್ಠಿ ಸ್ವರೂಪದಲ್ಲಿಯೇ ಗುರುತಿಸಿಕೊಳ್ಳಬೇಕಾಗಿದೆ. ಅದರ ಕಾಳೀತ್ವದ ವರ್ಣನೆಯಲ್ಲಿಯೇ ನಿಜವಾದ ಸ್ತ್ರೀ ಶಕ್ತಿಯ ಅಂತಃಸತ್ವದ ಮೆರವಣಿಗೆಯಿದೆ. ಕಾಳಿ, ಚಂಡಿಯರು ಪುರುಷನ ಅತಿಕ್ರಮಣತೆಯನ್ನು ಮಟ್ಟಿ ಹಾಕಿ, ಶಾಂತಿ ಮತ್ತು ಸಾಮರಸ್ಯವನ್ನು ಸ್ಥಾಪಿಸಲು ಸೂಚಿಸುವ ಶಕ್ತಿ ಸಂಕೇತಗಳೆಂದು ಅರ್ಥೈಯಿಸಿಕೊಳ್ಳಬೇಕಾಗಿದೆ. ಈ ಬಗೆಯ ನಿರ್ವಚನವು ಸ್ತ್ರೀಶಕ್ತಿ ಸಾಧ್ಯತೆಯನ್ನು ಪ್ರಕಟಿಸಲು ಸಾಧ್ಯವಾಗುತ್ತದೆ.

ಮಾಂತ್ರಿಕತೆ, ಭಾರತೀಯ ಸಂಸ್ಕೃತಿಯಲ್ಲಿ ಪಡೆದುಕೊಂಡ ಬಾಹ್ಯ ಆಕೃತಿಯೆಡೆಗೆ ಗಮನಹರಿಸಿದಾಗ ಅದರ ಆಶಯ, ಪ್ರತಿಮೆಗಳು ಹಲವಾರು ಸಾಂಸ್ಕೃತಿಕ ಸತ್ಯಗಳನ್ನು ಹೊರಗೆಡಹುತ್ತದೆ. ಮಂತ್ರದ ಮೂಲಶಕ್ತಿಗಳಾದ ಕಾಳಿ, ಚಂಡಿ, ಚಾಮುಂಡಿ, ದುರ್ಗಾ ಮೊದಲಾದ ಉಗ್ರರೂಪದ ದೇವತೆಗಳು ಮಾತೃಶಕ್ತಿಯ ಮೂಲ ಸಂಕೇತಗಳು; ಇವುಗಳೇ ಮಹಿಳಾಶಕ್ತಿಯ ಅಸಲಿ ರೂಪಗಳು. ಇದು ಆದಿಶಕ್ತಿ ರೂಪದ ಮೊದಲಘಟ್ಟ. ಈ ಮಾತೃದೇವತೆಗಳು ಮಾತೃಪ್ರಧಾನ ವ್ಯವಸ್ಥೆಯಡಿಯಲ್ಲಿ ರೂಪ ಪಡೆದುಕೊಂಡವುಗಳು. ಎರಡನೆಯ ಘಟ್ಟದಲ್ಲಿ ಪಾರ್ವತಿ, ಸರಸ್ವತಿ, ಲಕ್ಷ್ಮಿಯರು ಕಾಣಿಸಿಕೊಳ್ಳುತ್ತಾರೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹುಟ್ಟಿಕೊಂಡ ಇವರುಗಳು ಅನುಗ್ರಹ ಮಾದರಿಯ ಸಂಸ್ಕೃತಿಯ ಸಂಕೇತಗಳು. ಅವರನ್ನು ಆದಿಶಕ್ತಿಯೆಂದು ಸ್ತುತಿಸಿದರೂ ಅವರ ಹೊಗಳಿಕೆಯ ಅಂತರ್ಯದಲ್ಲಿ ಹೆಣ್ಣಿನ ದಾಸ್ಯತ್ವವನ್ನು ಸ್ಥಿರೀಕರಣಗೊಳಿಸುವ ರಾಜಕೀಯ ತಂತ್ರವಿದೆ. ಭಾರತೀಯ ಈ ಸಂಕೀರ್ಣ ಸಂಸ್ಕೃತಿಯಲ್ಲಿನ ಸಮಸ್ಯೆಗಳನ್ನು ಬಿಡಿಸಿಕೊಳ್ಳಬೇಕಾದರೆ ಮಹಿಳೆಯರು ರಾಜಕಿಯಾಭಿಮುಖವಾದ ಚಿಂತನೆಗಳನ್ನು ಹೊಸ ನೆಲೆಗಳಿಂದ ಪ್ರಾರಂಭಿಸಬೇಕು.

ವರ್ತಮಾನದಲ್ಲಿ ಶೋಷಿತ ಬಲಿ ಪಶುವಿನ ಮಾದರಿಯಾಗಿರುವ ಮಹಿಳೆಯ ಐತಿಹಾಸಿಕ ಪುನರ್ರಚನೆಗೆ ಕೈ ಹಾಕಬೇಕಿದೆ. ಕಾಳಿಯ ಕೊರಳಲ್ಲಿಯ ಪುರುಷರ ರುಂಡ, ಮಹಿಷಾಸುರನನ್ನು ಮರ್ದನ ಮಾಡಿ, ಆತನ ಹೆಣವನ್ನು ಮೆಟ್ಟಿನಿಂತ ಚಾಮುಂಡಿ, ಶಿವನನ್ನು ಮೆಟ್ಟಿನಿಂತ ಆದಿಶಕ್ತಿಯಂತಹ ಮಾದರಿಗಳು ಐತಿಹಾಸಿಕ ಘಟ್ಟದಲ್ಲಿ ಸ್ತ್ರೀ ಶೋಷಕಸ್ಥಾನದಲ್ಲಿದ್ದ ಸತ್ಯವನ್ನು ಬಯಲಿಗೆಳೆಯುತ್ತವೆ. ಈ ತರದ ಪ್ರಾಚೀನ ಸ್ತ್ರೀ ಮಾದರಿಗಳು ಸಾಂಸ್ಕೃತಿಕ ಸಂಕೀರ್ಣತೆಯನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತಲೇ ಪುರುಷ ಪ್ರಧಾನ ವ್ಯವಸ್ಥೆಗೆ ಸವಾಲೆಸೆಯುತ್ತವೆ. ಇಂತಹ ಭಿತ್ತಿ ಚಿತ್ರ ಮಾಲಿಕೆಗಳಾಗಲಿ, ಆ ಬಗೆಯ ಯಾವುದೇ ವಿವರ ವರ್ಣನೆಗಳಾಗಲಿ ಭಾರತೀಯ ಸ್ತ್ರೀ ಕೇಂದ್ರಿತ ಸಾಂಸ್ಕೃತಿಕ ರೂಪ ವಿನ್ಯಾಸಗಳನ್ನು ವಿಶ್ಲೇಷಿಸಬಹುದು. ಈ ಹಿನ್ನೆಲೆಯಲ್ಲಿ ಗ್ರಾಮದೇವತೆಗಳ ಆಕಾರ ವಿವರಗಳನ್ನು ನೋಡಿದರೆ ಕಾಳಿ, ಚಂಡಿಯರ ಪ್ರತಿರೂಪದ ಸಂಕೇತದಂತೆ ಕಾಣುತ್ತದೆಯೆಂದು ಹೇಳಿದರೆ ಆಶ್ಚರ್ಯ ಪಡಬೇಕಾದ್ದಿಲ್ಲ. ಕಾಳಿ, ಆದಿಶಕ್ತಿಯಂತಹ ಶಕ್ತಿಗಳನ್ನು; ತಂತ್ರ - ಮಂತ್ರ ರೂಪದ ಮಾಂತ್ರಿಕ ಆಚರಣೆ, ನಂಬಿಕೆ, ಪುರಾಣಗಳನ್ನು ಎದುರಿಗಿಟ್ಟುಕೊಂಡು ನಮ್ಮ ಕಾಲದ ಸ್ತ್ರೀ ವಿಮೋಚನಾ ಚಿಂತನೆಗಳನ್ನು ರೂಪಿಸಿಕೊಳ್ಳಬೇಕಾಗಿದೆ.

ಮಂತ್ರವಿದ್ಯೆಯಲ್ಲಿ ಸ್ತ್ರೀ ಪ್ರಾಧಾನ್ಯತೆಯನ್ನು ಗಮನಿಸಿದ ಪುರುಷನಿಗೆ ಸ್ತ್ರೀ ಶಕ್ತಿಯ ಕುರಿತು ಭಯ ಆಂತಕ ತಲ್ಲಣಗಳು ಮೂಡಿದವು. ಹೀಗಾಗಿಯೇ ಅವುಗಳ ಅಧಿದೇವತೆಗಳಾದ ಚಂಡಿ ಕಾಳಿ ಮೊದಲಾದ ಮಾತೃ ಮೂಲ ಶಕ್ತಿಗಳನ್ನು ಖಳನಾಯಕಿಯರನ್ನಾಗಿ ಚಿತ್ರಿಸಿ ಶಿಷ್ಟ ಸಂಸ್ಕೃತಿಯಿಂದ ಬಹಿಷ್ಕಾರಕ್ಕೊಳಪಡಿಸಿದನು. ಮಾಟ ಮಂತ್ರಗಳ ಅಂತ:ಸತ್ವವಾಗಿದ್ದ ಮಹಿಳೆಯ ಮಹತ್ವವನ್ನರಿಯದೇ ಪುರುಷ ಪ್ರಧಾನ ವ್ಯವಸ್ಥೆ ಅವಳನ್ನು ಭೀಕರವಾಗಿ ವರ್ಣಿಸುತ್ತಾ ಭಯ ಜಿಗುಪ್ಸೆ ಬೆಳೆಯುವಂತೆ ಅಪಪ್ರಚಾರವೆಸಗಿದವು. ವೈದಿಕ ಸಂಸ್ಕೃತಿಯ ಸ್ತ್ರೀ ದರ್ಶನವನ್ನೇ ಮೈಲಿಗೆಯನ್ನಾಗಿಸಿತು. ಇಂದಿಗೂ ಕಾಳಿಕಾಪುರಾಣವನ್ನು ವೇದ ವಿರುದ್ಧವಾಗಿಯೇ ಪರಿಗಣಿಸಲಾಗುತ್ತಿದೆ. ನಾಥ ಪಂಥದವರು, ಕಾಪಾಲಿಕರು ಮೊದಲಾದವರು ಮಾತೃ ಮೂಲದ ಮಂತ್ರ ವಿದ್ಯೆಯನ್ನು ಮಟ್ಟಹಾಕಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರೂ ಅಲ್ಲಿಯೂ ಸ್ತ್ರೀ ಶಕ್ತಿಯನ್ನು ಪೂರ್ಣ ಪ್ರಮಾಣದಲ್ಲಿ ನಿರಾಕರಿಸಲಾಗಲಿಲ್ಲ.

ಇಂದಿಗೂ ಬುಡಕಟ್ಟು ಜನಾಂಗಗಳು ಮಂತ್ರ ವಿದ್ಯೆಯಲ್ಲಿ ಸ್ತ್ರೀ ಪ್ರಾಧಾನ್ಯತೆಯನ್ನು ಉಳಿಸುಕೊಂಡು ಬಂದಿವೆ. ಅಲ್ಲಿ ಸ್ತ್ರೀ ದೀಕ್ಷಾಗುರುವಾಗಿದ್ದಾಳೆ. ಅಲ್ಲಿ ಹೆಣ್ಣೇ ಪೂಜಾರ್ಹಳು. ಬುಡಕಟ್ಟು ಜನಾಂಗಗಳು ಸೂಲಗಿತ್ತಿಗೆ ಮಾಂತ್ರಿಕ ಶಕ್ತಿಯಿದ್ದುದನ್ನು ಒಪ್ಪಿಕೊಳ್ಳುತ್ತವೆ. ಅವಳು, ತಿಂಗಳ ಋತುಸ್ರಾವ ರಕ್ತದ ಮೂಲಕವೇ ಮಂತ್ರವಿದ್ಯೆಯನ್ನು ಗಳಿಸಿಕೊಳ್ಳುವಳು. ಆಕೆ ತನ್ನ ಮಾಂತ್ರಿಕ ಶಕ್ತಿಯಿಂದಲೇ ಗರ್ಭಕೋಶದಿಂದ ಹೊರಬರುವ ಮಗವನ್ನು ರಕ್ಷಿಸಬಲ್ಲಳು ಇಲ್ಲವೆ ಕೊಲ್ಲಬಲ್ಲಳು. ನಿಗೂಢ ಶಕ್ತಿಯನ್ನು ಪಡೆಯಲು ಯೋಗ್ಯವಾದ ಕಾಲದಲ್ಲಿ ನಿಸರ್ಗದೊಡನೆ ನಿಸರ್ಗ ಸಹಜ (ಬೆತ್ತಲೆ) ವಾಗಿಯೇ ಬೆರೆತು ಮಾಂತ್ರಿಕಶಕ್ತಿಯನ್ನು ಪಡೆಯುವಳು ಎಂಬ ನಂಬಿಕೆ ಬುಡಕಟ್ಟು ಸಮೂಹದಲ್ಲಿದೆ. ಹೆಣ್ಣಿನ ತಿಂಗಳ ಮುಟ್ಟು ಮಡಿಯಾಗಿದ್ದುದು ಮಾತೃಪ್ರಧಾನ ವ್ಯವಸ್ಥೆಯನ್ನು ಸೂಚಿಸುತ್ತದೆ. ಮುಟ್ಟು ಮೈಲಿಗೆಯಾಗಿ ಅಂತಹ ಸ್ತ್ರೀ ದರ್ಶನದಿಂದಲೇ ಮಂತ್ರಹ್ರಾಸವಾಗುತ್ತದೆ ಎಂಬ ಇವತ್ತಿನ ನಂಬಿಕೆ ಪುರುಷ ಪ್ರಧಾನ ವ್ಯವಸ್ಥೆಯನ್ನೇ ಎತ್ತಿ ಹಿಡಿಯುತ್ತದೆ. ಸತ್ತ ಗರ್ಭಿಣಿಯ ಎಡಗೈಯಿಂದಲೇ ಮಂತ್ರ ಸಿದ್ಧಿಯಾಗುತ್ತದೆ ಎಂಬ ಪುರುಷ ಪ್ರಧಾನ್ಯ ಮಂತ್ರ ವಿದ್ಯೆಯಲ್ಲಿನ ನಂಬಿಕೆ ಎಷ್ಟೇ ಪ್ರಯತ್ನಿಸಿದರೂ ಸ್ತ್ರೀ ಅಸ್ತಿತ್ವವನ್ನು ಪೂರ್ಣ ಪ್ರಮಾಣದಲ್ಲಿ ನಿರಾಕರಿಸಲಾಗಲಿಲ್ಲ ಎಂಬುದು ಅಂತಿಮವಾಗಿ ಹೆಣ್ಣಿನ ವಿಜಯವನ್ನೇ ಬಯಲುಗೊಳಿಸುತ್ತದೆ. ಮುಟ್ಟು ಮೈಲಿಗೆಯೆಂದು ಪುರುಷ ಪ್ರಾಧಾನ್ಯತೆ ಮೂಗು ಮುರಿದರೂ ಅದನ್ನು ಸಂಪೂರ್ಣ ತಿರಸ್ಕರಿಸದ ಅವನ ಒಳಗಿನ ದ್ವಂದ್ವವೇ ಅದನ್ನು ಕುಂಕುಮವಾಗಿ ರೂಪಾಂತರಿಸಿ ಮಾಂತ್ರಿಕೋ - ಧಾರ್ಮಿಕ ಕಾರ್ಯಗಳಲ್ಲಿ, ಅತ್ಯಂತ ಮಹತ್ವದ ಸ್ಥಾನ ಕಲ್ಪಿಸಿತು.

ಮಾಟದ ಮುಂದುವರಿಕೆಯೇ ವಿಜ್ಞಾನ, ಮಾಟವೇ ವಿಜ್ಞಾನದ ಮೂಲ ತಳಹದಿ. ಹೀಗಾಗಿ ಮಾಟ ಮಂತ್ರದ ಮೂಲಕರ್ತೃವಾದ ಮಹಿಳೆಯೇ ವಿಜ್ಞಾನದ ಜನನಿಯೂ ಹೌದು. ನಿಸ್ಸಂಶಯವಾಗಿ ಕೃಷಿ, ಮಾಟ, ಮಂತ್ರ, ವಿಜ್ಞಾನ ಇವುಗಳ ಮೂಲ ಸಂಶೋಧಕಳು ಮಹಿಳೆಯೇ. ಸಂಸ್ಕೃತಿಯ ವಿವರಗಳಾದ ಮಂತ್ರವಿದ್ಯೆಯು ಆದಿಮಯುಗದ ಮಹಿಳಾ ಪ್ರತಿನಿಧೀಕರಣವನ್ನು, ಆಕೆಯ ಸಾಮಾಜಿಕ ಸಾಂಸ್ಕೃತಿಕ ನೆಲೆಯನ್ನೂ ಹೇಳುತ್ತಿವೆ. ಮಾಯಾ

ಶಕ್ತಿಗೂ ಮಹಿಳೆಗೂ ಇರುವ ಸಂಬಂಧವನ್ನು ಆಕೆಯ ಅಥವಾ ಮಹಿಳಾ ಸಮುದಾಯದ ಒಂದು ಬಗೆಯ ತಾಂತ್ರಿಕ ವಿಜ್ಞಾನ ಎಂತಲೂ ಮನೋವಿಜ್ಞಾನ ತಂತ್ರ ಎಂತಲೂ ಭಾವಿಸಬಹುದು. ವ್ಯವಸ್ಥೆಯನ್ನು ಎದುರಿಸಲು ಮಾಟ ಮಂತ್ರಗಳಿಗೆ ಮಹಿಳೆಯರು ಆಶ್ರಯಿಸುತ್ತಾರೆ. ಸಮಾಜದಲ್ಲಿ ಮಹಿಳೆಯರ ಇಂತಹ ಒಂದು ಮಾಂತ್ರಿಕ ನಂಬಿಕೆಯನ್ನು ಹೊಸ ಕಾಲದ ಮೌಲ್ಯಗಳಿಂದ ಚರ್ಚಿಸಬಹುದು. ಹೀಗೆ ಗಮನಿಸಿದಾಗ ಸಂಸ್ಕೃತಿಯಲ್ಲಿ ಯಾವ ಯಾವ ಹಂತಗಳಲ್ಲಿ ಆಕೆಯನ್ನು ಕೀಳಾಗಿ ಅಥವಾ ಮೇಲಾಗಿ ನೋಡಲಾಗಿದೆ ಎಂಬುದು ತಿಳಿಯುತ್ತದೆ.

ಮಾಟಗಾತಿಯರು, ಯಕ್ಷಿಣಿಯರು, ಕೊರವಂಜಿಗಳು ವಿಶೇಷವಾಗಿ ಮಹಿಳಾ ಸಮುದಾಯದ ವಿಶಿಷ್ಟ ಪಾತ್ರಗಳು. ಮಹಿಳೆಗೆ ಪೂರಕವಾದ ವಿರೋಧವಾದ ಎರಡೂ ಮೌಲ್ಯಗಳು ಮಂತ್ರವಿದ್ಯೆಯಲ್ಲಿವೆ. ವಿವಿಧ ಇತಿಹಾಸ ಕಾಲಘಟ್ಟದಲ್ಲಿ ಹಾಯ್ದುಬಂದ ಮಂತ್ರವಿದ್ಯೆಯ ಹಂತಗಳನ್ನು ಸ್ಥೂಲವಾಗಿ ಮೂರು ಮಜಲುಗಳಲ್ಲಿ ಗುರುತಿಸಬಹುದು. ೧. ಮಾತೃಮೂಲದ ಮಂತ್ರವಿದ್ಯೆ. ೨. ಶಿವ ಶಕ್ತಿ ಸಾಮರಸ್ಯ ಮೂಲದ ಮಂತ್ರವಿದ್ಯೆ. ೩. ಪುರುಷ ಪ್ರಾಧಾನ್ಯ ಮಂತ್ರವಿದ್ಯೆ. ಇವುಗಳಲ್ಲಿಯ ಮೂರನೆಯ ಘಟ್ಟ ಪ್ರಸ್ತುತ ಸಂಸ್ಕೃತಿಯ ಪ್ರಧಾನ ವಾಹಿನಿಯಾಗಿದ್ದರೆ ಮೊದಲು ಎರಡು ಘಟ್ಟಗಳು ಪರ್ಯಾಯ ಸಂಸ್ಕೃತಿಗಳಾಗಿಯೇ ಉಳಿದಿವೆ. ಇವತ್ತಿಗೂ ಈ ಪರ್ಯಾಯ ಸಂಸ್ಕೃತಿಗಳು ಮುಕ್ತ ಚಿಂತನೆಗೆ ಆಹ್ವಾನ ವನ್ನೊಡ್ಡುತ್ತಿವೆ.

ಭಾರತೀಯ ಗ್ರಾಮೀಣ ಪರಿಸರದ ಸಂಸ್ಕೃತಿಯಲ್ಲಿ ಮಾಟ ಮಂತ್ರ ಅಂತಿಮವಾಗಿ ಮಹಿಳೆಯರನ್ನು ದಾರಿತಪ್ಪಿಸುವಂತೆಯೂ ಇದೆ. ಹಾಗೆಯೇ ಮಾಟ-ಮಂತ್ರದ ಮೂಲಕ ಮಾನಸಿಕ ನೆಮ್ಮದಿ ಪಡೆದ ಸಾಧನವೂ ಆಗಿವೆ. ಶೋಷಿತ ಪಾತ್ರದಲ್ಲಿರುವ ೨೧ನೇ ಶತಮಾನದ ಮಹಿಳೆಗೆ, ಮಾತೃಮೂಲ ಮಂತ್ರವಿದ್ಯೆಯಂತಹ ಸಾಂಸ್ಕೃತಿಕ ವಿಸ್ಮೃತಿಗಳನ್ನು ಮತ್ತೆ ಮರುಚಿಂತನೆ ಮಾಡುವ ಅಗತ್ಯವಿದೆ. ಅಂದಾಗ ಮಾತ್ರ ಭಾರತೀಯ ಮಹಿಳೆ ತನ್ನನ್ನು ತಾನು ನಿಜವಾದ ಅರ್ಥದಲ್ಲಿ ನಿರ್ವಚಿಸಲು ಸಾಧ್ಯ. ಇವತ್ತಿನ ಮಹಿಳಾ ಸಾಂಸ್ಕೃತಿಕ ಮೀಮಾಂಸೆಯಲ್ಲಿ ಮಾತೃಮೂಲ ಮಂತ್ರವಿದ್ಯೆಯ ವಿಶ್ಲೇಷಣೆಗೆ ಹೆಚ್ಚು ಉಪಯುಕ್ತ ವಾದುದು. ಮಾತೃಮೂಲ ಮಂತ್ರವಿದ್ಯೆ, ಐತಿಹಾಸಿಕ ಕಾಲಘಟ್ಟದಲ್ಲಿ ಪುರುಷಪರವಾಗಿ ಹರಿದುಬಂದು ಹೇಗೆ ಪುರುಷರ ಹಿತಾಸಕ್ತಿಗಳನ್ನು ನ್ಯಾಯಬದ್ಧಗೊಳಿಸಿ ಸ್ತ್ರೀ ಶೋಷಣೆಯನ್ನು ಬಲಪಡಿಸಿತು ಎಂಬುದನ್ನು ಮರುಪರಿಶೀಲನೆಗೆ ಒಳಪಡಿಸಬೇಕು. ಪ್ರಸ್ತುತ ಮಹಿಳೆಯ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನಗಳನ್ನು ಆಕೆಯ ಶಾರೀರಿಕ ರಚನೆ ಮತ್ತು ಮನೋಧರ್ಮಗಳಂತಹ ಪುರುಷರ ಪೂರ್ವಗ್ರಹ ಮಾನದಂಡಗಳೊಂದಿಗೆ ಮಾಪನ ಮಾಡುವುದನ್ನು ಕೈಬಿಡಬೇಕು. ಕಾಳಿ, ಚಂಡಿ, ದುರ್ಗೆ ಮೊದಲಾದ ಮಾತೃಮೂಲ ಸಶಕ್ತ ಮಾದರಿಗಳೇ ಇವತ್ತಿನ ಮಹಿಳಾ ಸ್ಥಾನಮಾನ ಸಾಮರ್ಥ್ಯಗಳನ್ನು ನಿರ್ದೇಶಿಸುವ ಮಾನದಂಡಗಳಾಗಬೇಕು. ಈ ಬಗೆಯ ಅಧ್ಯಯನ, ಚರ್ಚೆಗಳು ಸಮಕಾಲೀನ, ಭಾರತೀಯ ಸಂಸ್ಕೃತಿಗೆ ಹೊಸ ಚಾಲನೆಯನ್ನು ನೀಡುತ್ತದೆ.

❖ ❖

೫

ಸ್ವಾತಂತ್ರ್ಯ ಯುದ್ಧ : ಮಹಿಳಾ ಜನಪದ ಸಾಹಿತ್ಯ

ಮಾನವ ಇತಿಹಾಸದಲ್ಲಿ ಮಹಿಳೆಯ ಅಸ್ತಿತ್ವ ಮತ್ತು ಪ್ರತಿನಿಧೀಕರಣ ಅನುಕ್ತವಾಗಿದೆ. ಇತಿಹಾಸ ರಚಕರು ಪುರುಷರಾಗಿದ್ದರಿಂದಲೇ ವ್ಯವಸ್ಥಿತವಾಗಿ 'ಸ್ವಾತಂತ್ರ್ಯ ಹೋರಾಟಗಾರರು' ಎಂದರೆ ಪುರುಷರು ಎಂಬ ಧ್ವನಿ ಹೊರಡಿಸಿದ್ದು ಕಹಿ ಸತ್ಯ. ಮಾತೃಪ್ರಧಾನ ಅಸ್ತಿತ್ವವನ್ನು ಸಮಾಧಿಯನ್ನಾಗಿಸಿ ಅದರ ಮೇಲೆ ಪಿತೃಪ್ರಧಾನ ಅಸ್ತಿತ್ವ ಭದ್ರವಾಗಿ ತಳವೂರಿ ನಿಂತಂದಿನಿಂದಲೇ ಚರಿತ್ರೆ ಪುರುಷರದಾಗಿ ರೂಪ ಪಡೆಯಿತು. ಆತನ ಪರಮಾಧಿಕಾರತ್ವದ ಪ್ರತಿ ಚಾರಿತ್ರಿಕ ಘಟ್ಟದಲ್ಲೂ, ಆತನ ಚಿಂತನ ಮತ್ತು ನಿರ್ಣಯದ ಎಳೆಗಳೇ ಹೆಣೆದುಕೊಂಡಿದೆ. ಪ್ರಜ್ಞಾಪೂರ್ವಕವಾಗಿಯೇ ಸ್ತ್ರೀ ಚಿಂತನದ ನೆಲೆಗಳನ್ನು ದಾಖಲಿಸಲಿಲ್ಲ. ಹೀಗಾಗಿಯೇ ಚರಿತ್ರೆಯಲ್ಲಿ ಅವಳ ನಿರಾಕರಣೆ, ಉಪೇಕ್ಷೆ ಕಂಡುಬರುತ್ತದೆ.

ಭಾರತೀಯ ರಾಜ್ಯ ಶಕ್ತಿಗಳ ಕಾನೂನುಗಳಲ್ಲಿಯೇ ಅವುಗಳನ್ನು ಸಮ್ಮಿತಿಸಿ, ಅವುಗಳ ಸುಳಿಗೆ ಸಿಕ್ಕು ಚಡಪಡಿಸುತ್ತಿದ್ದ ಮಹಿಳೆ ಆ ಸುಳಿಯನ್ನು ಸೀಳಿಕೊಂಡು ಹೊರಬಂದ ಪ್ರಸಂಗಗಳಿಗೇನೂ ಬರವಿಲ್ಲ. ಇದುವರೆಗೂ ಒಕ್ಕಣ್ಣಿನ ದೃಷ್ಟಿಕೋನದಿಂದ ರಚಿತವಾದ ಇತಿಹಾಸವನ್ನು ಸ್ತ್ರೀಕೇಂದ್ರಿತ ದೃಷ್ಟಿಕೋನದಿಂದ ಮರುಪರಿಶೀಲನೆಗೆ ಒಳಪಡಿಸಿ

ಪೂರ್ಣಗೊಳಿಸಬೇಕಾಗಿದೆ. ಮಹಿಳೆ ತನ್ನ ವಾಸ್ತವಿಕ ಅನುಭವಗಳ ಹಿನ್ನೆಲೆಯಲ್ಲಿ ವಿಭಿನ್ನ ರೀತಿಯ ಸಾಕ್ಷಿಗಳನ್ನು ಬಳಸಿಕೊಂಡು ಇತಿಹಾಸವನ್ನು ಬರೆಯಬಲ್ಲಳು. ಇತಿಹಾಸ ರಾಜಕೀಯ ಏಳುಬೀಳುಗಳ ಚರಿತ್ರೆಯಷ್ಟೆ ಅಲ್ಲ. ಆಯಾ ಕಾಲಘಟ್ಟದ ಸಾಂಸ್ಕೃತಿಕ, ಸಾಮಾಜಿಕ ಏಳುಬೀಳುಗಳನ್ನು ಒಳಗೊಂಡಿರುತ್ತದೆ. ವಿಶೇಷವಾಗಿ ಸ್ತ್ರೀ ಬದುಕಿದ ರೀತಿ, ಅವಳ ಜೀವನ ಮೌಲ್ಯಗಳು, ಸಮಸ್ಯೆಗಳು ಮುಂತಾದವುಗಳನ್ನು ದಾಖಲಿಸಬೇಕಾಗಿದೆ. ಈ ಮಾಹಿತಿಗಳೇ ಆಯಾ ಕಾಲಘಟ್ಟದ ಇತಿಹಾಸವನ್ನು ಪ್ರಾಮಾಣಿಕವಾಗಿ ತೆರೆದಿಡುತ್ತವೆ.

ಸ್ತ್ರೀ ವಿಮೋಚನೆಯ ಪಥವನ್ನು ಗುರುತಿಸಿಕೊಳ್ಳಬೇಕಾದರೆ ಪುರೋಹಿತಶಾಹಿ ವ್ಯವಸ್ಥೆ, ರಾಜ್ಯಶಾಹಿ ವ್ಯವಸ್ಥೆ ಹಾಗೂ ಊಳಿಗಮಾನ್ಯ ವ್ಯವಸ್ಥೆ ಈ ಮೊದಲಾದ ಆಯಾಮಗಳ ಮರುಪರಿಶೀಲನೆ ಮತ್ತು ಚಿಂತನೆ ಅತ್ಯಗತ್ಯ. ಯಾಕೆಂದರೆ ಈ ಮೂರು ನಿಸ್ಸಂದೇಹವಾಗಿ ರಾಜಕೀಯ ನೆಲೆಗಳೇ ಆಗಿದ್ದವು. ರಾಜಕೀಯ ಸ್ಥಿತಿಗತಿಗಳು ಹಾಗೂ ಸಾಂಸ್ಕೃತಿಕ ಆಯಾಮಗಳು ಒಂದಕ್ಕೊಂದು ಪೋಷಕ, ಪ್ರಭಾವಶಾಲಿಗಳಾಗಿರುತ್ತವೆ. ಭಾರತೀಯರು ಬ್ರಿಟೀಷರೊಂದಿಗೆ ಪ್ರಾರಂಭಿಸಿದ ಯುದ್ಧಘಟ್ಟದಲ್ಲಿ ಮಹಿಳೆಯು ಭಾಗವಹಿಸುವ ಪ್ರಕ್ರಿಯೆಯಿಂದಲೇ ಮಹಿಳಾ ವಿಮೋಚನೆ ಪ್ರಾರಂಭವಾಯಿತು. ಯಾಕೆಂದರೆ ತನ್ನ ಪಾರಂಪರಿಕ ಚೌಕಟ್ಟನ್ನು ಮೀರಿ ಹೊರಬರುವ ಹವಣಿಕೆಯ ಪ್ರಜ್ಞೆ ಮೊಳಕೆಯೊಡೆದಿದ್ದು ಈ ಹಂತದಿಂದಲೇ.

ಚರಿತ್ರೆ ಕೇವಲ ದಾಖಲೆಯ ಸ್ಥಿರೀಕರಣದ ಮಾದರಿಯಲ್ಲ. ಅದು ಪ್ರಜ್ಞೆಯ ಮುಂದುವರಿಕೆ, ಬೆಳವಣಿಗೆ ಎಲ್ಲವೂ ಆಗಿ ಹಬ್ಬುತ್ತದೆ. ರೂಪ ಪಡೆಯುತ್ತದೆ. ಹೀಗಾಗಿ 'ಭೂತ'ದ ಮರುಪರಿಶೀಲನೆ ಅತ್ಯಗತ್ಯ. ಕಾರಣ ಅದು ವರ್ತಮಾನವನ್ನು ಉಜ್ವಲಗೊಳಿಸುತ್ತದೆ, ಊರ್ಜಿತಗೊಳಿಸುತ್ತದೆ. ಇತಿಹಾಸದ ಕತ್ತಲಲ್ಲಿ ಮಸುಕಾಗಿ ಹೋದ ಸ್ವಾತಂತ್ರ್ಯ ಯುದ್ಧ ಹೋರಾಟಗಾರ್ತಿಯರನ್ನು ಶೋಧಿಸಿ ಅನುಕ್ತವಾಗಿ ಉಳಿದ ಮಹಿಳಾ ಇತಿಹಾಸವನ್ನು ತುಂಬಿಕೊಂಡುವ ಪ್ರಯತ್ನ ಈ ಪ್ರಬಂಧದಲ್ಲಿ ಮಾಡಲಾಗಿದೆ. ಇದರಲ್ಲಿ ಸಮಕಾಲೀನ Political Sense ಇದೆ. ಮಹಿಳಾ ಚರಿತ್ರೆಯ ಚಿಂತನ ಕ್ರಮವನ್ನು ಪುರುಷನ ಚಿಂತನೆ ಮತ್ತು ಪರಿಭಾಷೆಗಳಡಿಯಲ್ಲಿ ರೂಪಗೊಳಿಸಲು ಪ್ರಯತ್ನಿಸಿದರೆ ಅದು ಮತ್ತೆ ಗಂಡಿನ ಸಾತತ್ಯವನ್ನೇ ಗಟ್ಟಿಗೊಳಿಸುವ ಅಪಾಯದ ಸಾಧ್ಯತೆಯಿದೆ. ಅದಕ್ಕಾಗಿ ಮಹಿಳಾ ಚರಿತ್ರೆಯನ್ನು ಮಹಿಳಾ ಚಿಂತನೆಯ ಪರಿಭಾಷೆಯಲ್ಲಿ ರೂಪಗೊಳಿಸಬೇಕಾಗಿದೆ.

ಕರ್ನಾಟಕದಲ್ಲಿ ಆಳಿ ಹೋದ ಕದಂಬ, ರಾಷ್ಟ್ರಕೂಟ, ಚಾಲುಕ್ಯ ಗಂಗ, ಹೊಯ್ಸಳ, ವಿಜಯನಗರ ಮೊದಲಾದ ರಾಜ ವಂಶಗಳಲ್ಲಿ ವೀರಸ್ತ್ರೀಪುರುಷರು ಕಾಣಿಸಿಕೊಂಡಿದ್ದರೂ ಜನಪದರು ಅವರನ್ನು ಪ್ರಭುವಾಗಿ ಸ್ವೀಕರಿಸಲೇ ಇಲ್ಲ. ಇದಕ್ಕೆ ಕಾರಣ ಆ ಅರಸರ ಬದುಕಿನ ಮಟ್ಟ ಮೇಲ್‌ಸ್ತರವಾಗಿದ್ದು, ಅದನ್ನು ಹತ್ತಿರದಿಂದ ನೋಡುವ ಮತ್ತು ಅನುಭವಿಸುವ ಅವಕಾಶದ ಅಭಾವವಿತ್ತು. ಸಂಸ್ಥಾನಿ ಅರಸರು ಜನಪದರಿಗೆ ಮನೆಯ ಹಿರಿಯನಂತೆ ಕಂಡಿದ್ದಾರೆ. ಹೀಗಾಗಿಯೇ ಸಂಸ್ಥಾನಿ ಆಡಳಿತಕ್ಕೆ ಇವರ ಸ್ಪಂದನ ನೇರವಾಗಿದೆ. ಹೀಗಾಗಿಯೇ

ಇವರ ಕುರಿತ ಜನಪದ ಸಾಹಿತ್ಯ ವಿಪುಲವಾಗಿದೆ. ಈ ನಾಯಕ ನಾಯಕಿಯರನ್ನು ಕುರಿತು ಗೀತೆ ಕಟ್ಟಿ ಹಾಡುವುದರ ಮೂಲಕ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

ಬ್ರಿಟೀಷ್ ವಸಾಹತುಶಾಹಿ ನೆಲೆಗೊಂಡ ಸಂದರ್ಭದಲ್ಲಿ ಕರ್ನಾಟಕದಲ್ಲಿ ನಡೆದ 'ಸ್ವಾತಂತ್ರ್ಯ ಯುದ್ಧ' ಪ್ರಾದೇಶಿಕ ನೆಮ್ಮದಿ ಹಾಗೂ ಸಾಂಸ್ಕೃತಿಕ ರೀತಿ ನೀತಿಗಳನ್ನು ರಕ್ಷಿಸುವ ಮೂಲೋದ್ದೇಶವನ್ನು ಒಳಗೊಂಡಿತ್ತು. ಇದು ನಿರ್ದಿಷ್ಟವಾಗಿ ಪ್ರಾದೇಶಿಕವಾದ ಹೋರಾಟವಾಗಿದೆ. ಭಾರತೀಯ ಸಂದರ್ಭದಲ್ಲಿ ರಾಮಾಯಣ ಮಹಾಭಾರತದ ಕಾಲದಿಂದ ಹಿಡಿದು ಬ್ರಿಟೀಷ್ ಆಗಮನ ಪೂರ್ವದಲ್ಲಿ ನಡೆದ ಹೋರಾಟಗಳು ಸಾಮ್ರಾಜ್ಯಶಾಹಿ ಧೋರಣೆಯನ್ನು ಹೊಂದಿವೆ. ಇಲ್ಲಿ ಪ್ರಾದೇಶಿಕವಾಗಿ ರಾಜಕೀಯ ಅಧಿಕಾರ ವಿಸ್ತರಣೆಯ ದಾಹ ಪ್ರಧಾನವಾಗಿತ್ತು. ರಾಜ್ಯ ವಿಸ್ತರಣೆಯ ಯುದ್ಧಕ್ಕಿಂತ ಬ್ರಿಟೀಷರ ವಿರುದ್ಧ ಬಂಡೆದ್ದು ಸ್ಥಳೀಯರು ಹೂಡಿದ ಸ್ವಾತಂತ್ರ್ಯ ಯುದ್ಧಗಳು ಸಂಪೂರ್ಣ ಭಿನ್ನವಾಗಿದ್ದವು. ಕಾರಣ ನಮ್ಮವರು ಒಳಗಿನ ರಾಜ್ಯಶಾಹಿಯನ್ನು ವಿರೋಧಿಸುವುದಿಲ್ಲ. ಹೊರಗಿನ ಪ್ರಭುತ್ವವನ್ನು ವಿರೋಧಿಸುವರು. ಆಂತರಿಕ ವೈರುಧ್ಯಗಳು ಹಲವಿದ್ದರು ಅವಕ್ಕೆ ಏಕರೂಪತೆಯನ್ನು ಕೊಡುವುದಿಲ್ಲ, ಕೊಡಕೂಡದು.

ಬ್ರಿಟೀಷರ ವಿರುದ್ಧ ನಡೆದ ಸ್ಥಳೀಯರ ಎಚ್ಚರ ಪ್ರಧಾನ ಯುದ್ಧಗಳಲ್ಲಿ ಪ್ರಾದೇಶಿಕ ಸಂರಕ್ಷಣೆಯ ಪ್ರಜ್ಞೆಯಿತ್ತೆ ವಿನಃ ರಾಜ್ಯ ವಿಸ್ತರಣೆಯ ಸಾಮ್ರಾಜ್ಯಶಾಹಿ ಧೋರಣೆಗಳಿರಲಿಲ್ಲ. ಹೀಗಾಗಿ ಬ್ರಿಟೀಷರ ವಿರುದ್ಧ ಘಟಿಸಿದ ಯುದ್ಧಗಳು ಎಚ್ಚರ ಪ್ರಧಾನವಾದವುಗಳು, ಬೌದ್ಧಿಕ ಪ್ರಧಾನವಾದವುಗಳಲ್ಲ. ಆದರೆ ಸ್ಥಳೀಯ ಸಮುದಾಯಗಳನ್ನು ಬಗ್ಗುಬಡಿದು, ಆ ಮೂಲಕ ಸಂಸ್ಥೆಯನ್ನು ವಶಪಡಿಸಿಕೊಂಡು ಇಡೀ ಆರ್ಥಿಕ ಸಂಪತ್ತನ್ನು ಲೂಟಿ ಮಾಡುವ ಬ್ರಿಟೀಷರ ಬೌದ್ಧಿಕ ಪ್ರಧಾನವಾದ, ಸ್ಥಳೀಯರ ವಿರುದ್ಧ ಹೂಡಿದ ಯುದ್ಧಗಳು ಸಾಮ್ರಾಜ್ಯಶಾಹಿ ಧೋರಣೆಯನ್ನೇ ಪ್ರತಿನಿಧಿಸುತ್ತವೆ. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಕಾಣಿಸಿಕೊಂಡ ಕೆಲವು ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಮುಖ್ಯರಾದವರಾಗಿದ್ದಾರೆ. ಇವರಲ್ಲೇ ಕೆಲವರು ಸಾರ್ವಜನಿಕವಾಗಿಯೂ ಮತ್ತೆ ಕೆಲವರು ಅದೃಶ್ಯವಾಗಿಯೂ ಇದ್ದರು. ಆದರೆ ಹೆಚ್ಚಿನ ಮಹಿಳೆಯರು ಸಾರ್ವಜನಿಕ ರಂಗದಲ್ಲಿ ಕಾಣಿಸಲಿಲ್ಲವೆಂಬುದು ಸತ್ಯ. ಇದಕ್ಕೆ ಕಾರಣ ಲಿಂಗಾಧಾರಿತ ಸಾಮಾಜಿಕ ವ್ಯವಸ್ಥೆ. ಸ್ವಾತಂತ್ರ್ಯ ಯುದ್ಧದಲ್ಲಿ ಪಾಲ್ಗೊಂಡ ಕೆಲವೇ ಕೆಲವು ಮಹಿಳೆಯರು ಸಾರ್ವಜನಿಕ ಹಾಗೂ ಪಾರಂಪರಿಕ ಜೀವನ ನಡೆಸಿದ್ದರೂ ಅವರು ಮಾಡಿದ ಹೋರಾಟಗಳಲ್ಲಿ ಅವರದೇ ಆದ ವಿಶೇಷ ಲಯವಿದೆ. ಈ ಹಿನ್ನೆಲೆಯಲ್ಲಿಯೇ ಜನಪದ ಗರತಿಯಿಂದ ಜನ್ಮಪಡೆದುಕೊಂಡ ಹಾಡುಗಳು ಆಯಾ ನಾಯಕಿಯರ ಬದುಕು ಮತ್ತು ಅನುಭವವನ್ನು ಹಿಡಿದಿಟ್ಟಿವೆ. ಆ ದಾಖಲೆಗಳನ್ನೇ ಸಂಶೋಧನಾತ್ಮಕವಾಗಿ ವಿಶ್ಲೇಷಿಸುವ ಮೂಲಕ ನಾವು ಮಹಿಳಾ ಹೋರಾಟದ ವಿಶೇಷ ಲಯವನ್ನು ಗುರುತಿಸಬಹುದು. ಸ್ವಾತಂತ್ರ್ಯ ಯುದ್ಧದಲ್ಲಿ ಪಾಲ್ಗೊಂಡ ಮಹಿಳೆಯರ ರಾಜಕೀಯ ನಿಪುಣತೆ ಮತ್ತು ಶಕ್ತಿಯನ್ನು ಹಾಗೂ ಲಿಂಗ ತಾರತಮ್ಯದಿಂದ ಸಮಾಜ ಸೃಷ್ಟಿಸಿದ ಸ್ತ್ರೀ ಮೇಲೆ ಹೇರಲಾಗಿರುವ ಅಬಲತ್ವ,

ಅಸಹಾಯಕತೆಗೆ ಮುಖಾಮುಖಿಯಾಗಿಸಿ ಕಲ್ಪಿತ ಸಾಮಾಜಿಕ ಮೌಲ್ಯಗಳನ್ನು ಒಡೆಯಬೇಕಿದೆ.

ಬ್ರಿಟಿಷ್ ಪ್ರಭುತ್ವದ ವಿರುದ್ಧ ದಂಗೆಯೆದ್ದ ಸ್ಥಳೀಯ ನಾಯಕಿ - ನಾಯಕರ ಕುರಿತು ಜನಪದ ಮಹಿಳೆಯರು ಹಾಡಿದ ಹಾಡುಗಳು ವಿಪುಲವಾಗಿ ದೊರೆಯುವ ಸಾಧ್ಯತೆ ಇದೆ. ಇಂತಹ ವಿಚಾರಗಳಿಗೆ ಸಂಬಂಧಿಸಿದಂತೆ ಈತನಕ ಸ್ಪಷ್ಟವಾದ ಅಧ್ಯಯನಗಳು ನಡೆದಿಲ್ಲ. ಬಹುಪಾಲು ಜನಪದ ಸಾಹಿತ್ಯ, ಮಹಿಳೆಯ ಸೃಜನಶೀಲತೆಯಲ್ಲಿ ಜನ್ಮ ಪಡೆದವುಗಳಾಗಿವೆ. ಜನಪದ ಬದುಕಿನ, ಜನ ಜೀವನದ, ಸಂಸಾರದ ರೂಪಕ, ಪ್ರತಿಮೆ, ಸಂಕೇತ, ನುಡಿಗಟ್ಟು, ನಡೆನುಡಿ ಹಾಗೂ ಅಭಿವ್ಯಕ್ತಿಗಳಲ್ಲಿ, ಕೌಟುಂಬಿಕ ಕ್ರಿಯೆಗಳಲ್ಲಿ ತೊಡಗಿಸಿಕೊಂಡಿರುವ ಚಿತ್ರಣಗಳಲ್ಲಿ ತನಗಾದ ಆಳವಾದ ಅನ್ಯಾಯದ ನೋವುಗಳನ್ನು ತನ್ನ ಹಾಡುಗಳಲ್ಲೇ ತನ್ನ ವಿಶೇಷವಾದ ಭಾಷಿಕ ನೆಲೆಯಲ್ಲಿ ದಾಖಲಿಸುತ್ತಾ ಹೋಗುತ್ತಾಳೆ. ಈ ರೀತಿಯ ಹೆಂಗಸರ ನೋವಿನ ಕಾವಿನ ಚಿತ್ರಣ ಗಂಡಸರ ಸಾಹಿತ್ಯದಲ್ಲಿ ದಾಖಲಾಗುವುದಿಲ್ಲ. ಲಿಂಗಾಧಾರಿತ ಅಸಮಾನತೆಯಿಂದಾದ ಅನ್ಯಾಯದ ಬೇರನ್ನು ಗುರುತಿಸಬೇಕಾದರೆ ಜನಪದ ಸಾಹಿತ್ಯದಲ್ಲಿ ಮಹಿಳೆ ಮತ್ತು ಪುರುಷರ ಸಾಹಿತ್ಯದ ವಿಂಗಡನೆ ಅತ್ಯಗತ್ಯವಾದುದು. ಒಟ್ಟಾಗಿ ಜನಪದ ಸಾಹಿತ್ಯವೆಂದು ಸರಳೀಕರಿಸಿ ನೋಡುವುದರಿಂದ ಸಾಮಾಜಿಕವಾಗಿ, ಐತಿಹಾಸಿಕವಾಗಿ, ರಾಜಕೀಯವಾಗಿ ಸ್ತ್ರೀಯ ಸ್ಥಿತಿಗತಿಗಳನ್ನು ಗಮನಿಸತಕ್ಕಂತಹ ಹಂತದಲ್ಲಿ ನಮಗೆ ಲಾಭಕ್ಕಿಂತ ನಷ್ಟವೇ ಹೆಚ್ಚಾಗುತ್ತದೆ. ಅದಕ್ಕಾಗಿ ಮಹಿಳಾ ಜನಪದ ಸಾಹಿತ್ಯ ಪ್ರತ್ಯೇಕವಾದ ನಿರ್ವಚನವನ್ನು ಬಯಸುತ್ತದೆ.

ಇಲ್ಲಿ, ನಾನು ಜನಪದ ಗೀತ ಸಾಹಿತ್ಯವನ್ನು ಮಾತ್ರ ಗಮನಿಸಿರುವೆ. ನಾನು ಕಿತ್ತೂರಿನಲ್ಲಿ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ ಹಾಡುಗಳ ಜೊತೆಗೆ ಈಗಾಗಲೇ ಸಂಗ್ರಹವಾಗಿರುವ ಜನಪದ ಗೀತೆಗಳನ್ನು ಪರಿಶೀಲಿಸಿರುವೆ. ಜನಪದ ಗೀತ ಸಾಹಿತ್ಯದ ಜೊತೆ ಜೊತೆಯಲ್ಲಿಯೇ ಐತಿಹಾಸಿಕ ದಾಖಲೆಗಳನ್ನು ಪೂರಕವಾಗಿ ಗಮನಿಸುತ್ತಾ, ಅಗತ್ಯವೆನಿಸಿದಲ್ಲಿ ಶಿಷ್ಟಸಾಹಿತ್ಯದ ಉಲ್ಲೇಖಗಳನ್ನು ನೋಡಲಾಗಿದೆ. ವಿವಿಧ ನೆಲೆಗಳಲ್ಲಿ ವಿಶ್ಲೇಷಣೆ ನಡೆಸುವ ಮೂಲಕವೇ ವಿಷಯಕ್ಕೆ ವಸ್ತುನಿಷ್ಠೆಯನ್ನು ಒದಗಿಸಲು ಪ್ರಯತ್ನಿಸಲಾಗಿದೆ. ಏಕಮುಖ ಅಧ್ಯಯನ ನಡೆಯಬೇಕೆಂಬ ತತ್ವದಲ್ಲಿ ನನಗೆ ಅಷ್ಟಾಗಿ ವಿಶ್ವಾಸವಿಲ್ಲ. ಸ್ವಾತಂತ್ರ್ಯ ಚಳುವಳಿಯನ್ನು ಗಟ್ಟಿಗೊಳಿಸಲು ಮತ್ತು ಯಶಸ್ವಿಗೊಳಿಸಲು ಈಗಾಗಲೇ ಬ್ರಿಟಿಷ್ ವಸಾಹತುಶಾಹಿ ವಿರುದ್ಧ ದಂಗೆಯೆದ್ದ ಸ್ಥಳೀಯ ನಾಯಕಿ-ನಾಯಕರ ಬಲಿದಾನದ ಕುರಿತ ಗುಣಗಾನ ಮತ್ತು ವೈಭವೀಕರಣ ಅತ್ಯಗತ್ಯವಾಗಿತ್ತು. ಈ ನೆಲೆಯಲ್ಲಿ ಹುಟ್ಟಿಕೊಂಡ ಯುದ್ಧದ ಕುರಿತಿರುವ ಐತಿಹಾಸಿಕ ಜನಪದ ಗೀತೆಗಳನ್ನು ನಾಲ್ಕು ನಿಟ್ಟಿನಲ್ಲಿ ವಿಂಗಡಿಸಿಕೊಂಡು ನೋಡಲು ಪ್ರಯತ್ನಿಸಿರುವೆ.

೧. ಮಹಿಳಾ ಜನಪದ ಸಾಹಿತ್ಯದಲ್ಲಿ ಮಹಿಳೆಯ ಪ್ರತಿನಿಧೀಕರಣ

೨. ಮಹಿಳಾ ಜನಪದ ಸಾಹಿತ್ಯದಲ್ಲಿ ಪುರುಷನ ಪ್ರತಿನಿಧೀಕರಣ

೩. ಮಹಿಳಾ ಜನಪದ ಸಾಹಿತ್ಯದಲ್ಲಿ ಸ್ತ್ರೀಕೇಂದ್ರಿತ ಕಥನಗಳು.

೪. ಪುರುಷ ಜನಪದ ಸಾಹಿತ್ಯದಲ್ಲಿ ಸ್ತ್ರೀಕೇಂದ್ರಿತ ಕಥನಗಳು.

೧. ಮಹಿಳಾ ಜನಪದ ಸಾಹಿತ್ಯದಲ್ಲಿ ಮಹಿಳೆಯ ಪ್ರತಿನಿಧೀಕರಣ

ಜನಪದ ಮಹಿಳೆ ಹಾಡುಗಳನ್ನು ಕಟ್ಟುತ್ತಾ ಆ ಮೂಲಕವೇ ತನ್ನ ಅಂತರಂಗದ ಅಭೀಪ್ಸೆಯನ್ನು ಬಹಿರಂಗಗೊಳಿಸಿದ್ದಾಳೆ. ಆಧುನಿಕ ಭಾರತಕ್ಕೆ ಪ್ರವೇಶಿಸುತ್ತಿದ್ದ ಹೊತ್ತಿನಲ್ಲಿಯೇ ಎಚ್ಚರಗೊಂಡ ಕನ್ನಡ ಜನಪದ ಮಹಿಳೆ ಬ್ರಿಟೀಷ್ ಪ್ರಭುತ್ವವನ್ನು ಪ್ರಶ್ನಿಸುವ ಹಂತ ತಲುಪಿದ್ದು ಚರಿತ್ರೆಯ ವಿಕಾಸಸ್ಥಿತಿಯಲ್ಲಿ ಬಹಳ ಮಹತ್ವದ್ದು.

ಮಹಿಳೆ ದಾಖಲಿಸಿದ ಚರಿತ್ರೆಯ ಸಂದರ್ಭದೆಡೆಗೆ ಸ್ತ್ರೀವಾದಿಗಳು ಚಿಂತನೆಗೆ ತೊಡಗಿದಾಗ ಸ್ತ್ರೀವಾದಕ್ಕೆ 'ಬಹುತ್ವ'ದ ಆಯಾಮ ದೊರೆಯುವುದಲ್ಲದೆ ಈಗಾಗಲೇ ದಾಖಲಾದ ಅರ್ಧ ಚರಿತ್ರೆ ಪೂರ್ಣಗೊಳ್ಳುವುದು. ಜನಪದ ಸಾಹಿತ್ಯದಲ್ಲಿನ ಕಿತ್ತೂರಿನಂತಹ ಅನೇಕ ಹೋರಾಟಗಳನ್ನು ಪರಿಗಣಿಸುವುದು ಹಾಗೂ ವಿಶ್ಲೇಷಿಸುವುದು ಕೂಡ ಮಹಿಳೆಯರ ಹೋರಾಟದ ಹಾದಿಗಳಿಗೆ ಹೊಸ ನೆಲೆಗಳನ್ನು ರೂಪಿಸುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಅದೆಷ್ಟೋ ಸಮರಗಳಿಗೆ ಪ್ರೇರಣೆ-ಚೇತನ ಎರಡನ್ನೂ ಒದಗಿಸಿದ ಕಿತ್ತೂರ ಚೆನ್ನಮ್ಮನ ಹೋರಾಟ ಭಾರತೀಯ ಇತಿಹಾಸ ಮಟ್ಟದಲ್ಲಿ ನಿರ್ಲಕ್ಷ್ಯಕ್ಕೊಳಗಾಗಿರುವುದು ಒಂದು ದೊಡ್ಡ ದುರಂತ. ಕಿತ್ತೂರಿನ ಏರಿಳಿತ ಇತಿಹಾಸವನ್ನು ಚೆನ್ನಮ್ಮನ ಬದುಕಿನ ಏರಿಳಿತದೊಂದಿಗೆ ಅರ್ಥಪೂರ್ಣವಾಗಿ ಸಮೀಕರಿಸಿ ಹಾಡಿದ ಗರತಿಯ ಬೀಸುಕಲ್ಲಿನ ಹಾಡುಗಳಲ್ಲಿ ಅಭಿಮಾನದ ವೈಭವೀಕರಣವಿದ್ದರೂ ಅದು ಐತಿಹಾಸಿಕ ಸತ್ಯಕ್ಕೆ ವಂಚನೆಯನ್ನು ಬಗೆದಿಲ್ಲ.

ಗರತಿ, ನಮ್ಮ ಭಾರತೀಯ ಸಂಸ್ಕೃತಿಯು ಕಲ್ಪಿಸಿದ ಪುರುಷ ವ್ಯಕ್ತಿತ್ವದೊಂದಿಗೆ ಚೆನ್ನಮ್ಮನನ್ನು ಸಮೀಕರಿಸಿ ಅಭಿನ್ನತ್ವ ಸಿದ್ಧಾಂತವನ್ನು ಕಟ್ಟಿದ್ದಾಳೆ. ಅದಕ್ಕಾಗಿಯೇ ಆಕೆಯ ಸುತ್ತೂರು ಒಡೆತನವನ್ನು ಒಪ್ಪಿಕೊಂಡಿದ್ದಾಳೆ. ಅವಳ ಕತ್ತಿಕವಚಗಳ ಉಡುಪನ್ನು ಸಹಜತೆಯಿಂದಲೇ ಕಂಡಿದ್ದಾಳೆ. ಬತ್ತಲಗುದುರೆ ಜಿಗಿದು ಹತ್ತುವ ಕ್ರಿಯೆಯಲ್ಲದೆ ಅವಳ ಅಬ್ಬರದಲ್ಲೂ ದಿಟ್ಟತನದ ಜೀವಂತಿಕೆಯನ್ನು ಹಿಡಿದಿಟ್ಟಿದ್ದಾಳೆ.

> ಗಂಡನ್ನ ಕಳಕೊಂಡ ಬೆಂಡಾದ ಚೆನ್ನಮ್ಮ
> ಗಂಡಾಗಿ ಕಣಕ ಇಳದಾಳ| ನಾಡಾನ್ನ
> ಪುಂಡ ಬಂಡಾಯ ಹಿಂಡಾಕ||
> (ಸಂ: ಸಣ್ಣಕ್ಕಿ ನಿಂಗಣ್ಣ : ೧೯೭೭; ಪು. ೫೭)

ಗರತಿಯ ಈ ಹಾಡು, ತನ್ನ ಕುಟುಂಬದೊಳಗೆ, ತನ್ನ ಸಂಸ್ಥಾನದೊಳಗೆ ಚೆನ್ನಮ್ಮ ಸಮಸ್ಯೆಗಳನ್ನೆದುರಿಸುತ್ತ ತನಗೆ ಮುಳುವಾದವರ ಜೊತೆಗೆ ಹೊಂದಿಕೊಂಡು ಹೊರಗಿನ ಬ್ರಿಟೀಷರನ್ನು ಎದುರಿಸುವ ಅವಳ ಕ್ಲಿಷ್ಟ ಹಾಗೂ ಅನಿವಾರ್ಯ ಪರಿಸ್ಥಿತಿಗಳ ವಿವರಣೆಗೆ ಕೈಗನ್ನಡಿಯಾಗಿದೆ. ಬ್ರಿಟೀಷ್ ಅಧಿಕಾರಿಗಳು ಮಾತ್ರ ಚೆನ್ನಮ್ಮನ ವೈರಿಗಳಾಗಿರಲಿಲ್ಲ. ಹೆಣ್ಣಿನ

ರಾಜ್ಯಾಡಳಿತವನ್ನು ಸಹಿಸದ, ಅಸಮಾಧಾನದಿಂದ ಚದುರಿ ಹೋಗುತ್ತಿದ್ದ ಪುರುಷರು ಅವಳ ಸುತ್ತಮುತ್ತಲಿದ್ದರು. ಯಾವ ಪುರುಷರು ಅವಳ ಸಾರ್ವಜನಿಕ ಅಸ್ತಿತ್ವವನ್ನು ನಿರಾಕರಿಸುತ್ತಿದ್ದರೋ ಅಂತಹ ಪುರುಷರ ವಿರುದ್ಧ ಅವಳು ಕಿಡಿಕಾರಬೇಕಾಗಿತ್ತೋ ಅಂಥವರ ಜೊತೆಗಿದ್ದೇ ವಸಹಾತುಶಾಹಿತ್ವವನ್ನು ವಿರೋಧಿಸಿ ಹೋರಾಡಬೇಕಾದುದು ಅನಿವಾರ್ಯವಾದರೂ ತುಂಬಾ ಕಠಿಣವಾದದ್ದು. ಇತಿಹಾಸ ದಾಖಲಿಸದೇ ಇದ್ದ ಇಂಥ ಒಳಸೂಕ್ಷ್ಮಗಳನ್ನು ಜನಪದ ಮಹಿಳೆ ತ್ರಿಪದಿಯಲ್ಲಿ ದಾಖಲಿಸಿದ್ದೊಂದು ಐತಿಹಾಸಿಕ ದಾಖಲೆ.

ಸೆರೆಯಲ್ಲಿದ್ದ ಚೆನ್ನಮ್ಮ ಬ್ರಿಟೀಷರ ಕೈಯಲ್ಲಿ ಸತ್ತಳು ಎಂಬುದನ್ನು ಗರತಿ ಒಪ್ಪುವುದಿಲ್ಲ. ಅಂತಹ ಸಾವು ಸಾಹಸ ಜೀವನ ಸಾಗಿಸಿದ ಚೆನ್ನಮ್ಮನ ಬದುಕಿಗೇ ಕಪ್ಪುಚುಕ್ಕೆ. ಅದಕ್ಕಾಗಿಯೇ 'ಚೆನ್ನವ್ವ ವಜ್ರದುಂಗರ ನುಂಗ್ಯಾಳ' ಎಂದಿರುವಳು. 'ಸರ್ಜಾನಾಯಕ'ನ ಲಾವಣಿಯಲ್ಲಿ, ಬ್ರಿಟೀಷರ ವಿರುದ್ಧ ಹೋರಾಡಿದ ಸರ್ಜಾನಾಯಕ, ಕೊನೆಯ ಗಳಿಗೆಯಲ್ಲಿ ಅವರಿಗೆ ಸೆರೆಯಾಳಾದನು. ಬ್ರಿಟೀಷರಿಂದ ಸರ್ಜಾನಾಯಕ ನೇಣುಗಂಬಕ್ಕೆ ಏರಿಸಲ್ಪಟ್ಟರೂ ಯುದ್ಧವೀರನಾಗಿಯಷ್ಟೇ ಉಳಿಯಲಿಲ್ಲ. ವೀರಮರಣವನ್ನಪ್ಪಿದನು ಕೂಡ. ಹಾಗೆಯೇ ಹೋರಾಡಿ ಬ್ರಿಟೀಷರಿಗೆ ಸೆರೆಸಿಕ್ಕು ಸತ್ತ ಚೆನ್ನಮ್ಮ ಯುದ್ಧವೀರಳಷ್ಟೇ ಅಲ್ಲ. ವೀರಮರಣವನ್ನಪ್ಪಿದವಳು.

ಚೆನ್ನಮ್ಮನ ಸೊಸೆ ಈರಮ್ಮನೂ ಅತ್ತೆಯೊಂದಿಗೆ ತಮ್ಮ ಸಂಸ್ಥಾನದಲ್ಲಿಯ ಬ್ರಿಟೀಷರ ಅನಧಿಕೃತ ಪ್ರವೇಶವನ್ನು ಪ್ರಶ್ನಿಸಿದಂಥವಳು. ಪ್ರಥಮ ಹಂತದ ಯುದ್ಧದಲ್ಲಿ ಸೆರೆಸಿಕ್ಕ ಈಲಿಯಟ್ ಮತ್ತು ಸ್ಟೀವನ್‌ಸನ್‌ರ ಬಿಡುಗಡೆಯ ನಿರ್ಣಯವನ್ನು ಅತ್ತೆ-ಸೊಸೆ ಜೊತೆಯಾಗಿಯೇ ತೆಗೆದುಕೊಂಡಿದ್ದರು. (Chaplin's letter from Kittur camp to Newnham; 2nd Dec.1824) ಡಿಸೆಂಬರ್ ೨ರಲ್ಲಿ ಚಾಪ್ಲಿನ್‌ಗೆ ಪತ್ರದ ಮೂಲಕ ಅತ್ತೆಯ ಜೊತೆ ತಾನೂ ಸಂಸ್ಥಾನದ ಸ್ವಾತಂತ್ರ್ಯ ಅಸ್ತಿತ್ವದ ಅಭೀಪ್ಸೆಯನ್ನು ಪ್ರಕಟಪಡಿಸಿರುವಳು. ರಾಜಕೀಯ ಮಹತ್ವದ ನಿರ್ಣಯಗಳನ್ನು ಇವರಿಬ್ಬರೂ ಜೊತೆ ಜೊತೆಯಾಗಿಯೇ ತೆಗೆದುಕೊಂಡಿರುವ ಸಾಧ್ಯತೆಯಿದೆ. ಹೀಗಾಗಿಯೇ ಕಿತ್ತೂರಿನ ಸ್ವಾತಂತ್ರ್ಯ ಯುದ್ಧದಲ್ಲಿ ಈರವ್ವನ ಪಾತ್ರವಿದೆ. ಅವಳೂ ಸ್ವಾತಂತ್ರ್ಯ ಹೋರಾಟಗಾರಳು ಎಂದು ಧೈರ್ಯವಾಗಿ ಹೇಳಬಹುದು. ಸಂಸ್ಥಾನದ ಸ್ವಾತಂತ್ರ್ಯವನ್ನು ಮರೆತು ಅವರು ನೀಡುವ ವರ್ಷಾಸನದಲ್ಲೇ ಜೀವನ ಸಾಗಿಸಲು ಒತ್ತಾಯಿಸುತ್ತಿದ್ದ ಬ್ರಿಟೀಷರ ಕುತಂತ್ರ ನೀತಿಯನ್ನು ಈರವ್ವ ವಿರೋಧಿಸುತ್ತಿದ್ದಳು ಎನ್ನುವುದನ್ನು ಗರತಿ ಮಾರ್ಮಿಕವಾಗಿ ಚಿತ್ರಿಸಿದ್ದಾಳೆ.

> ನೀ ಹೇಳಿದ ಮಾತ ನಾ ನಾರಿ ಕೇಳಿದರ
> ತಂದೆ ಮಲ್ಲಸರ್ಜನ ಮಗಳಲ್ಲ
> ತಾಯಿ ಚೆನ್ನಮ್ಮನ ಮಗಳಲ್ಲ
> (ಸಂ. ಕಲಬುರ್ಗಿ ಎಂ.ಎಂ : ಕಿತ್ತೂರ ಆಸ್ಥಾನ ಸಾಹಿತ್ಯ)

ಆತ್ಮೀಯತೆಯಿಂದ ವರ್ತಿಸುತ್ತಿದ್ದ ಬ್ರಿಟೀಷರೇ, ದಬ್ಬಾಳಿಕೆ ಪ್ರದರ್ಶಿಸಿ ಸ್ವತಂತ್ರ

ವಾಗಿದ್ದ ಕಿತ್ತೂರಿನ ಗೌರವ ಪ್ರತಿಷ್ಠೆಗಳನ್ನು ಮಣ್ಣುಗೂಡಿಸಿದ್ದು. ಅವರನ್ನು ಅಷ್ಟು ಸುಲಭವಾಗಿ ಕ್ಷಮಿಸಲು ಈರವ್ವ ಸಿದ್ಧಳಿರಲಿಲ್ಲ. ಅತ್ತೆ ಚೆನ್ನಮ್ಮ, ನೆಗೆಣ್ಣಿ ಜಾನಕಿಬಾಯಿ ಇವರಿಬ್ಬರ ವೀರಮರಣದ ನಂತರ ಈರವ್ವ ಒಬ್ಬಂಟಿಯಾಗಿಯೇ ಬದುಕುಳಿದುದು, ಬ್ರಿಟೀಷರ ಆಮಿಶವನ್ನು ತಿರಸ್ಕರಿಸಿದುದು ಮಹತ್ವದ್ದಾಗಿದೆ. ಒಂದೇ ಹಠ ಹಿಡಿದ ಈರವ್ವ. ಬ್ರಿಟೀಷರು, ತನ್ನನ್ನು ಕೊಲ್ಲಲು ಬಳಸುವ ಕುತಂತ್ರಗಳನ್ನು ಗೆಲ್ಲುತ್ತಾ ಕೊನೆಗೆ ಅದೇ ಕುತಂತ್ರಕ್ಕೆ ಬಲಿಯಾದ ದರುಂತ ಚಿತ್ರಣವನ್ನು ಜನಪದ ಗರತಿ ತನ್ನ ಸೋಬಾನೆ ಹಾಡಿನಲ್ಲಿ ಹಿಡಿದಿಟ್ಟಿದ್ದಾಳೆ "ಅಂದಚಂದದ ಗುಳಗಿ ಚಂದದಿ ತಂದು| ಒಂದೊಂದು ಈರವ್ವಗ ಕೊಡತಾನ| ಈರವ್ವ ನ್ಯಾಲಿಗಿ ಬುಡಕಿಟ್ಟು ಸರಸ್ಯಾಳ| ಅತ್ತಲಾಗ ಆರು ತಾಸು ಇತ್ತಲಾಗ ಆರು ತಾಸು| ಈರಾ ಈರಾ ಅಂತಾ ಕರಿತಾನ| ಈರವ್ವ ಯಾಕಪ್ಪನನ್ನುವ ದನಿದೊರೆ| ..... ಧಾರವಾಡದಾಗ ಲೈನದ ಪೇಟಿವಳಗ| ಅಲ್ಲೇ ಗವಳಿಗ್ಯಾರ ಮನಿಯಾಗ| ದುಡ್ಡ ಕೊಟ್ಟ ಹಾಲ ತರಿಸ್ಯಾನ| ಒಂದೊಂದು ಗುಳಗಿ ಚಂದದಿಂದ ಹಾಲಾಗ ಬಟ್ಟೀಲೆ ಮದಡಿಸಿ ಈರವ್ವಗ ಎದುರಿಗೆ ಕುಂತ ಕುಡಿಸ್ಯಾನ| .....ಅತ್ತಲಾಗ ಅರತಾಸ ಇತ್ತಲಾಗ ಆರುತಾಸ ಈರವ್ವ ಜೀವ ಬಿಡತಾಳ| (ಸಂ. ಕಲುಬುರ್ಗಿ ಎಂ.ಎಂ: ಕಿತ್ತೂರ ಆಸ್ಥಾನ ಸಾಹಿತ್ಯ) ಚೆನ್ನವ್ವ ಬ್ರಿಟೀಷರ ವಿರುದ್ಧ ರಣರಂಗದಲ್ಲಿ, ಬಂದೀಖಾನೆಯಲ್ಲಿ ಹೋರಾಡಿದರೆ, ಈರವ್ವ ನಾಲ್ಕು ಗೋಡೆಗಳ - ಅರಮನೆ, ಬಂದೀಖಾನೆ - ಮಧ್ಯದಲ್ಲಿಯೇ ಸ್ವಾತಂತ್ರ್ಯ ಯುದ್ಧ ನಡೆಸಿದಳು. ಇವರಿಬ್ಬರ ಸ್ವಾತಂತ್ರ್ಯ ಯುದ್ಧದ ಹೋರಾಟದ ಸ್ವರೂಪ ಸಂಪೂರ್ಣ ಭಿನ್ನವಾಗಿದೆ. ಚೆನ್ನವ್ವನಂತೆ ಈರವ್ವ ಕತ್ತಿ ಹಿಡಿದು ಯುದ್ಧ ಸಾರಿಲ್ಲ. ಆದರೂ ಅವಳು ಯುದ್ಧ ಹೂಡಿಲ್ಲ ಎಂದರೆ ತಪ್ಪಾಗುತ್ತದೆ. ತನ್ನನ್ನು ಕೊಲ್ಲುವ, ತನ್ನ ದೇಶವನ್ನು ಕಬಳಿಸುವ ಬ್ರಿಟೀಷರ ತಂತ್ರಗಳನ್ನು ಒಡೆಯುತ್ತಲೇ ಕೊನೆಗೆ ಅದೇ ತಂತ್ರಕ್ಕೆ ಬಲಿಯಾಗಿ ವೀರಮರಣವನ್ನಪ್ಪುವಳು. ಸಾಯು ವಾಗಲೂ ತನ್ನ ವಂಶ ಮತ್ತು ತನ್ನ ಸಂಸ್ಥೆಗೊದಗಿದ ಸ್ಥಿತಿಯನ್ನು ನೆನಪಿಸಿಕೊಂಡು "ಈರವ್ವ ಕಂಬಕ ಹಾಯ್ದು ಅಳತಾಳ" (ಸಂ. ಕಲಬುರ್ಗಿ ಎಂ.ಎಂ : ಕಿತ್ತೂರ ಆಸ್ಥಾನ ಸಾಹಿತ್ಯ) ಈರವ್ವನ ಕಣ್ಣೀರು ಅಸಹಾಯಕತೆಯೊಂದನ್ನೇ ಸೂಚಿಸುವುದಿಲ್ಲ. ಅದು ಅವಳ ದೇಶಾಭಿಮಾನವನ್ನು ಪ್ರಕಟಪಡಿಸುವ ಆಶಯವಾಗಿಯೂ ನಿಲ್ಲುತ್ತದೆ. ಮತ್ತೊಂದು ಪಾಠಾಂತರದಲ್ಲಿ ಬ್ರಿಟೀಷರ ಉಪಟಳವನ್ನು ಸಹಿಸಲಾರದೆ ತಾನೇ ವಜ್ರ ಅರೆದು ನುಂಗಿ ಸತ್ತಳೆಂದು ಬರುತ್ತದೆ. ಹೀಗೆ ಕಾಣುವ ಎರಡು ರೀತಿಯ ಸಾವಿನ ಉಲ್ಲೇಖಗಳು, ಒಟ್ಟಾರ್ಥ ದಲ್ಲಿ ಅವಳ ವೀರಮರಣವನ್ನೇ ದಾಖಲಿಸುತ್ತದೆ. ವೀರಮರಣ ಯುದ್ಧಭೂಮಿಯಲ್ಲೇ ಸಂಭವಿಸಬೇಕಾಗಿಲ್ಲ. ಸ್ವತಂತ್ರವಾಗಿ, ಕೀರ್ತಿಶಾಲಿಯಾಗಿ ಮೆರೆಯುತ್ತಿದ್ದ ತನ್ನ ಸಂಸ್ಥಾನವನ್ನು ನುಚ್ಚು ನೂರಾಗಿಸಿದ ಬ್ರಿಟೀಷರನ್ನು ಜೀವನದ ಕೊನೆಯುಸಿರಿರುವವರೆಗೂ ವಿರೋಧಿಸುತ್ತಲೇ ಮರಣಿಸಿದ - ಅದು ಕೊಲೆಯಾಗಿರಬಹುದು, ಇಲ್ಲವೆ ಆತ್ಮಹತ್ಯೆಯಾಗಿರಬಹುದು - ಅವಳದು ಸಾಮಾನ್ಯ ಸಾವಲ್ಲ, ಅದು ವೀರಮರಣವೇ ಸರಿ.

೨. ಮಹಿಳಾ ಜನಪದ ಸಾಹಿತ್ಯದಲ್ಲಿ ಪುರುಷರು

ನರಗುಂದದ ಬಾಬಾಸಾಬನ ಕುರಿತಿರುವ ಗರತಿಯ ಹಾಡುಗಳೆಲ್ಲಾ ವಿಘಟನೆಯನ್ನೇ ಎತ್ತಿ ಹೇಳುತ್ತದೆ. ಅವರ ಲೋಕಕಲ್ಯಾಣ ಕಾರ್ಯಗಳನ್ನು 'ಕ್ಯಾಟಿ ಬಿದ್ದಾವಂದ ಕ್ಯಾಟಿಯ ಕಟ್ಟಿಸಿದ,' 'ಅಗಸಿ ಬಿದ್ದಾವಂದ ಅಗಸಿಯ ಕಟ್ಟಿಸಿದ .....' (ಸಂ. ಹೂಗಾರ ಎ.ಎಸ್: ೧೯೭೩; ಪು. ೮೪) ಹೀಗೆ ಆತನ ಹೋರಾಟವನ್ನು ಹೇಳತೊಡಗಿದ ಗರತಿ, ಕೊನೆಕೊನೆಗೆ ಅಲ್ಲಿ ಹೆಣ್ಣು ಅನುಭವಿಸಿದ ನೋವುಗಳನ್ನೇ ದಾಖಲಿಸುತ್ತಾ ಹೋಗುತ್ತಾಳೆ. ನರಗುಂದದಲ್ಲಿ ನಡೆಯುತ್ತಿದ್ದ ಯುದ್ಧ - ತಂತ್ರ - ಕುತಂತ್ರ ಯಾವುದನ್ನು ಅರಿಯದ ಸಾಮಾನ್ಯ ಮಹಿಳೆಯರು ತಮ್ಮ ಕೌಟುಂಬಿಕ ಪ್ರಪಂಚದಲ್ಲೇ ಕ್ರಿಯಾಶೀಲರಾಗಿದ್ದರು ಎನ್ನುವುದಕ್ಕೆ ಸಾಕ್ಷಿಯಾಗಿ ಗರತಿಯ ಹಾಡಿನ ಸಾಲುಗಳು ಸಾಕ್ಷಿಯಾಗಿ ನಿಲ್ಲುತ್ತದೆ. "ಹಾಲ್ಹಾಕ ಹೊತ್ತಿಗೆ ಹಾಳಾಯ್ತೋ ನರಗುಂದ", ತುಪ್ಪಾಕಾಸೋತ್ತಿಗೆ ಗಪ್ಪಾತ ನರಗುಂದ ....." "ತೊಟ್ಟಿಲ ತೂಗಾತಿದ್ದೆ, ಬಟ್ಟಾಲ ಬೆಳಗಾತಿದ್ದೆ| ಪುತ್ರನಿಗೆ ನೀರಬೆರೆಸಿದ್ದೆ ....." (ಅದೇ, ಪು. ೮೫) ಹೀಗೆ ತಮ್ಮ ಕೌಟುಂಬಿಕ ಕ್ರಿಯೆಯಲ್ಲಿ ತೊಡಗಿದ್ದಾಗ "..... ನರಗುಂದ ಹರಿದ್ಯಾರವರ ಕೈ ಸೆರಿಯೆ ....." "..... ನರಗುಂದ ಮುತ್ತೈದೆಯರು ಅವರ ಕೈ ಸೆರಿಯ" (ಅದೇ, ಪು. ೮೫) ಇಲ್ಲಿಯ ಸಾಲುಗಳು ನರಗುಂದದ ಸ್ತ್ರೀಯರ ಮೇಲಾಗಿದ್ದ ಅತ್ಯಾಚಾರವನ್ನು ಧ್ವನಿಸುತ್ತವೆ. ನಾಯಕರನ್ನುದ್ದೇಶಿಸಿ ಪ್ರಾರಂಭವಾಗುವ ನರಗುಂದದ ಕುರಿತಿರುವ ಗರತಿಯ ಹಾಡುಗಳು ಕೊನೆಕೊನೆಗೆ ನಾಯಕನನ್ನು ಅಪ್ರಧಾನವನ್ನಾಗಿಸಿ ಅತ್ಯಾಚಾರಕ್ಕೊಳಗಾದ ಮಹಿಳೆಯರನ್ನೇ ನಾಯಕಿಯರನ್ನಾಗಿಸುವ ಅವಳ ತಂತ್ರದಲ್ಲಿ ನರಗುಂದದ ಬಾಬಾಸಾಬನಿಗಾದ ಅನ್ಯಾಯಕ್ಕಿಂತ ಸಾಮಾನ್ಯ ಮಹಿಳೆಯರ ಮೇಲಾದ ಅತ್ಯಾಚಾರದ ಅನ್ಯಾಯ ದೊಡ್ಡದು ಎಂದು ಹೇಳುವ ಉದ್ದೇಶವಿದೆ. ಅದಕ್ಕೆಂದೇ ಹೀಗೆ ನೊಂದು ನುಡಿದಿರುವಳು.

> ಹಣ್ಣ ಮೆಣಸಿನಕಾಯಿ ಎಣ್ಣ್ಯಾಗ ಕರದ್ಹಂಗ
> ಅನ್ಯಾಯ್ದು ಊರು ಧಾರವಾಡ| ನರಗುಂದದ
> ಹೆಣ್ಣು ಮಕ್ಕಳ ಗೋಳ ತಟ್ಲವ್ವಾ
> (ಸಂ: ಹೂಗಾರ ಎ.ಎಸ್: ೧೯೭೩; ಪು. ೮೩)

ಹೀಗೆ ಹೇಳುವ ಮೂಲಕವೇ ತನಗೆ Political ಬದುಕಿಗಿಂತ ಕೌಟುಂಬಿಕ ಬದುಕು ಮೇಲು ಎಂದು ಹೇಳಲು ಪ್ರಯತ್ನಿಸಿರುವಳು. ಮೇಲ್ನೋಟಕ್ಕೆ ನರಗುಂದದ ಪತನ ಒಂದು ದುರಂತವಾಗಿ ಕಂಡರೂ ಅಂತರಂಗದಲ್ಲಿ ಗ್ರಾಮೀಣ ಮಹಿಳಾ ಲೋಕದ ಅಪಾರವಾದ ನಷ್ಟವನ್ನು, ಅವಳ ಆಳದ ತಲ್ಲಣ. ಹಿಂಸೆ, ಅವಮಾನ ಮುಂತಾದವುನ್ನೆಲ್ಲ ಸೂಕ್ಷ್ಮವಾಗಿ ಧ್ವನಿಸುತ್ತದೆ. ಹಾಗಾಗಿಯೇ ಒಂದು ನರಗುಂದದ ದುರಂತದ ನೆಪದಲ್ಲೇ ಆಕೆ ತನ್ನ ಮೇಲಾದ ಹಲ್ಲೆ-ನೋವು-ದುಃಖಗಳನ್ನೆಲ್ಲ ಅದರೊಳಗೆ ದಾಖಲಿಸಿಬಿಟ್ಟಿದ್ದಾಳೆ. ಹಾಗೆಯೇ ಧಾರವಾಡ ಎನ್ನುವುದು ಅಧಿಕಾರ ಕೇಂದ್ರಿತವಾದ ಶೋಷಕ ಪ್ರಭುತ್ವವನ್ನೂ ಶೋಷಣೆಯನ್ನೂ ಧ್ವನಿಸುತ್ತಿದ್ದು, ಪ್ರಾದೇಶಿಕವಾದ ನರಗುಂದದಂತಹ ಒಂದು ಪುಟ್ಟ ಹಳ್ಳಿಯ ಬದುಕಿನ ವಿಷಾದವನ್ನು ಧ್ವನಿಸುತ್ತಿದೆ.

೩. ಮಹಿಳಾ ಜನಪದ ಸಾಹಿತ್ಯದಲ್ಲಿ ಸ್ತ್ರೀಕೇಂದ್ರಿತ ಕಥನಗಳು

ಕಿತ್ತೂರಿನ ರಾಜಕೀಯ ಸ್ಥಿತಿಗತಿಗಳು, ಸ್ವಾತಂತ್ರ್ಯಯೋಧರ ಒಳಗಿನ ಕಿಚ್ಚು ಮತ್ತು ಹೋರಾಟದ ಸ್ವರೂಪವೆಲ್ಲವನ್ನೂ ಜನಪದ ಮಹಿಳೆ ಕಂಡುಂಡಂತೆ ತನ್ನ ಬೀಸುಕಲ್ಲಿನ ಹಾಡುಗಳಲ್ಲಿ ಕಡೆದಿರಿಸಿದ್ದಾಳೆ. ಗಂಡನ ಸಾವಿನ ನಂತರ ಮಗ ಶಿವಲಿಂಗರುದ್ರ ಸರ್ಜನನ್ನು ಪಟ್ಟಕ್ಕೆ ಕೂರಿಸಿ ಆಡಳಿತ ನಡೆಸುತ್ತಿದ್ದಾಗ "ಶಿವಲಿಂಗರುದ್ರನಿಗೆ ಸಾವು ಕೂಡಲೇ ಬಂತು| ಜೀವ ಕಸಿವಿಸಿ ಚೆನ್ನವ್ವಗ ....." (ಸಂ. ಸಣ್ಣಕ್ಕಿ ನಿಂಗಣ್ಣ: ೧೯೭೭; ಪು. ೬೦) ಪಟ್ಟಕ್ಕೆ ಕೂರಿಸಲು ಮತ್ತೆ ಮಕ್ಕಳಿಲ್ಲ. ಇದ್ದೊಬ್ಬ ಹೊಟ್ಟೆಯಲ್ಲುಟ್ಟಿದ ಮಗ ಶಿವಬಸಪ್ಪನಿಗೆ ಭೈರವ ಕಂಕಣ ಕಟ್ಟಿಯಾಗಿದೆ. ಇದರ ವೈಶಿಷ್ಟ್ಯವೆಂದರೆ ಭೈರವ ಕಂಕಣ ಕಟ್ಟಿಸಿಕೊಂಡವರು ಅಂಗರಕ್ಷಕರಾಗಿರಬೇಕೇ ವಿನ: ಸಿಂಹಾಸನಕ್ಕೆ ಬರುವ ಅಧಿಕಾರವಿರುವುದಿಲ್ಲ. ಚೆನ್ನಮ್ಮನೇ ಉತ್ತರಾಧಿಯಾಕಾರಿಯಾಗಬೇಕೆಂದರೆ ಸಮಾಜ ಅದಕ್ಕೆ ಅವಕಾಶ ಕಲ್ಪಿಸಿಲ್ಲ. ಅವಳ ಈ ಎಲ್ಲ ಮಾನಸಿಕ ತುಮುಲ ತೊಳಲಾಟವನ್ನು 'ಚೆನ್ನವ್ವಗ ಜೀವ ಕಸಿವಿಸಿ ....." ಎಂಬ ಒಂದೇ ಒಂದು ಸಾಲಿನಲ್ಲಿ ಚಿತ್ರಿಸಿದ್ದಾಳೆ.

ಅಂದಿನ ರಾಜಕೀಯ ಕ್ಲಿಷ್ಟ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳದ ರುದ್ರಮ್ಮ ದತ್ತಕ ವಿಷಯದಲ್ಲಿ ಚೆನ್ನಮ್ಮನೊಂದಿಗೆ ಜಗಳವಾಡಿರಬಹುದು.

"ಮಡದೇರಿಬ್ಬರು ಸಿಡಿದು ಕಡಿದಾಡಿ ಒಡಕುಟ್ಟಿ
ತಡಮಾಡ್ದೆ ದತ್ತಕ ತಗೊಂಡು| ಚೆನ್ನವ್ವ
ಒಡತ್ಯಾಗಿ ನಾಡ ಆಳ್ಯಾಳು
(ಸಂ. ಸಣ್ಣಕ್ಕಿ ನಿಂಗಣ್ಣ: ೧೯೭೭; ಪು. ೬೦)

ಕೌಟುಂಬಿಕ ಕಲಹಗಳ ಮಧ್ಯೆಯೂ ಆಕೆ ತೆಗೆದುಕೊಂಡ ಸಮಯೋಚಿತ ನಿರ್ಣಯ ಗಳು ಅವಳಿಗಿರುವ ರಾಜಕೀಯ ದೂರದೃಷ್ಟಿಗೆ ಸಾಕ್ಷಿಯಾಗಿವೆ. ಆಕೆಗೊದಗಿದ ಕಠಿಣ ರಾಜಕೀಯ ಸ್ಥಿತಿಗತಿಗಳು, ಒಳಗೊಳಗೆ ಗಟ್ಟಿಗೊಳುತ್ತ ನಡೆದ ಕುತಂತ್ರಗಳು, ಬ್ರಿಟೀಷರ ವಿಜಯ ಈ ಎಲ್ಲ ಕಠಿಣ ತ್ರಿಶಂಕು ಪರಿಸ್ಥಿತಿಗಳಲ್ಲಿ "ಹಕ್ಕ್ಯಾಗಿ ಬಾಯ ಬಿಡತಾಳ ...." (ಸಂ. ಸಣ್ಣಕ್ಕಿ ನಿಂಗಣ್ಣ: ೧೯೭೭; ಪು. ೫೭) ಎಂದು ಚೆನ್ನವ್ವನ ಅಸಹಾಯಕತೆಯ ಅನನ್ಯ ಚಿತ್ರಣವನ್ನು ನೀಡಿರುವಳು.

ಸಂಪೂರ್ಣ ನಂಬಿಕೆಯಿಂದ ನಡೆಯಬೇಕಾದ ಯುದ್ಧ ತಯಾರಿಕೆಯಲ್ಲಿ ಧಾರವಾಡದ ವೆಂಕಟರಾವ್, ಗೋವಿಂದ, ಕಲ್ಲೂರ ಮಲ್ಲರಂತಹ ಗುಳ್ಳೆನರಿಗಳು ಸೇರಿಕೊಂಡು ಆಕೆಯ ಯುದ್ಧತಂತ್ರವನ್ನೇ ಮುರಿದು ಹಾಕುತ್ತಾರೆ. "ಕನ್ನೂರ ಮಲ್ಲಗ ತನ್ನ ಬ್ಯಾನಿ ಹತ್ತಲಿ" "ಧಾರ್ವಾಡ ವೆಂಕಾಟಿದಾರೆಳು ಸಿರಕೊಯ್ದು" (ಅದೇ, ಪು. ೬೦-೬೧) ಎಂದು ಅವಳು ಹಾಕಿದ ಸಾಪಳಿಕೆಯಲ್ಲಿ ಅವಳಿಗಿರುವ ಅಗಾಧ ದೇಶಪ್ರೇಮವನ್ನು ಗುರುತಿಸುತ್ತೇವೆ. "ಮುಕ್ಕಣಗತಿಯೆಂದು ಸಿಕ್ಕು ಸೆರೆಯಾಗಿದ್ದು| ಬಿಕ್ಕಿ ....." (ಅದೇ, ಪು. ೫೭) ಅಳುತ್ತಿದ್ದರೂ ಸ್ವಾತಂತ್ರ್ಯದ ಕನಸನ್ನು ಈರವ್ವ, ಚೆನ್ನವ್ವ ಇಬ್ಬರೂ ಭಗ್ನಗೊಳಿಸಿಕೊಂಡಿರಲಿಲ್ಲ. ಅದಕ್ಕೆಂದೇ

ಇವರಿಬ್ಬರೂ ಸಂಗೊಳ್ಳಿ ರಾಯಣ್ಣನನ್ನು ಪ್ರಚೋದಿಸಿ ಆ ಮೂಲಕವೇ ತಮ್ಮ ಸ್ವಾತಂತ್ರ್ಯದ ಕನಸನ್ನು ಚಿಗುರಿಸುತ್ತಾರೆ. ಹೀಗೆ ಎಷ್ಟೋ ದಾಖಲಾಗದ ಹೋರಾಟಗಳ ಒಳಗೆ ಮಹಿಳೆಯರ ಕಿಡಿ ಹಾಗೂ ಅಸಹಾಯಕತೆ ಬೆರೆತು ಹೋಗಿರುವುದನ್ನು ನಾವೀಗ ಶೋಧಿಸಬೇಕಾಗಿದೆ.

೪. ಪುರುಷ ಜನಪದ ಸಾಹಿತ್ಯದಲ್ಲಿ ಸ್ತ್ರೀಕೇಂದ್ರಿತ ಕಥನಗಳು

ಲಾವಣಿ, ಗೀಗಿ, ದುಂದುಮೆ ಮೊದಲಾದ ಯುದ್ಧ ಸಂಬಂಧಿ ಜನಪದ ಗೀತ ಸಾಹಿತ್ಯವನ್ನು ಗಮನಿಸಿದಾಗ ಸಾರ್ವಜನಿಕ ಕ್ಷೇತ್ರದಲ್ಲಿ ಸ್ತ್ರೀ ಸ್ಥಾನವನ್ನು ಹೆಮ್ಮೆಯಿಂದ ಒಪ್ಪಿಕೊಂಡದ್ದು ಕಂಡುಬರುತ್ತದೆ. ಚೆನ್ನಮ್ಮನ ಸಾಹಸ ಜೀವನದ ಕುರಿತು ಅಭಿಮಾನದಿಂದ ಹಾಡಿದ ಅವರ ನೂರಾರು ಹಾಡುಗಳೇ ಇದಕ್ಕೆ ಸಾಕ್ಷಿಯಾಗಿ ನಿಂತಿವೆ. ಸಾರ್ವಜನಿಕ ಕ್ಷೇತ್ರದಲ್ಲಿ ಹೆಣ್ಣೊಬ್ಬಳ ಪ್ರವೇಶವನ್ನೇ ಸಹಿಸದ ಶಿಷ್ಟರು ಹೆಣ್ಣಿನ ರಾಜಕೀಯ ಶಕ್ತಿಸಾಮರ್ಥ್ಯ, ಚಾಣಾಕ್ಷತೆ, ದೂರದೃಷ್ಟಿ ಒಪ್ಪಿಕೊಂಡು ಅವಳನ್ನೇ ಕಥಾನಾಯಕಿಯನ್ನಾಗಿ ಚಿತ್ರಿಸಿದ ಸಾಹಿತ್ಯ ತೀರ ವಿರಳವೆಂದೇ ಹೇಳಬೇಕು.

ಹೆಣ್ಣಿನ ನಡೆ-ನುಡಿ, ಮಾತು-ಕತೆ, ಉಡುಪು-ತೊಡಪು ಹೀಗೆ ಎಲ್ಲ ನಿಟ್ಟಿನಲ್ಲೂ ಅವಳಿಂದ ಒಂದು ನಿರ್ದಿಷ್ಟ ವರ್ತನೆಯನ್ನು ನಿರೀಕ್ಷಿಸುವ ಈ ಸಮಾಜದಲ್ಲಿ ಹೆಣ್ಣೊಬ್ಬಳು ಗಂಡುಡುಗೆಯನ್ನು ತೊಡುವುದು ಹಾಸ್ಯದ ವಸ್ತುವಾಗಬಹುದು. ಆದರೆ, ಆಕೆಯ ಸತ್ತ ಗಂಡ ಮಲ್ಲಸರ್ಜನಿಂದಲೇ ಮಾತನಾಡಿಸಿ ಗಂಡುಡುಗೆಯನ್ನು ತೊಟ್ಟು ದಿಟ್ಟತನ ಮೆರೆಯಬೇಕೆಂದು, ಜನಪದರು ಚಿತ್ರಿಸಿದ ಪ್ರೋತ್ಸಾಹದ ಪ್ರಸಂಗದ ಚಿತ್ರಣ ವಿಶೇಷವಾದದ್ದು, ಅಪರೂಪವಾದದ್ದು.

> “.....
> ನೀ ಇನ್ನ ಗಂಡ ಉಡುಗರ ಉಡಬೇಕು|
> ನೀ ಇನ್ನ ಗುಂಡಿ ಮುಂಡಾಸ ಸುತ್ತಬೇಕು
> ನೀ ಇನ್ನ ಗುಳಗಿ ಚಣ್ಣಾವ ತೊಡಬೇಕು
> ನನ್ನ ಮಡದಿ ನೂರ ಅಲಗ ಕತ್ತಿಕಟ್ಟಬೇಕು
> ನನ್ನ ಮಡದಿ ಮುತ್ತಿನ ಟೊಪ್ಪಿಗಿ ತಲಿಮ್ಯಾಲ
> ನನ್ನ ಕೈಯನ್ನ ಕತ್ತಿಯ ಹಿಡಿಬೇಕು
> ನೀ ಇನ್ನ ರಣಗೂದಲು ಬಿಡಬೇಕು
> ನೀ ಇನ್ನ ಬರಿಗಾಲಿನಿಂದ ಹೋಗಬೇಕು
> ನನ್ನ ಮಡದಿ ಲಡಾಯಿ ಮಾಡಾಕ ಹೋಗಬೇಕು

ಸೋಲು ಖಚಿತ ಎಂದೆನಿಸಿದಾಗ ಹೆಂಡತಿ ಮಕ್ಕಳಿಗೆ ಪಾರಾಗಲು ಹೇಳುವುದು ಇಲ್ಲವೆ ವೈರಿಯ ಕೈವಶವಾಗಬಾರದೆಂದು ಯುದ್ಧಕ್ಕಿಳಿಯುವ ಮುನ್ನವೇ ಸ್ವತಃ ಅವರೇ ಹೆಂಡಂದಿರ ರುಂಡವನ್ನು ಕತ್ತರಿಸುವ ಚಿತ್ರಣ ಶಿಷ್ಟ ಮತ್ತು ಜನಪದ ಸಾಹಿತ್ಯಗಳೆರಡರಲ್ಲೂ ಸಾಮಾನ್ಯ.

ಅಪರೂಪವಾಗಿರುವ ಮೇಲಿನ ಚಿತ್ರಣ ನನ್ನ ಮಟ್ಟಿಗೆ ಗಮನಾರ್ಹ ದಾಖಲೆಯೆನಿಸಿವೆ. ನೆಲದ ಸ್ವಾತಂತ್ರ್ಯಕ್ಕೆ ಗಂಡುಹೆಣ್ಣುಗಳಿಬ್ಬರ ಸಮಭಾಗಿತ್ವದ ಅಗತ್ಯತೆಯನ್ನು ಕಂಡುಕೊಂಡ ಝಳಕು ಈ ಹಾಡಿನಲ್ಲಿದೆ.

ಚೆನ್ನಮ್ಮನ ರಾಜತಾಂತ್ರಿಕ ನಿಪುಣತೆಯನ್ನು ವೀರತ್ವವನ್ನು ಒಪ್ಪದ ಕೆಲವು ಪೂರ್ವಗ್ರಹಿತ ಪುರುಷವಾದಿಗಳು ಚೆನ್ನವ್ವ ಸಾಮಾನ್ಯ ಹೆಣ್ಣು ಎನ್ನುವುದನ್ನೇ ಸಮರ್ಥಿಸುತ್ತಾರೆ. ಡಾ. ಎಸ್. ಶೆಟ್ಟರ ಚೆನ್ನವ್ವನನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. "ಜೀವನದ ಬಹುಭಾಗವನ್ನು ಅಂತಃಪುರದಲ್ಲಿ ಕಳೆದವಳು. ವಿಧವೆಯಾದ ಇವಳು ಲೌಕಿಕ ವಿಷಯಗಳಿಗೆ ಹೆಚ್ಚು ಆಸಕ್ತಿ ಕೊಡದೆ ಪೂಜೆ-ಪುನಸ್ಕಾರ, ಧ್ಯಾನ, ಶಿವಸ್ತುತಿ, ಕೀರ್ತನೆಯಲ್ಲಿ ಆಸಕ್ತಳಾಗಿರಲು ಸಾಧ್ಯ. ಕಾಕ್ತಿ ದೇಸಾಯಿಯವರ ಮನೆತನದಲ್ಲಿ ಜನಿಸಿದ ಇವಳು ರಕ್ತದಲ್ಲಿ ಸಂಸ್ಥಾನಿಕ ಮನೆತನದವರಿಗಿರಬೇಕಾದ ಗಾಂಭಿರ್ಯ, ಸೌಜನ್ಯ, ನಿಷ್ಠಾವಂತಿಕೆ ಮಾತ್ರವಲ್ಲದೆ, ಸಾಮಾಜಿಕ ಹಾಗೂ ರಾಜಕೀಯ ಪ್ರಜ್ಞೆಯು ರಕ್ತಗತವಾಗಿ ಬಂದಿರಲು ಸಾಧ್ಯ. ಆದರೆ ರಾಜತಂತ್ರದಲ್ಲಿ ಅನುಭವವಾಗಲಿ, ಅದರ ಅಭ್ಯಾಸದ ಅನುಕೂಲತೆಯಾಗಲಿ ಅಂತಃಪುರದ ನಾಲ್ಕು ಗೋಡೆಗಳಲ್ಲಿ ಕಾಲಕಳೆದ ಈ ಮಹಾಮಾತೆಗೆ ದೊರೆತುದರ ಬಗ್ಗೆ ನಮಗೆ ಆಧಾರವಿಲ್ಲ. ಅಶ್ವಾರೂಢಳಾಗಿ, ಖಡ್ಗಧಾರಿಣಿಯಾಗಿ ಯುದ್ಧ ಕೌಶಲ್ಯವನ್ನು, ನಾಯಕತ್ವವನ್ನು ಅವಳು ಪ್ರದರ್ಶಿಸಿದಳೆಂದು ಅನೇಕ ಹಾಡುಗಳಿಂದ, ಲಾವಣಿಗಳಿಂದ ತಿಳಿಯುವೆವು ..... ಶಾಂತಿ ಮಾರ್ಗದಿಂದ ಸಂಸ್ಥಾನವನ್ನು ಉಳಿಸಿಕೊಳ್ಳಲು ಸತತವೂ ಪ್ರಯತ್ನಿಸಿದ ಚೆನ್ನಮ್ಮನ ಘನ ವ್ಯಕ್ತಿತ್ವಕ್ಕೆ 'ರುಂಡ ಚಂಡಾಡಿದ ಚಾಮುಂಡಿ'ಯ ಉಪಮೆ ನೈಜವಾದುದಲ್ಲವೆಂದರೆ ತಪ್ಪಾಗದು" (ಶೆಟ್ಟರ್ ಎಸ್: ೧೯೭೬; ಪು. ೧೩೨-೧೩೪). ಎಸ್.ಶೆಟ್ಟರ ಅವರು ಕೆಲವು ಪೂರ್ವಗ್ರಹಿತ ಪುರುಷ ಮಾನದಂಡಗಳೊಂದಿಗೆ ಚೆನ್ನಮ್ಮನನ್ನು ವ್ಯಾಖ್ಯಾನಿಸಿ ಹೊರಟಿದ್ದೇ ಒಂದು ವಿಪರ್ಯಾಸ. ಇವರು ಹೇಳುವಂತೆ ಚೆನ್ನಮ್ಮ ಸಾಮಾನ್ಯ ಹೆಣ್ಣಾಗಿದ್ದರೆ ಡಿಸೆಂಬರ್ ಒರಂದು ನಡೆದ ಎರಡನೆಯ ಬಾರಿಯ ದಾಳಿಗೆ ತಯಾರಿಯನ್ನು ಸೂರ್ಯ ಮುಳಗದ ಸಾಮ್ರಾಜ್ಯ ಎಂದು ಹೆಸರು ಪಡೆದ ಬ್ರಿಟೀಷರು ನವೆಂಬರ್ ಐದರಿಂದಲೇ ಪ್ರಾರಂಭಿಸುತ್ತಿದ್ದಿಲ್ಲ. ಅವರ ಪ್ರಮುಖ ಸೈನಿಕ - ಘಟಕಗಳು ಬೆಳಗಾವಿ ಧಾರವಾಡ ಮತ್ತು ಮಲಪ್ರಭೆಯ ದಡದ ಭಾಗದಲ್ಲಿ ತಂಗುತ್ತಿರಲಿಲ್ಲ. ಬಳ್ಳಾರಿ, ಹರಿಹರ, ಬೆಂಗಳೂರು, ಸೊಲ್ಲಾಪುರ, ಆರ್ಕಾಟು ಗೂಳಿ, ಜಲ್ನಾ ಮೊದಲಾದ ಸ್ಥಳಗಳಲ್ಲಿ ಸುಸಜ್ಜಿತವಾಗಿ ಕಾಯ್ದಿಟ್ಟ ಸೈನ್ಯವು ಬ್ರಿಟೀಷರ ಆಜ್ಞೆಗಾಗಿ ಕಾಯಬೇಕಾಗಿರಲಿಲ್ಲ. ಬಲಾಢ್ಯ ಮತ್ತು ಆಧುನಿಕ ಸೇನಾದಳವನ್ನು ಹೊಂದಿದ ಬ್ರಿಟೀಷರು ಡಿಸೆಂಬರ್ ಮೂರರಿಂದ ನಾಲ್ಕರ ಸಂಜೆ ಐದು ಗಂಟೆಯವರೆಗೆ ಅಂದರೆ ಸುಮಾರು ಮೂವತ್ತು ತಾಸುಗಳವರೆಗೆ ಚೆನ್ನಮ್ಮನ ಚಿಕ್ಕ ಕೋಟೆಯನ್ನು ಒಡೆದು ಒಳನುಗ್ಗಲು ಹೋರಾಡಬೇಕಾಯಿತು. ಕಿತ್ತೂರಿನಲ್ಲಿ ನಡೆದ ರಾಜಕೀಯ ಘಟನೆಗಳ ದಾಖಲೆಗಳ ವಿಷಯದಲ್ಲಿ ಶಿಷ್ಟ ಸಾಹಿತ್ಯಕ್ಕಿಂತಲೂ ಜನಪದ ಸಾಹಿತ್ಯವೇ ಹೆಚ್ಚು ವಸ್ತುನಿಷ್ಠವಾಗಿದೆ.

ವೀರ ಮರಣವನ್ನಪ್ಪಿದ ಚೆನ್ನಮ್ಮ ಶತಮಾನಗಳ ನಂತರ ಹೆಣ್ಣೆಂಬ ಕಾರಣಕ್ಕಾಗಿಯೇ ಆಕೆಯ ಶಕ್ತಿಸಾಮರ್ಥ್ಯದ ಕುರಿತು ಶಂಕಿತಳಾಗಿ ಚರ್ಚಿತಳಾಗುತ್ತಿದ್ದಾಳೆಂದರೆ ಅವಳ ಬದುಕಿನ ಸಂದರ್ಭದಲ್ಲಿ ಅದೆಷ್ಟು ವೇಳೆಯಲ್ಲಿ ಹೆಣ್ಣೆಂದು ಉಪೇಕ್ಷೆಗೊಳಗಾಗಿದ್ದಾಳೋ ತಿಳಿಯದು. ಅವಳು ಉಪೇಕ್ಷೆಗೊಂಡ ಸಂದರ್ಭಗಳನ್ನು ಹರದೇಶಿ ನಾಗೇಶಿ ಹಾಡು ಹೀಗೆ ದಾಖಲಿಸಿದೆ.

ಉಗ್ರ ಕೋಪಿನಿಂದ ಥ್ಯಾಕರೆ ಲಬ್ಡವಾಗಿ ಹಲ್ಲಕಡದ
ನಲ್ಲಿಯರಿಗ್ಯಾಕ ಇಷ್ಟ ಧಿಮಾಕ
ಥ್ಯಾಕರೆಯವಂದಾತು ದುರ್ಮಾರಣಾ
ಕೇಳಿ ಬ್ರಿಟೀಷರದ ಹಾರೀತ ಹಲ್ಲಣಾ
ಹೇಡಿ ಹೆಣ್ಣಿನ ಕೈಯಲ್ಲಿ ಹೆಂಗೆ ಕೊಟ್ಟೋ ಪ್ರಾಣಾ
(ಸಂ. ಹೆಂಡಿ ಬಿ.ಬಿ: ೧೯೮೩; ಪು. ೩೦೫-೩೦೬)

ಬ್ರಿಟೀಷರು ಚೆನ್ನಮ್ಮನಿಂದಾದ ಅಪಜಯವನ್ನು ಅವಮಾನವನ್ನಾಗಿ ಸ್ವೀಕರಿಸಿದ್ದಾರೆ ವಿನಃ ಸೋಲೆಂದಲ್ಲ. ಹೀಗಾಗಿಯೇ ಎರಡನೆಯ ಬಾರಿ ದಾಳಿಗೆ ಪೂರ್ಣಪ್ರಮಾಣದ ಪೂರ್ವ ತಯಾರಿಯನ್ನು ಮಾಡಿಕೊಂಡು ಅವಳನ್ನು ಸೋಲಿಸುವ ಪ್ರಯತ್ನದಲ್ಲಿ ಪುರುಷತ್ವದ ಪ್ರತಿಷ್ಠೆಯನ್ನು ಪ್ರತಿಷ್ಠಾಪಿಸುವ ಹಠ ಎದ್ದು ಕಾಣುತ್ತದೆ. ಕಿತ್ತೂರು ಸಂಸ್ಥಾನವನ್ನು ಆಕ್ರಮಿಸಿಕೊಳ್ಳಬೇಕೆನ್ನುವ ಬ್ರಿಟೀಷ್ ಉದ್ದೇಶ ತೋರಿಕೆಯ ನೆಪಮಾತ್ರ. ಭಾರತೀಯ ರಾಜಕೀಯ ಸಂದರ್ಭದಲ್ಲಿ ಹೆಣ್ಣು ಗಂಡಿಗೆದುರಾಗಿ ಯಶಸ್ವಿ ಯುದ್ಧ ನಡೆಸಿದಾಗಲೆಲ್ಲಾ ಅವರಿಗೆ ಪುರುಷತ್ವದ ಪ್ರತಿಷ್ಠೆ ಕಾಡಿ, ಮತ್ತೆ ಮತ್ತೆ ಅವಳ ಮೇಲೆ ದಾಳಿ ಮಾಡಿ ಸೋಲಿಸಲು ಪ್ರಯತ್ನ ಮಾಡಿದ ಉದಾಹರಣೆಗಳು ಸಾಕಷ್ಟು ಸಿಗುತ್ತವೆ.

ಶೌರ್ಯ ಪರಂಪರೆಯನ್ನು ಹೊಂದಿದ ದೇಸಾಯಿ ಮನೆತನಕ್ಕೆ ಸೇರಿದ ಚೆನ್ನವ್ವ - ರುದ್ರವ್ವ ಇವರಿಬ್ಬರ ಸ್ವಭಾವ ಭಿನ್ನವಾದವುಗಳು. ರುದ್ರವ್ವನದು ಶಾಂತಸ್ವಭಾವವಾದರೆ ಚೆನ್ನವ್ವನದು ಶೌರ್ಯ ಸ್ವಭಾವ. ಕುದುರೆಸವಾರಿ, ಕತ್ತಿವರಸೆ ಮುಂತಾದವುಗಳಲ್ಲಿ ತರಬೇತಿ ಪಡೆದ ಅವಳು ಖಂಡಿತವಾಗಿಯೂ ಅವುಗಳಲ್ಲೆಲ್ಲ ಪಳಗಿದ್ದಳು. ರಾಜಕಾರಣದಲ್ಲಿ ನುರಿತಿದ್ದಳು. ಆ ಒಂದು ಪೂರ್ವಭಾವಿ ಗಟ್ಟಿ ಭೂಮಿಕೆಯಿದ್ದುದರಿಂದಲೇ ಗಂಡನ ಮರಣದ ನಂತರ ಮಗ ಶಿವಲಿಂಗಸರ್ಜನನ್ನು ಪಟ್ಟಕ್ಕೆ ಕೂರಿಸಿ ಪರೋಕ್ಷವಾಗಿ ರಾಜ್ಯಾಡಳಿತ ನಡೆಸುತ್ತಾಳೆ. ಚೆನ್ನವ್ವ, ಮಗನ ಮರಣದ ನಂತರ ನೇರವಾಗಿ ರಾಜಕೀಯ ರಂಗದಲ್ಲಿ ಧುಮುಕುತ್ತಾಳೆ. ಅದಕ್ಕೆಂದೇ ಜನಪದರು, ಪ್ರಾಜ್ವಲ್ಯ ಮಾನವಾದ ಅವಳ ವ್ಯಕ್ತಿತ್ವಕ್ಕೆ ನಮಿಸಿ "ಸ್ವಾಭಿಮಾನ ಸ್ವಾತಂತ್ರ ಬೀಜ | ಬಿತ್ತಿದಳು ಜನರ ಮನದಿ | ಶೋಭಿಸಿದಳು ಪ್ರಾಜ್ವಲ್ಯಳಾಗಿ | ಭಾರತ ಚರಿತ್ರ ನಭದಿ" ಎಂದು ರಾಷ್ಟ್ರೀಯ ಮಟ್ಟದ ಇತಿಹಾಸದಲ್ಲಿ ಪ್ರಮುಖ ಸ್ಥಾನ ನೀಡಿರುವರು.

೧೮೫೭ ಸಿಪಾಯಿ ದಂಗೆಯ ಪ್ರಭಾವದ ಫಲಿತಾಂಶದಿಂದಾಗಿ ಬ್ರಿಟೀಷರು ನಿಶಸ್ತ್ರೀಕರಣ ಕಾಯ್ದೆಯನ್ನು ಜಾರಿಯಲ್ಲಿ ತಂದರು. ತಕ್ಷಣ ತಮ್ಮ-ತಮ್ಮಲ್ಲಿದ್ದ ಆಯುಧಗಳನ್ನೆಲ್ಲಾ

ತಂದೊಪ್ಪಿಸಬೇಕೆಂಬ ಬ್ರಿಟೀಷರ ಕಾಯ್ದೆಯ ಒತ್ತಡ ಶೂರ ಸಿಪಾಯಿಗಳಲ್ಲಿ ಆತ್ಮಗೌರವ ಪ್ರಜ್ಞೆಯನ್ನು ಎಚ್ಚರಿಸಿತು. ಇದಕ್ಕೆ ಬಲವಾಗಿ ಪ್ರತಿಕ್ರಿಯಿಸಿದವರೆಂದರೆ ಮುಧೋಳ ಸಂಸ್ಥಾನಕ್ಕೆ ಸೇರಿದ ಹಲಗಲಿ ಬೇಡರು. ಈ ಕಥನ ಗೀತೆ "ಪೂಜೇರಿ ಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು" ಎಂದು ಕಥಾನಾಯಕರನ್ನು ಪರಿಚಯಿಸುತ್ತಲೇ ಪ್ರಾರಂಭವಾಗುತ್ತದೆ. ಯುದ್ಧ ನಡೆದ ಹಂತದ ಚಿತ್ರಣದಲ್ಲಿ ರಾಮಿಯ ವೀರತನ ಎರಡೇ ಎರಡು ಸಾಲುಗಳಲ್ಲಿ ನಿರೂಪಣೆ ಪಡೆದಿದ್ದರೂ ಆ ಎರಡು ಪಂಕ್ತಿಗಳೇ ಅವಳ ಇಡೀ ಸಾಹಸ ಜೀವನದ ವ್ಯಕ್ತಿತ್ವದ ದಾಖಲಾತಿಯಾಗಿ ನಿಲ್ಲುತ್ತವೆ.

ರಾಮಿ ಗುಂಡಿಲಿ ಜೊರ ಮಾಡಿ ಹೊಡೆದಳೊ ಮೂರ ಮಂದಿ ಶಿರಕ
ಆರ ಕುದುರಿಯ ಕಡದ ಸಿಡಿದಳೊ ಸೂರಾಯಕ
(ಫ್ಲೀಟರ್ ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು: ೧೯೭೨; ಪು.೧೪)

ಇವಳು ಯಾವ ಸಂಸ್ಥಾನಿಕ ಮಗಳು ಇಲ್ಲವೆ ಸೊಸೆಯಾಗಿರಲಿಲ್ಲ. ಸಾಮಾನ್ಯ ಜೀವನದಿಂದ ರೂಪುಗೊಂಡ ರಾಮಿ ಮತ್ತು ಅವಳ ಹೋರಾಟ ಒಟ್ಟು ಸ್ತ್ರೀಶಕ್ತಿ - ಸಮಾರ್ಥ್ಯದ ಸಂಕೇತವಾಗಿದೆ. ಈರವ್ವ - ಚೆನ್ನವ್ವರಿಗಿಂತ ರಾಮಿಯ ಹೋರಾಟದ ಸ್ವರೂಪ ಭಿನ್ನವಾಗಿದೆ. ರಾಮಿ ಮಾಡಿದ ಸ್ವಾತಂತ್ರ್ಯ ಹೋರಾಟಕ್ಕೆ ಪೂರ್ವಭಾವಿಯಾದ ಯಾವ ತರಬೇತಿಯೂ ಸಿಕ್ಕಿರಲಿಲ್ಲ. ಸಂಸ್ಥೆ ಪ್ರಜೆಗಳನ್ನು ಕಾಯುವ ರಾಜಕೀಯ ಒತ್ತಡ ಅವಳನ್ನು ಯುದ್ಧಕ್ಕಿಳಿಸಲಿಲ್ಲ. ಅವಳಿಗಿದ್ದ ಒತ್ತಡ - ಒತ್ತಾಸೆ ಕುಲಪರಂಪರೆಯಿಂದ ಬಂದ, ಬದುಕಿನ ಭಾಗವಾದ ಆಯುಧಗಳನ್ನು ಬೇರೆ ಯಾರೋ ತನ್ನ ಮೇಲೆ ಹೇರಿದ್ದ ಕಾಯ್ದೆಯ ಕಾರಣವಾಗಿ ಹಿಂತಿರುಗಿಸುವುದು. ಅದಕ್ಕಾಗಿಯೇ ಅವಳು ತನ್ನಲ್ಲಿದ್ದ ಸಹಜ ಶೌರ್ಯವನ್ನು ಸಲೀಸಾಗಿ ಪ್ರದರ್ಶಿಸಿದಳು. ಕೆಳವರ್ಗದ ಗಟ್ಟಿರಾಮಿಯ ಯುದ್ಧ ವಿಶಿಷ್ಟವಾದುದಾಗಿದೆ. ಉತ್ತರ ಬಂಗಾಳದ ಆದಿವಾಸಿ ಮಹಿಳೆಯರು ಬ್ರಿಟೀಷರ ವಿರುದ್ಧ ಹೋರಾಡಲು ಅಸ್ತ್ರ ಬಹಿನಿ, ಪೊರಕೆ ಬಹಿನಿ, ಒನಕೆ ಬಹಿನಿ, ನಾರಿರಕ್ಷೆ ಬಹಿನಿ, ಪ್ರತಿರೋಧ ಬಹಿನಿ ಮೊದಲಾದ ಬಹಿನಿ (ಸ್ತ್ರೀ ಸೈನ್ಯ)ಗಳನ್ನು ಕಟ್ಟಿಕೊಂಡದ್ದು ಐತಿಹಾಸಿಕ ಮಹತ್ವದ ಸಂಗತಿಯಾಗಿದೆ. ಇವೆಲ್ಲವುಗಳೂ ಸ್ತ್ರೀ ಸಬಲತ್ವವನ್ನು ಎತ್ತಿ ಹಿಡಿಯುತ್ತವೆ.

ಹಲವಾರು ಲಾವಣಿಗಳಲ್ಲಿ ದಾಖಲಾಗಿರುವಂತೆ ನರಗುಂದದ ಬಾಬಾಸಾಬನ ಸ್ವಾತಂತ್ರ್ಯ ಯುದ್ಧಕ್ಕೆ ಪ್ರೇರಣೆ, ಪೋಷಣೆ, ಚೇತನವನ್ನೊದಗಿಸಿದವರು ಅವನ ವೀರಮಾತೆ ಯಮುನಾಬಾಯಿ ಮತ್ತು ವೀರಪತ್ನಿ ಸಾವಿತ್ರಿಬಾಯಿ. ಬಾಬಾಸಾಬನ ಜೀವಿತಾವಧಿಯಲ್ಲಿ ಅವನ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತ ಇವರು ಆತನು ವೀರಸ್ವರ್ಗ ಪಡೆದ ನಂತರ ಶತ್ರುಗಳ ಕೈಯಲ್ಲಿ ಸಿಕ್ಕು ಸ್ವಾತಂತ್ರ್ಯ ಕಳೆದುಕೊಂಡು ಅವಮಾನದ ಜೀವನ ಸಾಗಿಸುವುದಕ್ಕಿಂತ ಸಾವೇ ಮೇಲೆಂದು ತೀರ್ಮಾನಿಸಿ, ಮಲಪ್ರಭಾ ನದಿಯಲ್ಲಿ ಹಾರಿ ವೀರಮರಣವನ್ನಪ್ಪುತ್ತಾರೆ. ನನ್ನರ್ಥದಲ್ಲಿ, ತೆರೆಯ ಮರೆಯಲ್ಲಿದ್ದುಕೊಂಡೆ ಯುದ್ಧದ ಪ್ರಾರಂಭದಿಂದ ಹಿಡಿದು ಕೊನೆಯವರೆಗೆ ಬಾಬಾಸಾಬನ ಜೊತೆ - ಜೊತೆಯಲ್ಲಿ ಹೋರಾಡಿದ್ದಾರೆ. ಬ್ರಿಟೀಷರೊಂದಿಗೆ

ಇವರಿಬ್ಬರೂ ಅದೃಶ್ಯರಾಗಿದ್ದುಕೊಂಡೇ ಮಾಡಿದ ಯುದ್ಧವನ್ನು ಕಡೆಗಣಿಸುವಂತಿಲ್ಲ. ಕತ್ತಿ-ಗುಂಡು-ಮದ್ದುಗಳ ಬೆಂಬಲದಿಂದ ರಣರಂಗದಲ್ಲಿ ಮಾಡುವ ಹೋರಾಟವೇ ಯುದ್ಧವಾಗುವುದಿಲ್ಲ. ಯುದ್ಧದ ಅರ್ಥ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಬೇಕಾಗಿದೆ. ಯಮುನಾಬಾಯಿ, ಸಾವಿತ್ರಿಬಾಯಿಯರ ಈ ಹೋರಾಟವನ್ನು 'ಖಾಸಗಿ'ಯಾಗಿ ಪರಗಣಿಸದೇ 'ಸಾರ್ವಜನಿಕ'ವಾಗಿ ಪರಿಗಣಿಸಿದಾಗ ಮಾತ್ರ ಇತಿಹಾಸಕ್ಕೆ ನ್ಯಾಯವೊದಗಿಸಿದಂತಾಗುತ್ತದೆ.

ಚಂಡಿಯೋ ಚೌಡಿಯೋ ಮಾರಿಯೋ ಮಸಣಿಯೋ
ಖಂಡಿತ ಮಾನವಳಿವಳಲ್ಲ
ಗಂಡುಗಲಿಗಳ ಮೀರಿ ರುಂಡವತರಿವಳು
ಮಾಯೆ ಮಾಯಿಯಲ್ಲದೆ ಬ್ಯಾರಲ್ಲ
ಪುಂಡ ರಕ್ಕಸರ ಹಿಂಡು ಮುರಿವ ಚಾಮುಂಡಿಯೇ
ಈಕೆಯು ಸುಳ್ಳಲ್ಲ

ಈ ಗೀತೆಯ ವರ್ಣನೆಯನ್ನು ಎತ್ತಿ ಹಿಡಿದು ಡಾ.ಸೋಮಶೇಖರ ಇಮ್ರಾಪುರ, ವ್ಹಿ.ಜಿ.ಮಾರಿಹಾಳ ಮೊದಲಾದ ವಿದ್ವಾಂಸರು ವ್ಯಾಖ್ಯಾನ ನೀಡಿರುವರು. ನನಗೇನೋ ಈ ವರ್ಣನೆ - ವಿವರಣೆಗಳು ಹೇಳಿದಷ್ಟು ಸರಳವಾಗಿಲ್ಲವೆನಿಸುತ್ತದೆ. ಜೀವಶಾಸ್ತ್ರೀಯ ನೆಲೆಯಲ್ಲಿ ಸ್ತ್ರೀತ್ವದ ಕಲ್ಪನೆ ಮತ್ತು ಸಮಾಜ ಕಲ್ಪಿತ ಸ್ತ್ರೀ ವೈಶಿಷ್ಟ್ಯಗಳನ್ನು ಆರೋಪಿಸಿಯೇ ಚೆನ್ನಮ್ಮನನ್ನು ನೋಡಲಾಗಿದೆ. ಪುರುಷರ ತೋಳ್ಬಲಕ್ಕೆ ಸರಿಸಮಾನವಾಗಿ ಎಂದೂ ನಿಲ್ಲಲಾರಳು ಎಂಬ ಅವರ ಈ ಗ್ರಹಿಕೆಗೆ ವಿರುದ್ಧವಾಗಿ ಸ್ತ್ರೀಶಕ್ತಿ ಸಾಮರ್ಥ್ಯಗಳು ಪ್ರಕಟಗೊಂಡಾಗ ಅಸಾಮಾನ್ಯ ಎನಿಸಿದೆ. ಪುರುಷಶಕ್ತಿ ಸಾಮರ್ಥ್ಯವನ್ನು ಅಸಾಮಾನ್ಯವಾಗಿ ಕಂಡಿಲ್ಲ. ಅವರ ಶಕ್ತಿ ಸಾಮರ್ಥ್ಯಗಳನ್ನು ದೈವಿಶಕ್ತಿಗಳಿಗೆ ಹೋಲಿಸಿಲ್ಲ. ಬದಲಾಗಿ ಅದು ಅವರ ಪೌರುಷವನ್ನು ಬಲಪಡಿಸುವ ಸಂಕೇತವಾಗಿ ನಿಲ್ಲುತ್ತದೆ.

ನೊರನೊರನೆ ಹಲ್ಲನೆ ಕಡಿದು
ಮಿರು ಮಿರನೆ ಕಣ್ಣನೆಬಿಟ್ಟು
ತೊಡೆ ತಟ್ಟಿ ಕ್ಯಾಕೆ ಹೊಡೆದು
ದೊಗ್ಗಲ ಮಂಡಿ ಊರಿ
ಧೀನ್ ಧೀನ್ ಅಂದ ಸ್ವಾಮಿ

ಗದರಿಸಿ ಪಟಕ್ಕನೆ ಕ್ಯಾಕ ಹೊಡೆದ ಮಾತ್ರವೇ ಮುಗಿಲಾಗಲ ನಕ್ಷತ್ರವೆಲ್ಲ ಘಟಘಟನೆ ಸುರಿದಂಗೆ ಆಯ್ತು, ಗಂಗಳ ಚೆಂಬೆಲ್ಲ ದಡಗುಟ್ಟುಕೊಂಡು ನಡುಗಿದಂಗಾಯ್ತು.

ಎರಡು ಕಣ್ಣೆತ್ತಿ ನೋಡಿ
ಎರಡು ಕಿವಿಗೊಟ್ಟು ನೋಡಿ
ಹುರಿ ಮೀಸೆಯ ತಿರುವಿ
(ಸಂ. ಪರಮಶಿವಯ್ಯ ಜೀ.ಶಂ: ೧೯೭೩; ಪು. ೪-೭)

ಪುರುಷನಿಗೆ ಪೌರುಷತ್ವ ರಕ್ತಗತವಾಗಿರುತ್ತದೆ ಎಂದು ಸಮರ್ಥಿಸುವ ಧ್ವನಿಯೇ ಪ್ರಧಾನವಾಗಿ ನಿಲ್ಲುತ್ತದೆ. ಸ್ತ್ರೀ ಶಕ್ತಿಯನ್ನು ಅಲೌಕಿಕ ಶಕ್ತಿಗಳಿಗೆ ಹೋಲಿಸುವ ತಂತ್ರದಲ್ಲಿ ಅವಳ ಶಕ್ತಿ ಸಾಮರ್ಥ್ಯವನ್ನು ಅಸಹಜ ಮಾಡುವ ಮೂಲಕವೇ ಅಲ್ಲಗಳೆದಿದ್ದಾರೆ. ಇವಳಿಗೆ ಆರೋಪಿಸಿರುವ ಶಕ್ತಿ ಸಹಜವಾಗಿರುವ ಸಾಧ್ಯತೆ ಇದೆ. ಮಹಿಳೆ ಹೀಗೆ ಎಂದು ನಿರೂಪಿಸಿದುದು ಆರೋಪವಾಗಬಹುದಾದ ಸಾಧ್ಯತೆಯಿದೆ. ಜೀವಶಕ್ತಿಯ ನಿರಾಕರಣೆಯ ಬದಲು ಹೆಣ್ಣಿನ ಕ್ರಿಯಾಶೀಲ ಜೀವಂತ ಚೈತನ್ಯವನ್ನು ನೋಡುವ ಪರಂಪರೆಯನ್ನು ರೂಪಿಸಿ ಬೆಳೆಯಿಸಿಕೊಳ್ಳಬೇಕಾಗಿದೆ.

ಸರ್ಜಾನಾಯ್ಕನ ಕಥೆಯಲ್ಲಿ, ಸ್ತ್ರೀಯೇ ಅವನನ್ನು ಬ್ರಿಟೀಷರಿಗೆ ಹಿಡಿದುಕೊಡುತ್ತಾಳೆ. ದೊಡ್ಡ ವ್ಯವಸ್ಥೆಯ ವಿರುದ್ಧ ಹೋರಾಡುವ ನಾಯಕರನ್ನು ಸ್ತ್ರೀಯರು ಹಿಡಿದುಕೊಡುವ ಅನೇಕ ಆಶಯಗಳ ಹಿಂದೆ ಯಾವ ಉದ್ದೇಶವಡಗಿದೆ? ಅಥವಾ, ಸ್ತ್ರೀಯರು ಯುದ್ಧ ವಿರೋಧಿಗಳೇ? ದುಷ್ಟತನ, ಚಂಚಲತೆ, ಮೋಸ, ಕ್ರೌರ್ಯಗಳಿಗೆ ಹೆಣ್ಣನ್ನೇ ಯಾಕೆ ಸಂಕೇತವಾಗಿ ಕಟ್ಟಿಕೊಡುವರು? ನಿಜಕ್ಕೂ ಹೆಣ್ಣುಗಳಲ್ಲಿ ಮಾತ್ರ, ದುಷ್ಟತನ, ಚಂಚಲತೆ, ಮೋಸ, ಕ್ರೌರ್ಯಗಳಿವೆಯೇ? ಗಂಡಿನಲ್ಲಿಲ್ಲವೇ? ಸಮೀಕರಿಸಿ ಮಾನವನ ಒಟ್ಟು ದೌರ್ಬಲ್ಯಗಳೆಂದು ಹೇಳದೇ, ಅವು ಹೆಣ್ಣಿನ ದೌರ್ಬಲ್ಯಗಳೆಂದೇ ಸಾಧಿಸುವ ಹಠದ ಹಿಂದೆ ಯಾವ ಉದ್ದೇಶವಡಗಿದೆ? ಇವುಗಳ ವಿಶ್ಲೇಷಣೆ ಅತ್ಯಗತ್ಯ. ಶಿಷ್ಟರಂತೆ ಜನಪದ ಸಾಹಿತ್ಯದಲ್ಲೂ ಕಥಾನಾಯಕನ ಮಹಾನ್ ಸಾಧನೆಗೆ ಸ್ತ್ರೀ ಅಡ್ಡಗಾಲಾಗಿರುತ್ತಾಳೆಂದು ಹೇಳಿರುವುದು ಸ್ಪಷ್ಟವಾಗುತ್ತದೆ. ಇಂತಹ ಚಿತ್ರಣ ಸರ್ವಸಾಮಾನ್ಯ. ಹೆಣ್ಣಿನ ಸಲಹೆಯಂತೆ ಮುನ್ನಡೆದು ವಿಜಯಿಗಳಾಗುವಂತೆಯೇ, ಅವಳ ಮೇಲೆ ಅತಿಯಾದ ಮೋಹ ನಂಬಿಕೆಯನ್ನಿಟ್ಟು, ರಹಸ್ಯವನ್ನು ಬಿಟ್ಟುಕೊಟ್ಟು ನಾಶವಾಗುವ ಚಿತ್ರಣಗಳು ಅಷ್ಟೇ ಹೇರಳವಾಗಿವೆ. ಸೂಳೆ ನಿಂಗಿಯ ಪಾತ್ರ ಚಿತ್ರಣ ಈ ಹಿನ್ನೆಲೆಯಲ್ಲಿಯೇ ಜನ್ಮ ಪಡೆದುಕೊಂಡಿರಬಾರದೇಕೆ? ಕಾರಣ ಈ ಪಾತ್ರಕ್ಕೆ ಗಟ್ಟಿಯಾದ ತಳಪಾಯವಿಲ್ಲ, ಹಿನ್ನೆಲೆಯಿಲ್ಲ. ಹೆಣ್ಣಿನ ವ್ಯಾಮೋಹ ಕೆಟ್ಟದ್ದು, ನಂಬಿಕೆಗೆ ಅನರ್ಹಳು ದುರಾಶೆಯುಳ್ಳವಳು ಎಂಬುದನ್ನು ಸಮರ್ಥಿಸುವುದಕ್ಕಾಗಿಯೇ ಈ ಪಾತ್ರ ಮಧ್ಯ ಉದ್ಭವವಾದಂತೆ ತೋರುತ್ತದೆ. ಧಾರ್ಮಿಕ ಪುರುಷರಿಗೆ ತಮ್ಮ ಮೋಕ್ಷ ಸಾಧನೆಗೆ ಹೆಣ್ಣು ಅಡ್ಡಿಯಾಗಿ ಕಂಡಂತೆ ರಾಜಕೀಯ ಸ್ವಾತಂತ್ರ್ಯಕ್ಕೆ ಹೋರಾಡುವ ಹೋರಾಟಗಾರರಿಗೆ ಹೆಣ್ಣು ಮಾಯೆಯಾಗಿ ಕಂಡಿರಲೂ ಬಹುದು. ಈ ಕುರಿತು ಸರ್ಜಪ್ಪನಾಯ್ಕನ ಕಾವ್ಯದಲ್ಲಿ 'ಹೆಂಗಸೊಂದು ಮಾಯಂತೆ| ಗಂಡಸೊಂದು ನಾಯಂತೆ' (ಪರಮಶಿವಯ್ಯ ಜೀ.ಶಂ: ೧೯೭೩; ಪು. ೧೮) ಎಂದು ದಾಖಲಾದ ನುಡಿಯೇ ಪುರುಷರ ಪೂರ್ವನಿರ್ಧರಿತ ಧೋರಣೆಗಳನ್ನು ಬೆತ್ತಲುಗೊಳಿಸುತ್ತದೆ. ಹೀಗೆ ಪ್ರಚಾರ ನೀಡುವ ಮೂಲಕವೇ ಸ್ತ್ರೀಯ ಸಾರ್ವಜನಿಕ ಜೀವನದ ಪ್ರವೇಶಕ್ಕೆ ನಿಷೇಧವೊಡ್ಡಿದರೆಂದು ತೋರುತ್ತದೆ. ಜಾತಿ, ವರ್ಗ, ಲಿಂಗತಾರತಮ್ಯದಿಂದ ಸ್ವಾತಂತ್ರ್ಯ ಸಿಕ್ಕುವುದಿಲ್ಲವೆಂಬ ಸತ್ಯವ ಮನವರಿಕೆಯಾದ ನಂತರವೇ ಮಹಿಳೆಗೆ ಸಾರ್ವಜನಿಕ ಕ್ಷೇತ್ರಕ್ಕೆ

ಪ್ರವೇಶ ಸಿಕ್ಕಿತು. ಈ ಕಾರಣಕ್ಕಾಗಿಯೇ ಸ್ವಾತಂತ್ರ್ಯ ಹೋರಾಟದ ಯುದ್ಧ ಘಟ್ಟಕ್ಕಿಂತಲೂ ಚಳುವಳಿ ಘಟ್ಟ ಯಶಸ್ವಿಯಾಯಿತು.

ಶಿಷ್ಟಸಾಹಿತ್ಯದಲ್ಲಾಗಲಿ ಜನಪದ ಸಾಹಿತ್ಯದಲ್ಲಾಗಲಿ ಯುದ್ಧದಲ್ಲಿ ಶಕ್ತಿಸವಾಲಿನ ಪ್ರಶ್ನೆ ಬಂದಾಗ ಅವರು ನೀಡುವ ಉಪಮೆಯನ್ನು ಗಮನಿಸಬೇಕು. "ರಂಡಿ ಮುಸುಕ ಹಾಕಿ ತಿರುಗಿದರ ನಮ್ಮ ಮಾನ ಉಳಿಯುವುದಿಲ್ಲ", "ಮಗ್ಗಲದಾಗಿನ ಹೆಣತಿ ಕೊಟ್ಟ ಅಂಗ ಅತಿ ಹೇಡಿ ಆದೇವ್ ಅಲ್ಲಾ" (ಫ್ಲೀಟರ್ ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು: ೧೯೭೨; ಪು. ೬೨), "ಹೆಂಗಸಾದರೆ ಹಿಂದಕೆ ಹೋಗು| ಗಂಡಸಾದರೆ ಮುಂದಕೆ ಬಾರೊ ....." (ಪರಮಶಿವಯ್ಯ ಜೀ.ಶಂ: ೧೯೭೩; ಪು. ೯) ಇವೆಲ್ಲವನ್ನೂ ಗಮನಿಸಿದರೆ ಸ್ತ್ರೀಯನ್ನು Political ಬದುಕಿನಿಂದ ಹೊರಗಿಟ್ಟಿರುವುದು ಸ್ಪಷ್ಟವಾಗಿರುತ್ತದೆ. ಸಾರ್ವಜನಿಕ ಬದುಕಿನ ಕಾರ್ಯವಾದ ಸ್ವಾತಂತ್ರ್ಯ ಹೋರಾಟ ಪುರುಷರದು ಎಂಬುದು ಸರ್ವಸ್ವೀಕೃತ ಸಾಮಾಜಿಕ ನೀತಿಯಾಗಿದೆ. ಇಂತಹ ಒಂದು ಸಂಸ್ಕೃತಿಯ ಪರಿಧಿಯಲ್ಲಿ ಸ್ತ್ರೀಯ Political ಹೋರಾಟ ನೋಡುವುದು ಒಮ್ಮೊಮ್ಮೆ ತೀರ ವ್ಯಂಗವೆನಿಸಿಬಿಡುತ್ತದೆ. ಕೌಟುಂಬಿಕ ನೆಲೆಯಲ್ಲಿ ಅವಳು ಮಾಡಿದ ಹೋರಾಟವೇ Political ಹೋರಾಟವಾಗಿದೆ.

ಸ್ವಾತಂತ್ರ್ಯಯುದ್ಧ ಘಟ್ಟದಲ್ಲಿ ಮಹಿಳಾ ಯುದ್ಧ ಹೋರಾಟದ ಸ್ವರೂಪವು ಭಿನ್ನವಾಗಿವೆ. ಹಲವಾರು ಒಳ ಹಾಗೂ ಹೊರಗಿನ ರಾಜಕೀಯ ಒತ್ತಡದಿಂದ ಘಟಿಸಿದ ಯುದ್ಧಗಳಲ್ಲಿ ತಮ್ಮ ಗಂಡಂದಿರ-ಅನುಪಸ್ಥಿತಿಯಲ್ಲಿ ಚೆನ್ನವ್ವ ಮತ್ತು ಈರವ್ವ ತಮ್ಮದೇ ಆದ ತಂತ್ರ ಹಾಗೂ ಸಿದ್ಧಾಂತಗಳಿಂದ ಬ್ರಿಟೀಷರನ್ನು ಎದುರಿಸಿದರು. ಬ್ರಿಟೀಷರ ವಿರುದ್ಧ ಯುದ್ಧ ಮಾಡಿದ ರಾಮಿಯ ಹೋರಾಟ ಅಚ್ಚ ದೇಶೀಯವಾದುದು. ಕುಲ ಪರಂಪರೆಯಿಂದ ಬಂದ ತಮ್ಮ ಜನಾಂಗದ ಬದುಕಿನಲ್ಲೇ ಒಂದಾಗಿ ಮಿಳಿತವಾದ ಆಯುಧಗಳನ್ನು ಬ್ರಿಟೀಷರಿಗೆ ಒಪ್ಪಿಸಲು ನಿರಾಕರಿಸಿ, ಅವಳು ಮಾಡಿದ ಹೋರಾಟವು ಚೆನ್ನವ್ವ-ಈರವ್ವರಿಗಿಂತ ಭಿನ್ನವಾಗಿದೆ. ಇವರೆಲ್ಲರೂ ಸಾರ್ವಜನಿಕ ಬದುಕಿನಲ್ಲಿ ದೃಶ್ಯರಾಗಿದ್ದುಕೊಂಡೇ ಬ್ರಿಟೀಷರಿಗೆದುರಾಗಿ ಯುದ್ಧ ಮಾಡಿದರೆ, ಸಾವಿತ್ರಿಬಾಯಿ, ಯಮುನಾಬಾಯಿ ಅದೃಶ್ಯರಾಗಿದ್ದುಕೊಂಡು ವಸಾಹತು ಪ್ರಭುತ್ವದ ವಿರುದ್ಧ ಹೋರಾಡಿದರು. ಬ್ರಿಟೀಷ್ ಪ್ರಭುತ್ವದ ವಿರುದ್ಧ ಮಹಿಳೆಯರು ಮಾಡಿದ ಈ ಎಲ್ಲಾ ಹೋರಾಟಗಳು ಸ್ವಾತಂತ್ರ್ಯ ಯುದ್ಧಗಳೇ ಆಗಿವೆ. ಸ್ವಾತಂತ್ರ್ಯ ಯುದ್ಧದಲ್ಲಿ ಈ ಎಲ್ಲ ವೀರ ಮಹಿಳೆಯರು ತೊಡಗಿಸಿಕೊಂಡಿರುವ ಪ್ರಕ್ರಿಯೆ ಆಳವಾದ ಬದ್ಧತೆಯಿಂದ ಕೂಡಿದೆ. ಇಲ್ಲಿರುವ ಪ್ರತಿಯೊಬ್ಬ ವೀರಮಹಿಳೆಯ ಕಥೆಯು ಎಲ್ಲ ಮಹಿಳೆಯರಿಗೂ ಸಂಬಂಧಿಸಿದಂತೆ ಸಾಮಾನ್ಯ ಸಂಗತಿಯನ್ನು ಪ್ರಕಟಗೊಳಿಸುತ್ತದೆ. ಹೀಗೆ ಇತಿಹಾಸದ ಬರವಣಿಗೆಯು ಸ್ತ್ರೀಯರ ಅನುಭವ ಮತ್ತು ಸ್ತ್ರೀ ಪ್ರತಿರೋಧವನ್ನು ಊರ್ಜಿತಗೊಳಿಸುವುದಾಗಿರುತ್ತದೆ.

ಸಂಸ್ಥಾನಿಯುದ್ಧಗಳು ಸ್ವಾತಂತ್ರ್ಯ ಪಡೆಯುವಲ್ಲಿ ಸೋತವೆಂದೇ ಹೇಳಬೇಕು. ಅದಕ್ಕಾಗಿಯೇ ದೇಶಭಕ್ತರ ಸ್ವಾತಂತ್ರ್ಯ ಚಳುವಳಿಯ ಸಂಘಟನೆ ಜನ್ಮ ಪಡೆಯಿತು. ಇದಕ್ಕೆ

ಕಾರಣಗಳು ಅನೇಕ. "ಭಾರತೀಯರದು 'ವ್ಯಕ್ತಿವ್ಯಾದಿ ಸಂಸ್ಕೃತಿ'ಯೇ ಹೊರತು 'ಸಮೂಹವಾದಿ ಸಂಸ್ಕೃತಿ'ಯಲ್ಲ ಆದುದರಿಂದ ಈ ದೇಶದ ಇತಿಹಾಸದಲ್ಲಿ ವ್ಯಕ್ತಿಕಲ್ಯಾಣಸಿದ್ಧಾಂತ ಬೆಳೆಯಿತೇ ಹೊರತು ಸಮೂಹ ಕಲ್ಯಾಣ ಸಿದ್ಧಾಂತ ಆಕಾರ ಪಡೆಯಲಿಲ್ಲ. ಹೆಚ್ಚಿನದಾಗಿ ನಮ್ಮಲ್ಲಿ ವರ್ಣವ್ಯವಸ್ಥೆ ಜಾತಿವ್ಯವಸ್ಥೆಯಾಗಿ ಬಿಚ್ಚಿಕೊಂಡು ಜನಸಮೂಹದ ಬಿರುಕುಗಳು ಬೆಳೆದ ಕಾರಣ ಸಂಘಟಿತ ಸಮಾಜ ರೂಪಗೊಳ್ಳಲೇ ಇಲ್ಲ. ಇದರಿಂದಾಗಿ 'ಭಾರತೀಯರು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು' ಎನಿಸಿದರು. ಗಾಂಧೀಜಿ ಗೆದ್ದುದು ವೈಯಕ್ತಿಕವಾಗಿ 'ಸಬಲರು' ಎಂಬುದಕ್ಕೆ ಉದಾಹರಣೆಯಾದರೆ ಸಂಸ್ಥಾನಿಕರು ಸೋತುದು 'ಸಾಮಾಜಿಕ'ವಾಗಿ ದುರ್ಬಲರು ಎಂಬುದಕ್ಕೆ ಉದಾಹರಣೆಯಾಗಿದೆ." (ಕಲಬುರ್ಗಿ ಎಂ.ಎಂ: ೧೯೯೮; ಪು. ೯೫) ಸ್ವತಂತ್ರ ದೇಶಗಳಂತೆ ವರ್ತಿಸುತ್ತಿದ್ದ ಚಿಕ್ಕ-ಚಿಕ್ಕ ಸಂಸ್ಥಾನಗಳೆಲ್ಲವೂ ಬ್ರಿಟೀಷರ ಕೈವಶವಾದಾಗ, ರಾಷ್ಟ್ರೀಯವಾದದ ಕಲ್ಪನೆ ಕುಡಿಯೊಡೆದ ಸಂದರ್ಭದಲ್ಲಿ ದೇಶಭಕ್ತರ ಚಳುವಳಿಘಟ್ಟ ಪ್ರಾರಂಭವಾಯಿತು. ಇಡಿಯಾಗಿ ಭಾರತದೇಶದ ಕಲ್ಪನೆ ಜಾಗ್ರತವಾದದ್ದೇ ಈ ಹಂತದಲ್ಲಿ. ಬ್ರಿಟೀಷರಿಂದ ಸಂಸ್ಥಾನವನ್ನುಳಿಸಿಕೊಳ್ಳಲು ಹೋರಾಟ ನಡೆಸಿದ ಅರಸರ ಸ್ಥಾನದಲ್ಲಿ ಇಡೀ ದೇಶವನ್ನು ಸ್ವತಂತ್ರಗೊಳಿಸಲು ಹೋರಾಡಿದ ಗಾಂಧೀಜಿ ಮೊದಲಾದವರು ನಿಂತರು. ಬ್ರಿಟೀಷ ಅಧಿಕಾರವನ್ನು ಪ್ರಶ್ನಿಸಿದ ಚೆನ್ನವ್ವ, ಈರವ್ವ, ರಾಮಿ, ಯಮುನಾಬಾಯಿ, ಸಾವಿತ್ರಿಬಾಯಿ, ಅಬ್ಬಕ್ಕ ಮೊದಲಾದವರಲ್ಲದೆ ಸ್ಥಳೀಯರನ್ನೇ ದಿಟ್ಟತನದಿಂದ ಎದುರಿಸಿದ ಚಾಂದಬೀಬಿ, ಒನಕ ಓಬವ್ವ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ ಮೊದಲಾದವರ ಹೋರಾಟ ಗೀತೆಗಳು ಸ್ವಾತಂತ್ರ್ಯ ಚಳುವಳಿಯನ್ನು ಸಂಘಟಿಸುವಲ್ಲಿ, ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಚೆನ್ನವ್ವ, ಈರವ್ವ, ರಾಮಿ, ಯಮುನಾಬಾಯಿ, ಸಾವಿತ್ರಿಬಾಯಿ ಮೊದಲಾದ ವೀರ ಮಹಿಳೆಯರು ಕೇವಲ ಐತಿಹಾಸಿಕ ವ್ಯಕ್ತಿಗಳಲ್ಲ, ನಿರಂತರ ಮುಂದುವರಿಯುವ ವರ್ತಮಾನಗಳು ಕೂಡ.

ಗ್ರಾಮೀಣ ಭಾರತದ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಯ ಮೇಲಾದ ಬ್ರಿಟೀಷ್ ಹಾಗೂ ಸ್ಥಾನೀಯ ದೊರೆಗಳ ಪ್ರಭುತ್ವದ ವಿರುದ್ಧ ಮಹಿಳಾಲೋಕ ಪ್ರತಿಭಟಿಸಿದ ರೀತಿಯನ್ನು ೨೦ನೆಯ ಶತಮಾನದ ಕೊನೆಯ ಭಾಗದಲ್ಲಿ ಅದರಲ್ಲೂ, ಸ್ವಾತಂತ್ರ್ಯಬಂದ ೫೧ನೇ ವರ್ಷದಲ್ಲಿ ವಿವರಿಸುವುದು, ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ. ಚೆನ್ನಮ್ಮ ಒಳದಾಸ್ಯವನ್ನು ಗೆಲ್ಲಲು ತನ್ನ ಸಂಸ್ಥಾನದಲ್ಲಿದ್ದ ಸಂಪ್ರದಾಯಸ್ಥ ಗಂಡಸರ ವಿರುದ್ಧ ಹೋರಾಟ ನಡೆಸಿದಷ್ಟೇ ಪ್ರಬಲವಾಗಿ ಹೊರದಾಸ್ಯವನ್ನು ತಿರಸ್ಕರಿಸುತ್ತಾ ಬ್ರಿಟೀಷರ ವಿರುದ್ಧ ನಡೆಸಿದ ಹೋರಾಟ ಕ್ಲಿಷ್ಟವಾಗಿದೆ. ಬ್ರಿಟೀಷ್ ಪ್ರಭುತ್ವದ ವಿರೋಧದ ಜೊತೆ ಜೊತೆಯಲ್ಲಿಯೇ ತನ್ನನ್ನು ವಿರೋಧಿಸುತ್ತಿದ್ದ ಸಂಸ್ಥಾನಿ ಪ್ರಜೆಗಳನ್ನು ತಿರಸ್ಕರಿಸುವಂತಿರಲಿಲ್ಲ, ಸ್ವೀಕರಿಸುವಂತಿರಲಿಲ್ಲ. ಬಿಸಿತುಪ್ಪ ಉಗುಳಲೂಬಾರದು ನುಂಗಲೂಬಾರದು ಎಂಬ ಸಂದಿಗ್ಧ ಪರಿಸ್ಥಿತಿಯಲ್ಲಿ ಚೆನ್ನವ್ವ ಇದ್ದಳು. ಇಂತಹ ಕ್ಲಿಷ್ಟ

ಹೋರಾಟದಲ್ಲಿ ಚೆನ್ನವ್ವನ ಜೊತೆಗಿದ್ದವರು ಯಾರು, ಅವಳ ವೈರಿಗಳು ಯಾರು ಎಂದು ನಿರ್ಧರಿಸಿ ಹೇಳುವುದು ಕಠಿಣವಾಗುತ್ತದೆ. ಸಾಮಾಜಿಕ, ರಾಜಕೀಯ ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕಿನ ಭಾಗವಾದ ಆಯುಧಗಳನ್ನು ಬ್ರಿಟೀಷರಿಗೆ ಒಪ್ಪಿಸಲು ವಿರೋಧಿಸಿದ ರಾಮಿಯ ಹೋರಾಟವನ್ನು ಬೇರೆ ರೀತಿಯಲ್ಲಿಯೇ ವಿವರಿಸಬೇಕಾಗಿದೆ. ನೇರ ರಾಜಕೀಯ ಕ್ಷೇತ್ರದಲ್ಲಿ ಪ್ರವೇಶ ಸಿಕ್ಕದಿದ್ದಾಗ ತೆರೆ ಮರೆಯಲ್ಲಿದ್ದುಕೊಂಡೇ ಬ್ರಿಟೀಷರ ವಿರುದ್ಧ ಹೋರಾಡಿದ ಯಮುನಬಾಯಿ, ಸಾವಿತ್ರಿಬಾಯಿ ಹೋರಾಟದ ವಿವರಣೆ ಅಷ್ಟು ಸರಳವಲ್ಲ. ಕೆಲವೊಮ್ಮೆ ಜನಪದ ಮಹಿಳೆ, ಬ್ರಿಟೀಷ್ ಹಾಗೂ ಸಂಸ್ಥಾನಿಕರ ಪ್ರಭುತ್ವವನ್ನು ತಿರಸ್ಕರಿಸುವ ಮೂಲಕವೇ ರಾಜಕೀಯ ಬದುಕಿಗಿಂತ ಕೌಟುಂಬಿಕ ಬದುಕೇ ಅಪ್ಯಾಯಮಾನವಾದುದು ಎಂಬುದನ್ನು ಸ್ಪಷ್ಟಪಡಿಸುರುವಳು. ಮಹಿಳಾ ಸಮಸ್ಯೆಯನ್ನು ರಾಜಕೀಯ ಸಮಸ್ಯೆಯನ್ನಾಗಿಸಿ ಚೆನ್ನವ್ವ, ಈರವ್ವ, ರಾಮಿ, ಯಮುನಾಬಾಯಿ, ಸಾವಿತ್ರಿಬಾಯಿಯರ ಹೋರಾಟದ ಮಾದರಿಯನ್ನು ಬಳಸಿಕೊಂಡು ಅಂದರೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪುರುಷಶಾಹಿ ತತ್ವಗಳನ್ನು ಭಂಜಿಸುವ ಪ್ರಕ್ರಿಯೆಗೆ ಇಂದಿನ ಮಹಿಳೆ ತೊಡಗಿಸಿಕೊಳ್ಳಬೇಕು. ಜೊತೆಗೆ ಚೆನ್ನವ್ವ, ಈರವ್ವರ ಮಧ್ಯದಲ್ಲಿ ಒಡಕು ಹುಟ್ಟಿಸಲು ಪ್ರಯತ್ನಿಸಿ ಅವರ ಹೋರಾಟವನ್ನು ನಿರಸನಗೊಳಿಸಲು ಪ್ರಯತ್ನಿಸಿದ ಗಂಡಸರು ಇವೊತ್ತಿಗೂ ನಮ್ಮ ಮಧ್ಯದಲ್ಲಿ ಇದ್ದಾರೆ. ಕುರೂಪಿಯ ಮುಂದೆ ಸುರೂಪಿಯನ್ನು, ಆಧುನಿಕಳ ಮುಂದೆ ಸಂಪ್ರದಾಯಸ್ಥಳನ್ನು ಎತ್ತಿಕಟ್ಟುವ ಮೂಲಕವೇ ಮಹಿಳಾ ಸಂಘಟನೆಯ ಗೊತ್ತುಗುರಿಗಳನ್ನು ದಿಕ್ಕು ತಪ್ಪಿಸುವ ಅವರ ಮೂಲೋದ್ದೇಶವನ್ನು ಬುಡಮೇಲು ಮಾಡಿ ಭ್ರಮನಿರಸನಗೊಳಿಸುವ ಮೂಲಕ ಪುನಃ ಪುರುಷಶಾಹಿತ್ವ ಚಿಂತನೆಗಳನ್ನು ಗಟ್ಟಿಗೊಳಿಸಲು ಪ್ರಯತ್ನಿಸುವ ಗಂಡಸರ ಕುರಿತ ಜಾಗ್ರತೆಯನ್ನು ಇವತ್ತಿನ ಮಹಿಳೆ ಸದಾ ಕಾಯ್ದುಕೊಳ್ಳಬೇಕಾಗಿದೆ.

ಒಟ್ಟು ಇಂತಹ ವಿಚಾರಗಳ ಮೂಲಕ ಮಹಿಳೆಯರು ಸಮಸ್ಯೆಯನ್ನು ಬಗೆಹರಿಸಿಕೊಂಡಿರದಿದ್ದರೂ, ಅವುಗಳ ಪರಿಹಾರದತ್ತ ತೀವ್ರ ಚಿಂತನ ನಡೆಸಿದ್ದು ಆಶಾದಾಯಕವಾಗಿದೆ. ಸ್ವಾತಂತ್ರ್ಯ ಯುದ್ಧ ಘಟ್ಟದಲ್ಲಿ ನಡೆದ ಮಹಿಳಾ ಹೋರಾಟಗಳು ಸ್ವದೇಶದ ಪರವಾಗಿ, ಒಂದರ್ಥದಲ್ಲಿ ನಮ್ಮ ಪುರುಷರ ಪರವಾಗಿಯೇ ಇದ್ದವು. ಪ್ರಧಾನ ವಾಗಿ ಬ್ರಿಟೀಷ್ ಪ್ರಭುತ್ವವನ್ನು ವಿರೋಧಿಸುವ ಪ್ರಬಲೋದ್ದೇಶವನ್ನು ಒಳಗೊಂಡಿದ್ದವು. ಆದರೆ ಒಳಗೊಳಗೇ ಪುರುಷ ಪ್ರಭುತ್ವದ ವಿರುದ್ಧದ ಕಿಡಿಗಳು ಹೊತ್ತಿ ಉರಿಯುತ್ತಿದ್ದ ಸತ್ಯವನ್ನು ಕಡೆಗಣಿಸುವಂತಿಲ್ಲ. ಚೆನ್ನವ್ವ, ಈರವ್ವ, ರಾಮಿ, ಸಾವಿತ್ರಿಬಾಯಿ, ಯಮುನಾ ಬಾಯಿಯರು ತಮಗೆ ಎದುರಾದ ಪರಿಸ್ಥಿತಿಗಳ ಒತ್ತಡದ ಹಿನ್ನೆಲೆಯಲ್ಲಿ ತಮ್ಮದೇ ಆದ ಪ್ರಾದೇಶಿಕ ಗುಣ ಹಾಗೂ ತಂತ್ರಗಳ ಬಳಕೆಯಿಂದ ಸ್ವಾತಂತ್ರ್ಯ ಯುದ್ಧವನ್ನು ಕ್ರಿಯಾತ್ಮಕವಾಗಿ ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಿದರು. ಪುರುಷ ಮತ್ತು ಮಹಿಳೆ ಒಟ್ಟಿಗೆ ಕೂಡಿ ಎದುರಿಸ ಬೇಕಾದ ಇಂತಹ ಸಮಸ್ಯೆಗಳ ಸಂದರ್ಭದಲ್ಲಿ ಮಹಿಳೆಯ ಅನನ್ಯತೆ ಅಭೂತಪೂರ್ವ ವಾದುದು. ಅಂತಿಮವಾಗಿ ನಿಜವಾಗಿಯೂ ಯಾರ ಸ್ವಾತಂತ್ರ್ಯದ ಬಗ್ಗೆ ಮಹಿಳೆ ಹೋರಾಡಿ ದ್ದಾಳೆ ಎಂದು ಪ್ರಶ್ನಿಸಿಕೊಂಡರೆ ಅದು ಮತ್ತೊಂದು ದುರಂತ ಇತಿಹಾಸವನ್ನು ತೆರೆದಿಡುತ್ತದೆ.

ನೆಲದ ಸ್ವಾತಂತ್ರ್ಯಕ್ಕೆ ಎನ್ನುವುದಕ್ಕಿಂತ ತನ್ನ ಗಂಡನ ಸ್ವಾತಂತ್ರ್ಯಕ್ಕೆ ಆತನ ಅಸ್ತಿತ್ವಕ್ಕೆ ಧಕ್ಕೆ ತಂದ ಬ್ರಿಟೀಷರನ್ನು ಪ್ರಬಲವಾಗಿ ವಿರೋಧಿಸುತ್ತಾ, ಅದಕ್ಕಾಗಿಯೇ ಪೂರ್ಣ ಪ್ರಮಾಣದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ತನ್ನ ಜೀವದ ಹಂಗುದೊರೆದು ಹೋರಾಡಿದ್ದಾಳೆ. ಆದರೆ ಆಶ್ಚರ್ಯವೆಂದರೆ ಇತಿಹಾಸವನ್ನು ಕಣ್ಣರಳಿಸಿ ಪ್ರಯಾಸದಿಂದ ಹುಡುಕಿದರೂ ಮಹಿಳೆಯರಿಗಾಗಿಯೇ ತನು-ಮನ-ಧನವೆಲ್ಲವನ್ನೂ ಮುಡುಪಾಗಿಟ್ಟು ಹೋರಾಡಿದ ಪುರುಷರು ಕಾಣಸಿಗುವುದೇ ಇಲ್ಲ. ಮಹಿಳಾ ಸಮಸ್ಯೆಗಳು ಅವರ ಹೋರಾಟದ ಮುಖ್ಯ ವಾಹಿನಿಯಾಗಿ ಬರಲಿಲ್ಲ. ಬದಲಾಗಿ ಅನುಗ್ರಹ ಸ್ವರೂಪದ ಹಾಗೂ ಕೇವಲ ಬಾಯಿಮಾತಿನ ಔಪಚಾರಿಕವಾಗಿ ನಿಲ್ಲುತ್ತದೆ. ಸ್ವಾತಂತ್ರ್ಯ ಯುದ್ಧದ ಸಂದರ್ಭದಲ್ಲಿ ಮಹಿಳೆಗೆ ತನ್ನ ಸ್ವಾತಂತ್ರ್ಯದ ಸ್ಥಾನಮಾನದ ಬಗ್ಗೆ ಅರಿವಿದ್ದರೂ ಎಚ್ಚರವಿದ್ದರೂ ಅಂತದ್ದನ್ನೆಲ್ಲ ಕೇಳುವ, ಆ ಬಗ್ಗೆ ಹೋರಾಡುವ ಸೂಕ್ತವಾದ ಕಾಲಘಟ್ಟದಲ್ಲಿ ಆಕೆ ಇರಲಿಲ್ಲ. ಈಗಲೂ ಇಲ್ಲ. ಹೀಗೆ ಈ "ಇಲ್ಲದ" ಸ್ಥಿತಿಯ ಬಗ್ಗೆ ನಾವು ಹೊಸ ಕಾಲದ ಒತ್ತಡಗಳ, ಹುಡುಕಾಟಗಳಲ್ಲಿ, ಸವಾಲುಗಳಲ್ಲಿ "ಇರಬೇಕಾದ" ಸ್ಥಿತಿಯ ಬಗ್ಗೆ, ಬರಬೇಕಾದ ಸಾಧ್ಯತೆಗಳ ಬಗ್ಗೆ ಹೊಸದಾದ ನುಡಿಗಟ್ಟುಗಳಲ್ಲಿ ಬೌದ್ಧಿಕ ಕ್ರಾಂತಿಯನ್ನು ಪ್ರಾಥಮಿಕ ಹಂತವಾಗಿ ಕಟ್ಟಿಕೊಳ್ಳಬೇಕಾಗಿದೆ.

ಉಲ್ಲೇಖಗಳು

ಕಲಬುರ್ಗಿ ಎಂ.ಎಂ: ೧೯೯೮; **ಮಾರ್ಗ ಮೂರು**, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು

ಕಲಬುರ್ಗಿ ಎಂ.ಎಂ: **ಕಿತ್ತೂರ ಆಸ್ಥಾನ ಸಾಹಿತ್ಯ**; ಅಪ್ರಕಟಿತ

ಕ್ಯಾತನಹಳ್ಳಿ ರಾಮಣ್ಣ (ಅನು): ೧೯೭೨; **ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ಪರಮಶಿವಯ್ಯ ಜಿ.ಶಂ. (ಸಂ): ೧೯೭೩; **ಜನಪದ ವೀರಕಾವ್ಯಗಳು**, ಪೃಥ್ವಿ ಪ್ರಕಾಶನ, ಮೈಸೂರು

ಶೆಟ್ಟರ್ ಎಸ್: ೧೯೭೬; **ಕಿತ್ತೂರು ಸಂಸ್ಥಾನದ ಇತಿಹಾಸ**, ಕಿತ್ತೂರು ನಾಡಿನ ಇತಿಹಾಸ ಹಾಗೂ ಸಂಸ್ಕೃತಿ (ವಿವಿಧ ಲೇಖಕರ ಏಳು ಉಪನ್ಯಾಸಗಳು), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಣ್ಣಕ್ಕಿ ನಿಂಗಣ್ಣ: ಭಾವಿಕಟ್ಟಿ ಶಿವಲಿಂಗಪ್ಪ (ಸಂ), ೧೯೭೭; **ಜಾನಪದದಲ್ಲಿ ಕಿತ್ತೂರು**, ಶ್ರೀಗಿರಿ ಪ್ರಕಾಶನ, ಅಕ್ಕತಂಗೇರಹಾಳ

ಹೂಗಾರ ಎ.ಎಸ್ (ಸಂ): ೧೯೭೩; **ಜಾನಪದ ನರಗುಂದ**, ಬಾಬಾಸಾಹೇಬ ಗ್ರಂಥ ಪ್ರಕಾಶನ, ನರಗುಂದ

ಹೆಂಡಿ ಬಿ.ಬಿ, ಬಿರಾದಾರ, ಲಕ್ಷ್ಮೆ (ಸಂ): ೧೯೮೩; **ಹರದೇಶಿ - ನಾಗೇಶಿ**, ಕನ್ನಡ ಅಧ್ಯಯನ ವಿಭಾಗ, ಗುಲ್ಬರ್ಗಾ

❖ ❖

೬

ದೇವಸ್ತ್ರೀಯರು

ಲೈಂಗಿಕ ದಾಸಿಯರನ್ನು ಸಮಾಜಶಾಸ್ತ್ರದ ನೆಲೆಯಲ್ಲಿಟ್ಟು ವಿಶ್ಲೇಷಿಸುವ ಗಂಭೀರ ಪ್ರಯತ್ನ ಜೋಗನ್ ಶಂಕರ್, ಗುರುಮೂರ್ತಿಯವರಿಂದ ನಡೆದಿದೆಯಾದರೂ ನನಗದು ತೃಪ್ತಿಕರವಾಗಿ ಕಂಡಿಲ್ಲ. ಪಾತರದವಳು, ಬಸವಿ, ಮುರುಳಿ, ಕಸಬಿ ಮೊದಲಾದವರನ್ನೆಲ್ಲ 'ದೇವದಾಸಿ' ಎಂದು ಸಾಮಾನ್ಯೀಕರಿಸಿ, ಅಧ್ಯಯನವನ್ನು ಮಾಡಿದ ಫಲಶೃತಿ ಅಷ್ಟು ಪರಿಣಾಮಕಾರಿಯಾಗಿರದು. ಲೈಂಗಿಕದಾಸಿಯರಲ್ಲಿ ಕಂಡುಬರುವ ಪ್ರತಿಯೊಂದು ಪಂಗಡದವರ ಅಧ್ಯಯನ ಪ್ರತ್ಯೇಕವಾಗಿಯೇ ನಡೆಸಬೇಕಾಗಿದೆ. ಅದಕ್ಕೆ ಸ್ತ್ರೀವಾದಿ ಚಿಂತನೆಯ ಸ್ಪರ್ಶದ ಅಗತ್ಯವಿದೆ. ಅಂದಾಗ ಮಾತ್ರ ಅದರ ಮೂಲ ಬೇರುಗಳನ್ನು ಹುಡುಕಲು, ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ನೈತಿಕ-ಅನೈತಿಕ ಮೌಲ್ಯಗಳನ್ನಿಟ್ಟು ದೇವಸ್ತ್ರೀಯರಂತಹ ವ್ಯವಸ್ಥೆಯನ್ನು ವಿಶ್ಲೇಷಿಸಬಾರದು. ತಲೆತಲಾಂತರದಿಂದ ಒಪ್ಪಿಕೊಂಡ ನೀತಿ-ಅನೀತಿಯಂತಹ ಮೌಲ್ಯಗಳು ಪುರುಷಶಾಹಿ ಸಂಸ್ಕೃತಿಯ ತಾತ್ವಿಕ ಚಿಂತನೆಗಳಾಗಿವೆ. ಈ ಮೌಲ್ಯಗಳನ್ನಿಟ್ಟು ಅಧ್ಯಯನ ಮಾಡುವುದೆಂದರೆ ಪುರುಷ ದೃಷ್ಟಿಕೋನದಿಂದಲೇ ಅಧ್ಯಯನ ಮಾಡುವುದಾಗಿರುತ್ತದೆ. ಇಂತಹವುಗಳನ್ನು ಇಟ್ಟುಕೊಂಡೇ ಲೈಂಗಿಕ ದಾಸಿಯರಂತಹ ಅನೇಕ ಸಂಪ್ರದಾಯಗಳನ್ನು ದೂಷಿಸುವುದು ಸುಲಭ. ನೈತಿಕ ಸಿಟ್ಟನ್ನು ತೋರಿಸುವುದು ಇನ್ನೂ ಸರಳ. ಅದರಿಂದಾಗಿ ಹೊಸದಾಗಿ ಏನನ್ನೂ ಹೇಳಿದಂತಾಗುವುದಿಲ್ಲ.

ಹೀಗಾದಾಗ ಮಹಿಳಾ ಚರಿತ್ರೆಗೆ ನ್ಯಾಯವೊದಗಿಸುವುದು ಕನಸಿನ ಮಾತಾಗುತ್ತದೆ. ಅದಕ್ಕಾಗಿ ಅಸ್ತಿತ್ವ ಹಾಗೂ ಆರೋಗ್ಯವನ್ನು ಕೇಂದ್ರವಾಗಿರಿಸಿಕೊಂಡು ಇಂತಹ ವಿಷಯವನ್ನು ಪ್ರವೇಶಿಸುವುದು, ಚಿಂತನೆಗೊಳಪಡಿಸುವುದು ಹೆಚ್ಚು ಸೂಕ್ತ.

ಲೈಂಗಿಕ ದಾಸಿಯರ ವ್ಯವಸ್ಥೆಯ ಕುರಿತು ಮಾತನಾಡುವ ಮತ್ತು ಬರೆಯುವ ಬಹುಪಾಲು ಸಮಾಜಸೇವಕರು ಹಾಗೂ ಅಧ್ಯಯನಕಾರರು "ಅವರು ನೀತಿಬಾಹಿರರು, ಕೊಳಕಾಗಿರುವವರು. ಅವರನ್ನು ನೈತಿಕ ಚೌಕಟ್ಟುಗಳೊಳಗೆ ತರುತ್ತಿದ್ದೇವೆ." ಎನ್ನುವ ಅಹಂ ಹೊತ್ತುಕೊಂಡೇ ಇಂತಹ ಕ್ಷೇತ್ರಗಳನ್ನು ಪ್ರವೇಶಿಸುತ್ತಾರೆ. ಅವರ ಬದುಕಿನ ಕ್ರಮಗಳನ್ನು, ಅವರೇ ಕಟ್ಟಿಕೊಂಡಿರುವ ಜೀವನ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವ ಸಾವಧಾನವನ್ನ ವರು ತೋರುವುದಿಲ್ಲ. ತಾವು ಕಟ್ಟಿಕೊಂಡಿರುವ ಸಂಸ್ಕೃತಿಯ ಕನ್ನಡಕವನ್ನು ಹಾಕಿಕೊಂಡೇ ಆ ಜನಾಂಗದ ಮೌಲ್ಯಗಳನ್ನು ಲೇವಡಿ ಮಾಡುತ್ತಾರೆ, ಕನಿಕರಿಸುತ್ತಾರೆ, ಸರಿತಪ್ಪುಗಳನ್ನು ನಿರ್ಧರಿಸಿಬಿಡುತ್ತಾರೆ. ಈ ಹರಿಬರಿಯ ದೃಷ್ಟಿಕೋನದ ಅಧ್ಯಯನಕಾರರು, ಚಳುವಳಿಗಾರರು, ಜನಾಂಗದ ಮೌಲ್ಯ ಮತ್ತು ಸಾಮಾಜಿಕ ವ್ಯವಸ್ಥೆಯ ಮಧ್ಯೆ ಬಹುದೊಡ್ಡ ಕಂದಕವನ್ನು ನಿರ್ಮಿಸಿಬಿಡುತ್ತಾರೆ. ಹೀಗಾದಾಗ ವ್ಯವಸ್ಥೆಯ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಮರೀಚಿಕೆಯಾಗಿಯೇ ಉಳಿಯುತ್ತದೆ. ನಮ್ಮವರು ಈ ಸುಧಾರಣಾವಾದಿ ಪರಿಕಲ್ಪನೆಯನ್ನು ವಸಾಹತುಶಾಹಿ ವ್ಯವಸ್ಥೆಯಿಂದಲೇ ಪಡೆದುಕೊಂಡಿದ್ದಾರೆ. ಬ್ರಿಟೀಷರು ನಮ್ಮನ್ನು ಉದ್ಧರಿಸುವಂತೆಯೇ ನಡೆದುಕೊಂಡರು. ಇವತ್ತಿನ ಅಧ್ಯಯನಕಾರರು, ಸುಧಾರಣಾವಾದಿಗಳು ಇದಕ್ಕಿಂತ ಭಿನ್ನವೆನಿಸುವುದಿಲ್ಲ.

ಧರ್ಮಕೇಂದ್ರಿತ ಲೈಂಗಿಕ ದಾಸಿಯರಲ್ಲಿ ಪ್ರಧಾನವಾಗಿ ಎರಡು ಕವಲುಗಳು ಕಾಣಿಸಿಕೊಳ್ಳುತ್ತವೆ. ರಂಭಾ ಪರಂಪರೆ, ರೇಣುಕೆ ಪರಂಪರೆ. ಇದರಲ್ಲಿಯೇ ಮತ್ತೊಂದು ಹನುಮ ಪರಂಪರೆಯನ್ನು ಗುರುತಿಸಬಹುದು. ರಂಭಾ ಪರಂಪರೆಗೆ ಸೇರಿದವರು ದೇವಾಲಯದ ಲೈಂಗಿಕದಾಸಿಯರಾದರೆ, ರೇಣುಕೆ ಮತ್ತು ಹನುಮ ಪರಂಪರೆಗೆ ಸೇರಿದವರು ದೇವರ ಲೈಂಗಿಕದಾಸಿಯರು. ಮೊದಲನೆಯ ವರ್ಗಕ್ಕೆ ಸೇರಿದವರು ಪಾತರದವರಾದರೆ, ಎರಡನೆಯ ವರ್ಗಕ್ಕೆ ಸೇರಿದವರು ದೇವಸ್ತ್ರೀಯರಾಗುತ್ತಾರೆ. ರೇಣುಕೆ ಹಾಗೂ ಹನುಮ ಪರಂಪರೆಗೆ ಸೇರಿದವರಲ್ಲಿ ಸಂಪ್ರದಾಯ, ಆಚರಣೆಗಳು ಭಿನ್ನವಾದರೂ ಅವರಿಬ್ಬರಿಗೆ ಲೈಂಗಿಕ ಸೇವೆ ಧರ್ಮ ಪ್ರಧಾನವಾದುದಾಗಿದೆ. ಈ ಅಂಶವನ್ನು ಗಮನಿಸಿಯೇ ಅವರನ್ನು ಒಟ್ಟಂದದಲ್ಲಿ ದೇವಸ್ತ್ರೀಯರು ಎಂದು ಗುರುತಿಸಿದೆ.

ರೇಣುಕೆ ಸಂಪ್ರದಾಯ ಜಲಪರಂಪರೆಗೆ ಸೇರಿದರೆ, ಹನುಮ ಸಂಪ್ರದಾಯ ಅಗ್ನಿ ಪರಂಪರೆಗೆ ಸೇರಿದೆ. ಸವದತ್ತಿ ಎಲ್ಲಮ್ಮ, ಕೊಕಟನೂರು ಎಲ್ಲಮ್ಮ; ಚಿಂಚಲಿ ಮಾಯವ್ವ, ಉಚ್ಚಂಗಿದುರ್ಗದ ಉಚ್ಚೆಂಗೆವ್ವ, ಹುಲಗಿಯ ಹುಲಿಗೆವ್ವ ಈ ಎಲ್ಲ ದೇವತೆಗಳ ದೇವಸ್ಥಾನಗಳ ಪಕ್ಕದಲ್ಲಿ ನದಿ ಇಲ್ಲವೆ ಹಳ್ಳಗಳು ಹರಿಯುತ್ತಿವೆ. ಇವೆರಡೂ ಇಲ್ಲವಾದಲ್ಲಿ ಕೊಳ್ಳಗಳಾದರೂ ಇರಲೇಬೇಕು. ಜಲಸಂಸ್ಕೃತಿ, ಮಾತೃಮೂಲ ಪರಂಪರೆಗೆ ಸೇರಿದೆ.

ಆದಕ್ಕಾಗಿ ರೇಣುಕಾ ಪರಂಪರೆಗೆ ಸೇರಿದವರು ಮಾತೃಮೂಲ ಸಂಸ್ಕೃತಿಯ ಪಳೆಯುಳಿಕೆಗಳು. ಮುತ್ತು ಕಟ್ಟಿಸಿಕೊಳ್ಳುವ ಇವರು ಪುರುಷ ಸ್ಪರ್ಶಕ್ಕೆ ಒಳಗಾದ ತಾಳಿ ಮತ್ತು ಕರಿಮಣಿಯನ್ನು ಹಾಕಿಕೊಳ್ಳುವುದಿಲ್ಲ. ಇತ್ತೀಚಿನ ಜೋಗತಿಯರು ಮುತ್ತಿನ ಜೊತೆ ತಾಳಿಯನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಅದು ಮೂಲದಲ್ಲಿ ಹಾಗಿರಲಿಲ್ಲ.

ಹನುಮನಿಂದ ಮಾಧ್ವಸಂಪ್ರದಾಯ ಪ್ರಾರಂಭವಾಗುತ್ತದೆ. ಹನುಮನ ಅವತಾರವೇ ಭೀಮ, ಭೀಮನ ನಂತರ ಬರುವವನೇ ಮಾಧ್ವ. ತಮಿಳುನಾಡಿನ ಶ್ರೀರಂಗದಲ್ಲಿದ್ದ ರಾಮಾನುಜಾಚಾರ್ಯರು ತಿರುಪತಿಗೆ ಹೆಚ್ಚಿನ ಪ್ರಚಾರವನ್ನು ನೀಡಿದರು. ಚೋಳ, ಹೊಯ್ಸಳರ ಅವಧಿಯ ನಂತರ ವಿಜಯನಗರ ಆಳ್ವಿಕೆ ಬರುತ್ತದೆ. ಹೊಯ್ಸಳರ ಅವಧಿಯಲ್ಲಿ ರಾಮಾನುಜಾಚಾರ್ಯರು ಕರ್ನಾಟಕದ ಮೇಲುಕೋಟೆಗೆ ಬರುತ್ತಾರೆ. ವಿಜಯನಗರ ಪರಂಪರೆಯಲ್ಲಿ ಮೊದಲು ಶೈವ ಅರಸರಿದ್ದರು. ಸಾಳ್ವನರಸಿಂಗನಿಂದಲೇ ವೈಷ್ಣವರ ಆಳ್ವಿಕೆ ಪ್ರಾರಂಭವಾಯಿತು. ಕೃಷ್ಣದೇವರಾಯನ ಅವಧಿಯಲ್ಲಿ ವ್ಯಾಸರಾಯರು ಬಂದರು. ವ್ಯಾಸರಾಯರು ಆಂಜನೇಯನಿಗೆ ಹೆಚ್ಚು ಮಹತ್ವವನ್ನು ಕೊಟ್ಟರು. ಇದರಿಂದಾಗಿ ಕೃಷ್ಣದೇವರಾಯರು ತಿರುಪತಿ ಪ್ರಭಾವಕ್ಕೆ ಒಳಗಾದಂತೆ ಆಂಜನೇಯನ ಪ್ರಭಾವಕ್ಕೂ ಒಳಗಾದರು. ವ್ಯಾಸರಾಯರು ಸ್ಥಾಪಿಸಿದ ಆಂಜನೇಯ ಮೂರ್ತಿಗಳು ವಿಶಿಷ್ಟವಾಗಿವೆ. ಕರ್ನಾಟಕದಲ್ಲಿ ಹತ್ತನೆಯ ಶತಮಾನದ ಅವಧಿಯಲ್ಲಿಯೇ ಕಂಬದಲ್ಲಿ ಕೆತ್ತಿದ ಆಂಜನೆಯ ಚಿತ್ರಗಳಿದ್ದರೂ, ಅದಕ್ಕೆ ಒಂದು ಸ್ವತಂತ್ರ ಅಸ್ತಿತ್ವ ಬಂದುದು ಕೃಷ್ಣದೇವರಾಯನ ಅವಧಿಯಲ್ಲಿಯೆ (೧೫೦೦). ಸುಮಾರು ಏಳೂನೂರಕ್ಕೂ ಹೆಚ್ಚು ಆಂಜನೆಯ ದೇವಸ್ಥಾನಗಳನ್ನು ಅವನು ಕಟ್ಟಿಸಿದನೆಂಬ ಪ್ರತೀತಿಯಿದೆ. ಈ ಎಲ್ಲಾ ದೇವಾಲಯಗಳಿಗೆ ಬಸವಿ ಬಿಡುವ ಸಂಪ್ರದಾಯ ಪ್ರಾರಂಭವಾಯಿತು. ಹನುಮ ಪರಂಪರೆಗೆ ಸೇರಿದ ಬಸವಿಯರಿಗೆ ಮುದ್ರೆ ಹಾಕಲಾಗುತ್ತದೆ. ಆದರೆ ಮಾಧ್ವ ಮಹಿಳೆಯರಿಗೆ ಹಾಕಿದಂತಲ್ಲ.[೨] ಬಸವಿಯರಿಗೆ ಎದೆಯ ಮೇಲ್ಭಾಗಗಳಿಗೆ ಮುದ್ರೆ ಹಾಕುತ್ತಾರೆ. ಮುದ್ರೆಯ ಅಗ್ನಿ ಸ್ಪರ್ಶದಿಂದ ಪವಿತ್ರರಾಗುವರೆಂಬ ನಂಬಿಕೆ ಅವರಲ್ಲಿ ಇದೆ. 'ಮುದ್ರೆ ಹಾಕದನ್ನಕ ಅದು ಬಸವನನ್ನಪ್ಪದು' (ಚೆನ್ನಬಸವಣ್ಣ: ೧೯೬೫; ಪು. ೧೫೪) ಎನ್ನುವ ವಚನಗಳನ್ನು ಗಮನಿಸಬೇಕು. ಮುದ್ರೆ ಹಾಕಿದ ಎತ್ತು ಬಸವನಾದರೆ, ಮುದ್ರೆ ಹಾಕಿಸಿಕೊಂಡ ಮಹಿಳೆ ಬಸವಿಯಾಗುತ್ತಾಳೆ. 'ಬಸವಿ' ಈ ಪದವೇ ಶೈವಪಂಥಕ್ಕೆ ಸೇರಿದಂತೆ ಕಂಡರೂ, ಅದರ ಆಚರಣೆಯೆಲ್ಲವೂ ವೈದಿಕ ಪರಂಪರೆಗೆ ಸೇರಿದುದು ಕುತೂಹಲವನ್ನುಂಟು ಮಾಡುತ್ತದೆ. ಅಗ್ನಿ, ವೈದಿಕರಿಗೆ ಶ್ರೇಷ್ಠವಾದುದಾಗಿದೆ. ಅದು ಪಿತೃಮೂಲ ಪರಂಪರೆಗೆ ಸೇರಿದೆ. ಧರ್ಮ ಪ್ರಚಾರದ ಉದ್ದೇಶ ಮತ್ತು ಪುರುಷಶಾಹಿ ಸಂಸ್ಕೃತಿಯ ಸ್ವಾರ್ಥತೆಗಳೆರಡೂ ಬಸವಿ ಸಂಪ್ರದಾಯದಲ್ಲಿದೆ.

ವಿಜಯನಗರ ಕಾಲದಲ್ಲಿ ಬಸವಿ ಸಂಪ್ರದಾಯ ಹುಟ್ಟಿಕೊಂಡಿರಬೇಕು. ಇದು ಊಳಿಗಮಾನ್ಯದ ಪಳಯುಳಿಕೆ. ವಿಜಯನಗರ ಸಾಮ್ರಾಜ್ಯ ರೂಪಿಸಿದ ವ್ಯವಸ್ಥೆ ಇದಾದರೂ ಅದಕ್ಕೆ ಧಾರ್ಮಿಕ ಸ್ವರೂಪವಿದೆ. ಬಹುಸಂಖ್ಯೆಯಲ್ಲಿ ಹನುಮಂತದೇವರ ದೇವಾಲಯ

ಗಳನ್ನು ಕಟ್ಟಿಸಿ ಅದಕ್ಕೆ ಹೆಣ್ಣುಬಿಡುವ ಪದ್ಧತಿಗೆ ಅಡಿಗಲ್ಲು ಹಾಕಿದರು. ವಿಜಯನಗರ ಕಾಲದಲ್ಲಿ ದೇವಸ್ತ್ರೀಯರು ಹೇರಳವಾಗಿದ್ದಷ್ಟು ಇನ್ನಾವ ಸಾಮ್ರಾಜ್ಯಗಳ ಕಾಲವಧಿಗಳಲ್ಲಿ ಇರಲಿಲ್ಲ. ಇದಕ್ಕೆ ಅನೇಕ ಕಾರಣಗಳು ಸಿಗುತ್ತವೆ. ಮುಖ್ಯವಾಗಿ ವಾಣಿಜ್ಯಕೇಂದ್ರವಾಗಿ ಬೆಳೆದ ಇದು ದೇಶ-ವಿದೇಶಗಳಿಂದ ಬಂದ ಸಾವಿರಾರು ವ್ಯಾಪಾರಸ್ಥರಿಗೆ ಆಶ್ರಯ ನೀಡಿತ್ತು. ಅವರು ಹಲವು ತಿಂಗಳುಗಳೋ ಇಲ್ಲವೆ ವರ್ಷಗಳೋ ಅಲ್ಲಿದ್ದು ವ್ಯಾಪಾರವನ್ನು ನಡೆಸುತ್ತಿದ್ದರು. ಈಗನಂತೆ ಆಗ, ಬೇಕೆಂದಲ್ಲಿಗೆ ಹೋಗಲು ಆಧುನಿಕ ವಾಹನಗಳಿರಲಿಲ್ಲ. ಹೀಗಾಗಿ ಅಷ್ಟು ದೀರ್ಘ ಅವಧಿಯವರೆಗೆ ಅವರು ತಮ್ಮ ಹೆಂಡತಿಯರನ್ನು ಬಿಟ್ಟಿರಲೇಬೇಕಾದ ಅನಿವಾರ್ಯತೆ ಇತ್ತು. ಈ ಸಂದರ್ಭದಲ್ಲಿ ಅವರು ಹೆಣ್ಣಿನ ಸಂಗವನ್ನು ಅಪೇಕ್ಷಿಸುತ್ತಿದ್ದರು. ಕುಟುಂಬಸ್ಥ ಮಹಿಳೆಯರನ್ನು ಬಯಸುವುದಾಗಲೀ, ಮುಟ್ಟುವುದಾಗಲೀ ಈ ಎರಡನ್ನೂ ಸಾಮಾಜಿಕ ಅಪರಾಧಗಳೆಂದೇ ನಮ್ಮಲ್ಲಿ ಪರಿಗಣಿಸಲಾಗಿದೆ. ಅದಕ್ಕಾಗಿಯೇ ವಿಜಯನಗರ ಸಾಮ್ರಾಜ್ಯವು ದೇವಾಲಯಗಳಿಗೆ ಹೆಣ್ಣುಗಳನ್ನು ಬಿಡುವ ಸಂಪ್ರದಾಯಕ್ಕೆ ವಿಶೇಷ ಪ್ರಾಧ್ಯಾನತೆ ನೀಡಿ ಪ್ರೋತ್ಸಾಹಿಸಿತು. ಏಕಕಾಲದಲ್ಲಿ ಎರಡು ಸಂಗತಿಗಳು ಕಾರ್ಯಗತಗೊಂಡವು. ೧. ಧರ್ಮಪ್ರಚಾರ, ೨. ಅಂದಿನ ಸಾಮಾಜಿಕ ಅಗತ್ಯದ ಪೂರೈಕೆ. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಅಚ್ಯುತರಾಯ ಪೇಟೆಯನ್ನು 'ಸೂಳೆ ಬಜಾರು' ಎಂದೇ ಗುರುತಿಸುತ್ತಾರೆ. ಅಚ್ಯುತರಾಯ ಬಜಾರದ ಬಲಭಾಗದಲ್ಲಿ ಮೂರ್ತಿ ಇಲ್ಲದ ದೇವಾಲಯವಿದೆ. ದೊರೆತ ಶಾಸನದ ಉಲ್ಲೇಖದ ಪ್ರಕಾರ ಅಲ್ಲಿ ಆಂಜನೇಯ ದೇವಸ್ಥಾನವಿತ್ತು (ಉದ್ಧೃತ : ಇನ್ ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್). ಅದು ವೈಷ್ಣವ ಪಂಥದ ಶಿಲ್ಪವನ್ನು ಒಳಗೊಂಡಿದೆ. ವಿಜಯನಗರಕ್ಕೆ ಭೇಟಿ ನೀಡಿದ ಬಹುಪಾಲು ವಿದೇಶಿ ಪ್ರವಾಸಿಗರು ಅಲ್ಲಿರುವ ದೇವಸ್ತ್ರೀಯರ ಕುರಿತಂತೆ ಉಲ್ಲೇಖಿಸುತ್ತಾರೆ. ಹನುಮಂತದೇವರ ದೇವಾಲಯಕ್ಕೆ 'ಬಸವಿ' ಬಿಡುವ ಸಂಪ್ರದಾಯಕ್ಕೆ ಸಾಂಸ್ಕೃತಿಕ ಚಹರೆಗಿಂತಲೂ ವ್ಯವಹಾರಿಕ ಚಹರೆ ಇದೆ. ಅದಕ್ಕೆ ಜೋಗತಿ ಸಂಪ್ರದಾಯಕ್ಕಿರುವ ಪ್ರಬಲವಾದ ಪೌರಾಣಿಕ ಹಿನ್ನೆಲೆಯಿಲ್ಲ.

ಹೆಣ್ಣು ಮಕ್ಕಳನ್ನು ದೇವರ ಹೆಸರಿನಲ್ಲಿ ಬಿಡುವುದಕ್ಕೆ ಹೊರಿ ಹೊರಿಸುವುದು, ಮನೆಗೆ ಬಿಡುವುದು, ದೇವರಿಗೆ ಬಿಡುವುದು, ದೇವರ ಹೊರಿಸುವುದು, ದೇವರ ಬಿರುದಾವಳಿ ಹೊರುವುದು ಮೊದಲಾಗಿ ಹೇಳುವರು.

ಮ್ಯಾಸನಾಯಕರು, ಊರನಾಯಕರು, ಗಂಗಮತದವರು, ಹರಿಜನರು, ತಳವಾರರು ಈ ಜನಾಂಗಗಳಲ್ಲಷ್ಟೇ ಮನೆಯ ಹೆಣ್ಣುಮಕ್ಕಳನ್ನು ದೇವರಿಗೆ ಬಿಡುವ ಸಂಪ್ರದಾಯವಿದೆ. ಹೆಚ್ಚಾಗಿ ನಾಯಕ ಹೆಣ್ಣುಮಕ್ಕಳನ್ನು ದೇವಸ್ತ್ರೀಯಾಗಿಸುವ ಸಂಪ್ರದಾಯ ಬಳ್ಳಾರಿ ಜಿಲ್ಲೆಯಲ್ಲಿದ್ದಷ್ಟು ಪ್ರಬಲವಾಗಿ ಉತ್ತರ ಕರ್ನಾಟಕದ ಉಳಿದ ಜಿಲ್ಲೆಗಳಲ್ಲಿ ಇಲ್ಲ. ಮರಾಠ ಮಹಿಳೆಯರನ್ನು ದೇವಸ್ತ್ರೀಯರನ್ನಾಗಿಸುವ ಆಚರಣೆ ಚಿಂಚಲಿ, ಎಡೂರ ಮೊದಲಾದ ಭಾಗಗಳಲ್ಲಿದೆ. ಇವನ್ನು ಹೊರತುಪಡಿಸಿದರೆ ಬೇರೆಲ್ಲಿಯೂ ಮರಾಠ ಮಹಿಳೆಯರು ದೇವಸ್ತ್ರೀಯರಾಗಿರುವ ಉದಾಹರಣೆ ಸಿಕ್ಕುವುದು ಬಹಳ ವಿರಳ. ವಿಜಾಪೂರ, ಬೆಳಗಾಂವ,

ಧಾರವಾಡ, ಬಳ್ಳಾರಿ, ದಾವಣಗೆರೆ ಈ ಎಲ್ಲ ಜಿಲ್ಲೆಗಳಲ್ಲಿ ಹರಿಜನ, ಗಂಗಮತ, ತಳವಾರ ಹೆಣ್ಣುಮಕ್ಕಳು ಈ ಸಂಪ್ರದಾಯಕ್ಕೊಳಪಡುವುದು ಸಾಮಾನ್ಯವಾಗಿದೆ.

ರೇಣುಕೆ ಪರಂಪರೆಗೆ ಸೇರಿದವಳು ಮುತ್ತುಕಟ್ಟಿಸಿಕೊಂಡರೆ, ಹನುಮ ಪರಂಪರೆಗೆ ಸೇರಿದವಳು ಮುದ್ರೆ ಹಾಕಿಸಿಕೊಳ್ಳುವಳು.[೩] ಗಟ್ಟಿಮುದ್ರೆ ಹಾಕಿಸಿಕೊಂಡವರನ್ನು 'ಮೂರು ಮುದ್ರೆ ಸೂಳೇರು' ಎಂದು ಕರೆಯುವ ವಾಡಿಕೆ ಜನಸಾಮಾನ್ಯರಲ್ಲಿತ್ತು. ವಿಜಾಪುರ, ಬೆಳಗಾಂ, ಧಾರವಾಡ ಜಿಲ್ಲೆಗೆ ಸೇರಿದವರು ಹೆಚ್ಚಾಗಿ ಮುತ್ತು ಕಟ್ಟಿಸಿಕೊಂಡರೆ, ಬಳ್ಳಾರಿ ಹಾಗೂ ದಾವಣಗೆರೆ ಜಿಲ್ಲೆಗೆ ಸೇರಿದ ಬಹುಪಾಲು ದೇವಸ್ತ್ರೀಯರು ಮುದ್ರೆ ಹಾಕಿಸಿಕೊಳ್ಳುವರು. ಮುದ್ರೆಗಳಲ್ಲಿಯೇ ಎರಡು ವಿಧಗಳಿವೆ: ೧. ಗಟ್ಟಿಮುದ್ರೆ ೨. ಹೂಮುದ್ರೆ. ಗಟ್ಟಿಮುದ್ರೆ ಪರಂಪರೆ ಹೂಮುದ್ರೆಗಿಂತಲೂ ಹೆಚ್ಚು ಪ್ರಾಚೀನವಾದುದಾಗಿರಬೇಕು. ಯಾಕೆಂದರೆ ಉಗ್ರ ಆಚರಣೆಗಳು ನಾಗರೀಕತೆಗೆ ಒಳಗಾದಂತೆಲ್ಲಾ ಸೌಮ್ಯಗೊಳ್ಳುತ್ತಾ ಹೋಗುತ್ತವೆ. ಮತ್ತೊಂದು ಕುತೂಹಲದ ಸಂಗತಿಯೆಂದರೇ ಹೂಮುದ್ರೆ ಹಾಕಿಕೊಳ್ಳುವ ಸಂಪ್ರದಾಯ ಮಾಧ್ವ ಸಂಪ್ರದಾಯದ ಬ್ರಾಹ್ಮಣರಲ್ಲಿಯೂ ಇದೆ.

ನಾನು ಸಂದರ್ಶಿಸಿದ ಗಟ್ಟಿಮುದ್ರೆ ಹಾಕಿಸಿಕೊಂಡ ಮಹಿಳೆಯರೆಲ್ಲಾ ಅದನ್ನು ವೈಭವೀಕರಿಸಿಯೇ ಹೇಳಿದರು. ಅದರ ಆಳದೊಳಗಿನ ವಿಕಾರತೆ ಕ್ರೂರತೆ ಅವರಿಗರ್ಥವಾಗಿತ್ತೋ ಇಲ್ಲವೊ! ಕಮಲಾಪುರದ ಲಕ್ಷ್ಮಿ (ಹೆಸರು ಬದಲಾಯಿಸಲಾಗಿದೆ) ಬಹಳ ಸೂಕ್ಷ್ಮವಾಗಿ ಪ್ರತಿಕ್ರಿಯಿಸಿದಳು. "ಪಂಚಲೋಹದ ಮುದ್ರೆಗಳನ್ನು ನಮಗೆ ಹಾಕಿದರೆ ನಾವು ಬಸವಿಯರಾದಂತೆ. ಶಂಖ, ಚಕ್ರ, ಪದ್ಮ ಹೀಗೆ ಮೂರು ಮುದ್ರೆಗಳಿರುತ್ತವೆ. ಮುದ್ರೆಗಳನ್ನು ಹರೆಯದ ಹುಡುಗಿಗೆ ಮಾತ್ರ ಹಾಕುವರು. ನನಗಾಗ ಹದಿನಾರು ವರ್ಷ ವಯಸ್ಸು. ವಯಸ್ಸಿಗನುಗುಣವಾಗಿ ನನ್ನಲ್ಲಿ ದೈಹಿಕ ಬದಲಾವಣೆಗಳಾಗಿದ್ದವು. ಏಕಾಏಕಿ ಮನೆಯಲ್ಲಿ ನನ್ನನ್ನು ಬಸವಿ ಬಿಡುವ ಯೋಜನೆಯನ್ನು ಹಾಕಿಕೊಂಡರು. ಒಂದು ಮುಹೂರ್ತವನ್ನು ನಿಗದಿಪಡಿಸಿ, ತಲೆ ಸ್ನಾನ ಮಾಡಿಸಿ ಹನುಮಂತ ದೇವರ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಆ ಗುಡಿಯ ಪೂಜಾರಿ ನಮ್ಮ ಜಾತಿಯವನೇ (ನಾಯಕ). ಮಡಿ ಸೀರೆಯನ್ನು ಉಡಿಸಿದ ನನಗೆ ಎಲೆ ಅಡಿಕೆಯನ್ನಿಟ್ಟು ಏನೇನೋ ಶಾಸ್ತ್ರಗಳನ್ನು ಮಾಡಿದರು. ದೇವರೆದುರಾಗಿ ನನ್ನನ್ನು ಕೂಡಿಸಿದ್ದರು. ನನಗೆ ಎದುರಾಗಿ ಪೂಜಾರಿ ಕುಳಿತಿದ್ದನು. ಮುದ್ರೆ ಹಾಕಲು ಮೈಮೇಲಿನ ಜಂಪರಿನ ಗುಂಡಿಗಳನ್ನು ಬಿಚ್ಚಲು ಹೇಳಿದರು. ನಾನು ಹೌಹಾರಿದೆ. ಭೂಮಿ ತಾಯಿ ನನ್ನನ್ನೇಕೆ ನುಂಗಿ ಪುಣ್ಯಕಟ್ಟಿಕೊಳ್ಳುತ್ತಿಲ್ಲ ಎನಿಸಿತು. ಅಪಮಾನದಿಂದ ಕುಗ್ಗಿ ಹೋದ ನನ್ನ ದೊಡ್ಡ ದೇಹ ಹಿಡಿಯಷ್ಟಾಗಿತ್ತು. ನನ್ನ ಕಣ್ಣೀರಿಗೇನಾದರು ಶಕ್ತಿ ಬಂದಿದ್ದರೆ ನಮ್ಮವ್ವ, ಅಪ್ಪ, ಪೂಜಾರಿ, ಅದಕ್ಕೆ ಕಾರಣವಾದ ಈ ಸಮಾಜ ಎಲ್ಲವೂ ಹೇಳಹೆಸರಿಲ್ಲದಂತೆ ಕೊಚ್ಚಿ ಹೋಗಬೇಕಾಗಿತ್ತು. ಹೆತ್ತ ತಾಯಿಯಿಂದಲೂ ಬಚ್ಚಿಟ್ಟುಕೊಂಡ ನನ್ನ ದೇಹ ಅಂದು ದೇವಾಲಯದಲ್ಲಿ ಸಾರ್ವಜನಿಕವಾಗಿ ಬೆತ್ತಲುಗೊಂಡಿತ್ತು. ನಮ್ಮ ಮುಂದಿನ ಬದುಕಿಗೆ ಇದು ರಂಗತಾಲೀಮಾಗಿರಬೇಕು.

ಪೂಜಾರಿಯನ್ನೊಳಗೊಂಡಂತೆ ಅಲ್ಲಿದ್ದವರ ಮುಖವೆಲ್ಲ ಚಕ್ಕನೇ ವಿದ್ಯುದೀಪದಂತೆ ಹತ್ತಿಕೊಂಡವು. ಎದುರುಗಡೆ ಕೆಂಡದಲ್ಲಿ ಕಾದು ಕೆಂಡದಂತೆಯೇ ನಿಗಿನಿಗಿಸುತ್ತಿದ್ದ ಮುದ್ರೆಗಳಿದ್ದವು. ಅದನ್ನು ನೋಡಿ, ಮುಂದಿನದನ್ನು ನೆನಪಿಸಿಕೊಂಡೆ ತೊಡೆ ಸಂದಿಯಲ್ಲಿ ನಡುಕವುಂಟಾಗಿ ಅಲ್ಲಿಗೆ ಸಣ್ಣಗೆ ಉಚ್ಚೆಹೋಯಿತು. ಅದನ್ನು ಹೇಳುವ ಸ್ಥಿತಿಯಲ್ಲಿ ನಾನು ಇರಲಿಲ್ಲ. ಕೇಳುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ವೀಳ್ಯೆದೆಲೆಯನ್ನು ಎದೆಯ ಮೇಲ್ಭಾಗದ ಎರಡೂ ಬದಿಗೆ ಇಟ್ಟು ಅವುಗಳ ಮೇಲೆ ಮುದ್ರೆಗಳನ್ನು ಒತ್ತಿದರು. ಎಡಭಾಗಕ್ಕೆ ಶಂಖ, ಬಲಭಾಗಕ್ಕೆ ಚಕ್ರ ಇತ್ತು. ಅದೇ ಕ್ಷಣದಲ್ಲಿಯೇ ಬಲಗೈ ತೋಳ ಮೇಲೆ ಪದ್ಮವನ್ನು ಹಾಕಿದರು. ಅಪಮಾನ ಹಾಗೂ ನೋವುಗಳನ್ನು ತಾಳಿಕೊಳ್ಳಲಾರದ ನಾನು ಯಮನ ಮನೆಗೆ ಮುಟ್ಟುವಂತೆ ಚೀರಿದೆನು. ನನ್ನ ತಾಯಿ ಗಾಭರಿಗೊಂಡಳು. ಪೂಜಾರಿ ತಕ್ಷಣ ನನ್ನ ಬಾಯಲ್ಲಿ ಬಾಳೆಹಣ್ಣನ್ನು ಇಟ್ಟನು. ಸಾವು ನೋವಿನ ಸಂಕಟದಲ್ಲಿ ಅದನ್ನು ಕಚ್ಚಿ ಬೀಸಾಕಿದೆ. ನನ್ನವ್ವ ಏನೋ ಅಘಟಿತ ಘಟನೆ ಸಂಭವಿಸಿದಂತೆ ಎದೆ ಎದೆ ಹೊಡೆದುಕೊಂಡು ಅಳಲು ಪ್ರಾರಂಭಿಸಿದಳು. ಮುದ್ರೆ ಹಾಕಿಸಿಕೊಳ್ಳುವಾಗ ಹಾಗೂ ಗಾಯ ಮಾಯುವವರೆಗೂ ನೋವು ಎಂದು ನರಳಬಾರದಂತೆ. ಚಾರಿತ್ರಹೀನರಿಗೆ ಮಾತ್ರ ನೋವಾಗುವುದಂತೆ, ಗಾಯಕ್ಕೆ ಹುಳುಬೀಳುವುದಂತೆ. ಈ ನಂಬಿಕೆ ಪ್ರಚಲಿತದಲ್ಲಿದ್ದುದರಿಂದಲೇ ಗಟ್ಟಿಮುದ್ರೆ ಹಾಕಿಸಿಕೊಂಡವರಾರೂ ನೋವಾಗಿದೆ ಎಂದು ಹೇಳುವುದಿಲ್ಲ. ಅದು ಹ್ಯಾಂಗ ನೋವಾಗುವುದಿಲ್ಲ ನೀವೇ ವಿಚಾರಿಸಿ, ಒಂದು ಸಣ್ಣ ಇರುವಿ ಕಡದ್ರ ಅವ್ವಾ ಅಂತ ಚೀರತೀವಿ. ಕಾಸಿ ಬೆಂಕಿ ಇಟ್ರ್ರ ನೋವಾಗಂಗಿಲ್ಲೇನು? ಮುದ್ರೆ ಹಾಕಿದ ಮೇಲೆ ಹನುಮದಾಳಿ ಕಟ್ಟಿದರು. ತಾಳಿ ಮೇಲೆ ಹನುಮಂತನ ಮುದ್ರೆ ಇರುತ್ತದೆ. ನಮ್ಮದು ಒಂಟಿ ತಾಳಿ. ಗಂಡುಳ್ಳವರಂಗ ಎರಡು ತಾಳಿ ಇರುವುದಿಲ್ಲ”.[೪] ಇಷ್ಟು ಹೇಳಿದ ಅವಳ ಗಂಟಲು ನರಗಳು ಉಬ್ಬಿನಿಂತಿದ್ದವು. ಕಣ್ಣುಗಳು ತೇವವಾಗಿದ್ದವು. ಅವಳ ದುಃಖದ ಆಳ ನನಗೆ ನಿಲುಕಿತ್ತು. ಬಾಯಲ್ಲಿ ಸೆರಗನ್ನು ಉಂಡೆಯಾಗಿಸಿಕೊಂಡ ಅವಳು ಒಳಗಿನ ರೂಮಿನೊಳಗೆ ಓಡಿಹೋದಳು. ಅವಳನ್ನು ಮರಳಿ ಕರೆದು ಸಂತೈಸುವ ಚೈತನ್ಯ ನನ್ನಲ್ಲಿ ಉಡುಗಿ ಹೋಗಿತ್ತು.

ಮರಿಯಮ್ಮನ ಹಳ್ಳಿಯಲ್ಲಿಯ ಭೀಮವ್ವ ಹೂಮುದ್ರೆ ಹಾಕಿಸಿಕೊಂಡವಳು. ಅದನ್ನು ಅವಳು ಬೇಸರದಿಂದಲೇ ನೆನಪಿಸಿಕೊಂಡಳು. “ನನಗೆ ಹೂಮುದ್ರೆ ಹಾಕಿದಾಗ ಹದಿನೈದು - ಹದಿನಾರು ವರ್ಷ ವಯಸ್ಸಾಗಿತ್ತು. ಗಟ್ಟಿಮುದ್ರೆ ಹಾಕಿಸಿಕೊಂಡ್ರ ಬಾಳ ನೇಮನಿತ್ಯದಿಂದ ನಡಕೋಬೇಕಾಗತೈತಿ. ಮದಲಿನಿಂದ ಚರಿತ್ರೆಯನ್ನು ಸುದ್ದ ಇಟಕೋಬೇಕಾಗತೈತಿ. ಅದೆಲ್ಲ ಕಷ್ಟ. ನಾನು ಹನುಮದೇವರ ಬಿರುದಾವಳಿ ಹೊತ್ತಕೊಂಡೇನಿ. ಅವತ್ತ ಹನುಮಂತ ದೇವರ ಗುಡಿಗೆ ಕರಕೊಂಡ ಹೋದ್ರು. ನನಗ ಹೊಸಾ ಬಟ್ಟಿ ಉಡಿಸಿದ್ರು. ಪೂಜಾರೆಪ್ಪ ಬಂದು ಅದೇನೇನೋ ಎಲಿ ಶಾಸ್ತ್ರ ಮಾಡಿದಾ. ಅಮ್ಯಾಲಿ ಎದಿಭಾಗವನ್ನು ಬೆತ್ತಲು ಮಾಡಬೇಕಂತ ಹೇಳಿದರು. ನನ್ನ ಜೀವಾ ಬಾಯಾಗ ಬಂದ್ಹಂಗ ಆಯ್ತು. ಆದ್ರೂ ತಗೀದಽ ಬ್ಯಾರೆ ದಾರಿ ಇರ್ಲಿಲ್ಲ. ಎರಡು ಮಲ್ಲಿಗಿ ಹೂವ್ನ ದೇವರ ಮುಂದ್ಲ ದೀಪಕ್ಕ ಹಿಡ್ದು ಒಮ್ಮಾಕ ಎರಡೂ

ಎದೆ ಮ್ಯಾಗ ಒತ್ತಿದಾ. ಹೀಂಗ ಆದ್ರ ಹೂ ಮುದ್ರಿ ಹಾಕಿದ್ಹಾಂಗ. ಅದಾದಮ್ಯಾಲಿ ಹನುಮ ದಾಳಿ ಕಟ್ಟಿದಾ. ಇಷ್ಟಾದ್ರ ನಾವು ಬಸವೇರು ಅದ್ಹಂಗ" ಎಂದು ಹೇಳಿ ಎದುರಿಗಿನ ಗೋಡೆಯನ್ನು ದಿಟ್ಟಿಸುತ್ತ ಕುಳಿತಳು. ಅವರವರ ಮನೆತನದ ಸಂಪ್ರದಾಯಕ್ಕನುಗುಣವಾಗಿ ಕೆಲವರು ಮುದ್ರೆ ಹಾಕಿಸಿಕೊಂಡರೆ, ಮತ್ತೆ ಹಲವರು ಮುತ್ತು ಕಟ್ಟಿಸಿಕೊಳ್ಳುತ್ತಾರೆ. ಇಂಥ ಜಾತಿಯವರೇ ಮುದ್ರೆ ಹಾಕಿಸಿಕೊಳ್ಳಬೇಕು, ಇಂಥ ಕುಲದವರೇ ಮುತ್ತು ಕಟ್ಟಿಸಿಕೊಳ್ಳಬೇಕೆಂಬ ನಿರ್ಬಂಧವೇನಿಲ್ಲ. ಪುರುಷನ ಲೈಂಗಿಕ ಸ್ವೇಚ್ಛಾಚಾರದ ಅಧಿಕಾರಕ್ಕೆ ಈ ಮುದ್ರೆಗಳು ಜೀವಂತ ಸಾಕ್ಷಿಗಳು. ಜೀತದಾಳಿನ ಕಾಲುಗಳಿಗೂ ಮುದ್ರೆ ಹಾಕುತ್ತಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈಗ ಕೂಡ ಇದೆ. ಮೇಲ್ವರ್ಗದ ಸ್ವಾರ್ಥಕ್ಕೆ ಮುದ್ರೆಯೊತ್ತಿಸಿಕೊಂಡ ಗಂಡು ಜೀತದಾಳು ವರ್ಗ, ಜಾತಿ ನೆಲೆಯಲ್ಲಿ ಒಂದು ರೀತಿಯ ಶೋಷಣೆಗೆ ಒಳಪಟ್ಟರೆ, ಮುದ್ರೆಯೊತ್ತಿಸಿಕೊಂಡ ಈ ಬಗೆಯ ಲೈಂಗಿಕದಾಸಿಯರು ಜಾತಿ, ವರ್ಗ ಹಾಗೂ ಲಿಂಗ ಕಾರಣದಿಂದಾಗಿ ಅವರಿಗಿಂತ ಭೀಕರ ಶೋಷಣೆಗೆ ಒಳಪಟ್ಟರು.

ರೇಣುಕೆ ಸಂಪ್ರದಾಯದಲ್ಲಿ ಮುದ್ರೆ ಹಾಕಿಸಿಕೊಳ್ಳುವುದಿಲ್ಲ. ಅವರ ಮುತ್ತುಕಟ್ಟಿಸಿಕೊಳ್ಳುವ ಸಾಂಸ್ಕೃತಿಕ ಪ್ರಕ್ರಿಯೆ ಮುದ್ರೆ ಹಾಕಿಸಿಕೊಳ್ಳುವರಿಗಿಂತಲೂ ಭಿನ್ನವಾಗಿದೆ. ಹುನಗುಂದದ ಭೀಮವ್ವ ಎಲ್ಲವನ್ನೂ ಸವಿವರವಾಗಿ ಮಾನಸಿಕ ಸ್ಥಿಮಿತತೆಯನ್ನು ಕಾಪಾಡಿಕೊಂಡು ಹೇಳಿದಳು. "ಕರೀ ಕಂಬಳಿ ಹಾಸ್ತಾರ. ಸ್ಯಾಸಕ್ಕಿ ಹೊಯ್ತಾರ[೫] ಗಂಡಿನ ಜತೆ ಮದ್ವಿಯಾಗುವರ್ಗಿ ಇಬ್ಬರು ಕುಂಡ್ರುವ್ಹಂಗ ಎರಡ ಚೌಕ ಸ್ಯಾಸಕ್ಕಿ ಹಾಕ್ತಾರ. ಆದ್ರ ನಮಗ ಹಂಗಲ್ಲ. ಒಂದ ಚೌಕಾ ಮಾತ್ರ ಹಾಕ್ತಾರ. ನಮಗ ಸಂವದತ್ತಿಗಿ ಹೋಗಾಕ ಆಗ್ಲಿಲ್ಲ. ಹೀಂಗಾಗಿ ನಮ್ಮ ಕಾರ್ಯಾ ಮನಿಯಾಗ ಮಾಡಿದ್ರು. ಸೂಳೇರ ಮದ್ವಿಗಿ ಗಂಡುಳ್ಳವರು ಯಾಕ ಬರ್ತಾರ? ಜೋಗತೇರ ಸೇರಿರ್ತಾರ. ಏನಿಲ್ಲಂದ್ರೂ ಐದ ಮಂದಿ ಜೋಗತೇರು ಇರಾಕಬೇಕು. ತೆಲಿಸ್ನಾನಾ ಮಾಡಿಸ್ತಾರ, ಹೊಸಸೀರಿ ಉಡಸ್ತಾರ. ಎರಡ ಕೆಂಪ ಮುತ್ತು, ಮೂರು ಬಿಳಿ ಮುತ್ತು ದಾರದಾಗ ಹಾಕಿ ಪೋಣಸ್ತಾರ. ಅದು ನಮಗ ತಾಳಿ ಇದ್ಹಾಂಗ. ಪೂಜಾರಪ್ಪ ಏನೇನೋ ಶಾಸ್ತ್ರ ಮಾಡಿಸಿ ಹಿರಿ ಜೋಗತಿ ಕಡಿಯಿಂದ ಮುತ್ತ ಕಟ್ಟಸ್ತಾನ. ನನ್ನ ಕಾರ್ಯಕ ಬಂದ ಪೂಜಾರಿ ಕುರುಬರವನು. ಒಮ್ಮಿ ಮುತ್ತು ಕಟ್ಟಿಸಿಕೊಂಡ ಮ್ಯಾಕ ನಮಗ ಮದ್ವಿ ಆಗಾಕ ಬರಂಗಿಲ್ಲ. ನಮ್ದು ದೇವಿ ಜೊತೆ ಮದ್ವಿ ನಡೆದು ಹೋಗಿರ್ತದ. ನಮ್ಮವ್ವ ಅಪ್ನಿಗೆ ದಕ್ಷಿಣಾ, ಉಲ್ಪಿ ಇಟ್ಟುಕೊಟ್ಟಳು. ಮುತ್ತು ಕಟ್ಟಿದ ಮ್ಯಾಕ ಪಡ್ಡಲಗಿ ಕೊಟ್ಟು ನಮ್ಮಿಂದ ಭಾಷಾ ತಗೋತಾನ. ಬಾಲಬಾಷಿ[೬] ಮಾತನಾಡಬಾರದು. ಯಾರರ ಸತ್ರು, ಕೆಟ್ರು ಉಣಬಾರ್ದು. ಮೆಟ್ಟ[೭] ಮುಟ್ಟಬಾರದು. ನಿನ್ನ ಮನಿಗಿ ಯಾರಾದ್ರೂ ಏನಾರ ಕೇಳಕೊಂಡು ಬಂದ್ರೂ ಇಲ್ಲ ಅನ್ನಬಾರ್ದು. ಹೀಂಗ ಬಾಳಽನೇಮ ನಿತ್ಯ ಹೇಳ್ತಾರ. ಅವರು ಒಂದೊಂದು ಮಾತಿಗೂ ಭಾಷ್ಯಾ[೮] ಇಸಗೋತಾರು. ನಾವು ಆಯ್ತರಿ ಅಂತ ಹೇಳಿ ಭಾಷ್ಯಾ ಕೊಡ್ತೀವಿ. ಆಮ್ಯಾಲಿ ಐದವಾರ ಊರಾಡಾಕ್[೯] ಹೋಗಬೇಕು. ಐದಿನಿ ವಾರ ಮುತ್ತ ಕಟ್ಟಿಸಿದ ದಿವಸದ್ಹಂಗ ಸಿಹಿ ಅಡಗಿ, ಮಾಂಸದಡಿಗಿ ಮಾಡ್ತಾರ. ಒಂದು ತಟ್ಟ್ಯಾಗ ಮಾಡಿದ ಅಡಿಗೀನು ಬಡಸ್ತಾರ, ಅದು ಮುಖ್ಯ ಎಡಿ. ಅದನ್ನು ಜೋಗತೇರು ಬಿಟ್ರ ಮತ್ತ್ಯಾರು ಮುಟ್ಟಂಗಿಲ್ಲ.

ಅದನ್ನ ಐದ ಮಂದಿ ಹಿರೆ ಜೋಗತೇರ್ಗಿ ಎಡಿ ಇಡ್ತಾರ. ಅದನ್ನ ಜೋಗತೇರು ಮೊದಲು ಉಂತಾರ. ಆಮ್ಯಾಕ ಅವರ ಜೊತಿ ಅದೇ ತಟ್ಯಾಗ ಮುತ್ತು ಕಟ್ಟಿಸಿಕೊಂಡಾಕಿ ಉಣಬೇಕು. ತಟ್ಟಿ ಸುತ್ತ ನಾವೆಲ್ಲರು ಗುಂಡಕ ಕುಂತು ಊಟ ಮಾಡ್ತೀವಿ. ಅಂದಿಗೆ ನಾನು ಜೋಗತೇರು ಕುಲದಾಗ ಬಿದ್ಹಂಗ. ಇದು ನಮಗ ಮುತ್ತು ಕಟ್ಟಿಸಿಕೊಂಡಷ್ಟು ಮಹತ್ವದ ಕಾರ್ಯ. ಇಷ್ಟೆಲ್ಲ ಆಗೋತನಕ ನಾವು ಯಾವ ಗಂಡಸರನ್ನೂ ಕೂಡಂಗಿಲ್ಲ.' ಈ ಆಚರಣೆಯನ್ನು ಅವಳು ಸಹಜವಾಗಿ ಸ್ವೀಕರಿಸಿದ್ದಳು. ಅಂದರೆ, ಅವಳ ದೃಷ್ಟಿಯಲ್ಲಿ ಜೋಗತಿಯಾಗುವುದು ತಪ್ಪಲ್ಲ. ಅದು ಆಚರಣೆ ಅಷ್ಟೆ.

ಗಂಡನಿದ್ದೂ ಕೆಲವರು ಮುತ್ತು ಕಟ್ಟಿಸಿಕೊಳ್ಳುತ್ತಾರೆ. ಆದರೆ ಅವರು ಜೋಗತಿಯರಲ್ಲ. ಅವರು ಲೌಕಿಕ ಪಂಥಕ್ಕೆ ಸೇರಿದವರಾಗಿರುತ್ತಾರೆ. ದೇವಿಕಾಟದಿಂದ ಮುತ್ತುಕಟ್ಟಿಸಿಕೊಳ್ಳು ತ್ತಾರೆ. ಅದಕ್ಕೆ ಕಾಟಮುತ್ತು ಎನ್ನುತ್ತಾರೆ. ಮತ್ತೆ ಕೆಲವರು ಕುಲ ಪರಂಪರೆಯಿಂದಾಗಿ ಕಟ್ಟಿಸಿಕೊಳ್ಳುವರು. ಅಂತಹ ಮನೆತನಗಳಲ್ಲಿ ದೇವಿ ಮುತ್ತನ್ನು ಹಿರಿ ಸೊಸೆಯಾದವಳು ಕಟ್ಟಿಕೊಳ್ಳಲೇಬೇಕು. ಅದು ಅವರ ಮನೆತನದಲ್ಲಿ ತಲೆತಲಾಂತರದಿಂದ ಬಂದುದಾಗಿರುತ್ತದೆ. ಆದರೆ ಬಸವಿ ಪರಂಪರೆಯಾಗಲಿ, ಜೋಗತಿ ಸಂಪ್ರದಾಯವಾಗಲಿ ತಲೆಮಾರಿನಿಂದ ತಲೆಮಾರಿಗೆ ಬಂದುದಾಗಿರುವುದಿಲ್ಲ. ಕಾಟಮುತ್ತಾಗಲಿ, ತಲೆಮಾರಿನಿಂದ ಬಂದ ಮುತ್ತಾಗಲೀ ಹುಡುಗಿ ಗಂಡಿನೊಂದಿಗೆ ಮದುವೆಯಾದ ನಂತರವೇ ಕಟ್ಟಿಸಿಕೊಳ್ಳಬೇಕು. ಲಗ್ನದ ಪೂರ್ವದಲ್ಲಿ ಕಟ್ಟಿಸಿಕೊಂಡರೆ ಅವಳು ಜೋಗತಿಯಾಗುತ್ತಾಳೆ. ಜೋಗತಿಯರಿಗೆ ಕಟ್ಟುವ ಮುತ್ತನ್ನೇ ಅವರಿಗೂ ಕಟ್ಟುತ್ತಾರೆ. ಗಂಡನಿದ್ದವರು ಕಟ್ಟಿಸಿಕೊಂಡರೆ ಗರತಿ ಮುತ್ತಾಗುತ್ತದೆ. ಗಂಡನಿಲ್ಲದವರು ಕಟ್ಟಿಕೊಂಡರೆ ಸೂಳೆಮುತ್ತಾಗುತ್ತದೆ. ಕೆಂಪು - ಬಿಳಿ ಮುತ್ತುಗಳನ್ನು ಮಾತ್ರ ದಾರದಲ್ಲಿ ಪೋಣಿಸಿ ಕಟ್ಟಿಕೊಂಡಿದ್ದರೆ ಸೂಳೆ ಮುತ್ತು. ಕೆಂಪು ಬಿಳಿ ಮುತ್ತುಗಳ ಮಧ್ಯಮಧ್ಯದಲ್ಲಿ ಬೆಳ್ಳಿ ಇಲ್ಲವೇ ಬಂಗಾರದ ದೇವಿ ಪಾದ, ಮುಖ, ನಾಲಿಗಿ, ಮುಳ್ಳು ಮುಂತಾದವು ಗರತಿ ಮುತ್ತಿನಲ್ಲಿರುತ್ತವೆ. ಸೂಳೆ ಮುತ್ತು ಕಟ್ಟಿಸಿಕೊಂಡವರು ಈಗ ಮುತ್ತುಗಳ ಮಧ್ಯದಲ್ಲಿ ದೇವಿಪಾದ, ಮುಳ್ಳು ಮೊದಲಾದವುಗಳನ್ನು ಹಾಕಿಕೊಳ್ಳುವುದು ಫ್ಯಾಶನ್ ಆಗಿಬಿಟ್ಟಿದೆ. ಇವರು ಕಟ್ಟಿಕೊಳ್ಳುವ ಮುತ್ತಿನಲ್ಲಿ ಎಂಜಲು ಮುತ್ತು, ಮೀಸಲು ಮುತ್ತು ಎಂದು ಎರಡು ಬಗೆಯಲ್ಲಿ ಇರುತ್ತವೆ. ಹೆಚ್ಚಿನವರು ಎಂಜಲು ಮುತ್ತನ್ನು ಕಟ್ಟಿಸಿ ಕೊಳ್ಳುತ್ತಾರೆ. ಇಂತಹವರು ಮಕ್ಕಳ ಅಥವಾ ಕುಟುಂಬದ ಇನ್ನಿತರ ಸದಸ್ಯರು ಬಿಟ್ಟ ಎಂಜ ಲನ್ನು ತಿನ್ನಬಹುದು. ಮಡಿವಂತಿಕೆಯನ್ನು ಕಟ್ಟುನಿಟ್ಟಾಗಿ ಅನುಸರಿಸುವಂತಿಲ್ಲ. ಮೀಸಲು ಮುತ್ತು ಕಟ್ಟಿಸಿಕೊಂಡಂತಹವರು ಕಟ್ಟುನಿಟ್ಟಿನಿಂದ ಇರಬೇಕಾಗುತ್ತದೆ. ಮೊದಲಲ್ಲಿ ಜೋಗತಿ ಯರು ಮೀಸಲು ಮುತ್ತನ್ನು ಕಟ್ಟಿಸಿಕೊಂಡರೆ, ಗಂಡುಳ್ಳವರು ಎಂಜಲು ಮುತ್ತನ್ನು ಕಟ್ಟಿಸಿ ಕೊಳ್ಳುತ್ತಿದ್ದರು. ಜೋಗತಿಯರ ಅಲೌಕಿಕ ಬದುಕು ತೀರ ಲೌಕಿಕಕ್ಕಿಳಿದಾಗ ಅವರು ಕೂಡ ಎಂಜಲು ಮುತ್ತನ್ನು ಕಟ್ಟಿಕೊಳ್ಳಲು ಆರಂಭಿಸಿದರು. ಸೂಳೆ ಮುತ್ತು ಕಟ್ಟಿಸಿಕೊಂಡವರು ತಾವು ಮುಖ್ಯ ಜೋಗ ಪಂಥಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ.

ಅನೇಕ ದೇವಸ್ತ್ರೀಯರು ವೈವಾಹಿಕ ಚೌಕಟ್ಟನ್ನು ವಿರೋಧಿಸುತ್ತಾರೆ. ತಮ್ಮ ಬದುಕಿನ

ಕ್ರಮದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಮರಿಯಮ್ಮನಹಳ್ಳಿಯಲ್ಲಿ ಬಸವ್ವ (ಹೆಸರು ಬದಲಾಯಿಸಿಕೊಂಡಿದೆ) ಹೇಳಿದ ಮಾತುಗಳು ಅವರ ಬದುಕಿನ ಮತ್ತೊಂದು ಬಹುಮುಖ್ಯ ಆಯಾಮವನ್ನು ತೆರೆದು ತೋರಿತು. "ನಮ್ಮವ್ವಗ ನಾವು ಮೂರು ಮಂದಿ ಹೆಣ್ಣುಮಕ್ಳ ಇದ್ವಿ. ನಮ್ಮವ್ವ ಗಂಡುಳ್ಳಾಕಿ. ನಮ್ಮನ್ನ ಬಾಳಽಪ್ರೀತಿಯಿಂದ ಬೆಳಸಿದ್ಳು. ಆಗಿನ ಕಾಲಕ್ಕ 'ಸಂಬ್ಳ ಸಾಲಿ' ಅಂತ ಇತ್ತು. ಅವ್ರು ಸರ್ಕಾರದ ಮಾಸ್ತರರಲ್ಲ. ನಾವು ತಿಂಗಳಗಿ ಒಂದಿಷ್ಟು ಫೀಜು ಕೊಡತಿದ್ವಿ. ಅದಽ ಅವರಿಗಿ ಸಂಬಳ ಇದ್ದಂಗ. ತಿಂಗಳಗಿ ಒಂದು ರೂಪಾಯಿ, ಎರಡು ರೂಪಾಯಿ ಕೊಟ್ಟದ್ದು ನೆನಪು. ಗುಡಿಯಾಗ ಪಾಠಾ ಮಾಡತಿದ್ರು. ನಮ್ಮ ಕಾಲಕ್ಕ ಗುಡಿಗಳಽ ಸಾಲಿಗಳಿದ್ದಂಗ. ನಮಗೆ ಗದುಗಿನ ಭಾರತ, ಜೈಮಿನಿ ಭಾರತ ಓದಲು ಬರುತ್ತಿತ್ತು. ಅವುಗಳಲ್ಲಿಯ ಅನೇಕ ಭಾಗಗಳನ್ನು ಕಂಠಪಾಠದಿಂದಲೇ ಹೇಳುತ್ತಿದ್ದೆವು. ಇದ ನಮ್ಮವ್ವಗ ಬಾಳ ಹಿಗ್ಗ ತರ್ತಿತ್ತು. ಆಗಿನ ಜನಾನೂ ನಾವು ಶಾಲಿಗಿ ಹೋಗೂದು, ಬರೂದು, ಪಾಠ ಹೇಳೂದು ಎಲ್ಲಾನೂ ಬಾಳಽ ಬೆರಗಿನಿಂದ ನೋಡ್ತಿದ್ರು. 'ನನ್ನ ಮಕ್ಕಳ್ನ ಏಟ ಪ್ರೀತಿಯಿಂದ ಬೆಳಸಿನಿ. ಅಕ್ಷರ ಕಲಿಸೇನಿ ಅದಕ್ಕ ನಾ ಅವ್ರಿಗಿ ಮದ್ವಿ ಮಾಡ್ಹಾಂಗಿಲ್ಲ ತಗಿ' ಅಂತ ನಮ್ಮವ್ವ ಅಂತಿದ್ಳು. ಆಗಿನ ಕಾಲಕ್ಕ ಮದುವಿ ಮಾಡಿಕೊಂಡುರ ಪರಿಸ್ಥಿತಿನೂ ಹಂಗಽ ಇತ್ತು. ನಮ್ಮ ಕಾಲಕ್ಕೆ ನಮ್ಮ ಕೆಳಜಾತಿ ಹೆಂಗಸರು ಮದ್ವಿಯಾಗಿದ್ರೂ ಬ್ಯಾರೆ ಗಂಡಸರ ಜೊತೆ ಓಡಿ ಹೋಗ್ತಿದ್ರು. ಓಡಿ ಹೋದ ಹೆಂಗಸರ್ನ ಹೊಡಮಳ್ಳಿ ಕರಕೊಂಡು ಬಂದು, ಅಂಥವರ ಜೊತಿ ಬಾಳ್ವೆ ಮಾಡ್ತಿದ್ರು. ಅಂಥಾ ಹೆಂಗಸರಿಗಿ ಗಾಲಿ ಹಾಕ್ತಿದ್ರು."[೧೦] ಎರಡೂ ಮುಂಗಾಲುಗಳಿಗೆ ದಪ್ಪನೆಯ ಗಾಲಿಗಳನ್ನು ಹಾಕಿರುತ್ತಿದ್ದರು. ಅವು ಎಷ್ಟು ಭಾರವಾಗಿರುತ್ತಿದ್ವು ಅಂದ್ರ ಒಂದ್ಹೆಜ್ಜಿ ಕಿತ್ತ ಇಡಬೇಕಿದ್ರ ಬಾಳಽ ತ್ರಾಸ ಮಾಡಕೊತಿದ್ರು. ಆ ಗಾಲಿಗಳಿಗೆ ಕಬ್ಬಿಣದ ಸರಪಳಿ ಜೋಡಿಸಿರ್ತಿದ್ದರು. ಕಟ್ಟಿಗೆಯ ಭಾರದ ಜೊತೆಗೆ ಕಬ್ಬಿಣದ ಒಜ್ಜಿನೂ ಹೊರಬೇಕಾಗಿತ್ತು. ನಡಿಯುವಾಗ ಕಬ್ಬಿಣದ ಸರಪಳಿಯನ್ನು ಕೈಯಾಗ ಹಿಡಕೊಂಡ ತಿರಗಾಡಬೇಕಾಗ್ತಿತ್ತು. ಯಾವ ಹೆಣ್ಣಿಗಿ ಗಾಲಿ ಹಾಕಿರ್ತಿದ್ದರೊ, ಅವಳು ಓಡಿ ಹೋಗಿ ಬಂದವಳೆಂದೇ ಅರ್ಥ. ಕೂಲಿ ನಚ್ಚಿಕೊಂಡು ಬದುಕುವ ಜೀವಗಳು ನಮ್ಮವು. ಗಾಲಿ ಹಾಕ್ಕೊಂಡ ಮನಿಯಾಗ ಕೂಡಾಗ ಆಗ್ತಿರಲಿಲ್ಲ. ಬಯಲು ಕಡಿಗೆ ಹೋಗಬೇಕಿದ್ರ, ಹೊಲದ ಕೆಲಸಕ್ಕೆ ಹೋಗಬೇಕಿದ್ರ ಆಕಿ ಬಯಲಿಗಿ ಬರಾಕ ಬೇಕಾಗ್ತಿತ್ತು. ಇವರನ್ನ ನೋಡಾಕ ಓಣಿಯವರೆಲ್ಲ ಬರ್ತಿದ್ರು. ಅವರು ತಗ್ಗಿಸಿದ ಚಂಡ (ತಲೆ) ಎತ್ತಿರಲಿಲ್ಲ. ಇನ್ನೊಮ್ಮಿ ಆಕಿ ಇಂಥಾ ತಪ್ಪನ್ನ ಮಾಡಬಾರ್ದು ಅಂತ ಶಿಕ್ಷಾ ಕೊಡ್ತಿದ್ರು. ಇಷ್ಟಾದ್ರೂ ಅವ್ರು ಮತ್ತ ಮತ್ತ ಓಡಿಹೋಗ್ತಿದ್ರು. ಗಂಡ ಅನಿಸಿಕೊಂಡವ್ರೂ ಅವ್ರಗೆ ಬಾಳಽ ಹಿಂಸಿ ಕೊಡತಿದ್ರು. ಹೀಂಗಾಗಿ ಗಂಡನ್ನ ಬಿಟ್ಟು ಪ್ರೀತಿ ತೋರಿಸಿದವ್ನ ಹಿಂದ ಓಡಿಹೋಗ್ತಿದ್ರು, ಮ್ಯಾಲಿನ ಜಾತ್ಯಾಗ ಇಂಥಾವೆಲ್ಲ ಇರ್ಲಿಲ್ಲ. ಅವ್ರ ಹೆಣ್ಣುಮಕ್ಳು ಹೊಸ್ತಿಲಿ ದಾಟಿದ್ದ ನಾ ನೋಡ್ಲಿಲ್ಲ. ನಮ್ಮಂದ್ಯಾಗ ಮಗಳಗಿ ಮದವಿ ಮಾಡೂದು ಅಂತಂದರ, ಆಕಿನ್ನ ಹಗಲಿ ಬಾವಿಗಿ ನೂಕಿದ್ಹಂಗ ಅನ್ನು ಕಲ್ಪನಾ ಇತ್ತು. ಹಿಂಗಾಗಿ ನಮ್ಮವ್ವ ನಮಗ ಮದುವಿ ಮಾಡ್ಲಿಲ್ಲ. ಸುಖವಾಗಿ ಬೆಳೆದ ಮಗಳು ಸುಖವಾಗಿ ತೌರಲ್ಲಿ ಉಳಿಯಾಕ

ಇದೊಂದ ದಾರಿ ಆಗಿತ್ತು" ಎಂದು ಹೇಳುತ್ತ ಗತಕಾಲಾದ ಸಾಮಾಜಿಕ ಮೌಲ್ಯಗಳ ನೆನಪಿನಾಳಕ್ಕೆ ಇಳಿಯುತ್ತ ಹೋದಂತೆಲ್ಲಾ ಅವಳ ಮನಸ್ಸು ಕಹಿಗೊಂಡಂತೆ ತೋರಿತು. ಯಾಕೋ ಸುಮ್ಮನೆ ಮೌನವನ್ನು ಅಪ್ಪಿಕೊಂಡಳು. ಮೇಲ್ವರ್ಗದ, ಮೇಲ್ಜಾತಿಯಲ್ಲಿ ಮಾತ್ರ ಹೆಣ್ಣಿನ ಶೀಲದ ಕುರಿತಂತೆ ಶಿಷ್ಟಾಚಾರಗಳು (?) ಕಂಡುಬರುವುದಿಲ್ಲ. ಈ ಸಮಸ್ಯೆ ಜಾತಿಯನ್ನು ಅವಲಂಬಿಸಿ ಬೆಳೆದು ಬಂದುದಲ್ಲ. ಲಿಂಗವನ್ನನ್ನುಸರಿಸಿ ಬೆಳೆದು ಬಂದುದಾಗಿದೆ. ಇಂತಹ ಸ್ತ್ರೀ ಕಥನಗಳು ವ್ಯವಸ್ಥೆಯ ವಿರುದ್ಧ ಬಂಡೆದ್ದ ಯಶೋಗಾಥೆಯನ್ನು ಹೇಳುತ್ತವೆ. ಬಹುಪಾಲು ದೇವಸ್ತ್ರೀಯರು ಮದುವೆಯನ್ನು ಗೇಲಿ ಮಾಡುತ್ತಾರೆ. "ಗಂಡ ಎನ್ನುವ ಸಾಂಸ್ಕೃತಿಕ ಪರಿಕಲ್ಪನೆಯೇ ಹೆಣ್ಣನ್ನು ನಿಯಂತ್ರಿಸುವುದು. ಆ ಮೂಲಕ ಎಲ್ಲ ಹಕ್ಕುಗಳನ್ನು ಅವಳ ಮೇಲೆ ಚಲಾಯಿಸುವುದಾಗಿದೆ." ಅವರ ಈ ಬಗೆಯ ನಿರ್ವಚನ ಅವರ ಆತ್ಮಶಕ್ತಿಯ, ವಿವೇಚನೆಯ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತವೆ. ಅನೇಕ ದೇವಸ್ತ್ರೀಯರು ನಿಜವಾದ ಸ್ತ್ರೀವಾದಿಗಳಂತೆ ಕಂಡಿದ್ದಾರೆ. ಅಧೀನತೆಗೆ ಒಳಪಡುವ 'ತಾಳಿ'ಯನ್ನು ತಿರಸ್ಕರಿಸಿ ಮುತ್ತುಕಟ್ಟಿಸಿಕೊಳ್ಳುತ್ತಾರೆ. ಬೇಕಾದ ಗಂಡಸರನ್ನು ಕೂಡಿಕೊಳ್ಳುತ್ತಾರೆ. ಅದು ಅವರ ದೃಷ್ಟಿಯಲ್ಲಿ ತಪ್ಪಲ್ಲ. ಮಾತೃಮೂಲ ಸಂಸ್ಕೃತಿಯ ಅಸಲಿ ಧೋರಣೆ ಇದಾಗಿದೆ. ಗಂಡು ಹೆಣ್ಣಿನ ಸಮಾಗಮ ನಿಸರ್ಗ ಸಹಜವಾದುದು. ಅದಕ್ಕೆ ವೈವಾಹಿಕ ಚೌಕಟ್ಟ್ಯಾಕೆ ಎನ್ನುವುದು ಅವರ ಖಚಿತ ನಿಲುವು. ಸ್ತ್ರೀವಾದಿ ಅಧ್ಯಯನಕ್ಕೆ ಈ ತರಹದ ಸಂಗತಿಗಳು ಹೊಸ ಹೊಸ ಆಯಾಮಗಳನ್ನು ಕಟ್ಟಿಕೊಡುತ್ತವೆ. ದೇವಸ್ತ್ರೀಯರ ಈ ನಿಲುವುಗಳನ್ನು ಕಂಡು ನಾವು ಸಂಭ್ರಮಿಸಬೇಕಾಗಿಲ್ಲ. ದೇವಸ್ತ್ರೀಯರು ನೆಚ್ಚಿಕೊಂಡ ಮೌಲ್ಯಗಳು ಯಥಾವತ್ತಾಗಿ ಸಮಾಜದಲ್ಲಿ ಚಾಲ್ತಿಯಲ್ಲಿಲ್ಲ. ಅವೆಲ್ಲ ಪುರುಷಶಾಹಿ ಸಂಸ್ಕೃತಿಯಲ್ಲಿ ವಿರೂಪಗೊಂಡು, ಅವಳು ಏನಿದ್ದರೂ ಗಂಡಿನ ಉಪಭೋಗದ ವಸ್ತುವಾಗಿ ನಿರ್ವಚಿಸಲ್ಪಟ್ಟಿದ್ದಾಳೆ.

ಮೇಲು-ಕೀಳು, ಮಡಿ-ಮೈಲಿಗೆಯ ಪರಿಕಲ್ಪನೆ ದೇವಸ್ತ್ರೀಯರಲ್ಲೂ ಇದೆ. ಊರ ನಾಯಕ ದೇವಸ್ತ್ರೀಯರು ಮ್ಯಾಸನಾಯಕ ದೇವಸ್ತ್ರೀರಿಯರಿಗಿಂತಲೂ ಶ್ರೇಷ್ಠವೆಂದು ಭಾವಿಸಿ ಕೊಳ್ಳುತ್ತಾರೆ. ತಳವಾರ ದೇವಸ್ತ್ರೀಯರು ಹರಿಜನ ದೇವಸ್ತ್ರೀಯರಿಗಿಂತಲೂ ಉನ್ನತವೆಂದು ಕೊಳ್ಳುತ್ತಾರೆ. ದೇವಸ್ತ್ರೀಯೊಳಗಿನ ಈ ತಾರತಮ್ಯಗಳು ನನ್ನನ್ನು ಒಂದು ಕ್ಷಣ ದಿಗ್ಭ್ರಾಂತಳನ್ನಾಗಿಸಿದವು. ಮ್ಯಾಸನಾಯಕರು, ಊರನಾಯಕರು ಹಾಗೂ ಗಂಗಮತದವರು ತಮ್ಮ ಜಾತಿ ಇಲ್ಲವೆ ಲಿಂಗಾಯತ ಮತ್ತು ಬ್ರಾಹ್ಮಣರನ್ನು ಹೊರತುಪಡಿಸಿದಂತೆ ಬೇರಾರೊಂದಿಗೂ ಲೈಂಗಿಕ ಸಂಬಂಧವನ್ನಿಟ್ಟುಕೊಳ್ಳುವುದಿಲ್ಲ. ನಾಯಕರು ನಮ್ಮ ಜನಾಂಗ ದವರೊಂದಿಗೆ, ಮೇಲ್ಜಾತಿಯವರೊಂದಿಗೆ ದೇಹಸಂಪರ್ಕವಿಟ್ಟುಕೊಳ್ಳುತ್ತಾರೆ. ಹರಿಜನ ದೇವಸ್ತ್ರೀಯರು ಹಾಗೂ ತಳವಾರ ದೇವಸ್ತ್ರೀಯರೊಂದಿಗೆ ಮೇಲ್ಜಾತಿಯ ಪುರುಷರ ಲೈಂಗಿಕ ಸಂಬಂಧವಿರುವ ಉದಾಹರಣೆಗಳು ಬಹಳ ವಿರಳ. ಅಂತ್ಯಜರಾದ ಈ ಮಹಿಳೆಯರತ್ತ ಅವರಾರೂ ಬರುವುದಿಲ್ಲ. ದೇವಸ್ತ್ರೀರಿಯರಲ್ಲಿಯ ಶ್ರೇಷ್ಠ-ಕನಿಷ್ಠತೆಗೆ ಅವರು ಇಟ್ಟುಕೊಂಡಿ ರುವ ಗಂಡಸರ ಜಾತಿ ಸಂಬಂಧಗಳೇ ಕಾರಣ. ಮೇಲ್ವರ್ಗದವನು, ಮೇಲ್ಜಾತಿಯವನು

ತನ್ನನ್ನು ಮೆಚ್ಚುತ್ತಾನೆನ್ನುವುದೇ, ಅವಳ ಪಾಲಿನ ಭಾಗ್ಯವಾಗಿ ಪರಿಣಮಿಸಿದೆ. ಅವರು ಯಾವ ದೇವಸ್ತ್ರೀಯರತ್ತ ಹೋಗುವುದಿಲ್ಲವೋ ಅಂಥವರು ಕನಿಷ್ಠರು ಎಂದುಕೊಳ್ಳುತ್ತಾರೆ. ತಮ್ಮ ಜಾತಿ ಇಲ್ಲವೆ ತಮಗಿಂತ ಶ್ರೇಷ್ಠ ಜಾತಿ ಎನ್ನಿಸಿಕೊಂಡವರೊಂದಿಗೆ ಸಂಬಂಧವಿಟ್ಟುಕೊಳ್ಳಲು ಇಷ್ಟಪಡುತ್ತಾರೆ ವಿನಹ ತಮಗಿಂತ ಕೆಳಜಾತಿಯವರೊಂದಿಗಲ್ಲ. ಮೇಲ್ವರ್ಗದ, ಮೇಲ್ಜಾತಿಯ ಪುರುಷರು ಮುಟ್ಟುವ ಮೂಲಕವೇ ಧನ್ಯತಾಭಾವವನ್ನು ಹೊಂದುವ ಈ ಮಹಿಳೆಯರು ತಮಗಿಂತ ಕೆಳಗಿನ ಜಾತಿಯವರೊಂದಿಗೆ ಎಷ್ಟರ ಮಟ್ಟಿಗೆ ಮಡಿ-ಮೈಲಿಗೆಯನ್ನು ಕಾಪಾಡಿಕೊಳ್ಳುತ್ತಾರೆಂದರೆ, ಅವರ ಮನೆಗೆ ಅತಿಥಿಯಾಗಿ ಹೋಗುವುದಿಲ್ಲ. ಅವರ ಮನೆಯಲ್ಲಿಯ ನೀರನ್ನೂ ಸಹ ಮುಟ್ಟುವುದಿಲ್ಲ. ಪ್ರಧಾನ ಧಾರೆಯಲ್ಲಿ ಬರುವ ಪುರುಷರು ಜಾತಿ ಪಾಲಿಟಿಕ್ಸ್ ಮೂಲಕವೇ ತಮ್ಮ ಲೈಂಗಿಕ ಸ್ವೇಚ್ಛಾಚಾರವನ್ನು ಪೂರೈಸಿಕೊಳ್ಳುತ್ತಾರೆ. ಈ ರಾಜಕೀಯದ ಮೂಲಕವೇ ತಾವು ಕಟ್ಟಿಕೊಟ್ಟ ಜಾತಿ ಪರಿಕಲ್ಪನೆ ಸಮಾಜದಲ್ಲಿ ಕ್ರಿಯಾತ್ಮಕವಾಗಿರುವಂತೆ ನೋಡಿಕೊಳ್ಳುತ್ತಾರೆ. ತಮ್ಮತಮ್ಮಲ್ಲಿಯೇ ಮೇಲು-ಕೀಳು ಎಂದು ಕಚ್ಚಾಡುವ ಲೈಂಗಿಕದಾಸಿಯರು ಸಂಘಟನೆಗೊಂಡು ಪ್ರಧಾನಧಾರೆಯ ವಿರುದ್ಧ ಬಂಡೇಳುವುದಾದರೂ ಹೇಗೆ? ಮೇಲ್ವರ್ಗದ, ಮೇಲ್ಜಾತಿಯ ಪುರುಷರ ಆಶೋತ್ತರಕ್ಕೆ ಪೂರಕವಾಗಿಯೇ ದೇವಸ್ತ್ರೀಯರ ವರ್ತನೆಗಳು ಪ್ರಕಟಗೊಳ್ಳುತ್ತವೆ. ಅದು ಅವರ ತಪ್ಪಲ್ಲ. ಶತಮಾನಗಳಿಂದಲೂ ಇಂತಹ ನಂಬಿಕೆಯನ್ನು ಅವರಲ್ಲಿ ದೃಢಗೊಳಿಸಿ ಶಾಶ್ವತವಾಗಿ, ಬಹಿರಂಗವಾಗಿ ದೈಹಿಕ ಸುಲಿಗೆಯನ್ನು ನಡೆಸಿದ್ದಾರೆ. ಭಾರತದ ಬಹುಪಾಲು ಮಹಿಳೆಯರು ತಮ್ಮ ಮೇಲಿನ ಇಂತಹ ದಬ್ಬಾಳಿಕೆಯನ್ನು ಶೋಷಣೆಯೆಂದು ಅರ್ಥಮಾಡಿಕೊಳ್ಳುವುದಿಲ್ಲ. ಬದಲಾಗಿ ಅದು ತಮ್ಮ ಪೂರ್ವಜನ್ಮದ ಸುಕೃತವೆಂದು ಭಾವಿಸುತ್ತಾರೆ. ಹೀಗೆ ನಂಬಿಸಲು ಎಷ್ಟೆಷ್ಟು ಬಗೆಯ ದಾರಿಗಳಿವೆಯೋ ಅಷ್ಟೆಲ್ಲ ರೀತಿಯ ಹಾದಿಗಳನ್ನು ಧರ್ಮಬದ್ಧಗೊಳಿಸಲಾಗಿದೆ, ಕಾನೂನು ಬದ್ಧಗೊಳಿಸಲಾಗಿದೆ.

ಮನುಷ್ಯರ ಪ್ರತಿಕ್ರಿಯೆಗಳು ಎರಡು ಹಂತಗಳಲ್ಲಿ ಪ್ರಕಟಗೊಳ್ಳುತ್ತವೆ. ೧. ಸಹಜ ಸ್ಥಿತಿ ೨. ಅಸಹಜ ಸ್ಥಿತಿ. ಸಮಾಜ ಹಾಕಿಕೊಟ್ಟ ಮೌಲ್ಯಗಳ ಹಳಿಯಲ್ಲಿಯೇ ನಡೆಯುವುದನ್ನು 'ಸಹಜ ಸ್ಥಿತಿ' ಎಂದು ಹೇಳಲಾಗದಿದ್ದರೂ, ಅಂಥಹದನ್ನೇ ಸಹಜ ಸ್ಥಿತಿ ಎಂದು ಸಮಾಜ ನಿರ್ವಚಿಸಿದೆ. ಸಿಟ್ಟು, ಕೋಪ, ಅಸಹಾಯಕತೆಯಲ್ಲಿದ್ದಾಗ ಮನುಷ್ಯರು ಸಹಜವಾಗಿ ವರ್ತಿಸುತ್ತಾರೆಯಾದರೂ, ಇಂತಹ ವರ್ತನೆಗಳನ್ನು ಅಸಹಜಸ್ಥಿತಿ ಎಂದು ಗುರುತಿಸಿದೆ. ಸಮಾಜ ನಿರ್ವಚಿಸಿದ ಈ ಅರ್ಥಗಳನ್ನಿಟ್ಟುಕೊಂಡೇ ಜೋಗತಿಯರು ಬಳಸಿದ ಬೈಗುಳಗಳನ್ನು ವಿಶ್ಲೇಷಿಸಿದರೆ, ನಮಗೆ ಬೇರೆ-ಬೇರೆ ಹೊಳಹುಗಳು ದೊರೆಯಬಹುದು. ನಾನು ಸಂದರ್ಶಿಸಿದ ಜೋಗತಿಯರೆಲ್ಲರೂ ಪುರುಷನಿಷ್ಠ ಸಮಾಜದ ಕುರಿತು ಸಿಟ್ಟನ್ನು, ಅಸಹಾಯಕತೆಯನ್ನು, ಪುರುಷನಿಷ್ಠ ಭಾಷೆಯಲ್ಲಿಯೇ ವ್ಯಕ್ತಪಡಿಸಿದರು. ಇಲ್ಲಿ ನಾನು ಬಸವಿ ಸಮಾಜವನ್ನು ಬೇಕಾಗಿಯೇ ಕೈಬಿಟ್ಟಿದ್ದೇನೆ. ವೈದಿಕ ಮೂಲದಿಂದ ಹುಟ್ಟಿಕೊಂಡ ಅದನ್ನು ಮಾತೃಮೂಲ ಪರಂಪರೆಗೆ ಸೇರಿದ ಜೋಗತಿಯರ ಭಾಷೆಯೊಂದಿಗೆ ಹೋಲಿಸುವುದಾಗಲಿ ತುಲನೆ

ಮಾಡುವುದಾಗಲಿ ಉಚಿತವೆನಿಸುವುದಿಲ್ಲ. ಸೂಳೆಮಕ್ಕಳು, ಮಿಂಡರಿಗ್ಹುಟ್ಟಿದವರು ಎಂದು ಗಂಡಸರ ಮೇಲೆ ಜೋಗತಿಯರು ತಮ್ಮ ಸಿಟ್ಟನ್ನು ಕಾರಿಕೊಳ್ಳುತ್ತಿದ್ದರು. ಸಹಜಸ್ಥಿತಿಯಲ್ಲಿ ಪ್ರಕಟಗೊಳ್ಳುವ ವರ್ತನೆಗಳೆಲ್ಲ ಸಂಸ್ಕೃತೀಕರಣಕ್ಕೆ ಒಳಗಾದವುಗಳು. ನಾನು ಮಾತನಾಡುತ್ತಿರುವುದು ಶಂಬಾಜೋಶಿಯವರು ಪ್ರತಿಪಾದಿಸಿದ ಸಂಸ್ಕೃತೀಕರಣವನ್ನಲ್ಲ. ನಿರ್ದಿಷ್ಟ ಸಮಾಜದೊಳಗೆ ಜೀವಿಸುತ್ತಿರುವವರು, ಆ ಸಮಾಜ ರೂಪಿಸಿದ ನೀತಿ-ನಿಯಾಮಾವಳಿಗಳಲ್ಲಿ ಬದುಕುತ್ತಿರುತ್ತಾರೆ. ಅವು ಒಂದರ್ಥದಲ್ಲಿ ಕಲಿಕೆಯ ಸ್ವರೂಪದಲ್ಲಿರುತ್ತವೆ. ಆದರೂ ಅದನ್ನು ಸಹಜ ಸ್ಥಿತಿಯೆಂದೇ ಸಮಾಜ ಗುರುತಿಸಿದೆ. ತಮ್ಮ ಮೇಲೆ ಏನಾದರೂ ಸಾಮಾಜಿಕ ಹಾಗೂ ಕೌಟುಂಬಿಕ ಅನ್ಯಾಯಗಳಾದಾಗ ಮನುಷ್ಯರು ಅಸಹಜಸ್ಥಿತಿಯಲ್ಲಿ ತಮ್ಮ ಮೂಲಸ್ವರೂಪವನ್ನು ತೋರಿಸುತ್ತಾರೆ. ಅಲ್ಲಿ ಯಾವುದೇ ರೀತಿಯ ಸಾಮಾಜಿಕ ಮೌಲ್ಯಗಳ ಒತ್ತಡವಿರುವುದಿಲ್ಲ. ವ್ಯಕ್ತಿಗಳ ಸಿಟ್ಟು, ಆಕ್ರೋಶ ಅವರವರ ಸ್ವಂತಿಕೆಯಲ್ಲಿಯೇ ಪ್ರಕಟಗೊಳ್ಳಬೇಕು. ಜೋಗತಿಯರು ಬೈಗುಳಗಳಲ್ಲಿಯಾದರೂ ತಮ್ಮ ಚಹರೆಯನ್ನು ಉಳಿಸಿಕೊಂಡಿದ್ದಾರೇನೊ ಎನ್ನುವುದು ನನ್ನ ಸಹಜ ಕುತೂಹಲವಾಗಿತ್ತು. ಹೀಗಾಗಿ ಅವುಗಳಿಗೆ ವಿಶೇಷ ಒತ್ತುಕೊಟ್ಟು ನೋಡಿದೆ. ಯಾವ ವ್ಯವಸ್ಥೆಯಿಂದ ಅವರಿಗೆ ಅನ್ಯಾಯವಾಗಿದೆಯೋ, ಅದರ ವಿರುದ್ಧ ಆಕ್ರೋಶಕಾರಲು ಅವರದೇ ಆದ ಬೈಗುಳಗಳಿಲ್ಲ. ಪುರುಷರು ಕಟ್ಟಿಕೊಟ್ಟ ಬೈಗುಳಗಳನ್ನೇ ಅವಲಂಬಿಸಿದ್ದಾರೆ. ಪುರುಷಪ್ರಧಾನ ವ್ಯವಸ್ಥೆಗೆ ಅದೆಷ್ಟರಮಟ್ಟಿಗೆ ಹೊಂದಿಕೊಂಡಿದ್ದಾರೆಂದರೆ ಮತ್ತು ಅದನ್ನು ಸಮಾಜ ಹೇಗೆ ಅನಿವಾರ್ಯವಾಗಿಸಿದೆಯೆಂದರೆ, ಅವರು ಬಳಸಿದ ಬೈಗುಳು ಅವರಿಗೇ ತಿರುಗುತ್ತವೆ ಎಂಬುದು ಅವರಿಗರ್ಥವಾಗುವುದಿಲ್ಲ.

ಸವದತ್ತಿ, ಚಿಂಚಲಿ, ಕೊಕಟನೂರು ಮೊದಲಾದ ಪ್ರದೇಶಗಳಲ್ಲಿಯ ದೇವಸ್ತ್ರೀಯರು ಸಾಂಗ್ಲಿ, ಪುಣೆ, ಬಾಂಬೆಗೆ ದೇಹಮಾರಿ ದುಡ್ಡುಗಳಿಸಲು ಹೋಗುತ್ತಾರೆ. ಅಥಣಿಯಲ್ಲಿ ನಾನು ಸಂದರ್ಶಿಸಿದ ದೇವಸ್ತ್ರೀಯೊಬ್ಬಳು ಮರಾಠಿ, ಹಿಂದಿ ಶಬ್ದಗಳನ್ನು ಹೆಚ್ಚಾಗಿ ಬಳಸುತ್ತಿದ್ದಳು. ವಿಮೋಚನಾ ಕೇಂದ್ರದವರು ಕೊಟ್ಟ ಸಣ್ಣ ಸೂಚನೆ ನೆನಪಾಯಿತು. "ಸ್ಥಳೀಯರಾಗಿಯೇ ಉಳಿದ ದೇವಸ್ತ್ರೀಯರಿಗೆ ಹಿಂದಿ, ಮರಾಠಿ ಬರುವುದಿಲ್ಲ. ಹಿಂದಿ, ಮರಾಠಿ ಶಬ್ದಗಳನ್ನು ಬಳಸಿದರೆ ಖಂಡಿತವಾಗಿಯೂ ಅವರೂ ಬಾಂಬೆಗೆ ಹೋಗಿಬಂದವರಾಗಿರುತ್ತಾರೆ." ಅವರ ಈ ಮಾತು ನೆನಪಿಗೆ ಬಂದು ತಟ್ಟನೆ ಪ್ರಶ್ನಿಸಿದೆನು. ಮೊದಮೊದಲು ತಿರಸ್ಕರಿಸಿದ ಅವಳು ನಂತರ ಒಪ್ಪಿಕೊಂಡಳು. "ಈಗಾಗಲೇ ನಮ್ಮ ಹಳ್ಳಿಯಿಂದ ಮುತ್ತುಕಟ್ಟಿಸಿಕೊಂಡು ಹೋದವರು ಅಲ್ಲಿರುತ್ತಾರೆ. ಅವರೇ ನಮ್ಮನ್ನು ದೊಡ್ಡವರಾಗುವ ಪೂರ್ವದಲ್ಲಿಯೇ ಗುತ್ತಿಗೆ ಹಿಡಿದಿಡುತ್ತಾರೆ. ದೊಡ್ಡವರಾದ ತಕ್ಷಣ ಬಾಂಬೆಗೋ, ಸಾಂಗ್ಲಿಗೋ ಕರೆದುಕೊಂಡು ಹೋಗುತ್ತಾರೆ. ಹೋಗುವ ಪೂರ್ವದಲ್ಲಿ ನಮ್ಮನೆಯ ಹಿರಿಯರಿಗೆ ಒಂದು ಸಾವಿರದಿಂದ ಐದು ಸಾವಿರದವರೆಗೆ ದುಡ್ಡುಕೊಡುತ್ತಾರೆ. ಅದು ಆ ಹುಡುಗಿಯ ರೂಪದ ಮೇಲೆ ಅವಲಂಬಿಸಿರುತ್ತದೆ. ಸುಂದರವಾಗಿರುವ ಹುಡುಗಿ

ಯರಿಗೆ ಮುತ್ತು ಕಟ್ಟಿಸಲು ಇವರೇ ಪ್ರೇರೇಪಿಸುತ್ತಾರೆ. ಬಡತನದ ಕಾರಣದಿಂದಾಗಿ ಅವರ ತಂದೆ-ತಾಯಿಗಳೂ ಅದನ್ನು ಒಪ್ಪುತ್ತಾರೆ. ನನ್ನನ್ನು ಸಾಂಗ್ಲಿಗೆ ಕಳುಹಿಸಿದರು. ಗಿರಾಕಿಗಳನ್ನು ಹುಡುಕಿಕೊಡುವುದು, ವ್ಯವಹಾರವನ್ನು ಹೊಂದಿಸುವುದನ್ನು ಮಧ್ಯವರ್ತಿಯಾದವರೇ ಮಾಡುತ್ತಿರುತ್ತಾರೆ. ಹುಡುಗಿ ಸ್ವಲ್ಪ ಚಾಲಾಕು ಇದ್ದರೆ ಅವಳೇ ಘರವಾಲಿಯಾಗುತ್ತಾಳೆ. ರಾತ್ರಿ ಈ ಕೆಲಸವಾದರೆ, ಹಗಲಿ ಗಾರೆ ಕೆಲಸಕ್ಕೆ ಹೋಗುತ್ತಿದ್ದೆ. ಏನೋ ರೋಗ ಹತ್ತಿ, ಕೈಯಲ್ಲಿಂದ ಐದು ಸಾವಿರ ಖರ್ಚುಮಾಡಿಕೊಂಡು ಜೀವ ಉಳಿಸಿಕೊಂಡು ಇಲ್ಲಿಗೆ ಬಂದು ಮರ್ಯಾದೆಯಿಂದ ಬದುಕುತ್ತಿದ್ದೇನೆ" ಎಂದಳು. ಮುಖದಲ್ಲಿ ಆವರಿಸಿದ ವಿಷಾದದ ಛಾಯೆಯನ್ನು ಮರೆಸಲು ಸುಮ್ಮನೆ ನಕ್ಕಳು. ಸಾಂಗ್ಲಿ, ಪುಣೆ, ಬಾಂಬೆ ಮೊದಲಾದವುಗಳು ವ್ಯಾಪಾರ ಪ್ರಧಾನವಾದ, ಕೈಗಾರಿಕಾ ಪ್ರಧಾನವಾದ ಪ್ರದೇಶಗಳಾಗಿವೆ. ಇವು ಸಂಪೂರ್ಣ ಜಾಗತೀಕರಣಕ್ಕೆ ಪಕ್ಕಾಗಿವೆ. ಜಾಗತೀಕರಣ ಇಡೀ ಭಾರತವನ್ನು ವ್ಯಾಪಿಸಿಕೊಳ್ಳುತ್ತಿದೆ. ಭೂಮಿ, ಕಲ್ಲು, ಮಣ್ಣು ಹೀಗೆ ಪ್ರತಿಯೊಂದನ್ನು ಮಾರುಕಟ್ಟೆಗೆ ಇಟ್ಟು ಲಾಭ ಪಡೆದುಕೊಳ್ಳುವ ಪ್ರಕ್ರಿಯೆ ಇಂದು ಎಲ್ಲೆಡೆಗೆ ಕಂಡುಬರುತ್ತಿದೆ. ಇವತ್ತಿನ ಸಂದರ್ಭದಲ್ಲಿ ಇವೆಲ್ಲವುಗಳ ಜೊತೆಯಲ್ಲಿ ಹೆಣ್ಣಿನ ದೇಹವೂ ಸೇರಿಹೋಗಿದೆ. ಇಂತಹ ಪರಿಸ್ಥಿತಿ ಹಿಂದೆ ಇರಲಿಲ್ಲವೆಂತಲ್ಲ. ಹಿಂದೆಂದಿಗಿಂತ ಇಂದು ಹೆಚ್ಚು ಢಾಳಾಗಿ ಕಂಡುಬರುತ್ತಿದೆ. ಉತ್ತರಕರ್ನಾಟಕದಲ್ಲಿಯ ಬಹುಪಾಲು ಬಸವಿಯರು, ಜೋಗತಿಯರು ಗೋವೆ ಹಾಗೂ ಮಹಾರಾಷ್ಟ್ರದ ಭಾಗಗಳಿಗೆ ರಫ್ತಾಗುತ್ತಿದ್ದಾರೆ.

ಸರ್ಕಾರ ಇವರಿಗೆ ಕಲ್ಪಿಸಿಕೊಡುವ ಯೋಜನೆಗಳು, ಸಹಾಯಗಳು, ಜಾಗತೀಕರಣ ಸಂದರ್ಭದಲ್ಲಿ ಚಲಾವಣೆಯಲ್ಲಿಲ್ಲದ ನಾಣ್ಯಗಳಂತಾಗಿವೆ. ದೇವಸ್ತ್ರೀಯರು ಹೊಸ ರೀತಿಯ ಆರ್ಥಿಕ ಆವಿಷ್ಕಾರಗಳಿಗೆ ಹೊಂದಿಕೊಳ್ಳಲಾಗದೆ ಮೂಲ ಸ್ಥಿತಿಯಲ್ಲಿಯೇ ಉಳಿದಿದ್ದಾರೆ. ಇಂದಿನ ಬಂಡವಾಳನಿಷ್ಠ ಮಾರುಕಟ್ಟೆ ದೇವಸ್ತ್ರೀಯರ ಬದುಕಿನ ಮೇಲೆ ಪರಿಣಾಮ ಬೀರಿದೆ. ಬಡತನದ ಕೆಳರೇಖೆಯಲ್ಲಿರುವ ಇವರಿಗೆ ಇವತ್ತಿನ ಉದಾರೀಕರಣದ ಲಾಭ ಕನಸಿನಲ್ಲಿಯೂ ತಟ್ಟುವುದಿಲ್ಲ. ವ್ಯಕ್ತಿಕೇಂದ್ರಿತವಾಗಿ ಬೆಳೆಯುತ್ತಿರುವ ಜಾಗತೀಕರಣ ಸಮಷ್ಟಿ ಅಭಿವೃದ್ಧಿ ಪರಿಕಲ್ಪನೆಯನ್ನು ಸಾರಾಸಗಟಾಗಿ ಜಾಣತನದಿಂದ ಕಂಡೂಕಾಣದಂತೆ ತಳ್ಳಿ ಹಾಕುತ್ತದೆ. ಸಮುದಾಯದ ಪರಿಕಲ್ಪನೆಯನ್ನು ಛಿದ್ರಗೊಳಿಸುತ್ತದೆ. ಈಗ ತಾನೆ ಎಚ್ಚೆತ್ತು ಸಂಘಟನೆಗೊಳ್ಳುತ್ತಿರುವ ಮಹಿಳಾ ಸಮುದಾಯಗಳು ಮತ್ತೆ ತಮ್ಮ ಮೂಲ ನೆಲೆಗಳಿಗೆ ಚದುರಿ ಹೋಗುವ ಅಪಾಯವಿದೆ. ಇದು ಮಹಿಳಾ ಸಂಘಟನೆಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಅದು ದಲಿತ, ರೈತ, ಕಾರ್ಮಿಕ ಸಂಘಟನೆಗಳಿಗೂ ವಿಸ್ತರಿಸುತ್ತದೆ.

ಟಿಪ್ಪಣಿಗಳು

೧. ಮಹಿಳಾ ಅಧ್ಯಯನ ಪತ್ರಿಕೆಯಲ್ಲಿ (ಸಂಪುಟ ೩, ಸಂಚಿಕೆ ೧, ಜನವರಿ ೨೦೦೧) 'ಬಸವಿಯರು' ಎನ್ನುವ ಲೇಖನವು ಪ್ರಕಟಗೊಂಡಿದೆ. ಅದರಲ್ಲಿ ನಾನು ಎಲ್ಲರಂತೆ ಜೋಗತಿ ಮತ್ತು ಬಸವಿಯರನ್ನು 'ಬಸವಿ' ಎಂದೇ ಗುರುತಿಸಿರುವೆ. ಕ್ಷೇತ್ರಕಾರ್ಯ ವ್ಯಾಪಕವಾದಂತೆ,

ಅಧ್ಯಯನ ಆಳವಾದಂತೆ, ನನ್ನ ತಪ್ಪಿನ ಅರಿವಾಯಿತು. ಮುದ್ರೆ ಹಾಕಿಸಿಕೊಳ್ಳುವ ಬಸವಿ ಸಂಪ್ರದಾಯವೇ ಬೇರೆ, ಮುತ್ತುಕಟ್ಟಿಸಿಕೊಳ್ಳುವ ಜೋಗತಿಯರ ಪರಂಪರೆಯೆ ಬೇರೆ. ಈ ಎರಡು ಭಿನ್ನ ಸಂಪ್ರದಾಯಗಳನ್ನು 'ಬಸವಿಯರು' ಎಂದು ಗುರುತಿಸುವುದು ಸರಿಯಾದ ಕ್ರಮವಲ್ಲವೆಂದು ನಂತರದಲ್ಲಿ ಅನಿಸಿತು. ಬಸವಿಯರು, ಜೋಗತಿಯರು ಈ ಪದಗಳೇ ಭಿನ್ನ ಭಿನ್ನ ಸಂಪ್ರದಾಯಗಳ ಕವಲುಗಳನ್ನು ಧ್ವನಿಸುತ್ತವೆ. ಅದಕ್ಕಾಗಿ ಇಬ್ಬರನ್ನು ಒಟ್ಟಿಗೆ ಸೇರಿಸಿ ಹೇಳುವ ಪದಕ್ಕಾಗಿ ತಡಕಾಡಿದೆ. ದೇವರಿಗೆ ಅರ್ಪಿಸುವ ಇವರನ್ನು 'ದೇವರ ಸೂಳೆಯರು' ಎಂದು ಕರೆದರಾಯಿತು ಎಂದುಕೊಂಡಿದ್ದೆ. ಆದರೆ ಸಾಮಾಜಿಕ ಅಪಮಾನವನ್ನು ಹೊತ್ತ 'ಸೂಳೆಯರು' ಎನ್ನುವ ಪದಪ್ರಯೋಗಕ್ಕೆ ಮನಸ್ಸು ಒಪ್ಪಲಿಲ್ಲ. ದೇವರ ಲೈಂಗಿಕ ದಾಸಿಯರು ಅಷ್ಟು ಸರಿಯಾದ ಪದ ಎನಿಸಲಿಲ್ಲ. ದೇವಸ್ತ್ರೀಯರು ಹೆಚ್ಚು ಸೂಕ್ತವಾದ ಶಬ್ದವೆನಿಸಿತು. ಸರಿಯೆನಿಸಿದರೆ ಈ ಪದವನ್ನು ಸ್ವೀಕರಿಸಬಹುದು.

೨. ಮಾಧ್ವರಲ್ಲಿಯೂ ಹೆಣ್ಣುಗಂಡಿಗೆ ಇಬ್ಬರಿಗೂ ಮುದ್ರೆ ಹಾಕುವ ಸಂಪ್ರದಾಯ ಇದೆ. ಪುರುಷರಿಗೆ ಎದೆಯ ಮೇಲೆರಡು, ಎರಡೂ ತೋಳುಗಳು ಹಾಗೂ ಹಣೆಯ ಮೇಲೆ ಗಟ್ಟಿಮುದ್ರೆಯನ್ನು ಹಾಕುತ್ತಾರೆ. ಮಹಿಳೆಯರಿಗೆ ಎರಡೂ ಒಳಮುಂಗೈಗಳಿಗೆ ಹಾಕುತ್ತಾರೆ. ಅದನ್ನವರು ಪವಿತ್ರೀಕರಣದ ಸಂಕೇತವೆಂದು ಭಾವಿಸುತ್ತಾರೆ.

೩. ಪಾತರದವರು ಮುದ್ರೆ ಹಾಕಿಸಿಕೊಳ್ಳುತ್ತಾರೆ ಎಂದು 'ಪಾತರದವರು' ಕೃತಿಯಲ್ಲಿ ಹೇಳಿದ್ದೇನೆ (ಗಮನಿಸಿ : ಶೈಲಜ ಹಿರೇಮಠ: ೧೯೯೫; ಪು. ೨೨) ಮುದ್ರೆ ಹಾಕಿಸಿಕೊಂಡ ಪಾತರದವರಾರೂ ಸಿಕ್ಕಿರಲಿಲ್ಲ. ಈಡ್ಗರ್ ಥರ್ಸ್ಟನ್ ಅವರ ಇಂಡಿಯನ್ ಕಾಸ್ಟ್ ಆಯಂಡ್ ಟ್ರೈಬ್ಸ್ ಎನ್ನುವ ಕೃತಿಯಲ್ಲಿ ಮುದ್ರೆ ಕುರಿತಂತೆ ಉಲ್ಲೇಖವಿತ್ತು. ಹೀಗಾಗಿ ಮೊದಲಲ್ಲಿ ಮುದ್ರೆ ಹಾಕಿಸಿಕೊಳ್ಳುವ ಸಂಪ್ರದಾಯ ಅವರಲ್ಲಿರಬೇಕು ಎನ್ನುವ ನಿರ್ಧಾರಕ್ಕೆ ಬಂದೆನು. ಶಂಖ, ಚಕ್ರ, ಪದ್ಮ ಈ ಮುದ್ರಾ ಚಿಹ್ನೆಗಳು ವೈದಿಕ ಪರಂಪರೆಗೆ ಸೇರಿದವುಗಳಾಗಿವೆ. ಇಂಥವುಗಳನ್ನು ಪಾತರದವರಲ್ಲದೆ ಬೇರಾರೂ ಹಾಕಿಸಿಕೊಳ್ಳುವುದಿಲ್ಲ ಎನಿಸಿತು. 'ಬಸವಿಯರು' ಯೋಜನೆಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯಕ್ಕೆ ಇಳಿದಾಗ ನನ್ನ ತಪ್ಪಿನ ಅರಿವಾಯಿತು.

೪. ಬಳ್ಳಾರಿ ಹಾಗೂ ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಸಂಸ್ಕೃತಿ ಪ್ರಕಾರ ಗಂಡುಳ್ಳವರು ತವರುಮನೆ ಮತ್ತು ಗಂಡನ ಮನೆಯಿಂದ ಮಾಡಿಸಿದ ಎರಡು ತಾಳಿಗಳನ್ನು ಕಟ್ಟಿಕೊಳ್ಳುತ್ತಾರೆ.

೫. ಸ್ಯಾಸಕ್ಕಿ ಹೊಯ್ಯುವುದು ಎಂದರೆ ಕರಿಕಂಬಳಿಯ ಮೇಲೆ, ಧಾನ್ಯಗಳನ್ನು ತೆಗೆದುಕೊಂಡು ಬೆರಳುಗಳ ಸಂದಿಯಿಂದ ಬಿಡುತ್ತಾ ರೇಖೆಯನ್ನು ತೆಗೆಯುತ್ತಾರೆ. ಜೋಡು ಗೆರೆಯಾದ ಅದು ಚೌಕಾಕಾರದ ರೂಪದಲ್ಲಿರುತ್ತದೆ. ಸ್ಯಾಸಕ್ಕಿ ಹೊಯ್ಯಲು ಶ್ರೀಮಂತರು ಅಕ್ಕಿಯನ್ನು ಬಳಸಿದರೆ ಕೆಳಜಾತಿಯವರು ಸ್ವಲ್ಪ ಜೋಳ, ನೆವಣಕ್ಕಿಯನ್ನು ಉಪಯೋಗಿಸುತ್ತಾರೆ. ಚೌಕಾಕಾರದ ಆ ಆಸನಕ್ಕೆ ಜೋಡುಗೆರೆಯನ್ನು ಹಾಕುವರು. ಚೌಕಿಯ ನಾಲ್ಕೂ ಮೂಲೆಗಳಿಗೂ ಅಕ್ಕಿ ಇಲ್ಲವೇ ಜೋಳ, ನವಣಕ್ಕಿಯ ಚಿಕ್ಕ ಚಿಕ್ಕ ಗುಂಪುಗಳನ್ನು ಹಾಕುವರು. ಇದಕ್ಕೆ 'ಹಾಸಕ್ಕಿ ಹಾಕುವುದು' ಎಂದು ಕೂಡ ಹೇಳುವರು.

೬. ಕೆಟ್ಟ ಶಬ್ದಗಳೆನ್ನುವುದಕ್ಕೆ ಬಾಲಬಾಷಿ ಎನ್ನುವರು.

೭. ಚಪ್ಪಲಿ ಎಂದರ್ಥ.

೮. ಪ್ರಮಾಣ ಎನ್ನುವ ಅರ್ಥದಲ್ಲಿ ಅದನ್ನು ಬಳಸುತ್ತಾರೆ.

೯. ಭಿಕ್ಷೆ ಕೇಳುವುದು ಎಂದರ್ಥ.

೧೦. ದಲಿತ ಮಹಿಳೆಯಲ್ಲಿಯ 'ಗಾಲಿ ಹಾಕುವ ಪದ್ಧತಿಯನ್ನು ಕೇಳಿದಾಗ, ಯುರೋಪಿನ ಚೇಸ್ಟಿಟಿ ಬೆಲ್ಟ್ ನೆನಪಾಗುತ್ತದೆ. ಅಲ್ಲಿನ ಸೈನಿಕರು, ರಾಜರು ಯುದ್ಧಕ್ಕೆ ಹೋದರೆ ಅಷ್ಟು ಬೇಗನೆ ಹಿಂದಿರುಗುತ್ತಿರಲಿಲ್ಲ. ವ್ಯಾಪಾರಿಗಳದೂ ಇದೇ ಪಾಡಾಗಿತ್ತು. ಹೀಗಾಗಿ ಅವರು ತಮ್ಮ ಹೆಂಡಂದಿರಿಗೆ ಯೋನಿ ಬೀಗವನ್ನು ಹಾಕುತ್ತಿದ್ದರು. ಹಿಂದೆ-ಮುಂದೆ ಎರಡೂ ಕಡೆಗೆ ಬಂಧಿಸಿ ಮೂತ್ರಕ್ಕೆ ಮಾತ್ರ ಒಂದು ಸೆಂಟಿಮೀಟರಿನಷ್ಟು ಜಾಗ ಬಿಟ್ಟಿರುತ್ತಿದ್ದರು. ನಿತಂಬಗಳನ್ನು ಸೇರಿಕೊಂಡಂತೆ ಮುಚ್ಚುವ ವಿಸ್ತಾರವಾದ ಬೀಗಗಳವು. ಅಂತಹ ಬೀಗಗಳನ್ನು ಸೊಂಟಕ್ಕೆ ಬಿಗಿಯಾಗಿ ಕಟ್ಟಲಾಗುತ್ತಿತ್ತು. ಅತ್ಯಂತ ಸೂಕ್ಷ್ಮವಾದ ಆ ಭಾಗವನ್ನು ಬಂಧಿಸಿದಾಗ ಅನೇಕ ಬಾರಿ ಗಾಯ, ನೋವು, ರಕ್ತಪಾತದ ಯಾತನೆಯಿಂದ ನರಳುತ್ತಿದ್ದರು. ಹಾಕಿದ ಕಬ್ಬಿಣದ ಬೀಗ ತುಕ್ಕು ಹಿಡಿದು ಬೇರೆ ಬೇರೆ ರೀತಿಯ ಕಾಯಿಲೆಗಳು ಅಂಟಿಕೊಳ್ಳುತ್ತಿದ್ದವು. ಈ ಚಿತ್ರಹಿಂಸೆಯನ್ನು ತಾಳಲಾರದ ಯುರೋಪಿನ ಅನೇಕ ಮಹಿಳೆಯರು 'ಯೋನಿ ಬೀಗವನ್ನು' ಯಾವ ಮಾಯದಿಂದಲೋ ಕಿತ್ತುಹಾಕಿ ಇಷ್ಟಬಂದವರೊಂದಿಗೆ ಓಡಿ ಹೋಗುತ್ತಿದ್ದರು. ಎಲ್ಲೆಲ್ಲಿ ಪುರುಷ ಪ್ರಧಾನತೆ ಚಾಲ್ತಿಯಲ್ಲಿದೆಯೊ ಅಲ್ಲೆಲ್ಲ ಹೆಣ್ಣಿನ ಶೀಲದ ಕುರಿತಂತೆ ಅಮಾನವೀಯ ಕೃತ್ಯಗಳು ಸಂಸ್ಕೃತಿಯ ಹೆಸರಿನಲ್ಲಿ ಚಾಲ್ತಿಯಲ್ಲಿವೆ.

ಉಲ್ಲೇಖಗಳು

ಚನ್ನಬಸವಣ್ಣ: ೧೯೬೫; **ಚನ್ನಬಸವಣ್ಣನವರ ವಚನಗಳು**, ವ. ೧೧೫, ಹಿರೇಮಠ ಆರ್.ಸಿ. (ಸಂ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್, ಸಂ. ೭೨, ಪು. ೪೩-೪೪, ೧೯೮೪-೮೭

ಶೈಲಜ ಹಿರೇಮಠ: ೧೯೯; **ಪಾತರದವರು**, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೈಲಜ ಹಿರೇಮಠ: ೨೦೦೧; 'ಬಸವಿಯರು', **ಮಹಿಳಾ ಅಧ್ಯಯನ ಸಂಪುಟ ೩, ಸಂಚಿಕೆ ೧**, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂದರ್ಶನಕಾರರು

ಅ. ಬಸವ್ವ, ಜಾತಿ : ಗಂಗಮತ, ವಯಸ್ಸು : ೫೨ ವರ್ಷ, ಶಿಕ್ಷಣ : ೪ನೇಯ ಇಯತ್ತೆ, ಆಸ್ತಿ : ಇಲ್ಲ, ಊರು : ಮರಿಯಮ್ಮನಹಳ್ಳಿ

ಆ. ಭೀಮವ್ವ, ಜಾತಿ : ಹರಿಜನ, ವಯಸ್ಸು : ೬೫ ವರ್ಷ, ಶಿಕ್ಷಣ : ಇಲ್ಲ, ಆಸ್ತಿ : ಒಂದು ಚಿಕ್ಕಮನೆ, ಊರು : ಮರಿಯಮ್ಮನಹಳ್ಳಿ

ಇ. ಹನುಮವ್ವ, ಜಾತಿ : ಹರಿಜನ, ವಯಸ್ಸು : ೩೦ ವರ್ಷ, ಶಿಕ್ಷಣ : ಇಲ್ಲ, ಆಸ್ತಿ : ಇಲ್ಲ, ಊರು : ಹುನಗುಂದ

ಈ. ಲಕ್ಷ್ಮೀ, ಜಾತಿ : ಊರನಾಯಕರು, ವಯಸ್ಸು : ೩೫ ವರ್ಷ, ಶಿಕ್ಷಣ : ೨ನೇಯ ಇಯತ್ತೆ, ಆಸ್ತಿ : ಚಿಕ್ಕಗೂಡು, ಊರು : ಮನ್ಮಥಕೇರಿ, ಕಮಲಾಪುರ

೭

ಸಿರಿ - ಸ್ತ್ರೀಶಕ್ತಿ ಚೈತನ್ಯ

ವಿಶಾಲವಾದ ಚಿಂತನೆ ಹಾಗೂ ಹೋರಾಟದ ಭಾಗವಾಗಿ ಮಹಿಳಾ ಜಾನಪದವು ರೂಪುಗೊಳ್ಳುತ್ತಿದೆ. ಮಹಿಳಾ ಜಾನಪದವನ್ನು ನಿರೂಪಿಸುವಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. "ಮಹಿಳಾ ಜಾನಪದ'ವನ್ನು ಹೇಗೆ ನಿರ್ವಚಿಸಿಕೊಳ್ಳಬೇಕೆಂದು ನಮಗಿನ್ನೂ ಸ್ಪಷ್ಟವಿಲ್ಲ. ಅದನ್ನು ಅದಕ್ಕೆ ವಿರೋಧವಾಗಿರುವ 'ಪುರುಷ ಜಾನಪದ'ವನ್ನು ಗಮನದಲ್ಲಿರಿಸಿಕೊಂಡು ಚರ್ಚಿಸಿದರೆ ಲಾಭಕ್ಕಿಂತ ನಷ್ಟವೇ ಜಾಸ್ತಿ. ಏಕೆಂದರೆ ಹಾಗೆ ಮಾಡಿದಾಗ ಸ್ತ್ರೀಯರ ಶಕ್ತಿ ಮೂಲಗಳನ್ನು ಪುರುಷರ ಅಧಿಕಾರದ ಜೊತೆಗೆ ಇರಿಸಿ ನೋಡಿದಂತಾಗುತ್ತದೆ. ಜೊತೆಗೆ ಭಾಷೆಯೂ ಪುರುಷ ಪರವಾಗಿ ಬೆಳೆದುಬಂದಿರುವುದರಿಂದಾಗಿ ಅದರ ಬಳಕೆ ಕೂಡಾ ಸ್ತ್ರೀಶಕ್ತಿಕೇಂದ್ರಗಳನ್ನು ನುಂಗಿಹಾಕಬಲ್ಲದು. ಮಹಿಳಾ ಪರವಾದ ಚಿಂತಾನಕ್ರಮವನ್ನು ಪುರುಷರ ಅಧಿಕಾರ ನೆಲೆಯಲ್ಲಿ ಮತ್ತು ಪರಿಭಾಷೆಗಳಲ್ಲಿ ವಿವರಿಸಿದಾಗ ಅದು ಅಂತಿಮವಾಗಿ ಪುರುಷನ ಅಧಿಕಾರವನ್ನೇ ಸ್ಥಾಪಿಸಿಬಿಡುವ ಸಾಧ್ಯತೆ ಇದೆ." (ಪುರುಷೋತ್ತಮ ಬಿಳಿಮಲೆ: ೧೯೯೭; ಪು. ೨೧೮-೨೧೯) ಹಾಗೆ ನೋಡಿದರೆ ಹೆಣ್ಣಿಗೆ ಸ್ವತಂತ್ರವಾದ ಅಸ್ತಿತ್ವ ಮತ್ತು ಅವಳದೇ ಆದ ಚಹರೆ ಎಂಬುದು ಇಲ್ಲವೇ ಇಲ್ಲ. ಪುರುಷಪ್ರಧಾನ ಸಂಸ್ಕೃತಿಯ ಚಿಂತನೆಯ ಗರಡಿಯಲ್ಲಿ ಸ್ತ್ರೀ ಹೆಣ್ಣಾಗಿ ರೂಪುಗೊಂಡಿದ್ದಾಳೆ. ಹೀಗಾಗಿ ಮಹಿಳಾ ಜಾನಪದವನ್ನು ಸದ್ಯದ ಮಟ್ಟಿಗೆ ಮಹಿಳೆಯರ ಕುರಿತಂತಿರುವ ಜಾನಪದ ಎಂದು ಅರ್ಥೈಸಿಕೊಂಡಿದೆ. ಅದನ್ನು ಹೆಂಗಸರು ಹೇಳಿರಬಹುದು, ಇಲ್ಲವೆ ಹೆಂಗಸರು-ಗಂಡಸರಿಬ್ಬರೂ ಹೇಳಿರಬಹುದು.

ಕರ್ನಾಟಕ ಜಾನಪದದ ಮಹಿಳಾ ಮೌಖಿಕ ಸಾಹಿತ್ಯದಲ್ಲಿ ಗಂಡಿನ ಪರಮಾಧಿಕಾರವನ್ನು ಒಪ್ಪಿಕೊಂಡ ರಚನೆಗಳು ಸಿಗುತ್ತವೆ. ಅದನ್ನು ವಿರೋಧಿಸಿದ ಸಂಗತಿಗಳು ಇಲ್ಲಿವೆ. ಹಾಗೂ ಹೆಣ್ಣು - ಗಂಡು ವ್ಯತ್ಯಾಸಗಳನ್ನು ಮೀರಿದ ಲಿಂಗಾತೀತ ರಚನೆಗಳು ಇಲ್ಲಿ ಹೇರಳವಾಗಿ ದೊರೆಯುತ್ತವೆ. ಪುರುಷ ಪರಮಾಧಿಕಾರವನ್ನು ಛಿದ್ರಗೊಳಿಸುತ್ತಲೇ ಸ್ತ್ರೀಯ ಪರಮಾಧಿಕಾರದ ಸ್ಥಾಪನೆಯ ಕುರಿತಂತಿರುವ ರಚನೆಗಳನ್ನು ಇಲ್ಲಿ ಮುಖ್ಯವಾಗಿ ಗಮನಿಸಿರುವೆ. ಸ್ತ್ರೀಶಕ್ತಿ ಚೈತನ್ಯದಂತಿರುವ ಇಂತಹ ರಚನೆಗಳು ಇವತ್ತು ನಾವು ಕಟ್ಟಿಕೊಳ್ಳುತ್ತಿರುವ ಸ್ತ್ರೀವಾದಿ ಅಧ್ಯಯನಕ್ಕೆ, ರೂಪಿಸಿಕೊಳ್ಳುತ್ತಿರುವ ಮಹಿಳಾ ಹೋರಾಟಕ್ಕೆ ಇಂತಹ ಮಹಾಕಾವ್ಯಗಳು ಹೊಸಬಗೆಯ ಆಯಾಮಗಳನ್ನು ಕಲ್ಪಿಸಿಕೊಡುತ್ತವೆ.

'ಸಿರಿ' ಮಹಾಕಾವ್ಯ ಕರಾವಳಿಯಲ್ಲಿ ಅತ್ಯಂತ ಜನಪ್ರಿಯವಾದುದು. "ಕರಾವಳಿಯಲ್ಲಿ ಜನಪ್ರಿಯವಾಗಿರುವ ಪಾಡ್ದನಗಳನ್ನು ತುಂಬ ಸೂಕ್ಷ್ಮವಾಗಿ ನೋಡಿದರೆ, ಆ ಪಾಡ್ದನಗಳ ನಿರೂಪಕರು ಮಹಿಳೆಯರೇ ಆಗಿರುವ ವಿಷಯ ಕಂಡುಬರುತ್ತವೆ. ಪಾಡ್ದನಗಳನ್ನು ಹೇಳುತ್ತಿರುವವರು ಗಂಡಸರೇ ಆಗಿದ್ದಾಗಲೂ ಸಹ ಆ ಪಾಡ್ದನಗಳ ಒಳರಚನೆಯನ್ನು ಮಾಡಿದ ನಿರೂಪಕಿ ಮಾತ್ರ ಮಹಿಳೆಯೇ ಆಗಿರುವುದುಂಟು. ಹಾಗಾಗಿ ಪಾಡ್ದನಗಳ ಭಾಷಾರಚನೆ ಮತ್ತು ವಾಕ್ಯರಚನೆಯು ಮಹಿಳಾ ಕೇಂದ್ರವೊಂದಕ್ಕೆ ಪ್ರತಿಕ್ರಿಯಿಸುವಂತೆ ಭಾಸವಾಗುತ್ತದೆ." (ಪುರುಷೋತ್ತಮ ಬಿಳಿಮಲೆ: ೧೯೯೭; ಪು. ೨೩೩)

'ಸಿರಿ' ಮಹಾಕಾವ್ಯದಲ್ಲಿ ಬರುವ 'ಸಿರಿ' ಎನ್ನುವ ಪಾತ್ರವು ಸ್ತ್ರೀಶಕ್ತಿಯ ಚೈತನ್ಯವಾಗಿದೆ. ಮಹಾಕಾವ್ಯದ ಸಂಕ್ಷಿಪ್ತ ಕಥೆಯನ್ನು ಮಾತ್ರ ಇಲ್ಲಿ ನೀಡಲಾಗಿದೆ.

ಲಂಕೆನಾಡಿನಲ್ಲಿ ಬಿರ್ಮಾಳ್ವ ಎನ್ನುವ ಯಜಮಾನನಿದ್ದ. ಅವನ ಅರಮನೆ ಸತ್ಯನಾಪುರದಲ್ಲಿತ್ತು. ಅವನಿಗೆ ಮಕ್ಕಳಿರಲಿಲ್ಲ. ದೈವಕೃಪೆಯಿಂದ ಅವನಿಗೆ ಹೆಣ್ಣುಮಗು ಸಿಗುತ್ತದೆ. ಅದಕ್ಕೆ 'ಸಿರಿ' ಎಂದು ಹೆಸರಿಡುತ್ತಾನೆ. ವಯಸ್ಸಿಗೆ ಬಂದ ತಕ್ಷಣ ಬಿರ್ಮಾಳ್ವ 'ಸಿರಿ' ಮದುವೆಯ ಬಗ್ಗೆ ಯೋಚಿಸುತ್ತಾನೆ. ಪಕ್ಕದ ಬಸರೂರು ಸೀಮೆಯ ಕಾಂತುಪೂಂಜನೊಂದಿಗೆ ಸಿರಿಯ ಮದುವೆ ಮಾಡುತ್ತಾನೆ.

ಮದುವೆಯಾಗಿ ಕೆಲದಿನಗಳ ನಂತರ ಸಿರಿಗೆ ಗಂಡನ ಸೂಳೆಯ ಸಹವಾಸ ತಿಳಿಯುತ್ತದೆ. ಗಂಡನಿಗೆ ಬುದ್ಧಿವಾದ ಹೇಳಿದರೂ ಅದು ನಡೆಯುವುದಿಲ್ಲ. ಸಿರಿಯ ಸೀಮಂತದ ದಿವಸ ಕಾಂತುಪೂಂಜನು ಬಯಕೆ ಸೀರೆಯನ್ನು ಸೂಳೆ ಸಿದ್ದುವಿಗೆ ಉಡಿಸಿಯೇ ತರುತ್ತಾನೆ. ಅದನ್ನು ತಿಳಿದ ಸಿರಿ ಸೀಮಂತದ ಆ ಸೀರೆಯನ್ನು ಉಡಲು ನಿರಾಕರಿಸುತ್ತಾಳೆ. ತವರಿಗೆ ಹೆರಿಗೆಗೆಂದು ಬರುತ್ತಾಳೆ. ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಮಗುವನ್ನು ನೋಡಲು ಗಂಡ ಬರುವುದೇ ಇಲ್ಲ. ಕೆಲದಿನಗಳ ನಂತರ ಅಜ್ಜ ಬಿರ್ಮಾಳ್ವ ತೀರಿಕೊಳ್ಳುತ್ತಾನೆ. ಆಗಲೂ ಕಾಂತುಪೂಂಜ ಬರುವುದಿಲ್ಲ. ಈ ಸಂದರ್ಭಗಳಲ್ಲಿ ಸಿರಿ ಗಂಡನಿದ್ದು ಒಂಟಿಯಾಗಿಯೇ ಉಳಿಯುತ್ತಾಳೆ. ಈ ನಡುವೆ ಸೂಡದ ಬೂಡುವಿನ ಶಂಕರಾಳ್ವನು ಬಿರ್ಮಾಳ್ವನ ಆಸ್ತಿಗೋಸ್ಕರ ಪಂಚಾಯತಿಗೆ ಹೋಗುತ್ತಾನೆ. ಸಿರಿ ಅಜ್ಜನ ಮಗಳಾಗಿ ತಾನಿರುವಾಗ ಪಟ್ಟದ ಅಧಿಕಾರವನ್ನು ಬಿಟ್ಟು

ಕೊಡಲಾರೆ ಎಂದು ವಾದ ಹೂಡುತ್ತಾಳೆ. ಅಂತಿಮವಾಗಿ ಪಂಚಾಯತಿಯಲ್ಲಿ 'ಪುರುಷರು ಕುಳಿತುಕೊಳ್ಳುವ ಜಾಗದಲ್ಲಿ ಸ್ತ್ರೀಯರು ಕುಳಿತುಕೊಳ್ಳಬಾರದು' ಎಂದು ನ್ಯಾಯ ಕೊಡು ತ್ತಾರೆ. ಅವಮಾನಿತಳಾದ ಸಿರಿ ತನ್ನ ಮಗ ಕುಮಾರನೊಂದಿಗೆ ಗಂಡ ಕಾಂತುಪೂಂಜನಲ್ಲಿಗೆ ಬರುತ್ತಾಳೆ. ಆದರೆ ಕಾಂತುಪೂಂಜನು ಅವಳನ್ನು ಒಳಗೆ ಕರೆದುಕೊಳ್ಳುವುದಿಲ್ಲ. ಗಂಡನಿಗೆ ವಿಚ್ಛೇದನ ನೀಡಲು ಒತ್ತಾಯಿಸುತ್ತಾಳೆ. ವಿಚ್ಛೇದನ ನೀಡಬೇಕಾದರೆ ತವರಿನಿಂದ ದಾತಾರನನ್ನು ಕರೆದುಕೊಂಡು ಬಾ ಎಂದು ಕಾಂತುಪೂಂಜನು ಹೇಳುತ್ತಾನೆ. ನನ್ನ ಕುಟುಂಬ ದಲ್ಲಿ ಗಂಡಾಳಿಲ್ಲ ಎಂದ ಅವಳು ಬೇಲಿಯ ಗೂಟದ ಸಾಕ್ಷಿಯಾಗಿ ವಿಚ್ಛೇದನ ನೀಡಲು ಹೇಳುತ್ತಾಳೆ. ತವರಿನ ದಾತಾರನಿಲ್ಲದೆ ವಿಚ್ಛೇದನ ಕೊಡಲು ಕಾಂತುಪೂಂಜನು ನಿರಾಕರಿಸಿದಾಗ ಪ್ರತಿಭಟಿಸಿದ ಸಿರಿ ಅವನೆದುರಿಗೆ ಬಳೆ ಒಡೆದುಕೊಳ್ಳುತ್ತಾಳೆ. ತಾಳಿಯನ್ನು ಕಿತ್ತುಹಾಕುತ್ತಾಳೆ. ಮೂಗುತಿಯನ್ನು ತಗೆಯುತ್ತಾಳೆ. ತನ್ನ ಏಳು ತಿಂಗಳ ಮಗುವನ್ನು ತೋರಿಸುತ್ತ ಇವನೇ ನನ್ನ ತವರಿನ ದಾತಾರ, ಕೊಡು ವಿಚ್ಛೇದನ ಎಂದು ಗುಡುಗು ಹಾಕಿದಾಗ, "ಸೂರ್ಯ ಮುಳುಗುವುದರೊಳಗಾಗಿ ಹಾಯ್ಗಡ ದಾಟಬೇಕು. ಇದೆ ನನ್ನ ವಿಚ್ಛೇದನ. ಇಲ್ಲದಿದ್ದರೆ ಜುಟ್ಟು ಹಿಡಿದು ಅರಮನೆಗೆ ಕರೆತರುವೆ" ಎಂದಾಗ, ಗಂಡನಿಗೆ ಬಡತನದ ಶಾಪ ಹಾಕಿ ಬಸರೂರು ಬಿಟ್ಟು ಹೊರಟುಹೋದಳು. ಹಾಯ್ಗಡ ದಾಟಲು ಯಾರ ಸಹಾಯವೂ ದೊರೆಯದಿದ್ದಾಗ, ಸ್ವತಃ ಅವಳೇ ಕೂಸಿನೊಂದಿಗೆ ದಾಟಿ ಹೋಗುವಳು. "ಒಳ್ಳೆಯ ಗಂಡ ಬೇಕು. ಅದಕ್ಕಾಗಿ ಮರು ಮದುವೆಯಾಗುತ್ತೇನೆ ಎಂದು ಬಸರೂರಿನಿಂದ ಹೊರಬರುತ್ತಾಳೆ. ಹೊತ್ತು ಮುಳುಗುವ ವೇಳೆಗೆ ಉದ್ಯಾವರ ಸೀಮೆಗೆ ಬರುತ್ತಾಳೆ. ಕಂಚಿಮದೇಯಿ ಮನೆಯಲ್ಲಿ ಒಂದು ರಾತ್ರಿಯ ಮಟ್ಟಿಗೆ ಆಶ್ರಯವನ್ನು ಕೇಳಿ ಪಡೆಯುತ್ತಾಳೆ. ಕಂಚಿಮದೇಯಿಯ ಮಗ ಸಿರಿಯ ಸೆರಗಿಗೆ ಕೈ ಹಾಕಿ ಅವಳಿಂದ ಶಾಪ ಪಡೆದು ಕಲ್ಲಾಗುತ್ತಾನೆ. ಬೆಳಗಾಗುವ ಹೊತ್ತಿಗೆ ಅವಳು ಆ ಮನೆಯನ್ನು ಬಿಟ್ಟು ಹೊರಬರುತ್ತಾಳೆ.

ಸಿರಿಯು ತೆಂಕಣನಾಡಿನತ್ತ ಹೋಗುವಾಗ ಬಿಳಿಯ ದೇಸಿಂಗರಾಯ, ಕರಿಯ ಕಾಳಿಂಗರಾಯ ಇವರಿಬ್ಬರೂ ಸಿರಿಯನ್ನು ಮದುವೆಯಾಗಲು ಕಚ್ಚಾಡುತ್ತಾರೆ. ಯಾರು ಮೊದಲು ಮುಟ್ಟುವರೋ ಅವರಿಗೆ ಅವಳು ದಕ್ಕುತ್ತಾಳೆ ಎಂದು ಷರುತ್ತು ಹಾಕಿಕೊಂಡು ಅವಳನ್ನು ಮುಟ್ಟಲು ಓಡೋಡಿ ಬರುತ್ತಿರುತ್ತಾರೆ. ಮೊದಲು ಮುಟ್ಟಿದವ ಅಣ್ಣನಾಗಬೇಕು. ನಂತರ ಮುಟ್ಟಿದವ ತಮ್ಮನಾಗಬೇಕು ಎಂದು ಸಿರಿ ಹೇಳುತ್ತಾಳೆ. ಇದರಿಂದ ಚಕಿತರಾದ ಅವರಿಬ್ಬರೂ ಆಕೆಯನ್ನು ತಂಗಿಯೆಂದು ಒಪ್ಪಿಕೊಂಡು ಸಿರಿಯನ್ನು ಅರಮನೆಗೆ ಕರೆದುಕೊಂಡು ಹೋಗುತ್ತಾರೆ. ಅವಳಿಗೆ ಮರುಮದುವೆ ಮಾಡುವ ವಿಚಾರ ತಿಳಿದ ಕುಮಾರ ಮಾಯವಾಗುತ್ತಾನೆ.

ಕೊಟ್ರುಪಾಡಿಯ ರಾಜನಾದ ಕೊಡ್ಸರಾಳ್ವನು ಸಿರಿಯ ರೂಪಕ್ಕೆ ಮರುಳಾಗಿ ಮದುವೆ ಯಾಗಬಯಸುತ್ತಾನೆ. ಆತನ ಮೊದಲ ಹೆಂಡತಿ ಸಾಮು ಅಳ್ವೆದಿ ಈ ಮದುವೆಯನ್ನು ವಿರೋಧಿಸಿ ತವರು ಸೇರುತ್ತಾಳೆ. ಸಿರಿ ಸಾಮು ಅಳ್ವೆದಿಯನ್ನು ಕರೆಸಿಕೊಂಡು ಹೊಂದಾಣಿಕೆ

ಯಿಂದ ಬಾಳ್ವೆ ಮಾಡುತ್ತಾಳೆ. ಮತ್ತೆ ಸಿರಿ ಗರ್ಭಿಣಿಯಾಗುತ್ತಾಳೆ. ಹೆಣ್ಣು ಹೆತ್ತು ಅವಳು ಮಾಯವಾಗುತ್ತಾಳೆ.

ಬಿರ್ಮಾಳ್ವ, ಆತನ ಮಗಳು ಸಿರಿ, ಅವಳ ಮಗಳು ಸೊನ್ನೆ, ಹಾಗೂ ಸೊನ್ನೆಗೆ ಅವಳಿ ಮಕ್ಕಳು ಅಜ್ಜಗ ದಾರಗ -ಈ ನಾಲ್ಕು ತಲೆಮಾರುಗಳೊಂದಿಗೆ ಕಥೆಯ ಹರಹು ಹಬ್ಬಿದೆ.

ಇಡೀ ಕಥೆಯುದ್ದಕ್ಕೂ ಸಿರಿ ಸಮಾಜದ ಬೇರೆ ಬೇರೆ ಶಕ್ತಿಗಳೊಂದಿಗೆ ಮುಖಾಮುಖಿ ಯಾಗುತ್ತ ಹೋಗುತ್ತಾಳೆ. ಹಾಗೂ ಪುರುಷಪ್ರಧಾನ ಸಾಂಸ್ಕೃತಿಕ ಮೌಲ್ಯಗಳನ್ನು ಮೀರುತ್ತಾಳೆ. ಅವಳೆದುರು ಬರುವ ಎಲ್ಲ ಗಂಡು ಪಾತ್ರಗಳೂ ಜೀವಕಳೆದುಕೊಂಡಂತಿವೆ. ಪುರುಷ ಪ್ರಧಾನ ವ್ಯವಸ್ಥೆಯ ಚೌಕಟ್ಟಿನಲ್ಲಿ ಸಿರಿಯನ್ನು ನೋಡಿದಾಗ ಅವಳೊಂದು ಅದ್ಭುತ ಪಾತ್ರವಾಗಿ, ಸ್ತ್ರೀ ಶಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಗಂಡನ ನೈತಿಕತೆಯನ್ನು ಪ್ರಶ್ನಿಸುತ್ತಲೇ ಅವನಿಗೆ ಮೊಟ್ಟಮೊದಲು ಮುಖಾಮುಖಿಯಾಗಿ ನಿಲ್ಲುತ್ತಾಳೆ. ಆಸ್ತಿಗಾಗಿ ಶಂಕರಾಳ್ವನಿಗೆ ಎದುರಾಗುತ್ತಾಳೆ. ಆಸ್ತಿ ದಕ್ಕದೇ ಹೋದಾಗ ಅಲ್ಲಿನ ಪುರುಷಾಧಿಕಾರವನ್ನು ಧಿಕ್ಕರಿಸುತ್ತಾಳೆ. ತನ್ನಕಷ್ಟ ನಷ್ಟಕ್ಕೆ ಜೊತೆಯಾಗದಿದ್ದ, ತವರಿನ ಮಾನಪಮಾನವನ್ನು ಕಾಯದಿದ್ದ ಪತಿಗೆ ಬರ (ವಿಚ್ಛೇದನ) ಹೇಳುತ್ತಾಳೆ. ಅವಳು ವಿಚ್ಛೇದ ಹೇಳುವ ಕ್ರಮವೂ ಕೂಡ ತೀರ ಹೊಸದು. ಗಂಡನೆದುರಿಗೇ ಮೂಗುತಿ, ಕರಿಮಣಿಯನ್ನು ಕಿತ್ತೊಗೆದು, ಬಳೆಗಳನ್ನು ಒಡೆದುಕೊಳ್ಳುತ್ತಾಳೆ. ಸಿರಿ ಶೋಷಕರನ್ನಷ್ಟೇ ಗುರುತಿಸಿಲ್ಲ. ಶೋಷಣೆಯ ಸಂರಚನೆಯನ್ನು ಅರ್ಥಮಾಡಿಕೊಂಡಿದ್ದಾಳೆ. ಹೀಗಾಗಿ ಸಿರಿಗೆ ಏಕಕಾಲದಲ್ಲಿ ಶೋಷಕರ ವಿರುದ್ಧ, ಶೋಷಣೆಯ ಸಾಮಾಜಿಕ, ಕೌಟುಂಬಿಕ ಸಂರಚನೆಯ ವಿರುದ್ಧ ಹೋರಾಡಲು ಸಾಧ್ಯವಾಗಿದೆ. ಗಂಡನಾದ ಕಾಂತುಪೂಂಜನು ಕಟ್ಟಿದ ತಾಳಿ ಹಾಗೂ ಆತನ ಆಶ್ರಯವನ್ನು ತಿರಸ್ಕರಿಸುವ ಮೂಲಕ ಪುರುಷನ ಪರಮಾಧಿಕಾರದ ಭೌತಿಕ ಹಾಗೂ ಸಾಂಸ್ಕೃತಿಕ ಅಸ್ತಿತ್ವವನ್ನು ಏಕಕಾಲದಲ್ಲಿ ನುಚ್ಚುನೂರು ಮಾಡುತ್ತಾಳೆ. ಚಾಲ್ತಿಯಲ್ಲಿರುವ ತಾಯ್ತನದ ಜವಾಬ್ದಾರಿಗಳನ್ನು ಸುಳ್ಳುಮಾಡುತ್ತ ಮರುಮದುವೆಯಾಗುತ್ತಾಳೆ. ಆದರೆ ಇಲ್ಲಿ ಪ್ರಶ್ನೆ ಏಳುವುದು ಅವಳಿಗೆ ಅನುರೂಪನಲ್ಲದ ಹಾಗೂ ಈಗಾಗಲೇ ಮದುವೆಯಾದ ಕೊಡ್ಸರಾಳ್ವನೊಂದಿಗಿನ ವಿವಾಹ ವಾಗುವ ಅಂತ್ಯ. ಅದು ಅವಳ ವ್ಯಕ್ತಿತ್ವಕ್ಕೆ ಒಗ್ಗುವುದಲ್ಲ. "ಕಾಂತಾಪೂಂಜನ ಅನೈತಿಕತೆಗೆ ಹಾಗೂ ಸತ್ಯನಾಪುರದ ಅಧಿಕಾರ ಬಯಸಿ ಬಂದ ಶಂಕರ ಅಳ್ವನ ಮೋಸಕ್ಕೆ ಸಿರಿ ಒಡ್ಡುವ ನಿಜವಾದ ಪ್ರತಿಭಟನೆಯೇ ಈ ಮರುಮದುವೆ. ಸಿರಿಗೆ ಇಲ್ಲಿ ತನ್ನ ಪ್ರತಿಭಟನೆಯಷ್ಟೇ ಸ್ತ್ರೀ ಸಮೂಹಕ್ಕೆ ಹೊಸ ಮೌಲ್ಯ (ಮರುಮದುವೆ) ವನ್ನು ಹುಟ್ಟುಹಾಕುವುದು ಮುಖ್ಯ ವಾಗಿತ್ತು." (ಗಾಯಿತ್ರಿ ನಾವಡ: ೧೯೯೯; ಪು. ೧೪೪) ಎನ್ನುವ ಗಾಯಿತ್ರಿ ಅವರ ನಿಲುವು ಆರೋಗ್ಯಕರವಾದುದಲ್ಲ. ಅವಳು ಮರುಮದುವೆಯಾದದ್ದು 'ಬುಡುಧಾರೆ' ಸಂಪ್ರದಾಯ ಕ್ಕನುಗುಣವಾಗಿ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಕೆಲವು ಜಾತಿಗಳಲ್ಲಿ ಉಡಿಕೆ ಪದ್ಧತಿ ಇದೆ. ಬುಡುಧಾರೆ ಕ್ರಮಕ್ಕನುಗುಣವಾಗಿ ಮರುಮದುವೆಯಾಗುವ ಅವಳಲ್ಲಿ ಹೆಚ್ಚುಗಾರಿಕೆಯನ್ನು ಗುರುತಿಸಲಾಗುವುದಿಲ್ಲ. ಆರಂಭದಲ್ಲಿ ಪ್ರಕಟಗೊಂಡ ಅವಳ ಸ್ವತಂತ್ರ ವ್ಯಕ್ತಿತ್ವಕ್ಕೆ ಇದು

ಸರಿಹೊಂದುವುದಿಲ್ಲ. ಏನೇ ಆದರೂ ಮರುಮದುವೆಯಯಾಗುವ ಮುಂಚಿನ ಪ್ರಸಂಗ ಗಳಲ್ಲಿ ಸಿರಿ ತೋರಿದ ಧೈರ್ಯ, ವ್ಯವಸ್ಥೆಯ ವಿರುದ್ಧ ಬಂಡೆದ್ದ ಅವಳ ವ್ಯಕ್ತಿತ್ವಕ್ಕೆ ಗೌರವಿಸಲೇಬೇಕು. ಅಲ್ಲಿಯವರೆಗೆ ಎಲ್ಲಿಯೂ ಶರಣಾಗದ ಅವಳ ವ್ಯಕ್ತಿತ್ವಕ್ಕೆ, ಸ್ವಾಭಿಮಾನಕ್ಕೆ ನಾವು ಮಣಿಯಲೇಬೇಕು.

ಮಾತೃಪ್ರಧಾನ ಹಾಗೂ ಪಿತೃಪ್ರಧಾನ ಮೌಲ್ಯಗಳೆರಡರ ಸಂಘರ್ಷದ ಚಿತ್ರಣವನ್ನು ಸಿರಿ ಕಾವ್ಯ ನೀಡುತ್ತದೆ. ಇಂತಹ ತಿಕ್ಕಾಟಗಳನ್ನು ಅತ್ಯಂತ ಎಚ್ಚರಿಕೆಯಿಂದ ಗಮನಿಸಿ ಸ್ತ್ರೀವಾದಿ ಸಾಂಸ್ಕೃತಿಕ ಮೀಮಾಂಸೆಯನ್ನು ಕಟ್ಟಬೇಕಿದೆ. ಅನೇಕ ಸಾಂಸ್ಕೃತಿಕ ಸಂಗತಿಗಳಲ್ಲಿ ಸಾಂಕೇತಿಕವಾಗಿ ಇನ್ನೂ ಸಮೃದ್ಧವಾಗಿರುವ ಮಾತೃಪ್ರಧಾನ ಮೌಲ್ಯಗಳನ್ನು ಎಚ್ಚರಿಕೆಯಿಂದ ದಾಖಲು ಮಾಡಬೇಕಿದೆ. ಅವುಗಳನ್ನು ವಾಸ್ತವಿಕ ನೆಲೆಯಲ್ಲಿ ವಿಶ್ಲೇಷಣೆ ನಡೆಸಿ ಮಹಿಳಾ ಅಧ್ಯಯನಕ್ಕೆ ಮತ್ತು ಹೋರಾಟಕ್ಕೆ ಹೊಸ ಆಯಾಮಗಳನ್ನು ಸೃಷ್ಟಿಸಬೇಕಿದೆ.

ಉಲ್ಲೇಖಗಳು

ಗಾಯತ್ರಿ ನಾವಡ: ೧೯೯೯; **ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು**, ಸಿರಿ ಪ್ರಕಾಶನ, ಹೊಸಪೇಟೆ

ನಾವಡ ಎ.ವಿ. (ಸಂ): ೧೯೯೯; **ಸಿರಿಪಾಡ್ದನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪುರುಷೋತ್ತಮ ಬಿಳಿಮಲೆ: ೧೯೯೭; **ಕೂಡುಕಟ್ಟು**, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ

❖ ❖

೮

ಮಹಿಳಾ ಜನಪದ ಕಲೆಗಳು : ಹೊಸ ಹುಡುಕಾಟ

ನಾವು ಇವತ್ತು ಯಾವುದನ್ನು ಜನಪದ ಕಲೆ ಎಂದು ಗುರುತಿಸುತ್ತಿದ್ದೇವೆಯೋ ಅದು ಜನಪದರ ಪಾಲಿಗೆ ಕಲೆ ಅಲ್ಲ, ಅದೊಂದು ಜೀವನ ಕ್ರಮ. ನಾವು ಅದನ್ನು ಕೇವಲ ಜನಪದ ಕಲೆಯಾಗಿ ನಮ್ಮ ಅಧ್ಯಯನದ ಸಂದರ್ಭದಲ್ಲಿ ಕಾಣುತ್ತಿದ್ದೇವೆ. ಈ ಜನಪದ ಕಲೆಗಳನ್ನು ಮೂರು ವಿಧಗಳಲ್ಲಿ ವಿಂಗಡಿಸಿಕೊಂಡು ಪರಿಶೀಲಿಸಬಹುದು. ೧. ಮಹಿಳಾ ಜನಪದ ಕಲೆಗಳು ೨. ಪುರುಷ ಜನಪದ ಕಲೆಗಳು ೩. ಸ್ತ್ರೀ ಪುರುಷರಿಬ್ಬರೂ ಭಾಗವಹಿಸುವ ಕಲೆಗಳು. ಮಹಿಳಾ ಜನಪದ ಕಲೆಗಳು ಸಂಖ್ಯಾತ್ಮಕವಾಗಿ ಬಹಳ ಕಡಿಮೆ ಇವೆ. ಚರಿತ್ರೆಯಲ್ಲಿ ಮಹಿಳಾ ಬದುಕಿನ ಪಲ್ಲಟಗಳಲ್ಲಿ ಗುರುತಿಸಬೇಕಾದರೆ ಮಹಿಳಾ ಜನಪದ ಕಲೆಗಳನ್ನು ಸಾಮಾಜಿಕ ನೆಲೆಯಲ್ಲಿಟ್ಟು ವಿಶ್ಲೇಷಿಸುವುದು ಅತ್ಯವಶ್ಯಕವೆನಿಸುತ್ತದೆ. ಇಲ್ಲಿ 'ಕಲೆ' ಎನ್ನುವುದನ್ನು 'ದುಡಿಮೆ'ಗೆ ಸಂವಾದಿಯಾಗಿ ಬಳಸಲಾಗಿದೆ.

ಚಾರಿತ್ರಿಕ ಬೆಳವಣಿಗೆಯಲ್ಲಿ ಉತ್ಪಾದನಾ ಚಟುವಟಿಕೆಗಳಲ್ಲಿ ಮಹಿಳೆಯು ಭಾಗವಹಿಸಿದರೂ ಅದರಿಂದ ಬಂದ ಉತ್ಪನ್ನದಿಂದ ಅವಳನ್ನು ದೂರವಿಡುತ್ತಾ ಬಂದ ಪುರುಷ ಪ್ರಧಾನ ಸಾಮಾಜಿಕ ನಿಲುವುಗಳು ಮಹಿಳಾ ಜನಪದ ಕಲೆಗಳ ಮೇಲೆ ಪರಿಣಾಮ ಬೀರಿವೆಯೆ ಎಂಬುದನ್ನು ನೋಡ

ಬೇಕಿದೆ. "ಪ್ರಕೃತಿಯಲ್ಲಿ ದೊರೆಯುವ ಆಹಾರವನ್ನು ಹುಡುಕಿಕೊಂಡು (ಇದರಲ್ಲಿ ಬೇಟೆಯೂ ಸೇರಿರುತ್ತದೆ) ಜೀವಿಸುವ ಉತ್ಪಾದನಾ ವಿಧಾನವನ್ನು ಅನುಸರಿಸುತ್ತಿದ್ದಾಗ ಅಂದಿನ ಉತ್ಪಾದನೆ ಅತ್ಯಲ್ಪವಾಗಿರುತ್ತದೆ. ಅದನ್ನು ಶ್ರಮವಹಿಸಿ ಅಗತ್ಯಾನುಸಾರ ಹಂಚುವ ಕೆಲಸ ಮಹಿಳೆಯದೇ ಆಗಿರುತ್ತದೆ. ಉತ್ಪಾದನಾ ವಿಧಾನದಲ್ಲಿ ಇನ್ನುಷ್ಟು ಬೆಳವಣಿಗೆಗೆ ಬಂದಂತೆ (ಉದಾಹರಣೆಗೆ ಪಶುಪಾಲನೆ ಅಭ್ಯಾಸಕ್ಕೆ ಬಂದಂತೆ) ಅಂದಿನ ಉತ್ಪಾದನೆಯಲ್ಲಿ ಹೆಚ್ಚಾದಾಗ ಈ ಹೆಚ್ಚುವರಿ ಉತ್ಪಾದನೆಯನ್ನು ಹಂಚುವ ಅಧಿಕಾರ ಸಮುದಾಯದ ಮುಖ್ಯರೆನಿಸಿದ ಪುರುಷರ ಕೈಗೆ ಹೋಗುತ್ತದೆ. ಮತ್ತಷ್ಟು ಅಭಿವೃದ್ಧಿ ಹೊಂದಿದ ಸ್ಥಿತಿಯಲ್ಲಿ ಹೆಚ್ಚುವರಿ ಉತ್ಪತ್ತಿಯನ್ನು ಶೇಖರಿಸಿದ್ದು ವಿನಿಯೋಗಿಸುವ ಅಧಿಕಾರವನ್ನು ಒಂದು ದೇವಾಲಯವೋ, ಒಬ್ಬ ರಾಜನೋ ದಕ್ಕಿಸಿಕೊಂಡು ಬಿಡುತ್ತಾರೆ. ಉದ್ದಿಮೆಗಳನ್ನಾಧರಿಸಿ ಉತ್ಪಾದನಾ ವ್ಯವಸ್ಥೆ ಇರುವ ಸಮಾಜದಲ್ಲಿ ಹೆಚ್ಚುವರಿ ಉತ್ಪಾದನೆಯು ಉದ್ದಿಮೆದಾರ ಯಜಮಾನನ ಕೈಗೆ ಸೇರಿಬಿಡುತ್ತದಾದರೆ, ರೈತರನ್ನಾಧರಿಸಿದ ಉತ್ಪಾದನಾ ವ್ಯವಸ್ಥೆಯ ಊಳಿಗಮಾನ್ಯ ಸಮಾಜದಲ್ಲಿ ಭೂಮಾಲಿಕನ ಕೈಗೆ, ಸ್ವತಂತ್ರ ಕಾರ್ಮಿಕರ ಶ್ರಮದಿಂದಾಗಿ ಉತ್ಪಾದನಾ ವ್ಯವಸ್ಥೆ ಇರುವ ಬೂರ್ಜ್ವಾ ಸಮಾಜದಲ್ಲಿ ಶ್ರೀಮಂತರ ಪಾಲಿಗೆ ಈ ಹೆಚ್ಚುವರಿ ಉತ್ಪಾದನೆ ಹೊರಟುಹೋಗುತ್ತದೆ" (ಕೋಸಾಂಬಿ, (ಸಂಗ್ರಹ) ಬಾಲಗೋಪಾಲ : ೧೯೯೮; ಪು. ೧೬) ಪಿತೃಪ್ರಧಾನ, ಪರೋಹಿತಶಾಹಿ, ರಾಜಶಾಹಿ, ಊಳಿಗಮಾನ್ಯಶಾಹಿ, ಸಾಮಂತಶಾಹಿ ಹಾಗು ಬೂರ್ಜ್ವಾ ಸಾಂಸ್ಕೃತಿಕ ಚರಿತ್ರೆಯಲ್ಲಿ ರೂಪಗೊಂಡ ಈ ಎಲ್ಲಾ ಘಟ್ಟಗಳು ಪುರುಷ ಕೇಂದ್ರಿತವಾಗಿಯೇ ಬೆಳೆದುಕೊಂಡು ಬಂದುದರಿಂದ ಮಹಿಳಾ ವಿರೋಧಿ ನಿಲುವುಗಳನ್ನೇ ಹೊಂದಿವೆ. ಅವುಗಳು ಮಹಿಳಾ ಸೃಜನಶೀಲತೆಯನ್ನು ಹತ್ತಿಕ್ಕಿದವು. ಹೆಣ್ಣಿನ ಮೇಲೆ ಪುರುಷ ಆರೋಪಿಸಿದ ಮೌಲ್ಯಗಳ ನಿರ್ದೇಶನದ ಭೂಮಿಕೆಯಲ್ಲಿಯೇ ಅವು ಪ್ರದರ್ಶನಗೊಳ್ಳತೊಡಗಿದವು.

ಚರಿತ್ರೆಯಲ್ಲಿ ಉತ್ಪಾದನಾ ಚಟುವಟಿಕೆಗಳು ಪುರುಷಕೇಂದ್ರವಾಗಿ ಬೆಳೆದು ಬಂದಿದ್ದರಿಂದ ಬಹುಪಾಲು ಪುರುಷ ಜನಪದ ಕಲೆಗಳು ಔಪಯೋಗಿಕ ಆಯಾಮವನ್ನೇ ಪಡೆದಿವೆ. ಮಡಿಕೆ ಮಾಡುವವರು, ಬಂಡಿ ತಯಾರಿಸುವವರು, ಬೀಸುಕಲ್ಲು, ಒಳಕಲ್ಲುಗಳನ್ನು ರೂಪಿಸುವವರು ಗಂಡಸರೇ. ಹಾಗಂತ ಉತ್ಪಾದನಾ ಸ್ವರೂಪವುಳ್ಳ ಕಲೆಗಳಲ್ಲಿ ಮಹಿಳೆಯ ಭಾಗವಹಿಸುವಿಕೆ ಇರುವುದಿಲ್ಲವೆಂದಲ್ಲ. ಆದರೆ ಅವಳ ಶ್ರಮ ಅಲ್ಲಿ ಅದೃಶ್ಯವಾಗಿರುತ್ತದೆ. ತೊಗಲುಗೊಂಬೆಯನ್ನು ತಯಾರಿಸುವವರು ಗಂಡಸರೇ ಆದರೂ ಅದಕ್ಕೆ ಬೇಕಾದ ಸಾಧನ ಪರಿಕರಗಳನ್ನು ಒದಗಿಸಿಕೊಡುವವಳು ಹೆಣ್ಣೇ. ಪುರುಷನು ತೊಗಲಿನಿಂದ ಒಂದು ಕಲಾತ್ಮಕ ಗೊಂಬೆಯನ್ನು ರೂಪಗೊಳಿಸುವಲ್ಲಿ ಮಹಿಳೆಯ ಪಾಲುದಾರಿಕೆಯೂ ಇರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಆದರೆ ಪುರುಷ ಪ್ರಧಾನವಾಗಿರುವ ಕಲೆಗಳಲ್ಲಿ ಮಹಿಳೆಯ ಶ್ರಮದ ಹಾಜರಾತಿ ಕಾಣಿಸುವುದೇ ಇಲ್ಲ. ಕೆಲವೇ ಕೆಲವು ಪುರುಷ ಜನಪದ ಕಲೆಗಳಲ್ಲಿ ಮನರಂಜನೆ ಹಾಗೂ ಅಲಂಕಾರಿಕ ಗುಣಗಳನ್ನು ಕಾಣಬಹುದು.

ಉದಾಹರಣೆಗೆ ಆಭರಣ ತಯಾರಿಸುವುದು, ದೊಂಬರಾಟ ಮೊದಲಾದವುಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಆದರೆ ಇವುಗಳಲ್ಲಿ ಅಲಂಕಾರಿಕ, ಸೌಂದರ್ಯ ಹಾಗೂ ಮನೋರಂಜನೆಯ ಆಯಾಮಗಳು ಮಾತ್ರ ಇವೆ ಎಂದು ಹೇಳಲಾಗದು. ಉತ್ಪಾದನಾ ಗುಣಗಳನ್ನು ಅವುಗಳು ಹೊಂದಿರುವುದನ್ನು ಗಮನಿಸಬೇಕು. ಬಿದಿರಿನ ಬುಟ್ಟಿ, ಕಸಪೊರಕೆ, ದೊಣ್ಣೆ, ಪತ್ರೊಳಿ ತಯಾರಿಸುವುದು ಹಾಗೂ ಹಚ್ಚೆಯಂತಹ ಮಹಿಳಾ ಜನಪದ ಕಲೆಗಳಲ್ಲಿ ಉತ್ಪಾದನೆ ಕಾಣಿಸಿಕೊಂಡರೂ ಅದು ಅಂಶಿಕವಾಗಿ ಬರುತ್ತದೆ ವಿನಃ ಪುರುಷ ಜನಪದ ಕಲೆಗಳಂತೆ Utilityಯೇ ಅವುಗಳ ಪ್ರಧಾನ ಸ್ವಭಾವವಾಗಿರುವುದಿಲ್ಲ. ಮಹಿಳಾ ಜನಪದ ಕಲೆಗಳು ಉಪಯುಕ್ತತೆಯ ಆಯಾಮಗಳನ್ನು ಹೊಂದಿವೆ. ಅವಳ ಕಲೆಗಳು ಮಾರುಕಟ್ಟೆಗೆ ಬಂದಾಗ ಪುರುಷರಿಗೆ ಹಸ್ತಾಂತರವಾಗುತ್ತವೆ.

ಬಹುಪಾಲು ಮಹಿಳಾ ಕಲೆಗಳು - ಅದು ಜನಪದ ಇರಬಹುದು, ಶಿಷ್ಟ ಇರಬಹುದು - ಸೌಂದರ್ಯ, ಅಲಂಕಾರ ಹಾಗೂ ಮನೋರಂಜನೆಯ ಗುಣಗಳ ಜೊತೆಗೆ ಉಪಭೋಗದ ನೆಲೆಗಳನ್ನು ಹೊಂದಿವೆ. ಉಪಭೋಗದ ಹಾಗೂ ಹವ್ಯಾಸದ ಕಲೆಗಳಲ್ಲಿ ಲಿಂಗಶ್ರೇಣೀಕರಣದ ಜೊತೆಗೆ ಜಾತಿ ಶ್ರೇಣೀಕರಣವೂ ಇದೆ. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಕಲೆಗಳನ್ನು ಎರಡು ವಿಧಗಳಲ್ಲಿ ವಿಂಗಡಿಸಿಕೊಳ್ಳುವುದು ಅಗತ್ಯವೆನಿಸುತ್ತದೆ. ೧. ಪ್ರದರ್ಶನ ಕಲೆಗಳು ೨. ಪ್ರದರ್ಶನೇತರ ಕಲೆಗಳು. ಪ್ರದರ್ಶನ ಕಲೆಗಳು ಪುರುಷರ ಕಲೆಗಳಾಗಿವೆ. ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ಸಾರ್ವಜನಿಕ ವ್ಯಕ್ತಿತ್ವವನ್ನು ಹುಟ್ಟಿದಾಗಲೇ ಪಡೆದುಕೊಂಡು ಬಂದ ಗಂಡಸರ ಬಹುಪಾಲು ಕಲೆಗಳು ಪ್ರದರ್ಶನಾತ್ಮಕ ಗುಣಗಳನ್ನು ಹೊಂದಿವೆ. ಮಹಿಳಾ ಜನಪದ ಕಲೆಗಳು ಬಹುಮಟ್ಟಿಗೆ ಪ್ರದರ್ಶನೇತರ ಕಲೆಗಳಾಗಿದ್ದು, ಕೌಟುಂಬಿಕ ಚೌಕಟ್ಟಿನೊಳಗೆ ಕಾಣಿಸಿಕೊಳ್ಳುತ್ತವೆ. ಜೋಗತಿ ಕುಣಿತ, ಪಾತರದವರ ಸಂಗೀತ, ನೃತ್ಯ, ನಾಗೇಶಿ ಸಂಪ್ರದಾಯದ ಹಾಡುಗಾರಿಕೆ ಮೊದಲಾದ ಕೆಲವು ಪ್ರದರ್ಶನ ಕಲೆಗಳಲ್ಲಿ ಮಹಿಳೆಯರು ಕಾಣಿಸಿಕೊಂಡರೂ, ಅವರು ಕೆಳಜಾತಿಗೆ ಸೇರಿದವರೇ ಆಗಿರುತ್ತಾರೆ. ಒಂದು ಕಾಲದಲ್ಲಿ ಮೇಲ್ಜಾತಿಯ ಮಹಿಳೆಯರು ಸಂಗೀತ, ನೃತ್ಯ ಕಲಿಯುವಂತಿರಲಿಲ್ಲ. ಒಂದು ವೇಳೆ ಅವರು ಕುಣಿಯಲು, ಹಾಡಲು ಆಸಕ್ತಿ ತೋರಿಸಿದರೆ 'ಕುಣಿಯಾಕ ನೀ ತಾಫೆ ಕಟ್ಟಕ್ಕೇನು', 'ಹಾಡಾಕ ನೀ ಪಾತರದಕಿಯೇನು' (ವಿವರಣೆಗೆ ಗಮನಿಸಿ, ಶೈಲಜ ಹಿರೇಮಠ: ೧೯೯೫; ಪು. ೧೨೩) ಎಂದು ಮೂದಲಿಸುತ್ತಿದ್ದರು. ಸಮಾಜದ ಈ ಧೋರಣೆಯನ್ನು ನೋಡಿದರೆ ಪಾತರದವರ ಸಂಗೀತ, ನೃತ್ಯಗಳಲ್ಲಿ ಪಾತರದವರಷ್ಟೇ ಪಾಲ್ಗೊಳ್ಳುತ್ತಿದ್ದ ಸಂದರ್ಭದಲ್ಲಿ ಅವುಗಳು ಕಲೆಯಾಗಿರಲಿಲ್ಲ. ಪಾತರದವರಿಗೆ ನೃತ್ಯ, ಸಂಗೀತ ವೃತ್ತಿ ಹಾಗೂ ಧಾರ್ಮಿಕ ಕ್ರಿಯೆಯಾದರೆ, ಪ್ರದರ್ಶನ ವೀಕ್ಷಕರಿಗೆ ಅದು ಮನರಂಜನೆಯಾಗಿತ್ತು. ಥಾಮಸ್ ಬೊವ್ರೆ ಪಾತರದವರ ಕುರಿತು ಹೇಳಿದ ಮಾತುಗಳನ್ನು ಗಮನಿಸಬೇಕು. "ಪ್ರತಿ ಗುರುವಾರ ರಾತ್ರಿ ರಾಜ್ಯಪಾಲರ ಅಥವಾ ಕೊತ್ವಾಲರ ಬಳಿಗೆ ಹೋಗಿ ಹಾಡಿ ಕುಣಿದು ಸಲಾಮು ಹಾಕಿ ಬರಬೇಕು. ಇವರಲ್ಲಿ ಬಹು ರೂಪವತಿಯರು ಹಿಂದೆ ಉಳಿದು ರಾತ್ರಿಯೆಲ್ಲಾ ರಾಜ್ಯಪಾಲನ

ಅಥವಾ ಕೊತ್ವಾಲನ ಮತ್ತು ಅವರ 'ಪೀವನ್'ಗಳ ಕಾಮಲಾಲಸೆಯನ್ನು ತೃಪ್ತಿಪಡಿಸಿ ಹೋಗಬೇಕು." (ಥಾಮಸ್ ಬೊವ್ರೆ: ೧೯೯೬; ೩೦೯-೩೧೦) ಪ್ರವಾಸಿ ಕಂಡ ಇಂಡಿಯಾದ ಏಳು ಸಂಪುಟಗಳಲ್ಲಿ ಪಾತರದವರ ಕುರಿತಂತೆ ಥಾಮಸ್ ಬೊವ್ರೆ ಹೇಳಿದ ಅಭಿಪ್ರಾಯವನ್ನು ಪುಷ್ಠೀಕರಿಸುವಂತಹ ಅನೇಕ ವಿದೇಶಿ ಪ್ರವಾಸಿಗರ ಹೇಳಿಕೆಗಳು ದೊರೆಯುತ್ತವೆ. ಪಾತರದವರ ನೃತ್ಯ, ಸಂಗೀತ ಉಪಭೋಗದ ನೆಲೆಯಲ್ಲಿಯೇ ಪ್ರದರ್ಶನಗೊಳ್ಳುತ್ತಿದ್ದು, ಪಾತರದವರಿಗೆ ಮಾತ್ರ ಧಾರ್ಮಿಕ ಕ್ರಿಯೆಯ ಹೆಸರಿನಲ್ಲಿ ವೃತ್ತಿಗಳಾಗಿದ್ದವು. ಯಾವಾಗ ಮೇಲ್ಜಾತಿಯ, ಮೇಲ್ವರ್ಗದ ಮಹಿಳೆಯರು ನೃತ್ಯ, ಸಂಗೀತ ಕ್ಷೇತ್ರಗಳನ್ನು ಪ್ರವೇಶಿಸಲು ಪ್ರಾರಂಭಿಸಿದರೋ ಆಗ ಅವುಗಳು ಕಲೆಗಳು ಎನಿಸಿಕೊಂಡವು. ಅವಾಗ ಆ ಕಲೆಗಳಿಗೆ ಅಂಟಿಕೊಂಡಿದ್ದ ಶಾಪ ವಿಮೋಚನೆ ಗೊಂಡಿತು. ಪಾತರದವರು ಮುಟ್ಟಬಹುದಾಗಿದ್ದ ಜಾತಿಗೆ ಸೇರಿದ್ದರಿಂದ ಅವರ ಕಲೆಗಳಿಗೆ ಮೇಲ್ಜಾತಿಯವರಿಂದ ಕೊನೆಯ ಗಳಿಗೆಯಲ್ಲಿ ಮನ್ನಣೆ ಸಿಕ್ಕಿತೇನೊ! ಆದರೆ ತೀರಾ ಕೆಳಜಾತಿಗೆ ಸೇರಿದ ಮಹಿಳೆಯರ ಚೌಡಿಕೆಹಾಡು, ಜೋಗತಿ ಕುಣಿತಗಳು ಇನ್ನೂ ಸಾಮಾಜಿಕ ಶಾಪದಿಂದ ವಿಮೋಚನೆಗೊಂಡಿಲ್ಲ. ಹೀಗಾಗಿಯೇ ಅವುಗಳು ಇನ್ನುವರೆಗೂ ಜಾತಿ ಹಾಗೂ ಜೋಗತಿಯಂತಹ ಆಚರಣೆಯ ಸಂಪ್ರದಾಯ ಸೂಚಕಗಳಾಗಿ ಉಳಿದುಕೊಂಡು ಬಂದಿವೆ.

ಮಹಿಳೆಯರ ಪಾಲಿಗೆ ಚಿತ್ರಕಲೆ, ಕಸೂತಿಯಂತಹ ಕಲೆಗಳು ಕೇವಲ ಹವ್ಯಾಸಿ ಕಲೆಗಳಾಗಿರುವುದಿಲ್ಲ. ಅವುಗಳು, ಒಂದು ಹೆಣ್ಣು ಸುಸಂಸ್ಕೃತಳು ಎನ್ನುವುದನ್ನು ನಿರೂಪಿಸುವ ಮಾನದಂಡಗಳಾಗಿರುತ್ತವೆ. ಮೇಲ್ಜಾತಿಯ, ಮೇಲ್ವರ್ಗದ ಹಾಗೂ ಮಧ್ಯಮ ವರ್ಗದ ಸ್ತ್ರೀ ಸುಸಂಸ್ಕೃತ ಹೆಂಡತಿಯಾಗಬೇಕಾದರೆ, ಸುಸಂಸ್ಕೃತ ಸೊಸೆಯಾಗಬೇಕಾದರೆ ಕಸೂತಿ, ರಂಗೋಲಿ, ಚಿತ್ರಕಲೆ ಮುಂತಾದವುಗಳನ್ನು ಬಲ್ಲಿದವಳಾಗಿರಬೇಕು. ಇದು ಪುರುಷ ಪ್ರಧಾನ ಸಮಾಜದ ಅಪೇಕ್ಷೆಯಾಗಿದೆ. ಮೇಲ್ಜಾತಿಯ ಮಧ್ಯಮವರ್ಗದ, ಮಧ್ಯಮ ಜಾತಿಯ ಮಧ್ಯಮ ವರ್ಗದ ಮಹಿಳೆಯರಿಗೆ ಬೆಳಗಿನಿಂದ ರಾತ್ರಿಯವರೆಗೆ ಮನೆಗೆಲಸಗಳನ್ನೇ ಮಾಡುವುದರಲ್ಲಿ ವೇಳೆ ಕಳೆಯುತ್ತದೆ. ಇದರಲ್ಲಿಯೇ ಅಲ್ಪಸ್ವಲ್ಪ ವೇಳೆಯನ್ನು ಇಟ್ಟುಕೊಂಡು ಕಸೂತಿ ಹೆಣೆಯುತ್ತಾರೆ. ಚಿತ್ರಕಲೆ ಬಿಡಿಸುತ್ತಾರೆ. ಹೀಗೆ ಕಸೂತಿ ಹೆಣೆಯುವ, ಚಿತ್ರಕಲೆ ಬಿಡಿಸುವ ಅವಳ ಪ್ರವೃತ್ತಿಯು ಹವ್ಯಾಸದ್ದಾಗಿರುವುದಿಲ್ಲ. ಬದಲು ತಾನು ಸುಸಂಸ್ಕೃತಳು ಎನ್ನುವುದನ್ನು ನಿರೂಪಿಸಲು ಪುರುಷ ಪ್ರಧಾನ ವ್ಯವಸ್ಥೆ ಯಾವ ಮೌಲ್ಯಗಳನ್ನು ನಿರ್ದೇಶಿಸಿದೆಯೋ ಅವುಗಳನ್ನು ಪಾಲಿಸುವುದಕ್ಕಾಗಿ ಹೆಣಗಾಡುತ್ತಿರುತ್ತಾಳೆ. ಮಹಿಳೆಯರ ಕಸೂತಿ ಕಲೆಗೆ, ಚಿತ್ರಕಲೆಗೆ ಇತ್ತೀಚೆಗೆ ಮಾರುಕಟ್ಟೆಯಲ್ಲಿ ಬೇಡಿಕೆ ಬಂದಿದೆ. ಆದರೆ ಅದರಿಂದ ಬಂದ ಉತ್ಪಾದನೆ ಮಾತ್ರ ಪುರುಷರಿಗೆ ಹಸ್ತಾಂತರವಾಗುತ್ತಿದೆ.

ಪ್ರಾಚೀನ ಕಾಲದಲ್ಲಿ ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆಯನ್ನು ಮೇಲ್ವರ್ಗದ, ಮೇಲ್ಜಾತಿಯ ಸ್ತ್ರೀಯರು ಕಲಿಯಲೇ ಬೇಕಾಗಿತ್ತು. ಮನೆಯ ಅಲಂಕಾರದಲ್ಲಿ ಅವರು ಕಲಿತ ಈ ವಿದ್ಯೆ ಬಹಳ ಸಹಾಯಕಾರಿಯಾಗುತ್ತದೆ. ಚಿತ್ರಕಲೆಯೂ ಸೇರಿದಂತೆ ೬೪ ವಿದ್ಯೆಗಳನ್ನು ದೇವದಾಸಿಯರಿಗೆ ಕಲಿಸಬೇಕೆಂದು ಕೌಟಿಲ್ಯನು ಹೇಳುತ್ತಾನೆ. ಈ ಎಲ್ಲ ಮಹಿಳಾ

ಕಲೆಗಳು ಅವಳನ್ನು ಉಪಭೋಗಿ ಹಾಗೂ ಅಲಂಕಾರಿಕ ನೆಲೆಯಲ್ಲಿಯೇ ನಿಲ್ಲಿಸಿವೆ. ಮಹಿಳೆಯರು ಇಂತಹ ಕಲೆಗಳನ್ನೇ ಕಲಿಯಬೇಕು ಎನ್ನುವ ಪುರುಷ ಪ್ರಧಾನ ಸಮಾಜ ದೊತ್ತಡವು ಪುರುಷಶಾಹಿ ವ್ಯವಸ್ಥೆ ನಿರೂಪಿಸಿ, ನಿರ್ವಚಿಸಿಕೊಂಡು ಬಂದಿರುವ ಮೌಲ್ಯಗಳನ್ನು ಕಾಪಿಡುವ ಹುನ್ನಾರವನ್ನೇ ಬಯಲುಗೊಳಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ರಂಗೋಲಿಯಂತಹ ಕಲೆ ಅಲಂಕಾರಿಕ ಕಲೆಯಾಗಿ ನಿರ್ವಚಿಸಲ್ಪಟ್ಟಿದ್ದರೂ, ಅದು ಇದುವರೆಗೂ ಮಾತೃಮೂಲ ಚರಿತ್ರೆಯನ್ನು ಹೇಳುವ ಕಲೆಯಾಗಿಯೇ ಉಳಿದುಕೊಂಡು ಬಂದಿದೆ. ರಂಗೋಲಿ, ಮೂಲದಲ್ಲಿ ಅದು ಕಲೆಯಾಗಿರಲಿಲ್ಲ, ಸಾಂಕೇತಿಕ ಮಾಂತ್ರಿಕ ಭಾಷೆಯಾಗಿದ್ದಿತು. ಕಲೆಯೆಂದು ಪರಿಗಣಿಸಿದ ಈ ಯುಗದಲ್ಲೂ, ಮನೆಯ ಅಂಗಳದಲ್ಲಿ ರಂಗೋಲಿ ಇದ್ದರೆ, ಮನೆಯ ಒಳಗೆ ಯಾವುದೇ ದುಷ್ಟಶಕ್ತಿಗಳಿಗೆ ಪ್ರವೇಶಿಸಲು ಬಿಡುವುದಿಲ್ಲ ಎನ್ನುವ ನಂಬಿಕೆ ಪ್ರಬಲವಾಗಿಯೇ ಇದೆ. ಲಕ್ಷ್ಮೀ ಪೂಜೆ ಮಾಡುವಾಗ ತುಂಬಿದ ಕೊಡ ಅಥವಾ ತಂಬಿಗೆಯನ್ನಿಡುವ ಜಾಗದಲ್ಲಿ ರಂಗೋಲಿಯನ್ನು ಹಾಕಿಯೇ ಇಡುವರು. ಮಾಂತ್ರಿಕವಿದ್ಯೆ ಮೊದಲು ಮಹಿಳಾ ಪ್ರಧಾನವಾಗಿತ್ತು ಎನ್ನುವುದಕ್ಕೆ ಇವೊತ್ತಿಗೂ ಜೀವಂತವಾಗಿರುವ ಈ ಎಲ್ಲ ನಂಬಿಕೆ ಹಾಗೂ ಆಚರಣೆಗಳೇ ಸಾಕ್ಷಿಗಳಾಗಿವೆ.

ಸಾಂಪ್ರದಾಯಿಕ ರಂಗೋಲಿಯನ್ನು ಚುಕ್ಕೆ ಇಟ್ಟೇ ತೆಗೆಯುವರು. ಇಂತಿಷ್ಟೇ ಚುಕ್ಕೆಗಳನ್ನು ಇಡಬೇಕು, ಅವುಗಳನ್ನು ಹೀಗೀಗೆ ಇಡಬೇಕು ಎನ್ನುವ ನಿಯಮವಿರುತ್ತದೆ. ಅಕಸ್ಮಾತ್ ಒಂದು ಚುಕ್ಕೆಯನ್ನು ಹೆಚ್ಚು ಇಟ್ಟರೂ ನಡೆಯುವುದಿಲ್ಲ, ಕಡಿಮೆ ಇಟ್ಟರೂ ಬರುವುದಿಲ್ಲ. ಚುಕ್ಕೆಗಳ ನಿಖರತೆಯನ್ನು ಬಯಸುವ ರಂಗೋಲಿಯ ಮನೋಧರ್ಮ, ಮಹಿಳೆಗೆ ಸಂಖ್ಯಾಗಣಿತದ ತಿಳುವಳಿಕೆ ಇತ್ತು ಎನ್ನುವುದನ್ನು ಸಾಬೀತುಪಡಿಸುತ್ತದೆ. ರಂಗೋಲಿಯಲ್ಲಿ ಚುಕ್ಕೆಗಳನ್ನಷ್ಟೇ ಇಟ್ಟರೇ ಸಾಲದು, ಅದು ಪೂರ್ಣತೆಯನ್ನು ಪಡೆಯಬೇಕಾದರೆ, ಕಲೆಯಾಗಿ ಅರಳಬೇಕಾದರೆ ರೇಖೆಯನ್ನು ಹಾಕಬೇಕು. ಹಾಕುವ ರೇಖೆಗಳನ್ನು ಕೂಡ ಇಂಥಲ್ಲಿಂದಲೇ ಪ್ರಾರಂಭಿಸಬೇಕು, ಇಂಥ ಕಡೆಗೇ ಹೊರಳಿಸಬೇಕು, ಇಂಥಲ್ಲಿಯೇ ಕೂಡಿಸಬೇಕು ಎಂಬುದು ಕಟ್ಟುನಿಟ್ಟಾಗಿರುತ್ತದೆ. ಈ ಪ್ರಕ್ರಿಯೆಯೂ ಕೂಡಾ ರೇಖಾಗಣಿತ ಮಹಿಳೆಗೆ ಗೊತ್ತಿತ್ತು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಜನಪದ ಮಹಿಳೆ ಪುಸ್ತಕವನ್ನು ನೋಡಿ, ಅಥವಾ ಬರೆದಿಟ್ಟುಕೊಂಡ ಮಾಹಿತಿಯನ್ನು ಗಮನಿಸಿ ಚುಕ್ಕೆಗಳನ್ನು ಹಾಕುವುದಿಲ್ಲ, ರೇಖೆಗಳನ್ನು ಎಳೆಯುವುದಿಲ್ಲ, ಎಲ್ಲವೂ ಅವಳ ನೆನಪಿನ ಭಂಡಾರದಲ್ಲಿಯೇ ಕ್ರೋಢೀಕರಣವಾಗಿರುತ್ತದೆ. ಸಂಖ್ಯಾಗಣಿತ ರೇಖಾಗಣಿತಗಳ ಮೂಲ ಬೇರುಗಳು ರಂಗೋಲಿಯಿಂದ ಹೊರಟಿವೆಯೇನೋ! ಸಂಖ್ಯಾಗಣಿತ, ರೇಖಾಗಣಿತಗಳು ಅಧ್ಯಯನ ಶಿಸ್ತುಗಳಾಗಿ, ಶಾಸ್ತ್ರಗಳಾಗಿ ರೂಪುಗೊಂಡಾಗ ಆ ಕ್ಷೇತ್ರಗಳಿಂದ ಮಹಿಳೆಯನ್ನು ಪ್ರಜ್ಞಾಪೂರ್ವಕವಾಗಿಯೇ ದೂರವಿಡಲಾಯಿತು. ಅವುಗಳು ಬುದ್ಧಿವಂತರೆಂದು ನಿರ್ವಚಿಸಲ್ಪಟ್ಟ, ಗಂಡಸರ ಆಸ್ತಿಗಳಾದವು. ಸುಮಾರು ೭೦-೮೦ರ ದಶಕದಿಂದೀಚೆಗೆ ಈ ಜ್ಞಾನಶಾಖೆಗಳಲ್ಲಿ ಮಹಿಳೆಯರು ಕಾಣಿಸಿಕೊಳ್ಳುತ್ತಿದ್ದಾರೆ.

ಇದಲ್ಲದೆ ರಂಗೋಲಿಗೆ ಬೇರೆ ಬೇರೆ ಆಯಾಮಗಳನ್ನು ಗುರುತಿಸಬಹುದು. ಬೆಳಗಾದೊಡನೆ ಜನಪದ ಮಹಿಳೆ ಅಂಗಳಕ್ಕೆ ತಳಿರು ಹೊಡೆದು ರಂಗೋಲಿ ಬಿಡಿಸುತ್ತಾಳೆ. ಅಂಗಳದಲ್ಲಿ ನಗುವ ರಂಗೋಲಿ ಮನೆಯಲ್ಲಿ ಹೆಣ್ಣುಮಕ್ಕಳು ಇರುವುದನ್ನು ಸೂಚಿಸುತ್ತದೆ. ಅದು ಬದುಕಿನ ಮತ್ತು ಸೃಷ್ಟಿಯ ಕ್ರಿಯಾತ್ಮಕತೆಯನ್ನು ಹೇಳುತ್ತದೆ. ಪ್ರತಿನಿತ್ಯ ಜನಪದ ಮಹಿಳೆ ರಂಗೋಲಿಯನ್ನು ಭಿನ್ನ-ಭಿನ್ನವಾಗಿಯೇ ಬಿಡಿಸುತ್ತಾಳೆ. ಹಾಗೆಂದರೆ ಮೂರುನೂರಾ ಅರವತ್ತು ದಿನಗಳೂ ಬೇರೆ-ಬೇರೆಯಾಗಿ ರಂಗೋಲಿಯನ್ನು ಮೂಡಿಸುತ್ತಾಳೆಯೇ ಎಂದು ಕೇಳಿದರೆ ಅದು ಯಾಂತ್ರಿಕ ಪ್ರಶ್ನೆಯಾಗುತ್ತದೆ. ಇವತ್ತು ಒಂದು ಚಿತ್ರ, ನಾಳೆ ಮತ್ತೊಂದು ಚಿತ್ರ ಬಿಡಿಸುವ ಜನಪದ ಮಹಿಳೆ, ರಂಗೋಲಿ ಕಲೆಯ ಮೂಲಕವೇ ಮಹಿಳಾ ಸೃಜನಶೀಲತೆಯನ್ನು ಹೇಳುತ್ತಾಳೆ. ಜೊತೆಗೆ ಸಮಾಜ ಹಾಗೂ ಪ್ರಕೃತಿಯ ಪರಿವರ್ತನ ಶೀಲತೆಯನ್ನು ಸಂಕೇತಿಸುತ್ತಾಳೆ.

ಪುರುಷರ ಕುರಿತು ಯಾವ ಗ್ರಹಿತ ಮೌಲ್ಯಗಳು ನಮ್ಮ ಸಮಾಜದಲ್ಲಿ ಚಾಲ್ತಿಯಲ್ಲಿವೆಯೋ ಅವುಗಳು ಪುರುಷ ಜನಪದ ಕಲೆಗಳ ಭಾಗಗಳಾಗಿ ಬಂದಿವೆ. ಉದಾಹರಣೆಗೆ ಡೊಳ್ಳು ಕುಣಿತ, ವೀರಗಾಸೆ ಕುಣಿತ, ಕುರುಬರ ದಟ್ಟಿ ಆಟ, ನಂದಿಧ್ವಜ ಕುಣತ ಮೊದಲಾದ ಕಲೆಗಳು ಗಂಡಸರು ಬಲವುಳ್ಳವರು, ಶೌರ್ಯವುಳ್ಳವರು, ಗಟ್ಟಿಯಾಗಿರುವವರು ಎನ್ನುವ ಸಾಮಾಜಿಕ ನಂಬಿಕೆಯನ್ನೇ ದೃಢಪಡಿಸುತ್ತವೆ (ವಿವರಣೆಗೆ ಗಮನಿಸಿ, ಬೋರಲಿಂಗಯ್ಯ ಹಿ.ಚಿ: ೧೯೯೬). ಮಹಿಳೆಯ ಮೇಲೆ ಪುರುಷ ಪ್ರಧಾನ ಸಮಾಜ ಯಾವ ಮೌಲ್ಯಗಳನ್ನು ಆರೋಪಿಸಿದೆಯೋ ಅದೇ ಮೌಲ್ಯಗಳು ಅವರ ಕಲೆಗಳಲ್ಲೂ ಉಳಿದುಕೊಂಡು ಬರುವಂತೆ ಪುರುಷಶಾಹಿ ಸಮಾಜ ಎಚ್ಚರವಹಿಸಿದೆ. ಉದಾಹರಣೆಗೆ ಕುಣಿತ, ಹಾಡು, ಕಸೂತಿ, ಹಚ್ಚೆ, ಚಿತ್ರಕಲೆ - ಈ ಬಗೆಯ ಮಹಿಳಾ ಜನಪದ ಕಲೆಗಳಲ್ಲಿ ಹೆಣ್ಣು ಉಪಭೋಗ ಹಾಗೂ ಅಲಂಕಾರಿಕ ಗೊಂಬೆಯಾಗಿಯೇ ಚಿತ್ರಿತವಾಗಿರುವಳು. ಮಹಿಳಾ ಕಲೆಗಳಲ್ಲಿ ಕೈ ಮತ್ತು ಕಣ್ಣಿನ ಪಾತ್ರ ಹೆಚ್ಚಾಗಿರುತ್ತದೆ. ದೀರ್ಘ ಸಮಯವನ್ನು ಅಪೇಕ್ಷಿಸುವ ಅವಳ ಕಲೆಗಳು ಸಮಾಜ ಹೆಣ್ಣಿಗೆ ಆರೋಪಿಸಿದ ಸಂಯಮ ಹಾಗೂ ಸೂಕ್ಷ್ಮತೆಯನ್ನು ನಿರೀಕ್ಷಿಸುತ್ತವೆ.

ಕಲೆಗಳ ಕುರಿತಂತೆ ರಿಚರ್ಡ್ಸ್ ಅವರು ಹೇಳಿದ ಮಾತುಗಳು ಅತ್ಯಂತ ಮಹತ್ವದವುಗಳಾಗಿವೆ. ಕಲೆಗಳನ್ನು 'ದಾಖಲೆಗೊಳಿಸಲ್ಪಟ್ಟ ಮೌಲ್ಯಗಳ ಉಗ್ರಾಣ' ಎಂದ ಅವರು ಮುಂದುವರೆದು "ಯಾವುದು ನಮ್ಮಗಳ ಕಾಂಕ್ಷೆಯನ್ನು (appetency) ಪೂರೈಸುತ್ತದೆಯೋ ಮತ್ತು ಜಿಹಾಸೆಯನ್ನು (aversion) ದೂರ ಮಾಡುತ್ತದೆಯೋ ಅದು ಮೌಲ್ಯಾತ್ಮಕ. ಈ ಚಿಂತನೆಯನ್ನೇ ಮುಂದುವರೆಸಿದರೆ ಯಾವುದು ಇತರರ ಮಹತ್ತರ ಕಾಂಕ್ಷೆಯನ್ನು ತಿರಸ್ಕರಿಸದೇ ಅತಿ ಹೆಚ್ಚು ಕಾಂಕ್ಷೆಯನ್ನು ಪೂರೈಸುತ್ತದೆಯೋ ಮತ್ತು ಅತಿಹೆಚ್ಚು ಜಿಹಾಸೆಯನ್ನು ದೂರ ಮಾಡುತ್ತದೆಯೋ ಅದರ ಮೌಲ್ಯ ಅತ್ಯಂತ ಶ್ರೇಷ್ಠ" (ರಿಚರ್ಡ್ಸ್, ಉದ್ಧೃತ : ರಾಮಚಂದ್ರ: ೧೯೯೮; ಪು. ೨೩). ಈ ಮಾತುಗಳು ನಮ್ಮಲ್ಲಿ ಬೆಳದುಕೊಂಡು ಬಂದ ಮಹಿಳಾ ಜನಪದ ಕಲೆಗಳಿಗಾಗಲಿ, ಪುರುಷ ಜನಪದ ಕಲೆಗಳಗಾಗಲಿ ಎರಡಕ್ಕೂ

ಅನ್ವಯಿಸುವುದಿಲ್ಲ. ಬಹುಪಾಲು ಮಹಿಳಾ ಜನಪದ ಕಲೆಗಳು ಮಹಿಳೆಯರ ಕಾಂಕ್ಷೆಗಳನ್ನು ತುಂಬುವುದಿಲ್ಲ. ಅದರ ಬದಲು ಪುರುಷರ ಕಾಂಕ್ಷೆಗಳನ್ನು ತುಂಬುತ್ತವೆ. ಮಹಿಳೆಯರ ಜಿಹಾಸೆಯನ್ನು ದೂರ ತಳ್ಳುವುದಿಲ್ಲ. ಗಂಡಸರ ಜಿಹಾಸೆಯನ್ನು ದೂರ ಮಾಡುತ್ತವೆ. ಮಹಿಳಾ ಕಲೆಗಳು ಪುರುಷರ ಮಹತ್ತರಕಾಂಕ್ಷೆಗಳಿಗೆ ಒತ್ತು ಕೊಟ್ಟಿವೆ. ಸ್ವಂತದ ಮಹತ್ತರಕಾಂಕ್ಷೆಯ ಕುರಿತು ಯೋಚಿಸಿ ದಂತೆ ಪುರುಷಪ್ರಧಾನ ಮೌಲ್ಯಗಳು ಅವಳ ಮೇಲೆ ಒತ್ತಡವನ್ನು ಹೇರಿವೆ. ಪುರುಷ ಪ್ರಧಾನ ತೆಯ ಗುಣಲಕ್ಷಣಗಳನ್ನೇ ಮೈಗೂಡಿಸಿಕೊಂಡಿರುವ ಪುರುಷಕಲೆಗಳು, ಗಂಡಸರ ಕಾಂಕ್ಷೆಗಳ ತ್ತಲೇ ಬಾಗಿವೆ.

ಚಾತಿಕಾರಣದ ಜೊತೆಗೆ ಲಿಂಗರಾಜಕಾರಣದಿಂದಾಗಿ ಸಾಮಾಜಿಕ ಮಾನ್ಯತೆಯನ್ನು ಪಡೆಯದೆ ಅತ್ಯಂತ ತಿರಸ್ಕಾರಕ್ಕೆ ಒಳಗಾದಂತಹ ಮಹಿಳಾ ಜನಪದ ಕಲೆಗಳಿಗೆ ಸಾಮಾಜಿಕ ನ್ಯಾಯವೊದಗಿಸಬೇಕಾದರೆ, ಆ ಕಲೆಗಳಿಗೆ ಅಂಟಿದ ಜಾತಿ ಹಾಗೂ ಲಿಂಗದ ಕಪ್ಪುಕಲೆಗಳನ್ನು ಹೊಡೆದುಹಾಕಬೇಕು. ತೀರ ಸಾಮಾಜಿಕ ನಿಂದನೆಗೆ ಬಲಿಯಾದಂತಹ ಜನರ ಬಳಿ ಇರುವ ಕಲಾತ್ಮಕ ವಿದ್ಯೆಗಳನ್ನು ಅಕ್ಯಾಡೆಮಿಶಿಯನ್‌ಗಳಾದ ನಾವುಗಳು ಜನಪದ ಕಲೆಗಳೆಂದು ಕರೆಯುತ್ತಿದ್ದೇವೆ. ಆದರೆ ಆಯಾ ಸಮುದಾಯಗಳ ಜನರಿಗೆ ಅವುಗಳು ಕಲೆಗಳಲ್ಲ, ಕಸಬು ಗಳಾಗಿವೆ. ಆಚರಣೆಗಳಾಗಿವೆ. ಅವುಗಳು ಕಲೆಗಳಾಗಿ ರೂಪಾಂತರಗೊಳ್ಳಬೇಕಾದರೆ ಎಲ್ಲಾ ಜಾತಿಯ ಸ್ತ್ರೀ ಪುರುಷರು ಅವುಗಳನ್ನು ಪ್ರೀತಿ ಗೌರವದಿಂದ ಕಲಿತು ಎಲ್ಲ ಕಡೆಗೂ ಪ್ರದರ್ಶನ ನೀಡಬೇಕು. ಹೀಗಾದಾಗ ಮಾತ್ರ ಮಹಿಳಾ ಜನಪದ ಕಲೆಗಳಿಗೆ ನ್ಯಾಯವೊದಗಿಸಿ ದಂತಾಗುತ್ತದೆ. ಇತ್ತೀಚೆಗೆ ವೀರಗಾಸೆ ನೃತ್ಯದಲ್ಲಿ ಮಹಿಳೆಯರು ಕಾಣಿಸಿಕೊಳ್ಳುತ್ತಿದ್ದಾರೆ. ಲಾವಣಿ ಹಾಡುಗಳನ್ನು ಹಾಡುತ್ತಿದ್ದಾರೆ. ಇದು ಆರೋಗ್ಯಕರವಾದ ಬೆಳವಣಿಗೆ. ಪುರುಷರ ಕುರಿತಂತಿರುವ ಗ್ರಹಿತ ಮೌಲ್ಯಗಳನ್ನು ಒಡೆಯಬೇಕಾದರೆ ಮಹಿಳೆಯರು ಪುರುಷಪ್ರಧಾನ ಕಲೆಗಳಲ್ಲಿ ಪ್ರವೇಶ ಮಾಡಬೇಕಾದುದು ಅತ್ಯವಶ್ಯಕವಾಗಿದೆ.

ಮಹಿಳಾ ಕಲೆಗಳನ್ನು ಸೌಂದರ್ಯ ಮತ್ತು ನೈಪುಣ್ಯದ ನೆಲೆಗಳಲ್ಲಿ ಮಾತ್ರ ನೋಡ ಲಾಗುತ್ತಿದೆ. ಮಹಿಳಾ ಕಲೆಗಳ ಹಿಂದೆ ಇರುವ ಪುರುಷ ಪ್ರಧಾನ ವ್ಯವಸ್ಥೆಯ ರಾಜಕಾರಣವನ್ನು ಗುರುತಿಸಬೇಕಾದರೆ ಅವುಗಳನ್ನು ಸಾಮಾಜಿಕ ನೆಲೆಯಲ್ಲಿಟ್ಟು ವಿಶ್ಲೇಷಿಸಬೇಕಾಗಿದೆ. ಅಂದಾಗ ಮಾತ್ರ ಮಹಿಳಾ ಜನಪದ ಕಲೆಗಳಿಗಿರುವ ಬೇರೆ-ಬೇರೆ ಆಯಾಮಗಳನ್ನು ಅರ್ಥಮಾಡಿ ಕೊಳ್ಳಲು ಸಾಧ್ಯವಾಗುತ್ತದೆ. ಮಹಿಳಾ ಜನಪದ ಕಲೆಗಳ ಕುರಿತು ಆಳವಾದ ಅಧ್ಯಯನ ನಡೆದಾಗ ಮಾತ್ರ ಅವುಗಳ ಮೇಲೆ ಹೆಚ್ಚಿನ ಬೆಳಕನ್ನು ಬೀರಲು ಸಾಧ್ಯ.

ಉಲ್ಲೇಖಗಳು

ಕೋಸಾಂಬಿ ಡಿ.ಡಿ, ಸಂಗ್ರಹ ಬಾಲಗೋಪಾಲ್: ೧೯೮೮; ಪ್ರಾಚೀನ ಭಾರತದ ಚರಿತ್ರೆ, ಎಚ್.ಎಸ್.ಶ್ರೀಮತಿ (ಅನು), ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಮೈಸೂರು

ಥಾಮಸ್ ಬೋವ್ರೆ: ೧೯೬೬; ಪ್ರವಾಸಿ ಕಂಡ ಇಂಡಿಯಾ ಸಂಪುಟ ೨, ನಾಗೇಗೌಡ ಎಚ್.ಎಲ್. (ಅನು), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಬೋರಲಿಂಗಯ್ಯ ಹಿ.ಚಿ. (ಸಂ): ೧೯೯೬; ಕರ್ನಾಟಕ ಜನಪದ ಕಲೆಗಳ ಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಮಚಂದ್ರನ್ ಸಿ.ಎನ್. : ೧೯೯೮; ಓದುಗರು ಮತ್ತು ಓದುವಿಕೆ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ

ಶೈಲಜ ಹಿರೇಮಠ: ೧೯೯೯; ಪಾತರದವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

❖ ❖

೬

ಅಥಣಿ ದೇವದಾಸಿ ವಿಮೋಚನಾ ಸಂಸ್ಥೆ

ಜೋಗತಿ, ಬಸವಿ, ಲೇಸಿ, ಮರಳೆ, ಪಾತರದವರು ಇವರೆಲ್ಲರ ಸಂಪ್ರದಾಯ ಆಚರಣೆಗಳನ್ನು ಅವರ ಸಾಂಸ್ಕೃತಿಕ ಅನನ್ಯತೆಯೆಂದು ಗುರುತಿಸಲಾಗದು. ಅವುಗಳಿಗೆ ಸಾಮಾಜಿಕ ಗೌರವವಿಲ್ಲ. ಇದೇ ರೀತಿ ಯಲ್ಲಿ ಆಫ್ರಿಕದಲ್ಲಿ ಕಂಕುಬೈನ್ಸ್ ಇದ್ದಾರೆ. ಅಲ್ಲಿಯ ಪುರುಷರು ಕಂಕು ಬೈನ್ಸ್ ಬೇಕಾಗಿದ್ದಾರೆ ಎಂದು ಬಹಿರಂಗವಾಗಿ ಜಾಹಿರಾತನ್ನು ನೀಡುವರು. ಹಾಸಿಗೆಯಿಂದ ಹಿಡಿದು ಅವನ ಎಲ್ಲ ಬೇಕುಬೇಡುಗಳನ್ನು ನೋಡಿ ಕೊಳ್ಳುವ ಜವಾಬ್ದಾರಿ ಅವಳ ಮೇಲಿರುತ್ತದೆ. ಆಧುನಿಕ ಜಗತ್ತಿನ ಕಪ್ಪು ಮಹಿಳೆಯರು ಈ ಸಾಂಸ್ಕೃತಿಕ ಅನನ್ಯತೆಯನ್ನು ಪ್ರಶ್ನಿಸಿದ್ದಾರೆ. ಪುರುಷಾಕೃತಿ ವ್ಯವಸ್ಥೆಯನ್ನು ಛಿದ್ರಗೊಳಿಸಲು ಅನೇಕರು ಈ ಬಗೆಯ ಪ್ರಶ್ನೆಗಳನ್ನು ಕೇಳಿದ್ದಾರೆ, ತೀವ್ರವಾಗಿ ಹೋರಾಡುತ್ತಿದ್ದಾರೆ. ಭಾರತೀಯ ಸಂದರ್ಭ ದಲ್ಲಿಯೂ ಇಪ್ಪತ್ತನೆಯ ಶತಮಾನವು ಸಾಂಸ್ಕೃತಿಕ ಅನನ್ಯತೆಯನ್ನು ವಿಭಿನ್ನ ನೆಲೆಯಲ್ಲಿ ವ್ಯಾಖ್ಯಾನಿಸಿದೆ. ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಮುಜುಗರ ತರುವ ಇಂತಹ ಸಂಗತಿಗಳು ಸಾಂಸ್ಕೃತಿಕ ಅನನ್ಯತೆ ಹೇಗಾದವು? ಧರ್ಮಕೇಂದ್ರಿತ ಲೈಂಗಿಕ ದಾಸಿಯರು ಇವೊತ್ತಿಗೂ ಮೇಲ್ವರ್ಗದವರು ಆರೋಪಿಸಿದ ಸಾಂಸ್ಕೃತಿಕ ವಿಶಿಷ್ಟತೆಯನ್ನು ತಮ್ಮ ದೆಂದೇ ಮುಗ್ಧವಾಗಿ ನಂಬಿಕೊಂಡು ಬಂದಿರುವರು. ಶತಮಾನಗಳಿಂದಲೂ ನಂಬಿಕೊಂಡು ಬಂದ ಇಂತಹ ಧಾರ್ಮಿಕ ಅಂಧತ್ವವನ್ನು ಅಳಿಸುವುದು ಅಷ್ಟು ಸುಲಭವಲ್ಲ.

ಧರ್ಮಕೇಂದ್ರಿತ ಲೈಂಗಿಕ ದಾಸಿಯರಲ್ಲಿ ಪ್ರಧಾನವಾಗಿ ಎರಡು ಬಗೆಗಳು ಕಾಣಸಿಕೊಳ್ಳುತ್ತವೆ. ೧. ದೇವಾಲಯದ ಸೂಳೆಯರು, ೨. ದೇವರ ಸೂಳೆಯರು. ಪಾತರದವರು ದೇವಾಲಯದ ಸೂಳೆಯರಾದರೆ, ಬಸವಿ, ಲೇಸಿ, ಮರಳೆ ಇವರೆಲ್ಲರೂ ದೇವರ ಸೂಳೆಯರು. ಎರಡನೆಯ ಬಗೆಯಲ್ಲಿ ಕಾಣಿಸಿಕೊಳ್ಳುವ ಈ ಮೂವರನ್ನು ಒಟ್ಟಂದದಲ್ಲಿ 'ದೇವಸ್ತ್ರೀಯರು' ಎಂದು ಕರೆಯುವುದು ಹೆಚ್ಚು ಸೂಕ್ತವೆನಿಸುತ್ತದೆ. ದೇವರ ಹೆಸರಿನಲ್ಲಿ ಬಿಟ್ಟ ಅವಳಿಗೆ ಯಾವ ಸಾಮಾಜಿಕ ನಿರ್ಬಂಧಗಳೂ ಇರುವುದಿಲ್ಲ. ಇಂದು ಸಮಾಜಕೇಂದ್ರಿತ ಹಾಗೂ ಧರ್ಮಕೇಂದ್ರಿತ ಲೈಂಗಿಕದಾಸಿಯರೆಲ್ಲರನ್ನು ಒಟ್ಟಾರೆ ಸೇರಿಸಿ ದೇವದಾಸಿಯರೆಂದೇ ಗುರುತಿಸುತ್ತಿದ್ದಾರೆ. ಬಿ.ಎಲ್.ಪಾಟೀಲರ ಸಂಸ್ಥೆಯ ಹೆಸರು 'ದೇವದಾಸಿ ವಿಮೋಚನಾ ಕೇಂದ್ರ' ಎಂದು ಇದ್ದುದರಿಂದ ಆ ಪದದೊಂದಿಗೆ ನನ್ನ ತಗಾದೆ ಇದ್ದರೂ ಅದರ ಬಳಕೆ ಇಲ್ಲಿ ಅನಿವಾರ್ಯವಾಗಿದೆ.

ದೇವದಾಸಿ ವ್ಯವಸ್ಥೆ ಸಮಾಜದಲ್ಲಿ ಇಂದಿಗೂ ದಟ್ಟವಾಗಿದೆ. ಆದ್ದರಿಂದ ಅಂತಹ ವಿಷಯಕ್ಕೆ ಕೈಹಾಕುವುದು, ಅವರ ಸುಧಾರಣೆಗಾಗಿ ಪ್ರಯತ್ನಿಸುವುದು ಅಷ್ಟು ಸುಲಭವಲ್ಲ. ಇದೇ ಕೆಲಸವನ್ನು ವಿದೇಶಿಯರು, ಹೊರ ರಾಜ್ಯದವರು ಮಾಡಿದರೆ, ನಮ್ಮ ಜನ ಅದನ್ನು ಬಹಳ ಕೊಂಡಾಡುತ್ತಾರೆ. ಕನ್ನಡದವರಾಗಿದ್ದು ಮೇಲ್ಜಾತಿಗೆ ಸೇರಿದ್ದರೆ ಅವರನ್ನು, ಅವರ ಸಾಮಾಜಿಕ ಕೆಲಸವನ್ನು ಸಂಶಯದಿಂದಲೇ ನೋಡಲಾಗುತ್ತದೆ ಹಾಗೂ ಅಪಮಾನಿಸಲಾಗುತ್ತದೆ. ಇಂತಹ ಸಾಮಾಜಿಕ ಇಕ್ಕಟ್ಟಿನಲ್ಲಿ ಬಿ.ಎಲ್.ಪಾಟೀಲರು, ಶೋಷಿತ ಸಮುದಾಯಕ್ಕೆ ಸೇರಿದ ದೇವದಾಸಿಯರನ್ನೇ ಕೇಂದ್ರವಾಗಿಟ್ಟುಕೊಂಡು ಕೆಲಸ ನಿರ್ವಹಿಸುತ್ತಿರುವುದು ಸಣ್ಣ ವಿಷಯವೇನಲ್ಲ. ಪಾಟೀಲರ ಸ್ಥಾನದಲ್ಲಿ ಹೆಣ್ಣೊಬ್ಬಳಿದ್ದಿದ್ದರೆ ಎಂದು ಕಲ್ಪನೆ ಮಾಡಿಕೊಳ್ಳಲು ಕೂಡ ಭಯವಾಗುತ್ತದೆ. ಸಾಮಾಜಿಕ ಕೆಟ್ಟ ಕಣ್ಣುಗಳು ಅವಳನ್ನು ಹುರಿದು ಮುಕ್ಕಿಬಿಡುತ್ತಿದ್ದವು. ಪಾಟೀಲರು ಗಂಡಾಗಿದ್ದರಿಂದಲೇ ಅವರಿಂದ ಇಂಥ ಕೆಲಸ ಸಾಧ್ಯವಾಗಿದೆ. ಅದರರ್ಥ ನಾನು ಅವರ ಪರಿಶ್ರಮವನ್ನು ಸರಳೀಕರಣಗೊಳಿಸುತ್ತಿದ್ದೇನೆಂದಲ್ಲ. ವಸ್ತುಸ್ಥಿತಿಯನ್ನು ಹೇಳುತ್ತಿದ್ದೇನೆ ಅಷ್ಟೇ. ಅವರು ದೇವದಾಸಿಯರ ಕುರಿತಂತೆ ಯೋಜನೆಯನ್ನು ಕೈಗೆತ್ತಿಕೊಂಡ ಆರಂಭದ ದಿನಗಳಲ್ಲಿ ಅನೇಕ ಸಾಮಾಜಿಕ ಅಪಮಾನಗಳನ್ನು, ನೋವುಗಳನ್ನು ಉಂಡಿದ್ದಾರೆ. ಅವರು ಗಂಡಾಗಿದ್ದರಿಂದಲೇ ಇವೆಲ್ಲವನ್ನು ನುಂಗಿಕೊಂಡು ಈ ಕ್ಷೇತ್ರದಲ್ಲಿ ಮುಂದುವರೆಯಲು ಸಾಧ್ಯವಾಯಿತು.

ಬಿ.ಎಲ್.ಪಾಟೀಲರ ಪೂರ್ಣ ಹೆಸರು ಬಸವಪ್ರಭು ಲಕಮಗೌಡ ಪಾಟೀಲ ಎಂದು. ೧೯೪೬ ಡಿಸೆಂಬರ್ ೨೨ರಲ್ಲಿ ಬೆಳಗಾಂವ ಜಿಲ್ಲೆಯ ಮಲ್ಲಾಬಾದ್‌ನ ಶ್ರೀಮಂತ ಕುಟುಂಬದಲ್ಲಿ ಏಕೈಕ ಪುತ್ರನಾಗಿ ಜನಿಸಿದರು. ಮಗ ಆಸ್ತಿಯನ್ನು ನೋಡಿಕೊಂಡರೆ ಸಾಕು ಎನ್ನುವ ಸಾಧಾರಣ ನಿಲುವು ಅವರ ತಂದೆಯವರದಾಗಿತ್ತು. ಆದರೆ ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದ ಬಸವಪ್ರಭು ಅವರ ನಿಲುವು ಹಾಗೂ ಬದುಕಿನ ಕ್ರಮ ಭಿನ್ನವಾಗಿತ್ತು. ಹನ್ನೊಂದನೆಯ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಅವರು

ಶ್ರೀಮಂತ ಮನೆತನದ ದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಂಡರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ಅವರು ಬಿ.ಎ., ಎಲ್.ಎಲ್.ಬಿ.ಯನ್ನು ಧಾರವಾಡದಲ್ಲಿ ಪೂರೈಸಿದರು. ಬಸವ, ರಾಮಕೃಷ್ಣ ಪರಮಹಂಸ ಹಾಗೂ ವಿವೇಕಾನಂದರ ವಿಚಾರಧಾರೆಗಳು ಪಾಟೀಲರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವು.

ಜೋಗನ್ ಶಂಕರ ಅವರ ಸಲಹೆ ಬಿ.ಎಲ್.ಪಾಟೀಲರ ಜೀವನಕ್ಕೆ ಮಹತ್ವದ ತಿರುವನ್ನು ತಂದುಕೊಟ್ಟಿತು. ೧೯೮೫ರಲ್ಲಿ ದೇವದಾಸಿ ವಿಮೋಚನಾ ಪುನರ್ವಸತಿ ಸಂಘವನ್ನು ಸ್ಥಾಪಿಸಿ, ಶೋಷಿತ ವರ್ಗದ ಸೇವೆಗೆ ನಾಂದಿಯನ್ನು ಹಾಡಿದರು. ಆರಂಭದ ದಿನಗಳಲ್ಲಿ ವಿಪರೀತ ಮಾನಸಿಕ ಹಿಂಸೆಯನ್ನು ಅನುಭವಿಸಿದರು. ಆದರೂ ವಿಚಲಿತರಾಗಲಿಲ್ಲ. ದೇವದಾಸಿಯರ ಮಕ್ಕಳಿಗಾಗಿ ಆಧುನಿಕ ಶಿಕ್ಷಣ ನೀಡುವ ಪ್ರಯತ್ನವನ್ನು ಮಾಡಿದರು. ಅದರ ಮೂಲ ಉದ್ದೇಶ ಶೋಷಿತರನ್ನು ವೈಚಾರಿಕತೆಗೆ ಮುಖಮಾಡಿಸಿ, ಅವರಲ್ಲಿ ವಿಶೇಷ ಬಗೆಯ ಜಾಗ್ರತೆಯನ್ನು ಮೂಡಿಸುವುದೇ ಆಗಿದೆ. ಇವೊತ್ತಿಗೂ ಕರ್ನಾಟಕದ ಬಹುಭಾಗಗಳಲ್ಲಿ ದಲಿತ ಸಮುದಾಯಗಳು ಅಕ್ಷರ ಲೋಕಕ್ಕೆ ಅಪರಿಚಿತವಾಗಿ ಉಳಿದಿವೆ. ಇದನ್ನು ಮನಗಂಡೇ ಪಾಟೀಲರು ವಿಮೋಚನಾ ಶಾಲೆಯನ್ನು ತೆರೆಯಲು ಪ್ರಯತ್ನಿಸಿದರು. ಶಾಲೆಗಾಗಿ ಜಾಗವನ್ನು ದಾನ ನೀಡಿದ ದಾನಿ, ಜನರ ಟೀಕೆಗೆ ಹೆದರಿ ಅದನ್ನು ಮತ್ತೆ ಹಿಂತೆಗೆದುಕೊಂಡರು. ಪಾಟೀಲರು ಕಂಗೆಟ್ಟರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಆಸರೆಯಾಗಿ ನಿಂತವರೆಂದರೆ ಪಾಟೀಲರ ಧರ್ಮಪತ್ನಿ ಶಾಂತಮ್ಮನವರು. ಅವರು ತಮ್ಮ ಹೆಸರಿನಲ್ಲಿದ್ದ ಎಂಟು ಎಕರೆ ಜಮೀನನ್ನು ಪತಿಯು ಕೈಗೊಂಡ ಕೆಲಸಕ್ಕೆ ದಾನವಾಗಿ ನೀಡಿದರು. ಇಂದು ಅದು ಬಹುದೊಡ್ಡ ಶಾಲೆಯಾಗಿ ಬೆಳೆದು ನಿಂತಿದೆ. ನಮ್ಮ ದೇಶದಲ್ಲಿ ದೇವದಾಸಿಯರ ಮಕ್ಕಳ ಶಿಕ್ಷಣದ ಕಾಳಜಿಯನ್ನು ಕೇಂದ್ರವಾಗಿಟ್ಟು ಹುಟ್ಟಿದ ಏಕೈಕ ಶಿಕ್ಷಣ ಸಂಸ್ಥೆ ಇದಾಗಿದೆ. ಇದು ವಿಮೋಚನಾ ಗ್ರಂಥಾಲಯ, ವಿಮೋಚನಾ ಪ್ರಕಾಶನವನ್ನು ಹೊಂದಿದೆ.

ಈ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಪಾಟೀಲರೇ 'ವಿಮೋಚನಾ ಸಹಕಾರ ಸಂಘವನ್ನು' ೧೯೯೨ರಲ್ಲಿ ಸ್ಥಾಪಿಸಿದರು. ಮಹಿಳೆಯರೇ ಇದರ ಸಂಚಾಲಕರಾಗಿರುವುದು ಈ ಸಂಸ್ಥೆಯ ಹೆಗ್ಗಳಿಕೆಯಾಗಿದೆ. ಸತತ ಹದಿನೈದು ವರ್ಷಗಳ ಸಾಮಾಜಿಕ ಸೇವೆಯ ಅನುಭವದ ಹಿನ್ನೆಲೆಯಲ್ಲಿ "ದೇವದಾಸಿಯರ ದೈಹಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಅಷ್ಟು ಸುಲಭವಲ್ಲ. ಅದಕ್ಕಾಗಿ ಅವರಲ್ಲಿ ನೈತಿಕತೆಯನ್ನು ತುಂಬುವ ಜವಾಬ್ದಾರಿ ಈ ಸಮಾಜದ ಪ್ರತಿಯೊಬ್ಬ ಪ್ರಜ್ಞಾವಂತ ಪ್ರಜೆಯ ಮೇಲಿದೆ" ಎನ್ನುವುದು ಅವರ ಖಚಿತ ನಿಲುವು. ದೇವದಾಸಿಯರಿಗೆ ಆರ್ಥಿಕ ಸಬಲೀಕರಣವನ್ನು ನೀಡಲು ಅನೇಕ ಯೋಜನೆಗಳನ್ನು ಪಾಟೀಲರು ರೂಪಿಸಿದರು. ಆದರೆ ಅವುಗಳಾವುವೂ ಸಫಲವಾಗಲಿಲ್ಲ. ಇದು ಅವರಿಗೆ ಬಹುದೊಡ್ಡ ಕೊರಗು.

ತುಳಿತಕ್ಕೊಳಗಾದ ಅಲಕ್ಷಿತ ಮಹಿಳಾ ಸಮುದಾಯಗಳನ್ನು ಜಾಗತಿಕ ಅನುಸಂಧಾನಕ್ಕೆ ಒಯ್ಯುವ ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ದೇವದಾಸಿಯರಿಗಾಗಿ ಅನೇಕ

ಅಭಿವೃದ್ಧಿ ಯೋಜನೆಗಳನ್ನು ರೂಪಿಸಿಕೊಂಡಿದೆಯಾದರೂ, ಅವುಗಳು ತಲುಪಬೇಕಾದಲ್ಲಿ ತಲುಪಿಲ್ಲ. 'ಅಭಿವೃದ್ಧಿ' ಪರಿಕಲ್ಪನೆಯನ್ನು ಪುನರ್ ವ್ಯಾಖ್ಯಾನಿಸಬೇಕಿದೆ. ಕೆಳವರ್ಗದ ಜನರ ಅಭಿವೃದ್ಧಿಗಾಗಿ ಪರಿಶ್ರಮಿಸುತ್ತಿರುವವರು -ಅದು ಸರಕಾರವಿರಬಹುದು, ಸಂಘ ಸಂಸ್ಥೆಯಾಗಿರಬಹುದು -ಅವರಿಗೆ ವಿಶೇಷ ಉಪಕಾರ ಮಾಡುತ್ತಿರುವಂತೆ ವರ್ತಿಸುತ್ತವೆ. ಕೆಳಜಾತಿ, ಕೆಳವರ್ಗದವರಿಂದ ಕಿತ್ತುಕೊಂಡ ಹಕ್ಕುಗಳನ್ನು ಅವರಿಗೆ ಮರಳಿ ನೀಡುವುದೇ ಅಭಿವೃದ್ಧಿ. ಈ ನಿಟ್ಟಿನಲ್ಲಿ ಬಿ.ಎಲ್. ಪಾಟೀಲರ ದೇವದಾಸಿ ವಿಮೋಚನಾ ಸಂಸ್ಥೆಯು ಸ್ತುತ್ಯಾರ್ಹ ಕೆಲಸಗಳನ್ನು ಮಾಡಿದೆ. ದಿನಾಂಕ ೨೭.೦೫.೨೦೦೦ರಲ್ಲಿ ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.

❑ **ಜಾತಿ ಸಂಬಂಧಿ ಸಮಾಜದ ಕುರಿತು ನಿಮ್ಮ ಅಭಿಪ್ರಾಯವೇನು?**

ಜಾತಿ, ಧರ್ಮಗಳು ಮಾನವ ನಿರ್ಮಿತವಾದವುಗಳು. ಪ್ರಬಲರು ತಮ್ಮ ಜಾತಿ ಶ್ರೇಷ್ಠ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿ, ಅದನ್ನು ಈ ಸಮಾಜ ಒಪ್ಪುವಂತೆ ಮಾಡಿದರು. ಉಳಿದವರನ್ನು ಅಂದರೆ ದುರ್ಬಲರನ್ನು ಕೆಳಜಾತಿಗೆ ಸೇರಿಸಿ, ಅವರ ಶೋಷಣೆಗೆ ಒಳದಾರಿಗಳನ್ನು ಕಂಡುಕೊಂಡರು. ಯಾವುದೇ ಜಾತಿ-ಮತ-ಪಂಥಗಳಿಗೆ ಪಾವಿತ್ರ್ಯ ಎನ್ನುವುದೇ ಇಲ್ಲ. ಆದರೆ ಬುದ್ಧಿವಂತರು, ಪ್ರಬಲರು ಅದಕ್ಕೆ ಪಾವಿತ್ರ್ಯತೆ, ಅಪಾವಿತ್ರ್ಯತೆಯನ್ನು ಆರೋಪಿಸಿದರು.

❑ **ಹಿಂದೂ ವರ್ಣಾಶ್ರಮ ಧರ್ಮದಲ್ಲಿ ಜಾತಿಯ ಜೊತೆಜೊತೆಯಲ್ಲಿಯೇ ಬೆಳೆದು ಬಂದ ಲಿಂಗಸಂಬಂಧಿ ಆಯಾಮಗಳ ಬಗ್ಗೆ ನಿಮಗೇನನಿಸುತ್ತೆ?**

ಜಾತಿಯಂತೆ ಲಿಂಗಭೇದವನ್ನು ಹುಟ್ಟುಹಾಕಿದವರೂ ನಾವುಗಳೇ. ಮಹಿಳೆಯರಲ್ಲಿ ಇಲ್ಲದ ದೌರ್ಬಲ್ಯವನ್ನು ಇದೆ ಎಂದು ಶತಮಾನಗಳಿಂದ ನಂಬಿಸಿ ವಂಚಿಸಲಾಯಿತು. ಇತ್ತೀಚಿನ ದಿನಮಾನಗಳಲ್ಲಿ ನಾನು ಕಂಡುಕೊಂಡಂತೆ ಹೊಸಬಗೆಯ ಎಚ್ಚರ ಅವರನ್ನು ಆವರಿಸಿದೆ. ಅದೊಂದು ನವೀನ ಆಶಾದಾಯಕ ವಾತಾವರಣವನ್ನು ನಿರ್ಮಿಸುತ್ತಿದೆ. ಇದರಿಂದಾಗಿ ಪುರುಷ ನಿರ್ಮಿತ ಎಷ್ಟೋ ಮೌಲ್ಯಗಳು ಅರ್ಥಹೀನವಾಗುತ್ತಿವೆ. ಅದು ಹಾಗಾಗಬೇಕಾಗಿದೆ ಕೂಡ. ಆಯಾ ಜಾತಿಯ ಹಿನ್ನೆಲೆಯಲ್ಲಿ ಬೆಳೆದು ಬಂದ ಮಹಿಳೆಯರ ಶೋಷಣೆಗಳು, ಸಮಸ್ಯೆಗಳು ಭಿನ್ನ - ಭಿನ್ನವಾಗಿವೆ. ಮೇಲ್ವರ್ಗದ ಮತ್ತು ಮಧ್ಯಮ ವರ್ಗದ ಮಹಿಳೆಯರ ಸಮಸ್ಯೆಗಳಿಗಿಂತಲೂ ಕೆಳವರ್ಗದ, ಕೆಳಜಾತಿಯ ಮಹಿಳೆಯರ ಸಮಸ್ಯೆಗಳು ಭೀಕರವಾಗಿವೆ. ಜಾತಿ, ಲಿಂಗ ಹಾಗೂ ಆರ್ಥಿಕ ಮೂಲದ ಕಾರಣಗಳಿಂದ ಅವಳ ಬದುಕನ್ನು ವ್ಯವಸ್ಥಿತವಾಗಿ ದುರ್ಗಮ ಮಾರ್ಗಕ್ಕೆ ತಳ್ಳಲಾಗಿದೆ. ಇಲ್ಲಿ ನಾನು ಮೇಲ್ವರ್ಗ, ಮೇಲ್ಜಾತಿಯ ಜನರನ್ನು ದೂಷಿಸಲು ಇಷ್ಟಪಡುವುದಿಲ್ಲ. ಕೆಳವರ್ಗ, ಕೆಳಜಾತಿಯ ಸಮಾಜದ ಪುರುಷರೇ ಅವಳ ಮೇಲಿನ ಲೈಂಗಿಕ ಶೋಷಣೆಗೆ ಮೂಲಕಾರಣರಾಗಿದ್ದಾರೆ. ಈ ಸಂಗತಿಯನ್ನು ನಾನು ಬಹಳ ಬಾರಿ ಕಂಡುಕೊಂಡ ನಂತರವೇ ಹೇಳುತ್ತಿದ್ದೇನೆ. ಹೆತ್ತ ತಾಯಿ, ಒಡಹುಟ್ಟಿದ

ಅಣ್ಣತಮ್ಮಂದಿರೇ ತಮ್ಮ ಹೆಣ್ಣುಮಕ್ಕಳನ್ನು ದೇವದಾಸಿ ವ್ಯವಸ್ಥೆಗೆ ತಳ್ಳಿ, ಅವರಿಂದ ಹೊಟ್ಟೆ ಹೊರೆಯುತ್ತಿದ್ದಾರೆ. ಕೆಳಜಾತಿಯ ಜನರಲ್ಲಿಯೇ ಬಡತನ ಜಾಸ್ತಿ. ಬಡತನವಿದ್ದಲ್ಲಿ ಶಿಕ್ಷಣದ ಪರಿಕಲ್ಪನೆ ಇರುವುದಿಲ್ಲ. ಎಲ್ಲಿ ಶಿಕ್ಷಣವಿರುವುದಿಲ್ಲವೋ ಅಲ್ಲಿ ಮೂಢನಂಬಿಕೆಗಳು, ಅಂಧಶ್ರದ್ಧೆಗಳು ಮನೆಮಾಡಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಕೆಳಜಾತಿಯ 'ಮಹಿಳೆ' ಹೆಚ್ಚಿನ ಪ್ರಮಾಣದ ಶೋಷಣೆಗೆ ಒಳಗಾಗಿದ್ದಾಳೆ, ಒಳಗಾಗುತ್ತಿದ್ದಾಳೆ.

- **ಇಂತಹ ಆರೋಗ್ಯಹೀನ ಸಾಮಾಜಿಕ ಪರಿಸರದಲ್ಲಿ ಆಧುನಿಕ ಪ್ರಜ್ಞೆಯ ಸಮಾಜವನ್ನು ಹೇಗೆ ಕಟ್ಟಬಹುದು?**

ನನ್ನ ಜೀವನದಲ್ಲಿ ನಡೆದ ಘಟನೆಯನ್ನು ಹೇಳುವ ಮೂಲಕವೇ ನಿಮ್ಮ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸುತ್ತೇನೆ. ನನ್ನ ತಂದೆಯವರು ಬಡವರ ಬಗ್ಗೆ ಅತ್ಯಂತ ಅನುಕಂಪ ವುಳ್ಳವರು. ಬಡವರ ದುಃಖವನ್ನು ಕಂಡರೆ ಅವರು ಅತ್ತುಬಿಡುತ್ತಿದ್ದರು. But at the same time ನಾನು ಶಾಲೆಗೆ ಹೋಗಿ ಮನೆಗೆ ಬಂದರೆ, ನನ್ನನ್ನು ಸ್ನಾನ ಮಾಡಿಸಿಯೇ ಒಳಗಡೆ ಕರೆದುಕೊಳ್ಳುತ್ತಿದ್ದರು. ನನಗಿನ್ನೂ ಆ ಘಟನೆ ಚೆನ್ನಾಗಿ ನೆನಪಿದೆ. ಹಳ್ಳಿಯಲ್ಲಿ ಕಟ್ಟಿಗೆ ಒಡೆಯುವ ಹಾಗೂ ಅಂಗಳ ಕಸಗೂಡಿಸುವ ಕೆಲಸವನ್ನು ಸಾಮಾನ್ಯವಾಗಿ ದಲಿತರೇ ಮಾಡುತ್ತಾರೆ. ಮಾರುತಿ ಎನ್ನುವ ದಲಿತ ನಮ್ಮ ಮನೆಯ ಕಟ್ಟಿಗೆ ಒಡೆಯುವ ಕೆಲಸವನ್ನು ಮಾಡುತ್ತಿದ್ದನು. ಶಾಲೆಯಿಂದ ಬಂದ ನಾನು ಕಟ್ಟಿಗೆ ಒಡೆಯುತ್ತಿದ್ದ ಅವನ ಬೆನ್ನನ್ನು ತಟ್ಟಿ ಮಾತನಾಡಿಸಿದೆ. ನಮ್ಮ ತಂದೆ ವಾಕಿಂಗ್ ಸ್ಟಿಕ್ ಹಿಡಿದುಕೊಂಡು ಅಲ್ಲಿಯೇ ಕುಳಿತುಕೊಂಡಿದ್ದರು. ಆ ಸ್ಟಿಕ್ ಮುರಿಯುವವರೆಗೆ ನನಗೆ ಚೆನ್ನಾಗಿ ಬಾರಿಸಿದರು. ಅಂತಹ ತಂದೆಯ ಮಗನಾಗಿ ಹುಟ್ಟಿದ ನಾನು, ಮುಂದಿನ ಜನ್ಮ ಎನ್ನುವುದು ಏನಾದರೂ ಇದ್ದರೆ ದೇವದಾಸಿಯ ಮಗನಾಗಿ ಹುಟ್ಟಿಸು ಎಂದು ಬೇಡಿಕೊಳ್ಳುವ ದಾರ್ಷ್ಟ್ಯವನ್ನು ಬೆಳೆಸಿಕೊಂಡಿದ್ದೇನೆ. ಬಸವಣ್ಣ, ಗಾಂಧಿ, ವಿವೇಕಾನಂದ ಇವರಾರಿಗೂ ಜಾತಿಯಲ್ಲಿ ನಂಬಿಕೆಯಿರಲಿಲ್ಲ. ಇವರ ಹೇಳಿಕೆಗಳನ್ನು ತಿರುಚಿಕೊಂಡು ಮಧ್ಯಮವರ್ಗದ ಜನ ಭಿನ್ನ ರೀತಿಯಲ್ಲಿ ಬದುಕಲು ಯತ್ನಿಸುತ್ತಿದೆ. ಇವತ್ತು ಜಾತಿರಹಿತವಾದ ಸಮಾಜ ಅಗತ್ಯವಾಗಿದೆ. ಇಂದು ನಮ್ಮ ದೇಶವೇನಾದರೂ ಹಿಂದುಳಿದಿದ್ದರೆ, ಅದು ಜಾತಿಕಾರಣದಿಂದಲೇ. ಜಾತಿರಹಿತವಾದ ಸಮಾಜದಂತೆ ಲಿಂಗತಾರತಮ್ಯವಿಲ್ಲದ ಸಮಾಜವು ಅಗತ್ಯವಾದುದಾಗಿದೆ. ಈ ಹಿನ್ನೆಲೆಯಲ್ಲಿ ಮಾತ್ರ ಆಧುನಿಕ ಪ್ರಜ್ಞೆಯ ಸಮಾಜವನ್ನು ಕಟ್ಟಲು ಸಾಧ್ಯ. ಆದರೆ ಇದು ನಾವಂದುಕೊಂಡಷ್ಟು ಸರಳವಾಗಿಲ್ಲ. ಇವೊತ್ತಿಗೂ ಇಂಗ್ಲೆಂಡ್, ಅಮೇರಿಕಾದಂತಹ ದೇಶಗಳಲ್ಲಿ ಲಿಂಗ ತಾರತಮ್ಯವನ್ನು ಮಾಡಲಾಗುತ್ತಿದೆ. ಇತ್ತೀಚೆಗೆ ಇಂಗ್ಲೆಂಡ್ ರಾಯಭಾರಿಯೊಬ್ಬರು ನಮ್ಮಲ್ಲಿಗೆ ಬಂದಿದ್ದರು. ಅವರು ಹೇಳಿದ ಪ್ರಕಾರ ಭಾರತದಲ್ಲಿ ಲಿಂಗತಾರತಮ್ಯದ ಕುರಿತು ಚರ್ಚೆ ಮಾಡುತ್ತಿದ್ದಾಗ, ಇಂಗ್ಲೆಂಡಿನಲ್ಲಿ ಅದರ ಸುಳಿವೇ ಇರಲಿಲ್ಲ. ವೈಚಾರಿಕವಾಗಿ ಮುಂದಿರುವ ನಾವು, ಆಚರಣೆಯ ದೃಷ್ಟಿಯಿಂದ ಹಿಂದುಳಿದಿದ್ದೇವೆ.

- ಅತ್ಯಂತ ಸಾಂಪ್ರದಾಯಿಕ ಕುಟುಂಬದಿಂದ ಬಂದಂತಹ ನೀವು ಸಮಾಜದಿಂದ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾದ ದೇವದಾಸಿಯರನ್ನು ಕೇಂದ್ರವಾಗಿಟ್ಟುಕೊಂಡು ಕೆಲಸ ನಿರ್ವಹಿಸಲು ಕಾರಣವೇನು? ಅದಕ್ಕಾವ ಪ್ರೇರಣೆ ದೊರೆಯಿತು?

ಅಲಕ್ಷಿತ ಸಮುದಾಯಗಳ ಕುರಿತು ಕಾಳಜಿ ನನ್ನಲ್ಲಿ ಹುಟ್ಟಿನಿಂದಲೇ ಬೆಳೆದುಬಂದದ್ದು. ಅದಕ್ಕೆ ಕಾರಣ ಗೊತ್ತಿಲ್ಲ. ನನ್ನ ಪ್ರಾಥಮಿಕ ಶಾಲಾಗುರುಗಳಲ್ಲಿ ಚಮ್ಮಾರ ಜಾತಿಗೆ ಸೇರಿದವರೊಬ್ಬರಿದ್ದರು. ಶಾಲೆಯಲ್ಲಿ ಆಟದ ಮೈದಾನವಿರಲಿಲ್ಲ. ಶಾಲೆ ಮುಗಿದ ತಕ್ಷಣ ಆಡಲಿಕ್ಕೆಂದು ಊರ ಹೊರಗಡೆ ಹೋಗುತ್ತಿದ್ದೆ. ಅಲ್ಲಿ ಈ ನಮ್ಮ ಗುರುಗಳ ಮನೆಯಿತ್ತು. ಬೇಕಂತಲೇ ಅವರಿಂದ ಕಾಡಿಬೇಡಿ ನೀರು ಕುಡಿದು ಮನೆಗೆ ಮರಳುತ್ತಿದ್ದೆನು. ಈ ರೀತಿಯ ಮನೋಭಾವನೆಯನ್ನು ಚಿಕ್ಕಂದಿನಿಂದಲೇ ಯಾಕೋ ಏನೋ ನಾನು ಬೆಳೆಯಿಸಿಕೊಂಡು ಬಂದಿದ್ದೇನೆ.

ದೇವದಾಸಿಯರನ್ನು ಕೇಂದ್ರವಾಗಿರಿಸಿಕೊಂಡ ಯೋಜನೆ ನನ್ನ ಸ್ವಂತಿಕೆಯಿಂದ ರೂಪ ಪಡೆದುಕೊಂಡದ್ದಲ್ಲ. ಅಥಣಿಯಲ್ಲಿ K.L.E.Society ಸಂಘದ ಒಂದು ಕಾಲೇಜಿದೆ. ಅಲ್ಲಿ ಡಾ.ಜೋಗನ್ ಶಂಕರ ಎನ್ನುವವರು ಕೆಲಸ ಮಾಡುತ್ತಿದ್ದರು. ಆ ಹೊತ್ತಿನಲ್ಲಿ ನಾನು K.L.E.Society Vice President ಆಗಿ ಕೆಲಸ ನಿರ್ವಹಿಸುತ್ತಿದ್ದೆ. ನಾವು ಪ್ರತಿವಾರ ಒಬ್ಬೊಬ್ಬ ಪ್ರೊಫೆಸರ್ ಮನೆಯಲ್ಲಿ ಒಂದೊಂದು ಬಗೆಯ ಚರ್ಚೆಯನ್ನು ಇಟ್ಟುಕೊಳ್ಳುತ್ತಿದ್ದೆವು. ಚರ್ಚೆಯ ಕೇಂದ್ರವಸ್ತು ಕಾಲೇಜು ಮಕ್ಕಳ ಭವಿಷ್ಯದ ಕುರಿತಂತೆ ಇರುತ್ತಿತ್ತು. ಇದರ ಅನ್ವಯ ಒಂದು ವಾರ ಜೋಗನ್ ಶಂಕರ ಅವರ ಮನೆಗೆ ಹೋದೆನು. ಚರ್ಚೆ, ಊಟ ಮುಗಿಸಿ ಹೊರಗೆ ಬಂದ ನಂತರ ಜೋಗನ್ ಅವರು ಒಂದು ಮಾತನ್ನು ಹೇಳಿದರು. ಆ ಮಾತು ನನ್ನ ಜೀವನದ ದಿಕ್ಕನ್ನು ಬದಲಿಸಿತು. "ಪಾಟೀಲರೆ, ನೀವು ಅನೇಕ ಸಾಮಜಿಕ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೀರಿ ನಿಜ. ನೀವು K.L.E.Society ಯ Vice President ಎಂದು ನಾನು ನಿಮಗೆ ಬಹಳ ದೊಡ್ಡ ಕಿಮ್ಮತ್ತನ್ನು ಕೊಡುವುದಿಲ್ಲ. ರಾಜಕೀಯದಲ್ಲಿ ನಿಮ್ಮದೇ ಆದ ವರ್ಚಸ್ಸನ್ನು ಬೆಳೆಸಿಕೊಂಡಿದ್ದೀರಿ. ಅದರ ಬಗ್ಗೆಯೂ ನಾನೇನು ಗೌರವ ನೀಡುವುದಿಲ್ಲ. ಅನೇಕ ಸಾಮಾಜಿಕ ಸೇವೆಗಳನ್ನು ಮಾಡಿದ್ದೀರಿ. ಅದರ ಬಗ್ಗೆಯೂ ನಾನೇನು ಕಿಮ್ಮತ್ತು ನೀಡುವುದಿಲ್ಲ" ಎಂದು ಅತ್ಯಂತ ಸೂಕ್ಷ್ಮಸಂವೇದನೆಯುಳ್ಳ ದಲಿತನಂತೆ ಮಾತನಾಡಿದರು. ನಾನು ಹಾಸ್ಯ ಮಾಡುತ್ತಾ ಕೇಳಿದೆ. "ನನಗೆ ನೀವು ಕಿಮ್ಮತ್ತು ಕೊಡಬೇಕಿದ್ದರೆ ನಾನೇನು ಮಾಡಬೇಕು ಹೇಳಿ?". ಆವಾಗ ಅವರು ಒಂದು ಮಾತನ್ನು ಹೇಳಿದರು: "ಯಾರು ಯಾವ ಕೆಲಸವನ್ನು ಮಾಡುವುದಿಲ್ಲವೋ ಅದನ್ನು ನೀವು ಮಾಡಿ ತೋರಿಸಿ. ಅಂದರೆ ನಿಮ್ಮ ಸಾಮಾಜಿಕ ಕೆಲಸಕ್ಕೆ ಬೆಲೆಯಿರುತ್ತದೆ. ನೀವು ನಿಮ್ಮ ತಾಲೂಕಿಗೆ ಅಗತ್ಯವಾದ ಸಾಮಾಜಿಕ ಕೆಲಸ ಮಾಡಲಾರದೆ ಬೇರೆ ಏನನ್ನೋ ಮಾಡುತ್ತಿದ್ದರೆ ನೂರಾ ಒಂದರಲ್ಲಿ ನೂರಾ ಎರಡು ಆಗಿ ಹೋಗುವಿರಿ" ಎಂದರು. 'ಹಾಗಾದರೆ ಏನು ಮಾಡಬೇಕು?' ಎಂದು ಮತ್ತೆ ಅವರನ್ನೇ ಪ್ರಶ್ನಿಸಿದೆ. ಮೊಟ್ಟಮೊದಲ ಬಾರಿಗೆ ಅತ್ಯಂತ ಕಟುಸತ್ಯದ ಅರಿವನ್ನು

ಅವರು ಮೂಡಿಸಿದರು. 'ಕರ್ನಾಟಕದಲ್ಲಿ ನಿಮ್ಮ ತಾಲೂಕಿನಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ದೇವದಾಸಿಯರಿದ್ದಾರೆ. ಮುಂಬಯಿಯ ಕೆಂಪುದ್ವೀಪಗಳಲ್ಲಿ ನಾಲ್ಕನೆಯ ಮನೆ ಬಿಟ್ಟರೆ ಐದನೆಯ ಮನೆಯವಳು ಅಥಣಿಯವಳಾಗಿರುತ್ತಾಳೆ. ಈ ವಿಷಯದಲ್ಲಿ ನಿಮಗೆ ನಾಚಿಕೆ ಅನಿಸುವುದಿಲ್ಲವೇನು?'' ಎಂದು ಚುಚ್ಚು ಮಾತನಾಡಿ ನನ್ನನ್ನು ಎಚ್ಚರಿಸಿದರು. ಪ್ರಥಮ ಬಾರಿ ಇಂತಹ ವಿಷಯದ ಕುರಿತಂತೆ ಚಿಂತನೆ ಮಾಡಲು ಹಚ್ಚಿದರು. ಈ ವಿಚಾರವನ್ನು ಕೊಟ್ಟು, ಇಂಥ ಕ್ಷೇತ್ರದಲ್ಲಿ ಕೆಲಸ ಮಾಡಲು ನನಗೆ ದೀಕ್ಷೆ ನೀಡಿದವರೇ ಜೋಗನ್ ಶಂಕರ ಅವರು.

❑ **ಅಸ್ಪೃಶ್ಯತೆಯ ಅವಹೇಳನಕ್ಕೆ ಗುರಿಯಾದ ಇಂಥ ಕೆಲಸಕ್ಕೆ ಕೈಹಾಕಿದ ಆರಂಭದ ದಿನಗಳಲ್ಲಿ ನಿಮ್ಮ ಕುಟುಂಬ ಹಾಗೂ ಸಮಾಜದಿಂದ ಬಂದ ಪ್ರತಿಕ್ರಿಯೆ ಏನು? ಹೊಸ ಬಗೆಯ ಸಮಸ್ಯೆಗಳನ್ನೇನಾದರೂ ಎದುರಿಸಬೇಕಾಯಿತಾ?**

ಈ ಕೆಲಸವನ್ನು ಆರಂಭಿಸುವಾಗ ನಾನೊಬ್ಬ Leading Advocate ಆಗಿದ್ದೆ. ಜನರಿಂದ ವಿಚಿತ್ರ ರೀತಿಯ ಪ್ರತಿಕ್ರಿಯೆಯನ್ನು ಎದುರಿಸಿದೆ. ಇಷ್ಟು ದಿವಸ ದೊಡ್ಡ ವಕೀಲರು ಎನಿಸಿಕೊಂಡ ಪಾಟೀಲರು ಈಗ ಸೂಳೇರ ವಕೀಲರಾದರು ಎಂದು ಟೀಕೆ ಮಾಡಿದರು. ನಾನು ದೇವದಾಸಿಯರ ಕುರಿತಂತೆ ಯೋಜನೆಯನ್ನು ಹಾಕಿಕೊಂಡ ಆರಂಭದ ಹಂತದಲ್ಲಿಯೇ ನೇರವಾಗಿ ಕೇರಿಗೆ ಹೋಗಿ ಅವರ ಮನವೊಲಿಸಿ ಈ ಅನಿಷ್ಠ ಸಂಪ್ರದಾಯವನ್ನು ನಿಲ್ಲಿಸಲು ಕೇಳಿಕೊಂಡೆ. ಹೊಸದಾಗಿ ದೇವದಾಸಿ ಸಂಪ್ರದಾಯಕ್ಕೆ ಒಳಪಟ್ಟ ಹೆಣ್ಣುಮಕ್ಕಳನ್ನು ಅದರಿಂದ ಮುಕ್ತಗೊಳಿಸಿ ಮದುವೆ ಮಾಡಿಸಲು ಪ್ರಯತ್ನಿಸಿದೆ. ಇದನ್ನೆಲ್ಲಾ ಪ್ರಾರಂಭಿಸಿದಾಗ ನಾನು ಪ್ರಬಲವಾದ ವಿರೋಧವನ್ನೆದುರಿಸಿದುದು ಅವರ ಸಮಾಜದವರಿಂದಲೇ. ಅವರು ವಿರೋಧಿಸಿದ ಬಗೆಯನ್ನು ಕೇಳಿದರೆ ನಿಮಗೆ ಆಶ್ಚರ್ಯವೆನಿಸಬಹುದು. ಅಥಣಿ ತಾಲೂಕಿನ ಕೋಹಳ್ಳಿಯಿಂದಲೇ ಸಾಮಾಜಿಕ ಸುಧಾರಣಾ ಕಾರ್ಯಕ್ರಮವನ್ನು ಆರಂಭಿಸಿದೆ. ಕರ್ನಾಟಕದಲ್ಲಿಯೇ ದೇವದಾಸಿಯರನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಾಂಬೆಗೆ ರವಾನಿಸುವ ಊರೆಂದರೆ ಕೋಹಳ್ಳಿಯೇ. ನಾನು ಅಲ್ಲಿ ಪ್ರಥಮ ಬಾರಿಗೆ ಜನರ ಭೇಟಿಗೆ ಹೋದಾಗ ಹೂವಿನ ಹಾರ ಹಾಕಿ, ಆರತಿ ಬೆಳಗಿ ಕೇರಿಯಲ್ಲಿ ಕರೆದುಕೊಂಡಿದ್ದರು. ದೇವದಾಸಿ ವಿಮೋಚನಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಹೋದಾಗ, ಅವರು ಬಹಳ ವಿಚಿತ್ರ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಯಾವ ಬೈಗುಳನ್ನು ಹೇಳಲು ನಮ್ಮ ನಾಲಿಗೆ ಏಳುವುದಿಲ್ಲವೊ ಅಂತಹ ಬೈಗುಳಗಳನ್ನೆಲ್ಲವನ್ನು ನಮ್ಮ ಮೇಲೆ ಅಲ್ಲಿಯ ಒಬ್ಬ ಮಹಿಳೆ ಪ್ರಯೋಗಿಸಿದಳು. 'ನಮ್ಮ ಜನಾನ, ನಮ್ಮ ಕೇರೀನ ಉದ್ಧಾರ ಮಾಡಾಕ ನೀನೇನೂ ಬರಬೇಕಾಗಿಲ್ಲ. ನಮ್ಮ ಮಕ್ಕಳನ್ನು ಉದ್ಧಾರ ಮಾಡಾಕ ನೀನೇನೂ ಬರಬೇಕಾಗಿಲ್ಲ. ನಮ್ಮನ್ನು ನಾವು ಉದ್ಧಾರ ಮಾಡಿಕೋತಿವಿ. ನೀನಾರು ನಮ್ಮನ್ನ ಉದ್ಧಾರ ಮಾಡಲಿಕ್ಕೆ?' ಎಂದು ಆರಂಭಿಸಿದ ಅವಳು ಕೇಳಬಾರದ ಅನೇಕ ಶಬ್ದಗಳನ್ನು ಪ್ರಯೋಗಿಸಿದಳು. ಆಮೇಲೆ ಈ ಘಟನೆಯ ಕುರಿತಂತೆ ಒಳಶೋಧನೆಯನ್ನು ನಡೆಸಿದೆ. ಆಗ ನನಗೆ ಒಂದು ಸತ್ಯ ಗೊತ್ತಾಯ್ತು. ಅವಳು

ಬೈಯುವುದನ್ನ ಮುಗಿಸಿದ ನಂತರ ಒಬ್ಬ ವ್ಯಕ್ತಿ ನಮ್ಮನ್ನು ಚಾವಡಿಗೆ ಕರೆದುಕೊಂಡು ಹೋಗಿ ಚಹಾ ಕುಡಿಸಿ ಸಮಾಧಾನಿಸಿದ್ದನು. 'ವಕೀಲರೆ ನೀವೇನೂ ಕೆಟ್ಟ ಅನಿಸಿಕೊಳ್ಳಬ್ಯಾಡ್ರಿ. ಆಕಿ ತಿಳೀಲಾರ್ದಕ್ಕ ಏನೇನೋ ಮಾತಾಡ್ಯಾಳ', ಎಂದಿದ್ದನು. ಅವನೇ ಈ ಎಲ್ಲ ಘಟನೆಗಳಿಗೆ ಮೂಲಭೂತ ಕಾರಣವೆಂದು ನಂತರ ಗೊತ್ತಾಯಿತು. ಅವನು ಹರಿಜನ ಕೇರಿಯ ಮುಖಂಡನಾಗಿದ್ದರಿಂದ, ಅಲ್ಲಿಗೆ ಹೋಗುವ ಪೂರ್ವದಲ್ಲಿ ಅವನಿಗೆ ತಿಳಿಸಿದ್ದೆವು. ಅವನೇ ಈ ಎಲ್ಲದಕ್ಕೂ ಪ್ರಚೋದನೆ ನೀಡಿದ್ದನು. ದೇವದಾಸಿಯರು ನಮ್ಮ ಜೊತೆ ಸಂಭಾಷಿಸಿದರೆ ಎಲ್ಲಿ ಬದಲಾಗುತ್ತಾರೋ ಎನ್ನುವ ಹೆದರಿಕೆಯಿಂದ ಅವನು ನಮ್ಮ ಬಗೆಗೆ ತಪ್ಪು ಕಲ್ಪನೆಯನ್ನು ಅವರಿಗೆ ನೀಡಿದ್ದನು.

ಎರಡನೆಯ ಹಂತದಲ್ಲಿ ಮುಂದುವರೆದಾಗ ಇದಕ್ಕಿಂತಲೂ ಭಯಂಕರವಾದ ಅನುಭವಗಳನ್ನು ಎದುರಿಸಬೇಕಾಯಿತು. ಈ ಸಮಾಜದಲ್ಲಿ ಅರ್ಧಮರ್ಧ ಕಲಿತ ಹುಡುಗರಿಗೆ ಕುಡಿಯಲು ತಿನ್ನಲು ದುಡ್ಡು ಕೊಡುವವರು, ಅವರ ಹೆಣ್ಣು ಮಕ್ಕಳನ್ನು ಈ ಸಂಪ್ರದಾಯದೊಳಗೆ ಬಂಧಿಸುವವರು ಬೇರಾರು ಅಲ್ಲ. ಅವರ ಜನರೇ. ಕೇರಿಯ ಜನರೇ ನನಗೆ ತೀವ್ರವಾದ ಮಾನಸಿಕ ಹಿಂಸೆಯನ್ನು ನೀಡಿದರು. ಅವರೆಲ್ಲರೂ ಸೇರಿ ಅನಾಮಧೇಯ ಪತ್ರ ಬರೆಯಲು ಪ್ರಾರಂಭಿಸಿದರು. Those days I was a President of Bar Association. Bar Association ಗೆ Open card ನಲ್ಲಿ ಪತ್ರಗಳು ಬರಲು ಪ್ರಾರಂಭಿಸಿದವು. ಎಲ್ಲರೂ ಅದನ್ನು ಓದಲಿ ಎಂಬುದೇ ಅವರ ಉದ್ದೇಶವಾಗಿತ್ತು. ಅದರ ಮೇಲೆ ವಿಳಾಸವನ್ನು ಹೇಗೆ ಬರೆಯುತ್ತಿದ್ದರೆಂದರೆ ಬಿ.ಎಲ್.ಪಾಟೀಲ, ಸೂಳೆಯ ಮಗ, ಅಧ್ಯಕ್ಷರು, ದೇವದಾಸಿ ಸಮಾವೇಶ ಸಂಘ. ಈ ತರಹ ವಿಳಾಸವನ್ನು ನೋಡಿದವರು ಕುತೂಹಲದಿಂದ ಪತ್ರಗಳನ್ನು ಓದುತ್ತಿದ್ದರು. ಅದು ಸಹಜ. ಪತ್ರದ ತುಂಬ ಮನಸ್ಸಿಗೆ ತೋಚಿದ್ದನ್ನು ಅಂದರೆ ಆಶ್ಲೀಲವಾಗಿ, ಅಸಹ್ಯವಾಗಿ ಬರೆದಿರುತ್ತಿದ್ದರು. ಅದು ಎಲ್ಲಿಯವರೆಗೆ ಹೋಯಿತೆಂದರೆ ನೀನು ಈ ವಿಷಯದ ಮೇಲೆ ಕೆಲಸ ಮಾಡ್ತಾ ಇದ್ದೀಯಾ ಅಂದ ಮೇಲೆ ನಿನ್ನ ತಾಯಿ ಸೂಳೆಯಿರಬಹುದು. ನಿನ್ನ ಹೆಂಡತಿ ಸೂಳೆಯಿರಬಹುದು. ಅದಕ್ಕೆ ನೀನು ಈ ಕೆಲಸವನ್ನು ಮಾಡ್ತಾ ಇದ್ದೀಯಾ. ಅಂದರೆ ಆ ಕೆಲಸದಿಂದ ಸಂಪೂರ್ಣ ವಿಮುಖನಾಗಿ ಓಡಿ ಹೋಗಬೇಕೆನ್ನುವ ವಾತಾವರಣವನ್ನು ಅವರು ನಿರ್ಮಿಸಿದರು. ನಂತರ ಈ ಕೆಲಸಗಳ ಹಿಂದಿನ ಕೈಗಳನ್ನು ಹುಡುಕಿಸಲು ಪ್ರಯತ್ನಿಸಿದೆ. ಅವರಾರೂ ಬೇರೆಯಾಗಿರಲಿಲ್ಲ. ದೇವದಾಸಿಯರ ಅಣ್ಣತಮ್ಮಂದಿರು, ಏಜೆಂಟರು ಆಗಿದ್ದರು. ಇಂತಹ ಹೊತ್ತಿನಲ್ಲಿ ಮನಸ್ಸಿಗೆ ಒಂದು ಬಗೆಯ ನಂಬಿಕೆಯನ್ನು, ಚೈತನ್ಯವನ್ನು ತುಂಬಿ ನಾನು ಹಿಡಿದ ಕೆಲಸವನ್ನು ಮುಂದುವರಿಸುವಂತೆ ಮಾಡಿದವರು ಇಳಕಲ್‌ದ ಮಹಾಂತಸ್ವಾಮೀಜಿಯವರು ಮತ್ತು ಗದಗಿನ ತೋಂಟದಾರ್ಯ ಸ್ವಾಮೀಜಿಯವರು. 'ಪಾಟೀಲರೇ, ನಿಮಗೆ ಬಂದ ಪತ್ರಗಳನ್ನೆಲ್ಲ ನಮಗೆ ಕೊಟ್ಟು ಬಿಡಿರಿ. ಸಮಾಜ ಸುಧಾರಣೆ ಮಾಡ್ತೀನಿ ಅಂತ ಹೊರಟಂತಹ ಹುಚ್ಚರಿಗೆ, ಎಷ್ಟು ನೋವಾಗುತ್ತದೆ ಎನ್ನುವುದಕ್ಕೆ ಈ ಪತ್ರಗಳು ಅತ್ಯುತ್ತಮ ಡಾಕ್ಯುಮೆಂಟರಿ ಆಗುತ್ತವೆ.'

ಅಂತ ಹೇಳಿದ್ರು. ಅವರು ಅಂದು ಆಡಿದ ಈ ಮಾತುಗಳು ಇಂದಿಗೂ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ.

- **ಆರಂಭದಲ್ಲಿ ಎದುರಾದ ಈ ಸಮಸ್ಯೆಗಳಿಂದಾಗಿ ನಿಮ್ಮ ಕೆಲಸದ ಆಯ್ಕೆಯ ಕುರಿತಂತೆ ನಿಮ್ಮಲ್ಲಿ ಪಶ್ಚಾತ್ತಾಪ ಮೂಡಿತ್ತಾ?**

ನಾನು ತೆಗೆದುಕೊಂಡ ನಿರ್ಧಾರ, ಹಮ್ಮಿಕೊಂಡ ಯೋಜನೆಗಳ ಕುರಿತಂತೆ ನನ್ನಲ್ಲಿ ಆತ್ಮವಿಶ್ವಾಸವಿತ್ತು. ಮನೆಯಲ್ಲಿ ಒಮ್ಮೆ ಮಾತ್ರ ನನ್ನ ಕೆಲಸದ ಕುರಿತಂತೆ ತಕರಾರು ಎದ್ದಿತ್ತು. ನನಗೆ ಬರುವ ಅನಾಮಧೇಯ ಪತ್ರಗಳಲ್ಲಿ ಒಂದು ನಮ್ಮನೆಗೆ ಹೋಯಿತು. ಇದು ನನ್ನ ದುರ್ದೈವ. ಅದರಲ್ಲಿ ಮೊದಲಿನ ಪತ್ರಗಳಲ್ಲಿದ್ದ ವಿಷಯವೇ ಇತ್ತು. ನಿನ್ನ ತಾಯಿ ಹೀಗೆ, ನಿನ್ನ ಹೆಂಡತಿ ಹೀಗೆ ಎಂದು ಮುಂತಾಗಿ ಆಶ್ಲೀಲವಾಗಿ ಬರೆದಿದ್ದರು. ಅದನ್ನು ನೋಡಿದ ನನ್ನ ಕುಟುಂಬದವರು ಬಹಳ ನೊಂದುಕೊಂಡರು. 'ನಿಮ್ಮ ಉದ್ಯೋಗ ಬಿಟ್ಟು ಅವರಿಗಾಗಿ ನೀವು ಹುಚ್ಚರಂತೆ ಪರದಾಡಿದರೆ ಅದಕ್ಕೆ ಅವರು ನಿಮಗೇನು ಮರಳಿ ನೀಡುತ್ತಿದ್ದಾರೆ? ಅದರಿಂದಾಗಿ ನಿಮಗೆ ದೊರೆಯುವ ಗೌರವವಾದರೂ ಎಷ್ಟು? ಇಂಥಹ ಗೌರವ ಸಿಗುವುದಾದರೆ ಈ ಕೆಲಸವನ್ನು ಇಲ್ಲಿಗೆ ನಿಲ್ಲಿಸಿ ಬಿಡಿ' ಎಂದರು. ಅದಕ್ಕೆ ನಾನು ಹೇಳಿದೆ 'ಸ್ವಾಮೀಜಿಯವರ ಹತ್ತಿರ ಹೋಗೋಣ. ಅವರಿಗೆ ನನ್ನ ಕೆಲಸದ ಕುರಿತು ಗೊತ್ತಿದೆ. ಅವರಿಗೊಂದು ಶಬ್ದ ಹೇಳಿ ಬಿಟ್ಟು ಬಿಡೋಣ' ಅಂತ್ಹೇಳಿ ನಮ್ಮ ಮನೆಯವರನ್ನು ಅಲ್ಲಿಗೆ ಕರೆದುಕೊಂಡು ಹೋದೆ. ಅವರು ಸ್ವಾಂತನ ಹೇಳಿ ಕಳುಹಿಸಿದರು. ಮನೆಯವರ ಬೆಂಬಲವಿಲ್ಲದೆ ಇಂತಹ ಯಾವ ಸಾಮಾಜಿಕ ಕಾರ್ಯಗಳನ್ನು ಮಾಡಲಾಗುವುದಿಲ್ಲ. ಅದು ಕಠಿಣವಾಗಿ ನಿಲ್ಲುತ್ತದೆ. ನಮ್ಮನೆಯವರಿಗೆ ನೈತಿಕ ಬೆಂಬಲ ಮೂಡಿಸಲು ಅವರನ್ನು ನಾನು ಸ್ವಾಮೀಜಿಯವರಲ್ಲಿಗೆ ಕರೆದುಕೊಂಡು ಹೋಗಿದ್ದೆ. ನಾನೊಬ್ಬ Advocate. ಇಂತಹ ಎಲ್ಲ ಸಂಗತಿಗಳನ್ನು ಗಮನಿಸಿದ ನನಗೆ ಅವುಗಳಾವುವೂ ಹೊಸತು ಎನಿಸಲಿಲ್ಲ. ವೈಚಾರಿಕತೆ ನನ್ನ ರಕ್ತದಲ್ಲಿ ಬೆರೆತು ಹೋಗಿದೆ. ಹೀಗಾಗಿ ನನ್ನ ನಿರ್ಧಾರವನ್ನು ಸಡಿಲಗೊಳಿಸುವ ಪ್ರಶ್ನೆಯೇ ಉದ್ಭವಿಸಲಿಲ್ಲ.

೧೯೮೫ ರಿಂದ ೯೦ರವರೆಗೆ ಅವರಲ್ಲಿ ಒಂದು ಬಗೆಯ ಎಚ್ಚರವನ್ನು ಮೂಡಿಸಲು ಪ್ರಯತ್ನಿಸಿದೆವು. ೯೦ರಲ್ಲಿ ದೇವದಾಸಿಯರ ಮಕ್ಕಳಿಗಾಗಿ ಶಾಲೆಯನ್ನು ತೆರೆದೆವು. ಅವರ ಮಕ್ಕಳಿಗೆಂದು ಒಳ್ಳೆಯ ವಾತಾವರಣ ನಿರ್ಮಿಸಿ ಶಿಕ್ಷಣ ಕೊಡಲು ಪ್ರಾರಂಭಿಸಿದಾಗ ನಮ್ಮ ಕುರಿತಂತೆ ಅವರಲ್ಲಿ ಒಂದು ಬಗೆಯ ವಿಶ್ವಾಸ ಮೂಡಿತು. ಈ ವೇಳೆಗಾಗಲೇ ಅವರಲ್ಲಿ ಒಂದು ಬಗೆಯ ಜಾಗೃತಿ ಆವರಿಸಿತ್ತು. ಶ್ರೀಮಂತ ಮಕ್ಕಳಿಗೆ ದೊರೆಯುವ ಎಲ್ಲಾ ಬಗೆಯ ಸವಲತ್ತುಗಳನ್ನು ಅವರ ಮಕ್ಕಳಿಗೆ ನೀಡಲು ಪ್ರಾರಂಭಿಸಿದೆವು. ಉತ್ತಮ ಉಡುಪು, ಉತ್ತಮ ಆಹಾರ, ಉತ್ತಮ ಶಿಕ್ಷಣದ ಕಡೆಗೆ ಹೆಚ್ಚು ಒತ್ತು ಕೊಟ್ಟಿರುವೆವು. ನಮ್ಮ ಬಗೆಗೆ ಈ ರೀತಿಯ ಆತ್ಮವಿಶ್ವಾಸ ನಿರ್ಮಾಣವಾದ ನಂತರ ಅವರು ನಮ್ಮನ್ನು ಗೌರವಿಸಲು ಪ್ರಾರಂಭಿಸಿದರು. ನೀವು ಒಬ್ಬ ಸಂಶೋಧಕಿ ಎಂಬುದು ಅವರ ಅರಿವಿಗೆ ಬಾರದಂತೆ

ಅವರೊಂದಿಗೆ ಕುಳಿತು ಸಹಜವಾಗಿ ಚಿಟ್ ಚಾಟ್ ಮಾಡಿದರೆ ನಮ್ಮ ಸಂಸ್ಥೆಯ ಕೆಲಸ ಫಲಿತಾಂಶ ನಿಮಗೆ ದೊರೆಯುತ್ತದೆ. ಇದು ದೇವದಾಸಿ ವಿಮೋಚನಾ ಸಂಸ್ಥೆಯು ಸತತ ೧೫ ವರ್ಷಗಳವರೆಗೆ ಸಾಧಿಸಿದ ಅಖಂಡ ಫಲಶ್ರುತಿ. ಇದನ್ನು ನಾನು ಅತ್ಯಂತ ಆತ್ಮವಿಶ್ವಾಸ ದಿಂದ ಹೇಳುತ್ತಿದ್ದೇನೆ. ನಾವು ಕೆಲಸ ಪ್ರಾರಂಭಿಸಿದ ಆರಂಭದ ದಿನಗಳಲ್ಲಿ ಸವದತ್ತಿಯಲ್ಲಿ ಪ್ರತಿವರ್ಷ ಸಾವಿರಾರು ದೇವದಾಸಿಯರನ್ನು ಬಿಡಲಾಗುತ್ತಿತ್ತು. ಇವತ್ತು ಅದು ಅಷ್ಟು ಪ್ರಖರವಾಗಿಲ್ಲ. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯೊಂದೇ ಕೆಲಸ ಮಾಡಿದೆ ಎಂದು ಹೇಳಲಾರೆ. ಅನೇಕ ಸಂಘಸಂಸ್ಥೆಗಳು ನಮ್ಮಂತೆ ಕೆಲಸ ನಿರ್ವಹಿಸಿವೆ. ನಮ್ಮ ಪ್ರಯತ್ನಕ್ಕೆ ಫಲ ದೊರೆತಿದೆ ಎಂದು ಪ್ರಾಮಾಣಿಕವಾಗಿ ಹೇಳಬಲ್ಲೆ.

- ❑ **ನೀವು ದೇವದಾಸಿಯರ ಮಕ್ಕಳಿಗಾಗಿ ವಿಮೋಚನಾ ಶಾಲೆಯನ್ನು ತೆಗೆದಿದ್ದೀರಿ. ಪ್ರಧಾನಧಾರೆಯ ಸಮಾಜದಿಂದ ಅವರನ್ನು ಬೇರ್ಪಡಿಸಿ ದೇವದಾಸಿ ಮೂಲದ Identification ವುಳ್ಳ ಹೆಸರಿನ ಶಾಲೆಯಲ್ಲಿ ಅವರಿಗೆ ಶಿಕ್ಷಣ ನೀಡುವುದು ಎಷ್ಟರಮಟ್ಟಿಗೆ ಉಚಿತವೆನಿಸುತ್ತದೆ? ಅವರಿಗೆ ಸಮಾನ ಶಿಕ್ಷಣದ ಅಗತ್ಯವೆನಿಸುವುದಿಲ್ಲವೆ?**

ಎಲ್ಲಿಯವರೆಗೆ ನಾವು ಅವರನ್ನು ಸಮಾಜದ ಪ್ರಧಾನ ಧಾರೆಯಲ್ಲಿ ತರುವುದಿಲ್ಲವೋ ಅಲ್ಲಿಯವರೆಗೆ ಅವರು ಅದೇ ಹೆಸರಿನಿಂದ ಗುರುತಿಸಲ್ಪಡುತ್ತಾರೆ. ಅವರ ಈ ಹಣೆಪಟ್ಟಿಯನ್ನು ಕಿತ್ತೊಗೆಯಬೇಕಾದರೆ ಅವರನ್ನು ಸಮಾಜದ ಪ್ರಧಾನ ಧಾರೆಗೆ ತರುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ನೀವು ಹೇಳಿದಂತೆ ಸಮಾನ ಶಿಕ್ಷಣ ನೀಡುವ ಅಗತ್ಯವಿದೆ. ಆದರೆ ಹತ್ತು - ಹದಿನೈದು ವರ್ಷಗಳ ಹಿಂದೆ ವಾಸ್ತವ ಪರಿಸ್ಥಿತಿ ಬೇರೆಯೇ ಆಗಿತ್ತು. ದೇವದಾಸಿಯರು ತಮ್ಮ ಮಕ್ಕಳನ್ನು ಕರೆದುಕೊಂಡು ಶಾಲೆಗೆ ಹೆಸರು ಹಚ್ಚಲು ಹೋದರೆ, ಅಲ್ಲಿ ಆ ಕೂಸಿನ ತಂದೆಯ ಹೆಸರನ್ನು ಕೇಳುತ್ತಿದ್ದರು. ತಂದೆಯ ಹೆಸರಿಲ್ಲದಿದ್ದರೆ ಅವರನ್ನು ಶಾಲೆಯೊಳಗೆ ಕರೆದುಕೊಳ್ಳುತ್ತಿರಲಿಲ್ಲ. ಇಂಥ ದಿನಗಳೊಳಗೆ ನಾವು ಶಾಲೆಯನ್ನು ಪ್ರಾರಂಭಿಸಿದೆವು. ನಾವೆಲ್ಲ NGO's ಸೇರಿಕೊಂಡು ರಾಷ್ಟ್ರಮಟ್ಟದಲ್ಲಿ ಶೈಕ್ಷಣಿಕ ವಿಭಾಗದ ಮೇಲೆ ಒತ್ತಡ ತಂದೆವು. ಅದರ ಪರಿಣಾಮವಾಗಿ ಇವತ್ತು ತಂದೆಯ ಹೆಸರಿಲ್ಲದೆ, ತಾಯಿಯ ಹೆಸರಿನ ಮೇಲೆ ದೇವದಾಸಿಯರ ಮಕ್ಕಳು ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ದೇವದಾಸಿಯರ ಮಕ್ಕಳ ಶಿಕ್ಷಣದ ಕುರಿತಂತೆ ಆಳವಾಗಿ ಅಧ್ಯಯನ ಮಾಡಿದ್ದೇನೆ. ಸಮಾನ ಶಿಕ್ಷಣದ ಹೆಸರಿನಲ್ಲಿ ಅವರಿಗೆ ಎಲ್ಲರೊಂದಿಗೆ ಶಿಕ್ಷಣ ನೀಡಲು ಪ್ರಾರಂಭಿಸಿದಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅಲ್ಲಿಯ ಕುಟುಂಬಸ್ತ ಮಕ್ಕಳು ಇವರನ್ನು ನಿಕೃಷ್ಟವಾಗಿ ಕಾಣುತ್ತಾರೆ. ಅವರ ಕುರಿತು ತುಚ್ಛವಾಗಿ ಮಾತನಾಡುತ್ತಾರೆ. ಇದನ್ನು ಕೇಳಿಕೊಂಡು ಆ ಮಗು ಮೂರು ತಿಂಗಳೋ, ಆರು ತಿಂಗಳೋ ಬಹಳ ಗಟ್ಟಿಯಿದ್ದರೆ ಒಂದು ವರ್ಷದವರೆಗೆ ಶಾಲೆಗೆ ಬಂದು ನಂತರ ಬಿಟ್ಟುಬಿಡುವ ಸಾಧ್ಯತೆಗಳೇ ಹೆಚ್ಚು. ಒಮ್ಮೆ ಶಾಲೆಯನ್ನು ಬಿಟ್ಟಂತಹ ಮಕ್ಕಳನ್ನು ತಿರುಗಿ ಶಿಕ್ಷಣಕ್ಕೆ ಮುಖಾಮುಖಿಯಾಗಿಸುವುದು ತುಂಬ ಕಷ್ಟ. ಬಡತನ, ಅಜ್ಞಾನ,

ಅಪಮಾನ ಇವೆಲ್ಲ ಒಂದಿಲ್ಲ ಒಂದು ಬಗೆಯಲ್ಲಿ ಆ ಮಗುವಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ. ಅದಕ್ಕಾಗಿ ನಾನು ಅವರಿಗಾಗಿಯೇ 'ವಿಮೋಚನಾ ವಸತಿ ಶಾಲೆಯನ್ನು ಪ್ರಾರಂಭಿಸಿದೆನು. ಹತ್ತನೆಯ ತರಗತಿಯವರೆಗೆ ಅವರಿಗೆ ಶಿಕ್ಷಣವನ್ನು ಕಲ್ಪಿಸಿದರೆ, ಅವರಿಗೆ Basic Education ಕೊಟ್ಟ ಹಾಗಾಗುತ್ತಲ್ಲ. ಅವರಲ್ಲಿಯೇ ನಾಲ್ಕು ರತ್ನಗಳು ದೊರೆತರೆ, ಅವರಿಗೇ ಉನ್ನತ ಶಿಕ್ಷಣದ ಅನುಕೂಲ ಮಾಡಿಕೊಟ್ಟರೆ, ಅವರೆಲ್ಲರಿಗೆ ತಮ್ಮ ತಮ್ಮ ಕಾಲ ಮೇಲೆ ಸ್ವಾಭಿಮಾನದಿಂದ ನಿಂತುಕೊಳ್ಳಲು ಸಾಧ್ಯವಾಗುತ್ತದೆ. ಈ ಶತಮಾನದ ಆದಿಯಲ್ಲಿ ವಿಜಾಪುರದಲ್ಲಿ ಕಾಕಾ ಕಾರಖಾನೀಜ್ ಅವರು ಒಂದು ಅದ್ಭುತವಾದ ಕೆಲಸವನ್ನು ಮಾಡಿದರು. ಅವರ ಕೆಲಸದ ಸರಿಸಮಕ್ಕೆ ನನ್ನ ಕೆಲಸ ನಿಲ್ಲಲಾರದು. ಅವರೆಲ್ಲಿ? ನಾವೆಲ್ಲಿ? ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಅದೂ ಒಬ್ಬ ಬ್ರಾಹ್ಮಣ, ಮದುವೆಯಾಗದ ತನ್ನ ನಾಲ್ಕು ಜನ ಅಕ್ಕ ತಂಗಿಯರನ್ನು ಕರೆದುಕೊಂಡು ದೇವದಾಸಿಯರಿಗಾಗಿ, ಅವರ ಮಕ್ಕಳಿಗಾಗಿ ಟೊಂಕ ಕಟ್ಟಿಕೊಂಡು ನಿಂತರು. ಈ ಸಂಗತಿಯನ್ನು ಸಾಮಾನ್ಯವೆನ್ನುವಂತೆ ಪರಿಗಣಿಸಬಾರದು. ಅವರು ತಮ್ಮ ಕೊನೆಗಾಲದಲ್ಲಿ ತಾವು ಮಾಡಿದ ಕೆಲಸವನ್ನು ಹಾಗೂ ಅದರ ಫಲಿತಾಂಶವನ್ನು ಎದುರಿಗಿಟ್ಟುಕೊಂಡು ತೂಗಿ ನೋಡಿದರು. ತಾವು ಕಟ್ಟಿಸಿದ ಕಟ್ಟಡದ ಎದುರು ಕುಳಿತುಕೊಂಡು ನಿರಾಶೆಯಿಂದ ಬಿಕ್ಕಿ ಬಿಕ್ಕಿ ಅತ್ತರು. ಇಂತಹ ಕಾಲ ನನಗೂ ಬಂದರೆ ಹೇಗೆ ಎನ್ನುವ ಅಳಕು ಇತ್ತು. ಆದರೆ ಇವತ್ತು ಹಾಗಾಗುವುದಿಲ್ಲ. ಆ ಮಕ್ಕಳಲ್ಲಿ ವಿಶೇಷ ಜಾಗೃತಿ ಮೂಡಿದೆ. ನಮ್ಮ ಒಬ್ಬ ಮಗ ಎಂಜನಿಯರಿಂಗ್ ಕಾಲೇಜಿನಲ್ಲಿ ಅಂತಿಮ ವರ್ಷದಲ್ಲಿ ಓದುತ್ತಿದ್ದಾನೆ. ನಮ್ಮ ಅನೇಕ ಮಕ್ಕಳು ಇವತ್ತು ಇಲ್ಲಿಯೇ NTTF ಕಾಲೇಜಿನಲ್ಲಿ ಓದುತ್ತಿದ್ದಾರೆ. ಇನ್ನು ಕೆಲವು ಮಕ್ಕಳು ಮೈಸೂರಿನ ಸುತ್ತೂರು ಮಠದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಓದುತ್ತಿದ್ದಾರೆ. ITI ಕಾಲೇಜಿನಲ್ಲಿ ಇದ್ದಾರೆ. ಹಿಂದೆ ಅವರಿಗೆ ಅನೇಕ ಸಮಸ್ಯೆಗಳಿಂದಾಗಿ ಶಿಕ್ಷಣ ಸಿಗ್ತಾ ಇರಲಿಲ್ಲ. ಇವತ್ತು ಪರಿಸ್ಥಿತಿ ಹಾಗಿಲ್ಲ. S.S.L.C. ಯವರೆಗೆ ನಾವು ಅವರಿಗೆ ಕೊಡುವ ಶಿಕ್ಷಣ ಬಹಳ ಉಪಯೋಗವಾಗುತ್ತದೆ. ಈ ಹೊತ್ತಿನಲ್ಲಿ ಎಲ್ಲವನ್ನು ಅರ್ಥಮಾಡಿಕೊಳ್ಳುವ ತಾಕತ್ತು ಇರುತ್ತದೆ. ನಾವು ಈ ಘಟ್ಟದಲ್ಲಿ ಮಕ್ಕಳಿಗೆ ಅವರು ಬೆಳೆದು ಬಂದ ವಾತಾವರಣದ ಹಿನ್ನೆಲೆಯ ಅರಿವು ಮೂಡಿಸುತ್ತಲೇ, ಅದನ್ನು ಮೀರಿ ಬೆಳೆಯುವ ಚೈತನ್ಯವನ್ನು ನೀಡುತ್ತೇವೆ. ಎಲ್ಲ ಧರ್ಮಗಳ ಗುರುಗಳನ್ನು ಕರೆಸುತ್ತೇವೆ. ಎಲ್ಲ ತರಹದ ಸಾಮಾಜಿಕ ಕಾರ್ಯಕರ್ತರನ್ನು ಕರೆದುಕೊಂಡು ಬರುತ್ತೇವೆ. ಎಲ್ಲ ಬಗೆಯ Academicians ಕರೆಸುತ್ತೇವೆ. ಮಕ್ಕಳ ಬದುಕಿನ ಹಿನ್ನೆಲೆಯನ್ನು ನಾವು ಮುಚ್ಚಿಡಲು ಪ್ರಯತ್ನಿಸುವುದಿಲ್ಲ. ಅದು ಸಾಧ್ಯವೂ ಇಲ್ಲ. ನಿಮ್ಮ ಹಿನ್ನೆಲೆಯಲ್ಲಿಯೇ ಬೆಳೆದುಬಂದಂತಹ ಅನೇಕರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರನ್ನು ಗಳಿಸಿದ್ದಾರೆ. ನೀವೂ ಆ ನೆಲೆಯಲ್ಲಿ ಪ್ರಯತ್ನಿಸಬೇಕು ಎಂಬುದನ್ನು ಅವರಿಗೆ ತಿಳಿಸಿ ಹೇಳುತ್ತೇವೆ. ಬೆಳಗಾಂ ಜಿಲ್ಲೆಯ ವಿಭಾಗಾಧಿಕಾರಿಯೊಬ್ಬರು ತಮಿಳುನಾಡಿನ ಅತ್ಯಂತ ಬಡ ಹರಿಜನ ಕುಟುಂಬದಿಂದ ಬಂದಂಥವರು. ಅವರು ತಮ್ಮ ಹನ್ನೆರಡನೆಯ

ವರ್ಷ ವಯಸ್ಸಿನ ತನಕ ಶಾಲೆಗೆ ನಾಲ್ಕು ಕಿ.ಮೀ. ನಡೆಯುತ್ತಾ ಹೋಗುತ್ತಿದ್ದರು. ಶಾಲೆಯಿಂದ ವಾಪಾಸ್ಸಾದ ಅವರಿಗೆ, ತಮ್ಮ ತಾಯಿಯ ಮುಖ ನೋಡಲು ಸಿಗುತ್ತಿರಲಿಲ್ಲ. ಅವಳು ಮಗನಿಗೆಂದು ಗಡಗಿಯ ಕೆಳಗೆ ರೊಟ್ಟಿಯನ್ನು ಮುಚ್ಚಿಟ್ಟು ಕೂಲಿಗೆ ಹೋಗಿರುತ್ತಿದ್ದಳು. ಶಾಲೆಯಿಂದ ಮನೆಗೆ ಬರುವ ವೇಳೆಗೆ ಅದು ನಾಯಿಯ ಪಾಲಾಗಿರುತ್ತಿತ್ತು. ಇಂತಹ ಅನಿವಾರ್ಯ ಕಾರಣಗಳಿಂದಾಗಿ ಅವರು ಉಪವಾಸ ಉಳಿದದ್ದೇ ಹೆಚ್ಚು. ಇಂದು ಅದೇ ಹುಡುಗ ಬೆಳಗಾವಿಯ Divisional Commissionar ಆಗಿರುವನು. ಇಂಥ ಜೀವಂತ ಮಾದರಿಗಳನ್ನು ಅವರೆದುರಿಗೆ ಇಡುವೆವು. ಈ ನಿಟ್ಟಿನಲ್ಲಿ ನಾವು ಅವರಿಗೆ ಮಾನಸಿಕವಾಗಿ ಪೂರ್ವಭಾವಿ ತರಬೇತಿಯನ್ನು ನೀಡುವೆವು. ಅವರ ಮನಸ್ಸಿನ ಮೂಲೆಯಲ್ಲುಳಿದ ಕೀಳರಿಮೆಯನ್ನು ಕಿತ್ತೊಗೆಯುವ ಸಣ್ಣ ಪ್ರಮಾಣಿಕ ಪ್ರಯತ್ನವನ್ನು ನಾವು ನಡೆಸಿರುವೆವು. ನಮ್ಮದು ಕೇವಲ ದೇವದಾಸಿಯರ ಮಕ್ಕಳು ಕಲಿಯುವ ಶಾಲೆಯಲ್ಲ. ಮಲ್ಲಾಬಾದ್ ನಲ್ಲಿ ಹೈಸ್ಕೂಲು ಇಲ್ಲ. ಹೀಗಾಗಿ ನಾವು ನಮ್ಮ ಮಕ್ಕಳ ಜೊತೆಗೆ ಕುಟುಂಬಸ್ಥ ಮಕ್ಕಳಿಗೂ ಪ್ರವೇಶ ನೀಡುವೆವು. ನಮ್ಮ ಮಕ್ಕಳು ೩೦ ಜನರಿದ್ದರೆ, ಉಳಿದ ಮಕ್ಕಳು ಹತ್ತೋ ಹದಿನೈದೋ ಇರುವರು. ಈ ಕ್ರಮ ಅವರನ್ನು ಸಮಾಜದ ಪ್ರಧಾನಧಾರೆಗೆ ಕೊಂಡೊಯ್ಯುತ್ತದೆ ಎಂದು ನಂಬಿದ್ದೇನೆ. 'ದೇವದಾಸಿ' ಎನ್ನುವ ಶಬ್ದವನ್ನು ನಮ್ಮ ಶಾಲೆಯ ಆವರಣದಲ್ಲಿ ಯಾರೂ ಉಚ್ಚರಿಸುವುದಿಲ್ಲ. ಇದನ್ನು ನಾವು ಕಠಿಣವಾಗಿ ಪಾಲಿಸಿಕೊಂಡು ಬಂದಿದ್ದೇವೆ. ಇವತ್ತು ವಿಮೋಚನಾ ಶಾಲೆಯಂತಹ ಶಿಕ್ಷಣ ಸಂಸ್ಥೆ ಇಲ್ಲಾ ಎಂದು ಕಲ್ಪನೆ ಮಾಡಿಕೊಳ್ಳಿ. ಸಾಮಾನ್ಯ ಶಾಲೆಯಲ್ಲಿ ದೇವದಾಸಿ ಹಿನ್ನೆಲೆಯಿಂದ ಬಂದ ಮಗು ಪ್ರವೇಶ ಪಡೆದಿದೆ ಎಂದಿಟ್ಟುಕೊಳ್ಳಿ. ಅಲ್ಲಿ ಅವರಿಗೆ ಕುಟುಂಬಸ್ಥ ಮಕ್ಕಳೊಂದಿಗೆ ಸಹಜವಾಗಿ ಬೆರೆಯಲು ಆಗುವುದಿಲ್ಲ. ಸೂಳೆಯ ಮಗ ಅಥವಾ ಮಗಳು ಎಂದು ಬೆರಳು ಮಾಡಿ ಅಪಮಾನಿಸುತ್ತವೆ. ಅವರನ್ನು ತಮ್ಮ ಪಕ್ಕದಲ್ಲಿ ಕೂಡಿಸಿಕೊಳ್ಳಲು ಇಷ್ಟಪಡುವುದಿಲ್ಲ. ಇದು ಈ ಹೊತ್ತಿಗೂ ನಮ್ಮ ಸಮಾಜದಲ್ಲಿ ಜೀವಂತವಾಗಿದೆ. ಅದಕ್ಕಾಗಿ ಅಂತಹ ಮಕ್ಕಳು ಸಮಾನ ಶಿಕ್ಷಣ ಪಡೆಯುವುದು ಕಷ್ಟವಾಗುತ್ತದೆ. ಸಮಾನ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುವ ದೇವದಾಸಿಯರ ಮಕ್ಕಳಿಗಿಂತಲೂ, ನಮ್ಮ ವಿಮೋಚನಾ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುವ ಮಕ್ಕಳು ಮಾನಸಿಕವಾಗಿ, ಬೌದ್ಧಿಕವಾಗಿ ಹೆಚ್ಚು ಸದೃಢವಾಗಿರುತ್ತಾರೆ. ಸಮಾಜದ ಪ್ರಧಾನಧಾರೆಯಲ್ಲಿದ್ದುಕೊಂಡು ಅವರು ಶಿಕ್ಷಣ ಪಡೆಯಬೇಕೆಂಬ ವಿಚಾರ ಬಹಳ ಒಳ್ಳೆಯದು. ಆದರೆ ವಾಸ್ತವ ಸಂಗತಿಯನ್ನು ಕಡೆಗಣಿಸಕೂಡದು. ಮಕ್ಕಳ ಮನಸ್ಸು ಬಹಳ ಸೂಕ್ಷ್ಮವಾಗಿರುವುದರಿಂದ ಅವುಗಳಿಗೆ ಸಾಮಾಜಿಕ ಅಪಮಾನಗಳನ್ನು ಎದುರಿಸಲಾಗುವುದಿಲ್ಲ. ಅಪಮಾನಗಳಿಂದ ಎದೆಗುಂದಿದ ಮಗು ಶಿಕ್ಷಣಕ್ಕೆ ಬೆನ್ನು ತೋರಿಸುತ್ತದೆ. ತಾಯಿಯ ಹತ್ತಿರ ಬಂದ ಆ ಮಗು ಪಿಂಪ್ ಆಗಿಬಿಡುತ್ತದೆ. ಬಾಂಬೆಯ ರೆಡ್ ಲೈಟ್ ಏರಿಯಾದಲ್ಲಿ ಇದೆಲ್ಲ ಸಾಮಾನ್ಯ. ತಾಯಿಯ ರಾತ್ರಿಯ ಎಲ್ಲ ವ್ಯವಹಾರಗಳನ್ನು ನೋಡಿಕೊಂಡು ಬದುಕುವ ಅನಿವಾರ್ಯ ಕಠೋರ ಪ್ರಸಂಗ ಅವರೆದುರಿಗಿದೆ. ಆ ಹೊತ್ತಿನಲ್ಲಿ ಮಗುವನ್ನು

ಹೊರಹಾಕಿದರೂ, ಅವಳು ಒಳಗಡೆ ಕರೆದುಕೊಳ್ಳುವವರೆಗೆ ಹೊರಗಡೆ ನಿಂತು ಕಾಯಬೇಕು. ಇದನ್ನು ನಾನೇಕೆ ಹೇಳುತ್ತಿದ್ದೇನೆಂದರೆ ಆ ಮಕ್ಕಳೆದುರಿಗಿರುವ ಈ ಅನಿವಾರ್ಯತೆ, ಅಂತಿಮವಾಗಿ ಅವರನ್ನು ಆ ವ್ಯವಸ್ಥೆಗೆ ಹೊಂದಿಕೊಳ್ಳುವ ರೂಢೀಕರಣವನ್ನು ಹುಟ್ಟುಹಾಕುತ್ತದೆ. ಬಾಂಬೆಯ ರೆಡ್ ಲೈಟ್ ಏರಿಯಾದಲ್ಲಿ ನಮ್ಮ ತೆರನಾದ ಕೆಲವು ಸಂಘ ಸಂಸ್ಥೆಗಳು ಹಗಲು ಶಾಲೆಗಳನ್ನು ನಡೆಸುತ್ತವೆ. ವಸತಿ ಶಾಲೆಗಳಲ್ಲದ ಅವುಗಳು ಅವರಿಗೆ ರಾತ್ರಿಯ ತಾಯಿಯ ವ್ಯವಹಾರಗಳನ್ನು ನೋಡುವ ಅನಿವಾರ್ಯತೆಯನ್ನು ಸೃಷ್ಟಿಸುತ್ತವೆ. ಈ ಹಿನ್ನೆಲೆಯಲ್ಲಿ ವಿಮೋಚನಾ ಶಾಲೆಯಂಥ ಶಿಕ್ಷಣ ಸಂಸ್ಥೆಗಳು ಬಹಳ ಅಗತ್ಯವೆನಿಸುತ್ತವೆ, ಅವಶ್ಯಕವೆನಿಸುತ್ತವೆ. ಒಂದು ಹಂತದ ತಿಳುವಳಿಕೆ ಬರುವವರೆಗೆ ಆ ಮಗು ಒಳ್ಳೆಯ ವಾತಾವರಣದಲ್ಲಿ ಬೆಳೆಯಲಿ.

- **ಒಬ್ಬ Social activist ಆಗಿ ನಿಮ್ಮಂತೆ ಸೇವೆಸಲ್ಲಿಸುತ್ತಿರುವ ಸಂಘಸಂಸ್ಥೆಗಳ ಕುರಿತು ನಿಮಗೇನೆನಿಸುತ್ತೆ? ಅವುಗಳು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತಿವೆಯಾ?**

NGOಗಳ ಬಗ್ಗೆ ಅಭಿಪ್ರಾಯವನ್ನು ಕೇಳಿದ ರೀತಿಯಲ್ಲಿ ಕೇಳಿದಿರಿ. ಸುದೈವದಿಂದಲೋ ದುರ್ದೈವದಿಂದಲೋ I am heading an instiution of the Central Government. ಕಪಾರ್ಟ್ ಎನ್ನುವ ಸಂಸ್ಥೆಯ ನಾಲ್ಕು ರಾಜ್ಯಗಳ Chair Person ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಕಪಾರ್ಟದ ಅಧ್ಯಕ್ಷನಾಗಿ ನಾನು ನಿಮಗೆ ಅಭಿಪ್ರಾಯವನ್ನು ಕೊಡಬಹುದು. ಕಪಾರ್ಟ್ ಸಹಾಯ ಮಾಡುವುದೇ NGO ಗಳಿಗೆ. ಈ ವ್ಯವಸ್ಥೆಯನ್ನು ಹತ್ತಿರದಿಂದ ಕಂಡ ನಾನು ನಿಮಗೆ ಕೆಲವು ಅಭಿಪ್ರಾಯಗಳನ್ನು ಹೇಳಬಹುದು. NGO ಗಳನ್ನು ಮಾಡಿಕೊಂಡು ಅದರಲ್ಲಿಯೇ ಬದುಕುವ ಜನ ಹುಟ್ಟಿಕೊಂಡಿದ್ದು ಈ ದೇಶದ ಅತ್ಯಂತ ದುರ್ದೈವದ ಸಂಗತಿ. ಇತ್ತಿತ್ತಲಾಗಿ NGO ಗಳನ್ನು ಮಾಡುವುದೇ ಒಂದು ಫ್ಯಾಷನ್ ಆಗಿಬಿಟ್ಟಿದೆ. ಸಮಾಜಸೇವೆ ಮಾಡಬೇಕೆನ್ನುವವರು ಯಾರ ಗೌರವವನ್ನು ನಿರೀಕ್ಷಿಸುವುದಿಲ್ಲ. ಅದಕ್ಕಾಗಿ ಸಂಸ್ಥೆಯನ್ನು ಕಟ್ಟಬೇಕಾಗಿಲ್ಲ. ದುಡ್ಡನ್ನು ಸಂಗ್ರಹಿಸಬೇಕಾಗಿಲ್ಲ. ಪ್ರಾಮಾಣಿಕವಾಗಿ ಸಾಮಾಜಿಕ ಸೇವೆ ಮಾಡಬೇಕೆನ್ನುವವರಿಗೆ ದುಡ್ಡು ತಾನಾಗಿಯೇ ಹುಡುಕಿಕೊಂಡು ಬರುತ್ತದೆ. ತಾವು ಕಾಕಾ ಕಾರಖಾನೀಜ್ ಅವರ ಹೆಸರು ಕೇಳಿರಬಹುದು. ಅವರು ತಮ್ಮ ಸೇವೆಯನ್ನು ದೊಡ್ಡ ಸಂಸ್ಥೆಯನ್ನು ಕಟ್ಟಿಕೊಂಡೇ ಪ್ರಾರಂಭಿಸಿರಲಿಲ್ಲ. ಅಥವಾ ಮುಂಬರುವ ಫಂಡ್‌ಗಾಗಿ ಅವರು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಿಲ್ಲ. ನಿಸ್ವಾರ್ಥವಾದ ರೀತಿಯಲ್ಲಿ ಅವರು ಇಡೀ ಜೀವನವನ್ನು ದೇವದಾಸಿಯರ ವಿಮೋಚನೆಗಾಗಿ ತೆಯ್ದರು. ಇಂದು ಅಂತಹ ಸಮಾಜ ಸೇವೆ ದುರ್ದೈವದಿಂದ ಕಡಿಮೆಯಾಗುತ್ತಾ ನಡೆದಿದೆ. NGO ಗಳನ್ನು ನಡೆಸಿಕೊಂಡು ಹೋಗುವ ಅನೇಕರು ಫಲಾನುಭವಿಗಳಾಗಿ ಕೆಲಸ ಮಾಡುತ್ತಿಲ್ಲ. ಅವರು ಅಲ್ಲಿ ತಮ್ಮ ಸ್ವಾರ್ಥದ ಬೇಳೆಯನ್ನು ಬೇಯಿಸಿಕೊಳ್ಳುತ್ತಿದ್ದಾರೆ. ಈ ತರಹದ ಅನೇಕ ಸಂಸ್ಥೆಗಳನ್ನು ಕಪಾರ್ಟನಲ್ಲಿ ಕೆಂಪು ಪಟ್ಟಿಯಲ್ಲಿ ಇಟ್ಟಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ ಕೊಲ್ಹಾರದಲ್ಲಿ ನೂರಕ್ಕೆ ಅರವತ್ತರಷ್ಟು NGO ಗಳು ಕೆಂಪು ಪಟ್ಟಿಯಲ್ಲಿವೆ. ಸಮಾಜಸೇವೆ

ಮನೋಭಾವವನ್ನಿಟ್ಟುಕೊಂಡ ಈ ತರಹದ ಸಂಘಸಂಸ್ಥೆಗಳಲ್ಲಿ ಈ ಕೀಳು ವೃತ್ತಿ ಬೆಳೆಯಬಾರದಿತ್ತು. ಅದಕ್ಕೆ ಏನೂ ಮಾಡಲಾಗುವುದಿಲ್ಲ. ಯಾಕೆಂದರೆ ವ್ಯವಸ್ಥೆಯನ್ನು ಸುಧಾರಿಸುವವರೂ ನಾವೇ, ಕೆಡಿಸುವವರೂ ನಾವೇ. ನಮ್ಮ ದೇಶದಲ್ಲಿ ಕೆಳಮಟ್ಟದ ವ್ಯಕ್ತಿಯಿಂದ ಹಿಡಿದು ಅತ್ಯುನ್ನತ ಮಟ್ಟದ ವ್ಯಕ್ತಿಯವರೆಗೆ Corruption ನಲ್ಲಿ ಮುಳುಗಿ ಹೋಗಿದ್ದಾರೆ. ಯಾರೂ ನಮಗೆ ಮಾದರಿಯಾಗಬೇಕಿತ್ತೋ ಅವರೇ ಇವತ್ತು Corruption ದ ಸಾಕಾರ ಮೂರ್ತಿಯಾಗಿದ್ದಾರೆ. ಇಂತಹ ವ್ಯವಸ್ಥೆಯಲ್ಲಿ ನನ್ನಂತಹ ಅತ್ಯಂತ ಸಣ್ಣ ವ್ಯಕ್ತಿ ಒಳ್ಳೆಯವನಾಗಿ ಬದುಕುವುದು ಕಠಿಣವಾಗಿದೆ, ದೊಡ್ಡ ಸವಾಲಾಗಿದೆ. NGO ಗಳಲ್ಲಿರುವ ಎಲ್ಲರೂ ಭ್ರಷ್ಟರೆಂದು ನಾನು ಹೇಳುತ್ತಿಲ್ಲ. ಎಲ್ಲೋ ಒಂದಿಬ್ಬರು ಒಳ್ಳೆಯವರಿರಬಹುದು. ಅವರು ಅದ್ಭುತವಾದ ರೀತಿಯಲ್ಲಿ ಪ್ರಮಾಣಿಕ ಸೇವೆಯನ್ನು ನೀಡಿದ್ದಾರೆ. ಆದರೆ ಅಂಥವರು ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಹೆಚ್ಚಿನವರು ಸಂಸ್ಥೆಯ ಹೆಸರಿನಲ್ಲಿ ಸ್ವಂತಕ್ಕೆ ದುಡ್ಡು ಮಾಡಿಕೊಳ್ಳುತ್ತಿರುವವರು. ಇದು ನಮ್ಮ ದುರ್ದೈವ.

❑ **ಮಹಾರಾಷ್ಟ್ರದಲ್ಲಿ ದೇವದಾಸಿಯರ ವಿಮೋಚನೆಗೆ ಸಂಬಂಧಿಸಿದಂತೆ ಅನೇಕ ಮಹಿಳಾ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ನನಗೆ ಗೊತ್ತಿದ್ದ ಮಟ್ಟಿಗೆ ಈ ತರಹದ ಮಹಿಳಾ ಸಂಘಟನೆಗಳು ಕರ್ನಾಟಕದಲ್ಲಿ ಇಲ್ಲ ಅಲ್ವಾ?**

ನನ್ನ ಈ ಹದಿನೈದು ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಈ ಹಿನ್ನೆಲೆಯಲ್ಲಿ ಕೆಲಸ ನಿರ್ವಹಿಸಿದ ಮಹಿಳಾ ಸಂಘಟನೆಗಳು ನಾನು ಭೇಟಿ ಮಾಡಿಲ್ಲ. ಈಗ ಅತ್ಯಂತ ಹೊಸದಾಗಿ ಇಂತಹ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದರೆ, ನನಗದು ತಿಳಿದಿಲ್ಲ. ಆದರೆ NGO ದಲ್ಲಿ ಅನೇಕ ಮಹಿಳಾ ಅಧಿಕಾರಿಗಳು ಈ ಹಿನ್ನೆಲೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಅವರ್‍ಯಾರೂ ಸಂಘಸಂಸ್ಥೆಗಳನ್ನು ಕಟ್ಟಿಕೊಂಡಿಲ್ಲ. ಅದಕ್ಕಾಗಿ Dedicate ಮಾಡಿದಂಥವರು ಯಾರೂ ಇದ್ದಂತಿಲ್ಲ. ಮಹಾರಾಷ್ಟ್ರದಲ್ಲಿ, ಪಶ್ಚಿಮ ಬಂಗಾಲದಲ್ಲಿ, ಡೆಲ್ಲಿಯಲ್ಲಿ ಈ ತೆರನಾದ ಸಂಘಟನೆಗಳು ಸಾಕಷ್ಟು ಇವೆ. ಕರ್ನಾಟಕದ ಒಬ್ಬ ಹೆಣ್ಣುಮಗಳು ಡೆಲ್ಲಿಯಲ್ಲಿ ಬಹುದೊಡ್ಡ ಹೆಸರನ್ನು ಗಳಿಸಿಕೊಂಡಿದ್ದಾಳೆ. ಅಭಿಮಾನ ಪಡುವಂತಹ ಕೆಲಸಗಳನ್ನು ಅವಳು ನಿರ್ವಹಿಸುತ್ತಿದ್ದಾಳೆ. ಆದರೆ ಕರ್ನಾಟಕದಲ್ಲಿ ಆ ಮಟ್ಟವನ್ನು ಮುಟ್ಟಿದ ಹೆಣ್ಣುಮಗಳನ್ನು ನಾನು ನೋಡಿಲ್ಲ.

❑ **ಕರ್ನಾಟಕದಲ್ಲಿ ಮಹಿಳೆಗೆ ಈ ನಿಟ್ಟಿನಲ್ಲಿ ಯಾಕೆ ಕೆಲಸ ನಿರ್ವಹಿಸಲಾಗುತ್ತಿಲ್ಲ?**

ಇಂತಹ ಕೆಲಸಕ್ಕೆ ಕೈಹಾಕುವವರು ಒಣಗೌರವ ಹಾಗೂ ಅಭಿಮಾನವನ್ನು ಬಿಟ್ಟುಕೊಡಬೇಕು. ಸೇವಾಮನೋಭಾವದಿಂದ ಇಂತ ಕ್ಷೇತ್ರಕ್ಕೆ ಕಾಲಿಡಬೇಕು. ಈ ಕ್ಷೇತ್ರಕ್ಕೆ ಕಾಲಿಟ್ಟಾಗ 'ಸಾಮಾಜಿಕ ಅಪಮಾನಗಳು ಎದುರಾಗುವುದು ಸಹಜ. ಅದನ್ನು ಮೀರಿ ನಿಲ್ಲುವಂತಹ ಮನೋಭಾವವನ್ನು ಮೊದಲೇ ಬೆಳೆಸಿಕೊಳ್ಳಬೇಕು. ಉಚ್ಚವರ್ಣೀಯ ಮಹಿಳೆಯರಲ್ಲಿ ಈ ಮನೋಭಾವವನ್ನು ನಾವು ಬೆಳೆಸಿಲ್ಲ. ಅಥವಾ ಅವರಲ್ಲಿ ಅದು ಬೆಳೆದು ಬಂದಿಲ್ಲ. ಸಾಮಾಜಿಕವಾಗಿ ಎದುರಾಗುವ ನೋವು, ಅಪಮಾನಗಳನ್ನು ಎದುರಿಸುವ

ಮಾನಸಿಕ ಶಕ್ತಿ ಸಾಮಾನ್ಯವಾಗಿ ಮಹಿಳೆಯರಲ್ಲಿ ಕಡಿಮೆಯಿರುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಕರ್ನಾಟಕದಲ್ಲಿ ಇಂತಹ ಸಂಘಟನೆಗಳು ಕಾಣಿಸಿಕೊಂಡಿರಲಿಕ್ಕಿಲ್ಲ. ಅನೇಕ ರಾಜಕೀಯ ಧುರೀಣರು - ಅವರು ಮಹಿಳೆಯರಿರಬಹುದು, ಪುರುಷರಿರಬಹುದು - ತಮ್ಮ ಅಕ್ಕತಂಗಿಯರೇ ದೇವದಾಸಿ ವ್ಯವಸ್ಥೆಯೊಳಗೆ ಸಿಕ್ಕು ನಲುಗುತ್ತಿದ್ದರೂ ಅವರೆಂದೂ ಆ ಕುರಿತಂತೆ ತಲೆಕೆಡಿಸಿಕೊಂಡಿಲ್ಲ.

❑ **ಅಂದರೆ ನಿಮ್ಮ ಅರ್ಥದಲ್ಲಿ ಶೋಷಿತ ಸಮುದಾಯಗಳಿಂದ ಬಂದಂತಹ ರಾಜಕೀಯ ನಾಯಕ, ನಾಯಕಿಯರು ಅವರ ಕುರಿತಂತೆ ವಿಶೇಷ ಆಸಕ್ತಿ ತೋರಿಸುತ್ತಿಲ್ಲ ಎಂತಲೆ?**

ಖಂಡಿತವಾಗಿಯೂ ಹೌದು. ೧೯೭೨ರಲ್ಲಿ ನಾನು ಪ್ರಾರಂಭಿಸಿದ್ದ ಹೈಸ್ಕೂಲಿನ ಪರ್ಮಿಷನ್ ತೆಗೆದುಕೊಳ್ಳಲಿಕ್ಕೆ ಅಂದಿನ ಶಿಕ್ಷಣ ಸಚಿವರಾಗಿದ್ದ ಮೊಯಿಲಿಯವರ ಭೇಂಬರಿಗೆ ಹೋಗಿದ್ದೆ. ಅಲ್ಲಿ ಅತ್ಯುನ್ನತ ಪದವಿ ಪಡೆದುಕೊಂಡಿದ್ದ ವಕೀಲರು ನನ್ನನ್ನು ಮಾತನಾಡಿಸಿದರು. ಅವರು ದಲಿತರಾಗಿದ್ದರು. ನಾನು ಬಂದ ಕಾರಣವನ್ನು ಕೇಳಿದರು. 'ಹೈಸ್ಕೂಲು ಮಂಜೂರಾತಿಗಾಗಿ ಬಂದಿರುವೆ' ಎಂದ ತಕ್ಷಣ ಒಮ್ಮಿಂದೊಮ್ಮೆಲೆ ಅಬ್ಬರಿಸಿದರು 'ಈ ಮನುಷ್ಯ ದಲಿತರ ಉದ್ಧಾರ ಮಾಡತೀನಿ ಅಂತ್ಹೇಳಿ ಅವರ್ನ ದಾರಿತಪ್ಪಿಸಾಕ ಬಂದಾನ. ಅವರಿಗಿ ಶಾಲಿ ಕಲಿಸ್ತೀನಿ ಅಂತ ಮುಂದ ಬಂದಾನ. ಕಲಿತ್ರ ಅವರು ಮುಂದ ನಿರುದ್ಯೋಗಿಗಳಾಗತಾರ ..... ಅವರೇನು ಹಮಾಲಿ ಮಾಡಬೇಕಾ, ಇವ್ರು ಗೌಡ್ರ ಮಂದಿ ನಮ್ಮ ಮಕ್ಕಳು ಹಮಾಲಿ ಮಾಡಬೇಕಂತ ಇಂಥ ವ್ಯವಸ್ಥೆ ಹುಟ್ಟುಹಾಕಿದರು. ನಮ್ಮ ಜನಾಂಗದಲ್ಲಿ ಅಕ್ಕತಂಗಿಯರು, ತಾಯಂದಿರು ದೇವದಾಸಿಯರಾಗಿ ದಂದೆ ಮಾಡ್ತಾರ. ಅದರೊಳಗೆ ಏನು ತಪ್ಪಿದೆ? ಅದು ನಮ್ಮ ಹೆಣ್ಣುಮಕ್ಕಳ ಜನ್ಮಸಿದ್ಧ ಹಕ್ಕು. ಅದರ ಮೂಲಕವೇ ನಮ್ಮ ಒಂದೊಂದು ಕುಟುಂಬ ಬದುಕಿವೆ. ನಮ್ಮ ಹೆಣ್ಣುಮಕ್ಕಳು ಈ ದಂದಾ ಬಿಟ್ಟರೆ ನಾವೇನು ಉಪವಾಸ ಸಾಯಬೇಕಾ? ಇವರು ನಮಗೆ ಊಟಕ್ಕೆ ಹಾಕ್ತಾರಾ?' ಹೀಗೆ ಎಗ್ಗಿಲ್ಲದೆ ಮಾತನಾಡಿದರು. ಅವರ ಮಾತಿನಿಂದ ಮೊಯಿಲಿಯವರ ಮುಖ ಒಮ್ಮಿಂದೊಮ್ಮೆಲೆ ಕಪ್ಪಿಟ್ಟಿತು. 'ನೀವು ದಲಿತರು. ಬಹುದೊಡ್ಡ ವಕೀಲರು. ಈ ರೀತಿ ನೀವು ಮಾತನಾಡಬಾರದು. ನಿಮ್ಮ ಹೆಣ್ಣುಮಕ್ಕಳ ನೋವನ್ನು ಅರ್ಥಮಾಡಿಕೊಳ್ಳದಿದ್ದರೆ ಹೇಗೆ? ಅವರ ಬಿಡುಗಡೆಗಾಗಿ ನಿಮ್ಮಂಥವರು ನಿರಂತರ ಹೋರಾಡಬೇಕು. ಅದನ್ನು ಮಾಡುವುದನ್ನು ಬಿಟ್ಟು ಇಂತಹ ಘನವಾದ ಕೆಲಸವನ್ನು ನಿರ್ವಹಿಸುತ್ತಿರುವ ಮೇಲ್ವರ್ಗದ ವ್ಯಕ್ತಿಯನ್ನೇಕೆ ದೂರುತ್ತೀರಿ?' ಎಂದು ಬೈಯ್ದು ನನ್ನ ಕೆಲಸವನ್ನು ಮಾಡಿಕೊಟ್ಟರು. ನನ್ನ ಶಾಲೆಗೆ ಮಂಜೂರಾತಿ ಸಿಕ್ಕಿದ್ದು ಪೇಜಾವರಮಠದ ಸ್ವಾಮಿಜಿಯವರಿಂದ. ಪಾಟೀಲರು ದೇವದಾಸಿಯರ ಮಕ್ಕಳಿಗೆಂದು ಶಾಲೆ ತೆರೆಯುವ ವಿಚಾರವನ್ನು ಇಟ್ಟುಕೊಂಡಿದ್ದಾರೆ. ಆ ಸಂಸ್ಥೆಯನ್ನು ನಾನು ನೋಡಿ ಬಂದಿದ್ದೇನೆ. ದೇವದಾಸಿಯರ ಮಕ್ಕಳಿಗೆ ಇಂತಹ ಶಾಲೆಯ ಅವಶ್ಯಕತೆಯಿದೆ. ಅದನ್ನು ಮಂಜೂರಾತಿ ಮಾಡಿ' ಎಂದು ಅವರೇ ಮೊಯಿಲಿ ಸಾಹೇಬರಿಗೆ ತಿಳಿಸಿದ್ದರು. ಅಂದರೆ ಮೇಲ್ವರ್ಗದ ಜನರಿಗೆ ಈ ಜನ ಮೇಲೆ ಬರಲಿ ಎನ್ನುವ ಕಾಳಜಿಯಿದೆ.

ಆದರೆ ಈ ಕಳಕಳಿ ಅದೇ ವರ್ಗದಿಂದ ಬಂದ ಜನತೆಗಿಲ್ಲ. ನಮ್ಮ ಹೆಣ್ಣುಮಕ್ಕಳು ಸುಧಾರಿಸಿದರೆ ನಮ್ಮ ಜೀವನವೇ ಹಾಳಾಗುತ್ತದೆಯೇನೋ ನಮ್ಮ ಬಾಳುವೆ ಗತಿಗೆಡುತ್ತವೆಯೋನೋ ಎನ್ನುವ ಹೆದರಿಕೆ ಅವರಿಗಿದೆ. ಯಾಕೆ ಹೀಗೆ ಅವರು ಆಡುತ್ತಾರೆಂದರೆ ಅದು ಅವರ Existance ನ ಪ್ರಶ್ನೆ. ಅವರ ಬದುಕೇ ಅವರ ಹೆಣ್ಣುಮಕ್ಕಳ ದುಡಿಮೆಯ ಆಧಾರದ ಮೇಲೆ ನಿಂತಿದೆ. ಅವರ ಹೆಣ್ಣುಮಕ್ಕಳು ಪ್ರತಿದಿನ ಐವತ್ತು ರೂಪಾಯಿಗಳನ್ನು ಕೊಡದೆ ಇದ್ದರೆ, ಅವರ ಮನೆಯವರೆಲ್ಲರೂ ಅಂದು ಉಪವಾಸವಿರಬೇಕಾಗುತ್ತದೆ. ದಲಿತವರ್ಗಕ್ಕಾಗಿ ಸರಕಾರ ಐವತ್ತು ವರ್ಷಗಳಲ್ಲಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆಯಾದರೂ ಅವುಗಳಾವುವೂ ಯಶಸ್ವಿಯಾಗಿಲ್ಲ. ಅವರಿಗೆ ನಾವು F ish ಕೊಟ್ಟಿದ್ದೇವೆಯೇ ಹೊರತು How to F ish ಎನ್ನುವುದನ್ನು ಕಲಿಸಿಕೊಟ್ಟಿಲ್ಲ. ದುಡಿಮೆ ಗೌರವವನ್ನು ಅವರಿಗೆ ನಾವೆಂದೂ ಹೇಳಿಕೊಡಲಿಲ್ಲ. ಅಂದಿನ ದಿನಕ್ಕೆ ಎಷ್ಟೋ ಬೇಕೋ ಅಷ್ಟನ್ನು ಮಾತ್ರ ಕೊಟ್ಟು, ಅವರನ್ನು ಬಳಸಿಕೊಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಅವರು ಪರಾವಲಂಬಿಗಳಾಗಿಯೇ ಬದುಕಿರುವರು. ಪರಾವಲಂಬಿತನದಲ್ಲಿದ್ದ ಅವರೆಂದೂ ತಮ್ಮ ಮಗಳನ್ನು ಅಥವಾ ತಾಯಿಯನ್ನು ಅಥವಾ ಅಕ್ಕತಂಗಿಯರನ್ನು ಸಮಾಜ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬುದರ ಕುರಿತು ಚಿಂತಿಸಲಿಲ್ಲ. ಸಂಜೆ ಊಟ, ಮುಂಜಾನೆ ಊಟದ ಕುರಿತು ಆಲೋಚಿಸಿದರೇ ಹೊರತು, ತಮ್ಮ ಮನೆಯ ಹೆಣ್ಣುಮಕ್ಕಳ ಮರ್ಯಾದೆಯ ಕುರಿತು ಯೋಚಿಸಲಿಲ್ಲ. ದುರ್ದೈವದಿಂದ ಅವರು ಈ ಮಾನಸಿಕ ಸ್ಥಿತಿಯಲ್ಲಿರುವರು. ಇದಕ್ಕೆ ಸಮಾಜ ಹಾಗೂ ಸರಕಾರಗಳೆರಡೂ ಕಾರಣವಾಗಿದೆ. ಗೌರವದ ವೃತ್ತಿಯನ್ನು, ಕಾಯಕದ ಗೌರವವನ್ನು ನಾವು ಅವರಿಗೆ ಕಲಿಸಿಕೊಡಲೇ ಇಲ್ಲ. ನಿರಂತರವಾಗಿ ಅವರನ್ನು Vote Catching ಸ್ಥಿತಿಯಲ್ಲಿ ಇಟ್ಟುಕೊಂಡಿದ್ದೇವೆ.

❑ **ದೇವದಾಸಿಯರಿಗೆ ಹೊಲಿಗೆ, ಕಸೂತಿ, ಹೈನುಗಾರಿಕೆ ಮೊದಲಾದ ಸ್ವಯಂ ಉದ್ಯೋಗವನ್ನು ಹೇಳಿಕೊಡುತ್ತಿದೆ ನಿಜ. ಆದರೆ ಅವುಗಳು ಎಷ್ಟರಮಟ್ಟಿಗೆ ಅವರಿಗೆ ಆರ್ಥಿಕ ಬೆಂಬಲವನ್ನು ಸೂಚಿಸುತ್ತದೆ?**

ಈ ದೇಶದಲ್ಲಿ ಉದ್ಯೋಗವನ್ನು ಹೇಳಿಕೊಡುವಂತಹ ಬಹಳಷ್ಟು ಯೋಜನೆಗಳು ವಿಫಲವಾಗಿವೆ. ಇದಕ್ಕೆ ಕಾರಣವೇನೆಂದರೆ ಮೊದಲನೆಯದಾಗಿ ಅವರಿಗೆ ಪ್ಲೇಸ್‌ಮೆಂಟ್ ಇಲ್ಲ. ಎರಡನೆಯದಾಗಿ ಅವರು ತಯಾರಿಸಿದಂತಹ ವಸ್ತುಗಳಿಗೆ ಸುವ್ಯವಸ್ಥಿತವಾದ ಮಾರ್ಕೆಟಿಂಗ್ ಇಲ್ಲ. ಹೀಗಾಗಿ ಸಿದ್ಧಪಡಿಸಿದ ವಸ್ತುಗಳು ಯೋಗ್ಯ ಬೆಲೆಗೆ ಮಾರಾಟವಾಗದಿದ್ದರೆ, ಅವಳ ಕೆಲಸ ಅಲ್ಲಿಗೆ ನಿಂತು ಹೋಗುತ್ತದೆ. ಹ್ಯಾಂಡಲೂಮ ಕಾರ್ಪೊರೇಷನ್ ವತಿಯಿಂದ ೩೦ ಜನ ದೇವದಾಸಿಯರಿಗೆ ನೆಯ್ಗೆ ಕೆಲಸವನ್ನು ಹೇಳಿಕೊಟ್ಟೆವು. ತಿಂಗಳವರೆಗೆ ಟ್ರೈನಿಂಗ್ ನೀಡಿದೆವು. ಬನಹಟ್ಟಿ, ರಬಕವಿಯಿಂದ ನೂಲನ್ನು ತರಸಿಕೊಟ್ಟೆವು. ನೆಯ್ಗೆ ಬಟ್ಟೆಗೆ ಬೇಡಿಕೆ ಬಂದಾಗ' ನೂಲನ್ನು ತರಿಸಬೇಕು. ಅದನ್ನು ನೆಯ್ದು ಮಾರುಕಟ್ಟೆಗೆ ತರಲು ಮತ್ತೆ ಒಂದೆರಡು ತಿಂಗಳುಗಳು ಬೇಕು. ಮಾರಾಟಕ್ಕೆಂದು ಬಟ್ಟೆಯನ್ನು

ತೆಗೆದುಕೊಂಡು ಹೋದಂತಹ ವ್ಯಕ್ತಿ ಅವರಿಗೆ ದುಡ್ಡನ್ನು ತಲುಪಿಸಲು ಮತ್ತೆ ಒಂದೆರಡು ತಿಂಗಳುಗಳನ್ನು ತೆಗೆದುಕೊಳ್ಳಬಹುದು. ಹೀಗಾಗಿ ನಾವು ಹಾಕಿದ ಯೋಜನೆ ಎರಡು ವರ್ಷಗಳ ನಂತರ ಸಂಪೂರ್ಣ ಹಾಳಾಗಿ ಹೋಯಿತು. ಅದನ್ನು ನಂಬಿದವರಿಗೆ ಉಪವಾಸವೇ ಎದುರಾಯಿತು. ಇಂಥವೇ ಸ್ವಯಂ ಉದ್ಯೋಗಗಳನ್ನು ಕುಟುಂಬಸ್ಥ ಹೆಣ್ಣು ಮಕ್ಕಳಿಗೆ ಕಲಿಸಿದರೆ ನಿಮಗೆ ಬೇರೆ ರೀತಿಯ ಫಲಿತಾಂಶ ಎದುರಾಗುತ್ತದೆ. ಅವರಲ್ಲಿ ಸ್ಪರ್ಧಾತ್ಮಕ ಗುಣವಿರುತ್ತದೆ. ಅವರು ದಿನವೊಂದಕ್ಕೆ ೮೦ ರಿಂದ ೧೦೦ ರೂಪಾಯಿಗಳವರೆಗೆ ಗಳಿಸುತ್ತಾರೆ. ದೇವದಾಸಿಯರು ಹೆಚ್ಚೆಂದರೆ ೩೦ ರಿಂದ ೪೦ ರೂಪಾಯಿಗಳನ್ನು ಗಳಿಸುತ್ತಾರೆ. ಕಾರಣವೆಂದರೆ ನಿರಂತರವಾಗಿ ದೇವದಾಸಿ ವ್ಯವಸ್ಥೆಯೊಳಗೆ ನಲುಗಿದ ಅವರು, ದೈಹಿಕವಾಗಿ ಅನೇಕ ತೊಂದರೆಗಳನ್ನು ಎದುರಿಸುತ್ತಿರುತ್ತಾರೆ. ಅದಕ್ಕಾಗಿ ಅವರಿಂದ ಈ ತರಹದ ದೈಹಿಕ ಶ್ರಮದ ಕೆಲಸಗಳನ್ನು ನಿರ್ವಹಿಸಲಾಗುವುದಿಲ್ಲ. ಅದರಿಂದಾಗಿ ಅವರ ಉತ್ಪಾದನೆ ಕುಂಠಿತವಾಗುತ್ತದೆ. ಉತ್ಪಾದನೆ ಕಡಿಮೆಯಾದಾಗ ಅದರ ಮಾರುಕಟ್ಟೆಯ ಪ್ರಶ್ನೆಯೇ ಏಳುವುದಿಲ್ಲ. ಹೀಗಾಗಿ ಹಿಡಿದ ಇಂತಹ ಉದ್ಯೋಗಗಳನ್ನು ದೇವದಾಸಿ ಮಧ್ಯದಲ್ಲಿಯೇ ಕೈಬಿಡುತ್ತಾಳೆ. ಆತ್ಮಗೌರವದಿಂದ ಬದುಕಬೇಕೆನಿಸದರೂ ದೇಹಸ್ಥಿತಿ ಅವಳೊಂದಿಗೆ ಸಹಕರಿಸುವುದಿಲ್ಲ. ಈ ಮೊದಲೇ ಹೇಳಿದಂತೆ ಅವಳಿಗೆ ಉದ್ಯೋಗವನ್ನು ಹೇಳಿಕೊಟ್ಟರೆ ಸಾಲದು. ಅದಕ್ಕೆ ಪ್ಲೇಸ್‌ಮೆಂಟ್, ಮಾರ್ಕೆಟಿಂಗ್ ಎರಡನ್ನೂ ಒದಗಿಸಿಕೊಡಬೇಕು. ಅವಳು ಮರ್ಯಾದೆಯಿಂದ ಬದುಕಬೇಕೆಂದರೂ, ಸಾಮಾಜಿಕ ಪರಿಸರಗಳು ಅದಕ್ಕೆ ಸಹಕರಿಸುವುದಿಲ್ಲ. ಮೀನನ್ನು ಕೊಟ್ಟು ಆ ದಿನ ಸಂಜೆ ಅಡಿಗೆ ಮಾಡಲಿಕ್ಕೆ ಹೇಳಿಕೊಟ್ಟಿದ್ದೇವೆ ವಿನಃ ಮೀನು ಹಿಡಿಯುವುದನ್ನು ಕಲಿಸಿಕೊಡಲಿಲ್ಲ. ಸ್ವಾತಂತ್ರ್ಯ ಬಂದ ನಂತರ ರೂಪಗೊಂಡ ಸರಕಾರ ಐವತ್ತು ವರ್ಷಗಳ ತನ್ನ ಸುದೀರ್ಘ ಆಡಳಿತದ ಅವಧಿಯಲ್ಲಿ ಒಂದು ಮೀನನ್ನು ಕೊಟ್ಟು, ಒಂದು ಓಟನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದೆ ವಿನ: ಮರ್ಯಾದೆಯಿಂದ ಸ್ವತಂತ್ರವಾಗಿ ಬದುಕುವ ಪರಿಪಾಠವನ್ನು ಹೇಳಿಕೊಡಲಿಲ್ಲ. ಈ ಕುರಿತಂತೆ ಸರಕಾರದೊಂದಿಗೆ ಸಾಕಷ್ಟು ಮಾತುಕತೆ ನಡೆಸಿದ್ದೇನೆ.

- **ದೇವದಾಸಿಯರಿಗಾಗಿ ಸರಕಾರ ಹಮ್ಮಿಕೊಂಡ ಯೋಜನೆಗಳು ಫಲಪ್ರದವಾಗಬೇಕಾದರೆ ಅವರು ಆತ್ಮಗೌರವದಿಂದ ಬದುಕಬೇಕಾದರೆ, ಯಾವ ರೀತಿಯ ಕಾರ್ಯಕ್ರಮಗಳನ್ನು ಸರಕಾರ ರೂಪಿಸಿಕೊಳ್ಳಬೇಕಿದೆ?**

ನಿಮ್ಮ ಈ ಪ್ರಶ್ನೆಗೆ ಉತ್ತರಿಸುವುದು ಅಷ್ಟು ಸುಲಭವಲ್ಲ. ತುಂಬ ಕಠಿಣವಾದುದನ್ನು ಕೇಳುತ್ತಿರುವಿರಿ. ಒಟ್ಟು ವ್ಯವಸ್ಥೆಯನ್ನು ಬದಲಿಸುವಂತಹ ಬಹುದೊಡ್ಡ ಕ್ರಾಂತಿ ಇಲ್ಲಿ ಜರುಗಬೇಕಿದೆ. ಇದು ಒಬ್ಬ ವ್ಯಕ್ತಿಯಿಂದಾಗಲಿ, ಸರಕಾರದಿಂದಾಗಲಿ ಸಾಧ್ಯವೆಂಬುದರಲ್ಲಿ ನನಗೆ ವಿಶ್ವಾಸವಿಲ್ಲ. ಯಾಕೆಂದರೆ ಅದರ ಸ್ವರೂಪ ಅಷ್ಟು ಸೀಮಿತವಾಗಿಲ್ಲ. ಸಮಾಜದೊಳಗಿನ ಜನರ ಮನೋಭಾವವೇ ಬದಲಾಗಬೇಕು. ಅದಕ್ಕಾಗಿ ನಾವು ನೀವೆಲ್ಲ ಅನೇಕ ವರ್ಷಗಳವರೆಗೆ ಪ್ರಯತ್ನಿಸಬೇಕು. ಈ ಕೆಲಸಕ್ಕಾಗಿ ಹಲವಾರು Dedicated

Workers ಅಗತ್ಯವಿದೆ. ಅಂದಾಗ ಮಾತ್ರ ಅವರಿಗೆ ಆತ್ಮಗೌರವದಿಂದ ಬದುಕುವ ವಾತಾವರಣವನ್ನು ಕಲ್ಪಿಸಲು ಸಾಧ್ಯವಾಗುತ್ತದೆ.

ದೇವದಾಸಿಯರನ್ನು ಕೇಂದ್ರವಾಗಿಟ್ಟುಕೊಂಡು ನಾನು ಮಾಡಿದ ಕೆಲಸಗಳಲ್ಲಿ ನನಗೆ ನಿರಾಶೆ ಎದುರಾದದ್ದೇ ಹೆಚ್ಚು. ನೂರು ದೇವದಾಸಿಯರನ್ನು ಬದಲಾಯಿಸಲು ಪ್ರಯತ್ನಿಸಿದರೆ ಅವರಲ್ಲಿ ಹೆಚ್ಚೆಂದರೆ ಇಬ್ಬರು, ಮೂವರು ಸುಧಾರಿಸಬಹುದು. ಅವರು ಅಂತಹದೇ ವಾತಾವರಣದಲ್ಲಿ ಬೆಳೆದು ಬಂದಿದ್ದರಿಂದ ಆ ಛಾಯೆಯಿಂದ ಬಿಡಿಸಿಕೊಳ್ಳಲು, ಬದಲಾಗಲು ಪ್ರಯತ್ನಿಸುವುದಿಲ್ಲ. ಅದಕ್ಕಾಗಿಯೇ ನಾನು ಅವರ ಮಕ್ಕಳ ಮೇಲೆ ಹೆಚ್ಚು ಲಕ್ಷ್ಯವನ್ನು ಕೇಂದ್ರೀಕರಿಸಿದ್ದೇನೆ. ಎಳೆವಯಸ್ಸಿನಲ್ಲಿ ಬದಲಾಯಿಸುವುದು ಬಹಳ ಸುಲಭ. ಒಳ್ಳೆಯ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣವನ್ನು ನೀಡಿದರೆ ಅವರುಗಳು ಖಂಡಿತವಾಗಿ ಬದಲಾಗುತ್ತಾರೆ. ಅದಕ್ಕಾಗಿ ನಾನು ರೆಸಿಡೆನ್ಸಿಯಲ್ ಸ್ಕೂಲ್ ತೆರೆದಿರುವೆ. ಅದರ ಮೂಲ ಉದ್ದೇಶ ಮಕ್ಕಳ ಮನೋಭಾವವನ್ನು ಬದಲಾಯಿಸುವುದಾಗಿದೆ. ಬದಲಾವಣೆ ಬಯಸುವ ಮೊದಲು ನಾವು ಅವರ ಮಕ್ಕಳ ಭವಿಷ್ಯದ ಕಡೆಗೆ ಗಮನವನ್ನು ಹರಿಸಬೇಕಾಗಿದೆ. 'ನಿಮ್ಮಿಂದಾಗಿಯೇ ನಾನು ತಲೆತಗ್ಗಿಸಿ ಬದುಕಬೇಕಾಗಿದೆ. ಇದರಿಂದ ಬಿಡುಗಡೆಗೊಂಡು ಹೊಸ ಬಾಳುವೆ ಸಾಗಿಸೋಣ' ಎಂದು ಶಿಕ್ಷಣ ಪಡೆದ ಮಗು ಕೇರಿಯಲ್ಲಿ ದೇವದಾಸಿಯರಾಗಿ ಬದುಕುತ್ತಿರುವ ತನ್ನ ಅಕ್ಕತಂಗಿಯರಿಗೆ, ತಾಯಂದಿರಿಗೆ ಬುದ್ಧಿವಾದವನ್ನು ಯಾವಾಗ ಹೇಳುತ್ತದೆಯೋ ಅಂದು ಮಾತ್ರ ಇಂತಹ ವ್ಯವಸ್ಥೆ ಬದಲಾಗಲು ಸಾಧ್ಯ. ಹೊರಗಿನಿಂದ ಬಂದಂತಹ ನಮ್ಮಂತಹ ಜನರಿಂದ ಇದು ಸಾಧ್ಯವಿಲ್ಲ. ಈ ಹೋರಾಟವನ್ನು ಜೀವಂತವಾಗಿ ಇಟ್ಟುಕೊಂಡು ಹೋಗಲು ಸ್ವಲ್ಪ Contribution ಮಾಡಬಹುದೇ ಹೊರತಾಗಿ, ಅವರನ್ನು ಬದಲಾಯಿಸಲು ಆಗುವುದಿಲ್ಲ. ಅಂತಹ Drastic ಆದಂತಹ ಬದಲಾವಣೆ ಆ ಜನರಲ್ಲಿಯೇ ಹುಟ್ಟಿಕೊಳ್ಳಬೇಕು.

- **ನಾನು ಅನೇಕ ದೇವದಾಸಿಯರನ್ನು ಸಂದರ್ಶಿಸಿದ್ದೇನೆ. ದೇವದಾಸಿಯರಲ್ಲಿ ಅವರದೇ ಆದಂತಹ ಪಾವಿತ್ರ್ಯ, ಪ್ರೀತಿ, ಆತ್ಮಗೌರವವಿರುವುದನ್ನು ಗುರುತಿಸಿದ್ದೇನೆ. ಅವರ ಕುರಿತು ಅಷ್ಟು ಹಗುರವಾದ ನಿಲುವನ್ನು ತಾಳುವುದು ಸಾಧುವಲ್ಲವೆನಿಸುತ್ತದೆ. ಸರಕಾರ ಹಾಗೂ ಖಾಸಗಿ ಸಂಸ್ಥೆಗಳು ನಿಜವಾದ ಅರ್ಥದಲ್ಲಿ ಅವರಿಗಾಗಿ ಪರಿಶ್ರಮಿಸುತ್ತಿಲ್ಲ. ಸುಮ್ಮನೆ ಅವರು ಬದಲಾಗುವುದಿಲ್ಲ ಎಂದು ದೂರಿದರೆ ಸಾಲದು. ಜಾಗತೀಕರಣ, ಆಧುನೀಕರಣ ಹಾಗೂ ಕಂಪೂಟರೀಕರಣದಂತಹ ಇಂದಿನ ಯುಗದಲ್ಲಿ ಹೊಲಿಗೆ, ಕೋಳಿಸಾಕಾಣಿಕೆಯಂತಹ ಆರ್ಥಿಕ ಭದ್ರತೆಯನ್ನು ಮೂಡಿಸದ ಉದ್ಯೋಗಗಳನ್ನು ಹೇಳಿಕೊಡುವ ಸರಕಾರದ ಕ್ರಮ ಎಷ್ಟರಮಟ್ಟಿಗೆ ಸೂಕ್ತವೆನಿಸುತ್ತದೆ?**

ತಾವು ಹೇಳಿದ್ದಕ್ಕೆ In Principal I accept it. ಅವರು ಎಂತಹ ಅಶಿಕ್ಷಿತರಾದರೂ ಕೆಟ್ಟ ಕೌಟುಂಬಿಕ ಹಿನ್ನೆಲೆಯಲ್ಲಿ ಬಂದಿದ್ದರೂ. ಸಾಮಾಜಿಕ ಪರಿಸರದಲ್ಲಿ ಆತ್ಮಗೌರವದಿಂದ

ಬದುಕಬೇಕೆಂಬ ಹಂಬಲವಿರುತ್ತದೆ. ಅವರಲ್ಲಿಯ ಈ ಹಂಬಲವನ್ನು Supress ಮಾಡಿದ್ದು, Defeatist mentality ಯನ್ನು ಹುಟ್ಟುಹಾಕಿದ್ದೇವೆ. ಮರ್ಯಾದೆಯಿಂದ ಬದುಕಬೇಕೆಂಬ ಹಂಬಲ ಅವರಲ್ಲಿದ್ದರೂ, ಈ ಸಮಾಜ ಅದಕ್ಕೆ ಅವಕಾಶ ನೀಡುತ್ತಿಲ್ಲ. ಅದಕ್ಕಾಗಿ ಒಳ್ಳೆಯ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಪ್ರಧಾನ ಧಾರೆಯಲ್ಲಿ ಅವರಿಗೆ ಒಳ್ಳೆಯ ಸ್ಥಾನವನ್ನು ಕಲ್ಪಿಸುವ ಪ್ರಯತ್ನ ನಡೆಯಬೇಕಿದೆ. ಸರಕಾರದವರಾಗಲಿ, NGO ದವರಾಗಲಿ, ನಾವೆಲ್ಲ ಸೇರಿ ಒಂದು ತಪ್ಪನ್ನು ಮಾಡುತ್ತಿದ್ದೇವೆ. ಹೊಲಿಗೆ, ಕೈಮಗ್ಗದ ಕೆಲಸ ಮೊದಲಾದವುಗಳನ್ನು ಕಲಿಸಿಕೊಡುತ್ತಿದ್ದೇವೆ. ಆದರೆ, ನೀವು ಹೇಳಿದಂತೆ ನಾವೆಲ್ಲ ಇದನ್ನು ಅವಲಂಬಿಸಿ ಅವಳಿಗೆ ಬದುಕು ಸಾಗಿಸಲು ಸಾಧ್ಯವೇ ಎನ್ನುವುದರ ಕುರಿತು ಯೋಚಿಸುತ್ತಿಲ್ಲ. NGO ಕ್ಕೆ ಸೀಮಿತ ವ್ಯವಸ್ಥೆಯಿರುತ್ತದೆ. NGO ಗಳು ಇಂತಹ ವ್ಯಕ್ತಿಗಳಿಗೆ ಸಹಾಯ ಮಾಡಬೇಕಿದ್ದರೆ ಸರಕಾರದಿಂದ ಬರುವ ಫಂಡ್‌ಗಳನ್ನು ಇಲ್ಲವೆ ದಾನಿಗಳನ್ನು ನಿರೀಕ್ಷಿಸುತ್ತಿರುತ್ತದೆ. ಫಂಡ್ ಕೊಡುವಂತವರು ಕೆಲವೊಂದು ನಿರ್ದಿಷ್ಟ ಯೋಜನೆಗಳನ್ನು ಹಾಕಿಕೊಂಡೇ ಬಂದಿರುತ್ತಾರೆ. ಹೀಗೆ ಹಾಕಿಕೊಂಡ ನಿಖರವಾದ ಯೋಜನೆಗಳನ್ನು Execute ಮಾಡಲು ಹೋದಾಗ ನೀವು ಹೇಳಿದ ಈ ಎಲ್ಲ ಸಮಸ್ಯೆಗಳು ಉದ್ಭವವಾಗುತ್ತವೆ. ದೇವದಾಸಿಯರಿಗೆ ಆರ್ಥಿಕ ಬೆಂಬಲವನ್ನು ಬಲಪಡಿಸುವ ಸ್ವಯಂ ಉದ್ಯೋಗಗಳನ್ನು ಗುರುತಿಸುವ, ರೂಪಿಸುವ ಜವಾಬ್ದಾರಿಯನ್ನು ಸರ್ಕಾರ ಹಾಗೂ ಸಂಘಸಂಸ್ಥೆಗಳು ವಹಿಸಿಕೊಳ್ಳಬೇಕಿದೆ.

- **ರಾಜಕೀಯ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳಾ ಮೀಸಲಾತಿಯ ಕುರಿತು ಚರ್ಚೆ ನಡೆಯುತಕ್ಕಂತಹ ಈ Critical ಹಂತದಲ್ಲಿಯೇ ನನಗೆ ಇನ್ನೊಂದು ಆತಂಕ ಕಾಡುತ್ತಿದೆ. ಶಿಕ್ಷಣಕ್ಕೆ ಹೆಚ್ಚು ಮುಖಾಮುಖಿಯಾದವರೆಂದರೆ ಮೇಲ್ಜಾತಿಯ ಸ್ತ್ರೀಯರು. ಇದರ ಸದುಪಯೋಗವನ್ನು ಪಡೆದುಕೊಳ್ಳುವವರು ಅವರು. ಇದರಿಂದಾಗಿ ಸಮಗ್ರ ಮಹಿಳಾ ಸಮುದಾಯಕ್ಕೆ ಸಮಾನ ರೀತಿಯ ನ್ಯಾಯ ಸಿಗಲಾರದು ಎನಿಸುವುದಿಲ್ಲವೆ?**

ನೀವು ಹೇಳಿದ ಮಾತು ಅಕ್ಷರಶ: ನಿಜ. ಹಿಂದುಳಿದ ಜನಾಂಗದ ಮುಂದುವರೆದವರು ತಮ್ಮ ಜನಾಂಗದ ನೋವಿನ ಚರಿತ್ರೆಯ ಕುರಿತು ಮೌನ ವ್ರತಾಚರಣೆ ಮಾಡುತ್ತಾರೆ. ಅನೇಕರು ತಮ್ಮ ಜನಾಂಗದವರನ್ನು ತಾವೇ ಶೋಷಿಸುತ್ತಾರೆ. ತಮ್ಮಂತೆ ಶೋಷಿತರಾದವರಿಗೆ ಸಹಾಯ ಮಾಡಬೇಕೆಂಬ ಪರಿಕಲ್ಪನೆ ಅವರಲ್ಲಿಲ್ಲ. ಹೆಣ್ಣುಮಕ್ಕಳಿಗೆ ಮೀಸಲಾತಿ ಇಟ್ಟರೆ ಮೇಲೆ ಹೇಳಿದ ಪುರುಷರು ಮಾಡುವ ರಾಜಕಾರಣವನ್ನು, ಮೇಲ್ಜಾತಿಯ ಮಹಿಳೆಯರೂ ಮಾಡುವ ಸಾಧ್ಯತೆಯಿದೆ. ಆದರೆ ಇಂತಹ ಸಾಧ್ಯತೆಗಳಿದ್ದಾಗ್ಯೂ ಅಂತಹ ಬಹುದೊಡ್ಡ ಹಾಗೂ ಮಹತ್ವದ ಯೋಜನೆಯನ್ನು ಕೈಬಿಡಲಾಗುವುದಿಲ್ಲ. ಇಂದು ಪ್ರತಿಕ್ಷೇತ್ರದಲ್ಲಿಯೂ ಮಹಿಳಾ ಮೀಸಲಾತಿಯ ಪ್ರಯೋಗದ ಅಗತ್ಯತೆಯಿದೆ. ಅಂದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ. ಅದರಲ್ಲಿಯ Drawbacks ನೋಡುತ್ತ ಕುಳಿತುಕೊಳ್ಳಬಾರದು. ಸಮಗ್ರ ಮಹಿಳಾ ಕಲ್ಯಾಣದ ದೃಷ್ಟಿಯಿಂದ ಶೋಷಿತ

ಸಮುದಾಯಗಳಿಂದ ಬಂದಂತಹ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡುವುದು ಅನಿವಾರ್ಯ ಹಾಗೂ ಅಗತ್ಯವಾದುದಾಗಿದೆ.

❑ **ದೇವದಾಸಿಯರಿಗೆ ಹಾಗೂ ಅವರ ಮಕ್ಕಳಿಗೆ ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ವಿಶೇಷ ಮೀಸಲಾತಿ ಅಗತ್ಯವೆನಿಸುವುದಿಲ್ಲವೆ? ಈ ನಿಟ್ಟಿನಲ್ಲಿ ಸರಕಾರದ ಜೊತೆಗೆ ಏನಾದರೂ ಪ್ರಯತ್ನ ನಡೆಸಿರುವಿರಾ?**

ಈ ವಿಷಯದ ಕುರಿತಂತೆ ಸಾಕಷ್ಟು ಸಲ ಸರಕಾರದ ಜೊತೆಗೆ ನಾವೆಲ್ಲರೂ ಚರ್ಚಿಗಿಳಿದಿದ್ದೇವೆ. ನಮ್ಮ ಸರಕಾರ ಹಾಗೂ ಸಂಘಸಂಸ್ಥೆಗಳು ಸಮಸ್ಯೆ, ಶೋಷಣೆಯ ಕುರಿತಂತೆ ಸುದೀರ್ಘವಾಗಿ ಮಾತನಾಡುತ್ತವೆ. ಆದರೆ ಅವುಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಬಹಳಮಟ್ಟಿಗೆ ನಿರ್ಲಿಪ್ತಧೋರಣೆಯನ್ನು ತಾಳುತ್ತಾರೆ. ನಿಜವಾದ ಕಾಳಜಿಯಲ್ಲಿ ಇವರಾರೂ ಕೆಲಸ ಮಾಡುವುದಿಲ್ಲ. ಇದು ನಮ್ಮ ದುರ್ದೈವವಲ್ಲದೆ ಬೇರೇನಲ್ಲ. ಉದಾಹರಣೆಗೆ ಈ ಹಿಂದಿದ್ದ ಸರಕಾರ ದೇವದಾಸಿಯರ ಅಭಿವೃದ್ಧಿ ಕುರಿತಂತೆ ಸಾಕಷ್ಟು ಮಾತನಾಡಿತು. ಆದರೆ ಅದನ್ನು ಕಾರ್ಯರೂಪಕ್ಕಿಳಿಸಲಿಲ್ಲ. ಇಡೀ ದೇಶದಲ್ಲಿ ಪ್ರಪ್ರಥಮವಾಗಿ ದೇವದಾಸಿಯರ ಮಕ್ಕಳಿಗೆಂದೇ ತೆರೆದ ಶಾಲೆ ನಮ್ಮದು. ಇವೊತ್ತಿಗೂ ಅದು ತನ್ನ ಸ್ಥಾನಮಾನವನ್ನು ಉಳಿಸಿಕೊಂಡಿದೆ. ಇಂತಹ ಶಾಲೆಗೆ ಅನುದಾನವನ್ನು ನೀಡುವ ವಿಚಾರವನ್ನು ಸರಕಾರವು ಇಂದಿಗೂ ಮಾಡಿಲ್ಲ. ಹಿಂದುಳಿದ ವರ್ಗದ ಪರವಾಗಿ ನಡೆದಂತಹ ಹೊಸ ಪ್ರಯೋಗಗಳಿಗೆ ಸಹಾಯ ನೀಡಬೇಕಾದುದು ಮಾನವಧರ್ಮ. ನಾವೇನು ಸರಕಾರಕ್ಕೆ ಹೆಚ್ಚೇನೂ ಕೇಳಿಲ್ಲ. ಅಲ್ಲಿರುವ ಗುರುವರ್ಗಕ್ಕೆ ಪಗಾರವನ್ನು ಕೇಳಿದ್ದೇವೆ. ಇದರಿಂದಾಗಿ ಅವರ ಜೀವನಕ್ಕೆ ಒಂದು ರಕ್ಷಣೆ ಸಿಕ್ಕಂತಾಗುತ್ತದೆ. ಇಂಥ ಸಣ್ಣ ಸಹಾಯ ಮಾಡದಷ್ಟು ಸರಕಾರ ಅಸಹಾಯಕವಾಗಿದೆ. ಅದಕ್ಕಾಗಿ ಇಂಥ ಅಸಹಾಯಕ ಸರಕಾರವನ್ನು ನಂಬಿಕೊಂಡು ನಮ್ಮಂಥವರು ಈ ತರಹದ ಹೋರಾಟವನ್ನು ಎಷ್ಟು ದಿನ ಮುಂದುವರೆಸಲಾಗುತ್ತದೆ ಎಂಬುದನ್ನು ಕೂಡ ಚಿಂತಿಸಬೇಕಾಗುತ್ತದೆ. ದೇವದಾಸಿಯರಿಗೆ, ಅವರ ಮಕ್ಕಳಿಗೆ ವಿಶೇಷ ಮೀಸಲಾತಿಯನ್ನು ನೀಡಬಯಸತಕ್ಕಂಥ ಚಿಂತನಶೀಲರು ನಮ್ಮ ಸರಕಾರದಲ್ಲಿ ಬರಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ.

❑ **ನೀವು ದೇವದಾಸಿಯರ ಕುರಿತಂತೆ ಇತ್ತೀಚೆಗೆ ವಿಶೇಷ ಯೋಜನೆಗಳನ್ನೇನಾದರೂ ಹಾಕಿಕೊಂಡಿದ್ದೀರಾ?**

ನಮ್ಮ ಸಂಸ್ಥೆ ನಮಗೆ ಪ್ರತಿವರ್ಷ ಹೊಸಪಾಠಗಳನ್ನು ಕಲಿಸುತ್ತದೆ. ಆರಂಭದ ನಾಲ್ಕೈದು ವರ್ಷಗಳಲ್ಲಿ ದೇವದಾಸಿಯರ ಯೋಗಕ್ಷೇಮವನ್ನೇ ಕೇಂದ್ರವಾಗಿರಿಸಿಕೊಂಡು ಅನೇಕ ಯೋಜನೆಗಳನ್ನು ರೂಪಿಸಿದೆವು. ಅವುಗಳನ್ನು ಜಾರಿಯಲ್ಲಿ ತಂದೆವು ಕೂಡ. ಆದರೆ ದುರ್ದೈವವೆಂದರೆ ಅವುಗಳಾವುವು ಯಶಸ್ವಿಯಾಗಲಿಲ್ಲ. ಅವರ ಬದಲಾವಣೆ ತರಬೇಕೆಂದರೆ ನಾವು ಅವರ ಮಕ್ಕಳೆಡೆಗೆ ಹೆಚ್ಚಿನ ಗಮನಕೊಡಬೇಕೆಂಬ ಪಾಠವನ್ನು ಕಲಿತುಕೊಂಡೆವು. ದೇವದಾಸಿಯರನ್ನು ಬದಲಾಯಿಸಲು ನಾನು ಮಾಡಿದ ಪ್ರಯತ್ನವೇ ತಪ್ಪು. ಅವರನ್ನು

ಬದಲಾಯಿಸಲು ಸಾಧ್ಯವಿಲ್ಲ ಎಂಬುದನ್ನು ಕೆಲವು ವರ್ಷಗಳು ಕಳೆದ ನಂತರವೇ ಕಂಡುಕೊಂಡದ್ದು.

ಈಗಿನ ನಮ್ಮ ಅನುಭವದ ಪ್ರಕಾರ ಮಕ್ಕಳು ಎಸ್.ಎಸ್.ಎಲ್.ಸಿ.ಯವರೆಗೆ ಬಹಳ ಚೆನ್ನಾಗಿ ಓದುತ್ತಾರೆ. ಈ ಬಾರಿಯ ನಮ್ಮ ಮಕ್ಕಳ ಪರೀಕ್ಷಾ ಫಲಿತಾಂಶ ತಮಗೂ ಗೊತ್ತಾಗಿರಬಹುದು. ೫ಳ ಜನರು ಪರೀಕ್ಷೆಗೆ ಕುಳಿತುಕೊಂಡರೆ ೫ಳ ಜನರೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವರು. ಅದರಲ್ಲಿಯೇ ನನ್ನ ಮಗಳು ಇಡೀ ಕೇಂದ್ರಕ್ಕೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾಳೆ. ಇದು ನಿಜವಾಗಿಯೂ ಅಭಿಮಾನಪಡುವ ಸಂಗತಿ. ಎಸ್.ಎಸ್. ಎಲ್.ಸಿ. ಮುಗಿಸಿದ ತಕ್ಷಣ ನಾವು ಅವರನ್ನು ಹೊರಗಡೆ ಕಳುಹಿಸುತ್ತೇವೆ. ಅಲ್ಲಿ ಅವರು ಅನೇಕ ಪ್ರಲೋಭನೆಗಳಿಗೆ ಒಳಗಾಗಿ ಮಾನಸಿಕ ಸ್ಥಿಮಿತತೆಯನ್ನು, ಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಾರೆ. ಅದಕ್ಕಾಗಿ ಅವರಿಗೆ ಎಸ್.ಎಸ್.ಎಲ್.ಸಿ. ಮುಗಿಸಿದ ತಕ್ಷಣ ವೃತ್ತಿ ನಿರತ ಉದ್ಯೋಗಗಳನ್ನು ಕಲ್ಪಿಸಿಕೊಡುವ ಯೋಜನೆಯನ್ನು ಹಾಕಿಕೊಂಡಿದ್ದೇನೆ. ನರ್ಸಿಂಗ್ ಸ್ಕೂಲ್ ತೆಗೆಯುವ ವಿಚಾರವಿಟ್ಟುಕೊಂಡಿದ್ದೇನೆ. ಯಾಕೆಂದರೆ ನಮ್ಮ ಹೆಣ್ಣುಮಕ್ಕಳಲ್ಲಿ ನರ್ಸ್ ಆಗಬೇಕು, ಟೀಚರ್ ಆಗಬೇಕು ಎನ್ನುವ ಕನಸುಗಳಿರುತ್ತವೆ. ಇನ್‌ಫೋಸಿಸ್ ಕಂಪನಿಯ ಧರ್ಮದರ್ಶಿಯಾದಂತಹ ಸುಧಾಮೂರ್ತಿಯವರು ನಮಗೆ ಈ ವಿಚಾರವನ್ನು ಹೇಳಿದರು. ಗಂಡುಮಕ್ಕಳಿಗೆ NTTF ಇಲ್ಲವೆ Politechnical ಕೋರ್ಸ್‌ಗಳನ್ನು ಪ್ರಾರಂಭಿಸುವ ವಿಚಾರವನ್ನಿಟ್ಟುಕೊಂಡಿದ್ದೇವೆ. ಉದ್ಯೋಗದ ಕುರಿತಾಗಿ ನಿಶ್ಚಿತವಾದ ಭವಿಷ್ಯವಿದ್ದಂತಹ Technical Course ಗಳನ್ನು ತೆಗೆಯುವ ಯೋಜನೆಯಿದೆ. ಈ ಕುರಿತಂತೆ ಚಿಂತನೆ ನಡೆಸುತ್ತಿದ್ದೇವೆ. ಪ್ರೊಜೆಕ್ಟ್‌ಗಳಾಗಿ ರೂಪಿಸುತ್ತಿದ್ದೇವೆ. ಇದರಿಂದಾಗಿ ದೇವದಾಸಿಯರು, ಅವರ ಮಕ್ಕಳು ಗೌರವಯುತವಾದ ಜೀವನ ನಡೆಸಲು ಸಾಧ್ಯವಾಗುತ್ತದೆ.

❑ **ನಿಮ್ಮ ಯೋಜನೆಗಳ ಕುರಿತಂತೆ ನನಗೆ ಗೌರವವಿದೆ. ನಿಮ್ಮ ಮಾತನ್ನು ಕೇಳುತ್ತಿದ್ದಂತೆ ಒಂದು ಆತಂಕ ನನ್ನನ್ನು ತೀವ್ರವಾಗಿ ಕಾಡುತ್ತಿದೆ. ಹುಡುಗಿಯರಿಗೆ ನರ್ಸಿಂಗ್, ಹುಡುಗರಿಗೆ NTTF, Politechnical Course ಎಂದು ವಿಂಗಡಿಸಿ ಔದ್ಯೋಗಿಕ ತರಬೇತಿ ನೀಡುವುದು ಇವತ್ತಿನ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಉಚಿತವೆನಿಸುತ್ತದೆ?**

ಇದು ಹುಡುಗನಿಗೆ ಇದು ಹುಡುಗಿಗೆ ಎಂದು ವಿಂಗಡಿಸುತ್ತಿಲ್ಲ. ಹುಡುಗರು Male Nurse ಆಗಬಹುದು. ಅಲ್ಲಿ Gender ಪ್ರಶ್ನೆಯೇ ಏಳುವುದಿಲ್ಲ.

❑ **ಲಯನ್ಸ್, ರೋಟರಿ ಮೊದಲಾದ ಕ್ಲಬಿನಲ್ಲಿರುವ ಮಹಿಳೆಯರು ಜಾಹಿರಾತು ಹಾಗೂ ಸಿನಿಮಾದಲ್ಲಿ ಸ್ತ್ರೀಯರು ಅರೆಬೆತ್ತಲೆಯಾಗಿ ಕಾಣಿಸಿಕೊಳ್ಳುವುದನ್ನು ವಿರೋಧಿಸುತ್ತಾರೆ. ಅದರರ್ಥ ಆ ವಿಷಯ ಅಪ್ರಸ್ತುತವೆಂದು, ಅದನ್ನು ನಾನು ವಿರೋಧಿಸುತ್ತಿಲ್ಲ. ಆದರೆ ಅವರೆಂದೂ ಚಂದ್ರಗುತ್ತಿಯಲ್ಲಿ ನಡೆಯುವ ಬೆತ್ತಲೆ ಸೇವೆಯನ್ನು, ದೇವದಾಸಿ ವ್ಯವಸ್ಥೆಯನ್ನು ವಿರೋಧಿಸಲಿಲ್ಲ**

ನಾವು ಯಾವ ವ್ಯವಸ್ಥೆಯಲ್ಲಿ ಬದುಕಿಬಂದಿರುತ್ತೇವೆಯೋ ನಮ್ಮ ಚಿಂತನೆಗಳು ಆ ಹಿನ್ನೆಲೆಯಲ್ಲಿಯೇ ರೂಢಿಗತವಾಗಿರುತ್ತವೆ. ಲಯನ್ಸ್, ರೋಟರಿ ಕ್ಲಬ್ಬಿನಲ್ಲಿರುವ ಮಹಿಳೆಯರು ಬೆಳೆದು ಬಂದ ವಾತಾವರಣವೇ ಭಿನ್ನವಾಗಿರುತ್ತದೆ. ಅವರಿಗೆ ಇಂತಹ ಚಿಂತನೆಗಳನ್ನು ಮಾಡುವ ಸಾಮಾಜಿಕ ಜವಾಬ್ದಾರಿಯ ಒತ್ತಡವಿರಲಿಕ್ಕಿಲ್ಲ. ಆದರೆ ಇರಬಾರದು ಎಂತಲ್ಲ. ಅವರಲ್ಲಿ ಈ ತರಹ ಚಿಂತನೆ ಮನೋಭಾವನೆ ಇರುವುದು ಕಡಿಮೆ. ಶ್ರೀಮಂತ ಹಿನ್ನೆಲೆಯಿಂದ ಬಂದಂತಹ ಗಾಂಧಿ, ನೆಹರೂ ಅವರಂಥಹ ಎಲ್ಲೋ ಒಂದಿಬ್ಬರಿಗೆ ಇಂತಹ ಚಿಂತನೆಗಳು ಕಾಡಿರಬಹುದು. ಶೋಷಿತ ಸಮುದಾಯಗಳ ಕುರಿತು ಚಿಂತನೆ ಮಾಡುವ ಮನಸ್ಸುಗಳು ಒಂದೆರಡು ದೊರೆತರೆ ಸಾಕು. ಯಾಕೆಂದರೆ ಆರೋಗ್ಯಕರ ಚಿಂತನೆ ಮಾಡುವುದು ಬಹಳ ಜನರಿಂದ ಸಾಧ್ಯವಾಗಲಿಕ್ಕಿಲ್ಲ. ಸಮಾಜ ಸುಧಾರಣೆಯ ಕಾಳಜಿ ಯುಳ್ಳವರು ನಾಲ್ಕು ಜನ ದೊರೆತರೂ ಸಾಕು. ಇಡೀ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿ ಸಲು ಸಾಧ್ಯವಾಗುತ್ತದೆ. ಲಯನ್ಸ್, ರೋಟರಿಯಲ್ಲಿರುವ ಮಹಿಳೆಯರಿಗೆ ನಿಜವಾದ ಸಾಮಾಜಿಕ ಸಮಸ್ಯೆಗಳ ಕುರಿತಂತೆ ಚಿಂತಿಸಲು ಅವರಲ್ಲಿ ವೇಳೆಯಿಲ್ಲ. ಇದು ಈ ದೇಶದ ದುರ್ದೈವ. ನಾನು ಇತ್ತೀಚೆಗೆ ರೋಟರಿ ಕ್ಲಬ್ಬಿಗೆ ಭಾಷಣ ನೀಡಲು ಹೋಗಿದ್ದೆ. ಅವರು ಕೊಟ್ಟಂತಹ ವಿಷಯವನ್ನು ಕೈಬಿಟ್ಟು ನಾನು ನನ್ನ ಸಂಸ್ಥೆಯ ಕುರಿತಂತೆ ಮಾತನಾಡಿದೆ. 'ನಾನು ನನ್ನ ಸಂಸ್ಥೆಯ ಕುರಿತು ಮಾತನಾಡುವುದು ನಿಮಗೆ ಅನುಚಿತವೆನಿಸಬಹುದು. ನೀವು, ಸಾಮಾಜಿಕ ಸೇವೆಗಾಗಿ ಸ್ಥಳಗಳನ್ನು ಹುಡುಕಾಡುತ್ತಿದ್ದರಿಂದ ನಾನು ನನ್ನ ಸಂಸ್ಥೆಯ ಕುರಿತು ಮಾತನಾಡುವುದು ಅನಿವಾರ್ಯವಾಗಿದೆ. ನಿಮ್ಮಲ್ಲಿ ನಿಜಕ್ಕೂ ಸೇವಾಮನೋಭಾವನೆಯಿದ್ದರೆ ನಮ್ಮ ಹಳ್ಳಿಗಳಿಗೆ ಬನ್ನಿ. ಅವು ನಿಮ್ಮ ಸೇವೆಗಾಗಿ ಕಾದು ಕುಳಿತಿವೆ' ಎಂದಾಗ ಅವರೆಲ್ಲರೂ ಅದನ್ನು ಒಪ್ಪಿಕೊಂಡರು.

- **ಇತ್ತೀಚೆಗೆ ನಡೆದ ಕಾರ್ಯಕ್ರಮಗಳನ್ನು ಪತ್ರಿಕೆಗಳಲ್ಲಿ ನೀವು ಗಮನಿಸಿರಬಹುದು. ವಿಪ್ರ ಮಹಿಳಾ ಸಮ್ಮೇಳನ, ದಲಿತ ಮಹಿಳಾ ಸಮ್ಮೇಳನಗಳು ನಡೆದವು. ಆ ಕುರಿತಂತೆ ನಿಮ್ಮ ಅಭಿಪ್ರಾಯವೇನು?**

ಜಾತಿಯ ಹೆಸರಿನಲ್ಲಿ ನಡೆಯುವ ಇಂತಹ ಸಮ್ಮೇಳನಗಳು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಒಟ್ಟು ಮಹಿಳಾ ಸಮುದಾಯದ ಸಮಸ್ಯೆಗಳ ಕುರಿತಂತೆ ಚರ್ಚೆ ನಡೆಸಬೇಕಿದೆಯೇ ವಿನಃ ಆಯಾ ಜಾತಿ, ಸಮುದಾಯಗಳ ಸಮಸ್ಯೆಗಳನ್ನಲ್ಲ. ಒಟ್ಟಾರೆ ಸಮಸ್ಯೆಗಳನ್ನು ಬಿಡಿಸಿಕೊಳ್ಳುವ ಈ ಸೂಕ್ಷ್ಮ ಹಂತದಲ್ಲಿ ಇಂತಹ ಸಮ್ಮೇಳನಗಳು ಅಷ್ಟು ಆರೋಗ್ಯಕರವಾಗಿ ಕಾಣುವುದಿಲ್ಲ. ನಮ್ಮಲ್ಲಿ ಪ್ರತಿಯೊಂದು ಜಾತಿಯವರೂ ತಮ್ಮ ಒಂದೊಂದು ಸಮಾಜವನ್ನು ರೂಪಿಸಿಕೊಂಡಿರುವರು. ಇದು ಆಯಾ ಜಾತಿಗಳಿಗೆ ರಾಜಕೀಯ ಭದ್ರತೆಯನ್ನು ಒದಗಿಸುವಂತಹ ವ್ಯವಸ್ಥೆಯಾಗಿ ರೂಪ ಪಡೆದುಕೊಂಡಿದೆ. ಎಲ್ಲರೂ ಜಾತಿ Politics ಮಾಡುತ್ತಿದ್ದಾರೆ. ಅದಕ್ಕಾಗಿ ಜಾತಿಯ ಹಿನ್ನೆಲೆಯಲ್ಲಿ ಒಡೆದು ಆಚರಿಸುವ

ಸಮ್ಮೇಳನಗಳು ನಮಗೆ ಬೇಕಿಲ್ಲ. ಎಲ್ಲ ಮಹಿಳೆಯರು ಒಂದೆಡೆ ಸೇರಿ, ಎಲ್ಲರ ನೋವನ್ನು ಒಬ್ಬರಿಗೊಬ್ಬರು ಕೇಳಿಸಿಕೊಳ್ಳಬೇಕಿದೆ.

❑ **ಅಂದರೆ ನಿಮ್ಮ ಅರ್ಥದಲ್ಲಿ ಮಹಿಳಾ ಸಮಸ್ಯೆಗಳಿಗೆ ಏಕರೂಪವನ್ನು ಕೊಡಲು ಸಾಧ್ಯ.**

ಮಹಿಳೆಯರ ಒಟ್ಟು ಸಮಸ್ಯೆಗಳ ಕುರಿತಂತೆ ಚರ್ಚಿಸಲು, ಆಯಾ ಸಮುದಾಯದ ಪ್ರತಿನಿಧಿಗಳು ಒಂದೆಡೆಗೆ ಸೇರಬೇಕು. ಈ ಹಿನ್ನೆಲೆಯಲ್ಲಿ ಮಹಿಳಾ ಸಮ್ಮೇಳನಗಳು ನಡೆಯಬೇಕು. ಎಲ್ಲ ವರ್ಗದ ಮಹಿಳೆಯರು ಸಮೂಹಗೊಂಡು ಚರ್ಚಿಸುವುದರಿಂದ ಅವರ ಸಮಸ್ಯೆಗಳಿಗೆ ಒಂದು ಸಾಮಾಜಿಕ ಸ್ವರೂಪ ಸಿಗುತ್ತದೆ. ಇದನ್ನು Ear marking ಮಾಡುವುವು ಬೇಡ. ಇದರಿಂದಾಗಿ ಬಹುಮುಖ್ಯವಾದ ಸಮಸ್ಯೆಗಳನ್ನು ಮರೆತುಬಿಡುವ, ನಿರ್ಲಕ್ಷಿಸುವ ಅಪಾಯವಿದೆ. ಅದಕ್ಕಾಗಿ ಅಂತಹ ಸಮಸ್ಯೆಗಳಿಗೆ ವಿಶೇಷವಾಗಿ 'ಸ್ಪಂದಿಸಬೇಕು. ದೇವದಾಸಿ ಸಮಸ್ಯೆ ಕೆಲವು ಜಾತಿಗಳಿಗೆ ಸೀಮಿತವಾಗಿದ್ದರೂ ಅದು ವ್ಯಾಪಕವಾದ ಸಮಸ್ಯೆಯಾಗಿದೆ. ಇವರ ಕುರಿತು ಚರ್ಚಿಸಲು ಕೆಲವರಿಗೆ ಮುಜುಗರವಾಗಬಹುದು. ಅಂತಹ ವೇಳೆಯಲ್ಲಿ ಶೋಷಿತ ಸಮುದಾಯಗಳ ಕುರಿತು ಕಾಳಜಿಯಿರುವ ಮಹಿಳೆಯರೆಲ್ಲರೂ ಒಂದೆಡೆ ಸೇರಿ, ಇಂತಹ ಸಮಸ್ಯೆಗಳ ಬಗೆಗೆ ಸುದೀರ್ಘವಾದ ಚಿಂತನೆಯನ್ನು ನಡೆಸಬೇಕು. ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಮಹಿಳಾ ಸಮ್ಮೇಳನಕ್ಕೆ ಜಾತಿಯ ಹೆಸರು ಅಂಟಿಕೊಳ್ಳಬಾರದು. ಚರಿತ್ರೆಯಲ್ಲಿ ಯಾವ ಸಮುದಾಯಗಳ ಮಹಿಳೆ ಹೆಚ್ಚಿನ ಶೋಷಣೆಗಳಿಗೆ ಗುರಿಯಾಗಿರುವಳೋ, ಅಂಥವಳ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ಚಿಂತನೆ ನಡೆಸಬೇಕಿದೆ.

❑ **ಭಾರತೀಯ ಸಂದರ್ಭದಲ್ಲಿ ಕಾಣಿಸಿಕೊಂಡಂತಹ ಬಹುಪಾಲು ಚಿಂತಕಿಯರು ದೇವದಾಸಿಯರ ಸಮಸ್ಯೆಗಳನ್ನು ಅಷ್ಟು ತೀವ್ರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ ಅಲ್ಲವೆ?**

ಸಾಮಾಜಿಕ ಚಿಂತನೆಯ ಕುರಿತಂತೆ ಅಭಿವ್ಯಕ್ತಿಯ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿದೆ. ನಾನು ಬಹಳ ಓದಿಕೊಂಡವನಲ್ಲ. ಆದರೆ ಐವತ್ತು ವರ್ಷಗಳ ಹಿಂದಿನ ಪರಿಸ್ಥಿತಿಯನ್ನು ನಾವು ವಿಚಾರ ಮಾಡಿದಾಗ ಅಂದು, ಇಂಥ ಸಮಸ್ಯೆಗಳನ್ನು ಕೇಂದ್ರವಾಗಿರಿಸಿಕೊಂಡು ಚಿಂತನೆ ನಡೆಸುವ ವಾತಾವರಣವಿರಲಿಲ್ಲ. ಅಂದಿನ ಸಾಮಾಜಿಕ ಸಮಸ್ಯೆಗಳೇ ಬೇರೆಯಾಗಿದ್ದವು. ಅಸ್ಪೃಶ್ಯತೆಯನ್ನು, ದೇವದಾಸಿ ವ್ಯವಸ್ಥೆಯನ್ನು ಅಂದಿನ ಸಮಾಜ ಒಪ್ಪಿಕೊಂಡಿತ್ತು. ಆದ್ದರಿಂದ ಅಂದಿನ ಸಮಾಜಕ್ಕೆ ಅವುಗಳು ತೀವ್ರತರವಾದ ಸಮಸ್ಯೆಗಳಾಗಿ ಕಾಡಲಿಲ್ಲ. ಇಂದು ಈ ತರಹದ ಸಮಸ್ಯೆಗಳನ್ನು ತೀವ್ರವಾಗಿ ಪರಿಗಣಿಸುವುದರಿಂದ ಶೋಷಿತ ಸಮುದಾಯಗಳ ಕುರಿತಂತೆ ಹೆಚ್ಚಿನ ಅಧ್ಯಯನಗಳು ಪ್ರಾರಂಭವಾಗಿವೆ. ಬಹುಪಾಲು ಲೇಖಕಿಯರು ಮೇಲ್ವರ್ಗದವರಾಗಿರುವುದರಿಂದ ಅವರಿಗೆ ಇದು ತೀವ್ರವಾಗಿ ಕಾಡಲಿಲ್ಲವೇನೋ? ದಲಿತ ಮೂಲದಿಂದ ಬಂದಂತಹ ಸ್ವತ: ಅಂಬೇಡ್ಕರರೂ ಕೂಡ ದೇವದಾಸಿಯರ ಕುರಿತಂತೆ ಅಷ್ಟೊಂದು ತೀವ್ರವಾದ ಕಾಳಜಿಯಿಂದ ಚರ್ಚಿಸಲಿಲ್ಲ. ಈ ಮಾತನ್ನು ನನ್ನ ಓದಿನ ಮಿತಿಯಲ್ಲಿ ಹೇಳುತ್ತಿರುವೆ. ಜಾತಿ ಸಮಸ್ಯೆ,

ದೇಶದ ಸ್ವಾತಂತ್ರ್ಯದ ಸಮಸ್ಯೆಗಳ ಎದುರು ದೇವದಾಸಿಯರ ಸಮಸ್ಯೆ ಅವರಿಗೆ ಅಷ್ಟು ದೊಡ್ಡದಾಗಿ ಕಾಡಲಿಲ್ಲ. ದುರ್ದೈವೆಂದರೆ ದೇವದಾಸಿಯರಿಗೆ ಎಷ್ಟು ಒತ್ತನ್ನು ಕೊಡಬೇಕಾಗಿತ್ತೋ ಅಷ್ಟು ಒತ್ತನ್ನು ಅಂಬೇಡ್ಕರರೂ ಕೊಡಲಿಲ್ಲ.

❑ **ಬುದ್ಧ - ಬಸವ - ಅಂಬೇಡ್ಕರರ ಚಿಂತನೆಗಳನ್ನು ಮಾನವೀಯ ನೆಲೆಯಲ್ಲಿ ಅವುಗಳನ್ನು ನಾವು ಹೇಗೆ ಮೇಳೈಯಿಸಿಕೊಳ್ಳಬಹುದು. ಅದರಿಂದಾಗಿ ಸಮಾಜವನ್ನು ಪ್ರಗತಿಪರ ನಿಟ್ಟಿನಲ್ಲಿ ಕೊಂಡೊಯ್ಯಲು ಸಾಧ್ಯವಾಗುತ್ತಿದೆಯೆ?**

ತುಳಿತಕ್ಕೊಳಗಾದ ಮಹಿಳೆಯರ ಕುರಿತಂತೆ ಬುದ್ಧ - ಬಸವ - ಅಂಬೇಡ್ಕರರು ಮಾಡಿದ ಇಂತಹ ವಿಚಾರಧಾರೆಗಳನ್ನು ನಮ್ಮ ಈ ಸಾಮಾಜಿಕ ವ್ಯವಸ್ಥೆಯೊಳಗೆ ಅಳವಡಿಸಿದರೆ, ಖಂಡಿತವಾಗಿಯೂ ಬಹುದೊಡ್ಡ ಕ್ರಾಂತಿ ಜರುಗುತ್ತದೆ. ನಾವೆಲ್ಲ ಸುಧಾರಣೆಯ ನಾಟಕವಾಡುತ್ತಿದ್ದೇವೆನಿಸುತ್ತದೆ. ಉದಾಹರಣೆಗೆ ಹಳ್ಳಿಯನ್ನು ಉದ್ಧಾರ ಮಾಡಬೇಕೆನ್ನುವ ನಾನೇ, ಇವರೆಲ್ಲರೂ ಸುಧಾರಣೆಯಾದರೆ ನನ್ನ ಕೆಲಸಗಳಿಗೆ ಕೂಲಿಯಾಳುಗಳು ದೊರೆಯುವುದಿಲ್ಲವಲ್ಲ ಎಂದು ಆತಂಕ ಪಡುತ್ತೇನೆ. ಇದನ್ನೇ ಮಹಿಳೆಯರಿಗೂ ಅನ್ವಯಿಸಿ. ಇದರಿಂದಾಗಿ ಸಾಮಾಜಿಕ ಪರಿವರ್ತನೆಯನ್ನು ಪರಿಣಾಮಕಾರಿಯಾಗಿ ತರಲಾಗುವುದಿಲ್ಲ. ಈ ಎಲ್ಲ ಧೀಮಂತರ ವಿಚಾರಧಾರೆಗಳು ಸಮಾಜದಲ್ಲಿ ಕ್ರಿಯಾಶೀಲವಾಗಬೇಕಾದರೆ ಮೊದಲು ನಮ್ಮಲ್ಲಿ ಮಾನಸಿಕ ಬದಲಾವಣೆ ಆಗಬೇಕು.

❑ **ಅಲಕ್ಷಿತ ಸಮುದಾಯಗಳ ಸಂಘಟನೆಗಳು ಬಹಳ ದುರ್ಬಲ ಇವೆ. ಯಾಕೆ?**

ನಮ್ಮ ಜನಕ್ಕೆ Political Power ಕುರಿತಂತೆ ಬಹಳ ಗೌರವವಿದೆ. ಅದನ್ನೇ ಶ್ರೇಷ್ಠವೆಂದು ಪರಿಭಾವಿಸುತ್ತಾರೆ. ಬಹಳ ದೊಡ್ಡ ಹೋರಾಟದ ಉದ್ದೇಶವನ್ನಿಟ್ಟುಕೊಂಡು ಹುಟ್ಟಿದಂತಹ ನಮ್ಮ ದೇಶದಲ್ಲಿಯ ಅನೇಕ ಸಂಘಟನೆಗಳು ಅಂತಿಮ ಹಂತದಲ್ಲಿ ವಿರೂಪಗೊಳ್ಳುತ್ತವೆ. ಅವರು Political Power ನ್ನು ಹಿಂಬಾಲಿಸುತ್ತಾರೆ. ದಲಿತರ ಪರವಾಗಿ ಹೋರಾಡುವ ಶಕ್ತಿಗಳು ಕ್ರಮೇಣ ದಲಿತರನ್ನೇ ಆಯುಧವಾಗಿಸಿಕೊಂಡು Political Power ನ್ನು ಗಳಿಸಿಕೊಳ್ಳಲು ಪ್ರಯತ್ನಿಸುತ್ತವೆ. ಆವಾಗ ಅದರ ನೈಜ ಹೋರಾಟದ ದಿಕ್ಕು ಬದಲಾಗುತ್ತದೆ. ಯಾವುದನ್ನು ಅಂತಿಮ ಗುರಿಯಾಗಿಟ್ಟುಕೊಂಡು ಹೋರಾಡಬೇಕೋ ಅದನ್ನು ಬಿಟ್ಟು, ಬೇರೆಯದಕ್ಕೆ ಮುಖಮಾಡಿ ಹೊರಟರೆ, ಅಂತಹ ಸಂಘಟನೆಗಳು ಅಂತಿಮವಾಗಿ ಸೋಲನ್ನು ಒಪ್ಪಿಕೊಳ್ಳುತ್ತವೆ.

❑ **ಅಲಕ್ಷಿತ ಸಮುದಾಯಗಳ ಸಂಘಟನೆಗಳಿಗೆ ಸಮಷ್ಠಿಸ್ವರೂಪ ಕೊಡಲು ಸಾಧ್ಯವೆ?**

ಯಾವುದೇ ಒಂದು ಒಳ್ಳೆಯ ವಿಚಾರವನ್ನಿಟ್ಟುಕೊಂಡು ಹೋರಾಟಕ್ಕೆ ಹೊರಟ ಸಂಘಟನೆಗಳು ಅಂತಿಮ ಹಂತದಲ್ಲಿ ಸೋಲುತ್ತದೆ. ಅದರ ಫಲಿತಾಂಶದ ಕುರಿತು ಸ್ವಾರ್ಥಪರ ಚಿಂತನೆಗಳನ್ನು ಕೈಬಿಡಬೇಕು. ಅಲ್ಲಿ ಸ್ವಾರ್ಥಕಾಲಿಟ್ಟಿತೆಂದರೆ, ಆ ಹೋರಾಟ ಎಷ್ಟೇ ಉದಾತ್ತವಾಗಿದ್ದರೂ ಅದು ಯಶಸ್ವಿಯಾಗುವುದಿಲ್ಲ. ಈ ದೇಶದಲ್ಲಿ ನಿಸ್ವಾರ್ಥ ಕಾರ್ಯಕರ್ತರ ಹೆಸರು ಕೆಲವೇ ಕೆಲವು ಕೇಳಿಬರುತ್ತವೆ. ಅದರಲ್ಲಿ ಕರ್ನಾಟಕದಲ್ಲಿ ಅಣ್ಣಾ ಹಜಾರೆ ಅವರ

ಹೆಸರು ಬಹಳ ಪ್ರಮುಖವಾದದ್ದು. ಅಣ್ಣಾ ಹಜಾರೆ ಅವರು ತಮ್ಮ ಪ್ರದೇಶದಲ್ಲಿ ಮಾಡಿದಂತಹ ಬದಲಾವಣೆಯನ್ನು ಗಮನಿಸಿದರೆ, ಅಂತಹ ಪರಿವರ್ತನೆಯನ್ನು ಸಾಮಾನ್ಯವಾಗಿ ಯಾರೂ ಮಾಡಿದಂತೆ ಕಂಡುಬರುವುದಿಲ್ಲ. ರಾಜಕೀಯದವರು ಒಡ್ಡುವ ಪ್ರಲೋಭನೆಗಳನ್ನು ಅವರು ಮೀರಿದ್ದರಿಂದ ಅದು ಅವರಿಗೆ ಸಾಧ್ಯವಾಯಿತು. ಅವರು ತಮ್ಮ ಉದ್ದೇಶವನ್ನೇ ಕೇಂದ್ರವಾಗಿಸಿಕೊಂಡು ಹೋರಾಡಿದ್ದಾರೆ ಹೊರತು ಇನ್ನುಳಿದ ಯಾವ ಪ್ರಲೋಭನೆಗಳಿಗೂ ತಲೆಬಾಗಲಿಲ್ಲ. ಯಾವುದರಿಂದಲೂ ಅವರು ವಿಚಲಿತರಾಗಲಿಲ್ಲ. ಅಂತಿಮ ಗುರಿಯ ಬಗ್ಗೆ ಅವರಿಗೆಂದು ಗೊಂದಲವಿರಲಿಲ್ಲ. ಇಂತಹ ನಿಶ್ಚಿತವಾದ ಮನಸ್ಸು ಇದ್ದಾಗ ಮಾತ್ರ ಅವುಗಳಿಗೆ ಸಮಷ್ಠಿ ಸ್ವರೂಪ ಕೊಡಲು ಸಾಧ್ಯವಾಗುತ್ತದೆ.

❑ **ಇವತ್ತಿಗೂ ಸಾಮಾಜಿಕ ಪಿಡುಗುಗಳು ಮತ್ತೆ-ಮತ್ತೆ ಸವಾಲಾಗಿ ಏಕೆ ನಿಲ್ಲುತ್ತಿವೆ?**

ಧರ್ಮವಿನಾಶವಾದಾಗ ನಾನು ಮತ್ತೆ ಮತ್ತೆ ಹುಟ್ಟಿಬರುತ್ತೇನೆ ಎಂದು ಸ್ವತಃ ಭಗವಂತನೇ ಹೇಳಿಕೊಂಡಿದ್ದಾನೆ. ಒಮ್ಮೆ ಹುಟ್ಟಿ ಬಂದು ಈ ಸಮಾಜವನ್ನು ಸುಧಾರಿಸುತ್ತೇನೆಂಬ ನಂಬಿಕೆ ಅವನಿಗಿಲ್ಲ. ಅದೇ ರೀತಿ ಈ ಸಾಮಾಜಿಕ ಸಮಸ್ಯೆಗಳನ್ನು ಒಂದೇ ಬಾರಿಗೆ ಬಿಡಿಸುತ್ತೇನೆ ಎಂಬುದು ಆಗದ ಮಾತು. ನಮ್ಮ ಸಮಾಜವನ್ನು ಆರೋಗ್ಯ ಪೂರ್ಣವಾಗಿ ಇಡಬೇಕಾದರೆ ನಿರಂತರವಾಗಿ ಕೆಲಸ ಮಾಡುವ ಒಂದು ಕೇಡರ್ ಬೇಕೆ ಬೇಕು. ಯಾಕೆಂದರೆ ನೈತಿಕ ನೆಲೆಗಟ್ಟಿನ ಮೇಲೆ ಒಬ್ಬ ವ್ಯಕ್ತಿ ನಿರಂತರವಾಗಿ ತಿದ್ದಿಕೊಂಡು ಹೋಗುವುದು ಸಾಧ್ಯವಿಲ್ಲ. ಅವನನ್ನು ಅಥವಾ ಅವಳನ್ನು ಎಚ್ಚರಿಸುವ ಒಂದು ವ್ಯವಸ್ಥೆ ಬೇಕೆಬೇಕು.

❖ ❖

೧೦

ರಂಗಭೂಮಿಯ ಅಂಗಳದಲ್ಲಿ ಸುಭದ್ರಮ್ಮ ಮನ್ಸೂರು

ಸುಭದ್ರಮ್ಮ ತನ್ನ ಹನ್ನೆರಡನೆಯ ವಯಸ್ಸಿಗೆ ಕೌಟುಂಬಿಕ ಜವಾಬ್ದಾರಿಯನ್ನು ಹೊತ್ತುಕೊಂಡು ರಂಗಪ್ರವೇಶಿಸುತ್ತಾಳೆಂದು ಹಡೆದ ತಾಯಿಯಾದ ಭಾಗ್ಯಮ್ಮನಿಗೆ ತಿಳಿದಿರಲಿಲ್ಲ. ಸುಭದ್ರಮ್ಮ ಮನ್ಸೂರ ಪಾತರದ ಕುಟುಂಬದಿಂದ ಬಂದವರು. ಅವರ ತಾಯಿ ಭಾಗ್ಯಮ್ಮ ಶತಮಾನಗಳ ಹಿಂದೆಯೇ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದವಳು. ಬಳ್ಳಾರಿಯ ಕೋಟೆ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಸಂಗೀತ ಸೇವೆ ಸಲ್ಲಿಸುತ್ತಿದ್ದ ತನ್ನ ತಾಯಿಯಿಂದ ಪಾತರದ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗಲು ನಿರಂತರ ಒತ್ತಡ ಬರುತ್ತಿತ್ತು. ಅದನ್ನು ಧಿಕ್ಕರಿಸಿ ತಾನು ಮೆಚ್ಚಿದ, ತನ್ನ ಸಂಗೀತಕ್ಕೆ ಪೇಟಿ ಸಾಥಿಯಾಗಿದ್ದ ಹುಡುಗನನ್ನು ಕೂಡಿಕೊಂಡಳು. ಅಂದಿನ ಸಾಮಾಜಿಕ ಪರಿಸರದಲ್ಲಿ ಅವಳದು ಸಾಂಪ್ರದಾಯಿಕವಾಗಿ ವಿವಾಹ ನಡೆಯುವುದು ಕಠಿಣವಾಗಿತ್ತು. ವಿವಾಹವಾಗಲು ಸಮಾಜ ಅನುಕೂಲ ಕಲ್ಪಿಸದಿದ್ದರೂ ಮೆಚ್ಚಿದವನೊಂದಿಗೆ ನಂಬುಗೆಯ ಸಂಸಾರವನ್ನು ಹೂಡಿದಳು. ಮೂರು ಹೆಣ್ಣು ಮೂರು ಗಂಡು ಮಕ್ಕಳನ್ನು ಹೆತ್ತು ನೆಮ್ಮದಿಯಿಂದ ಇದ್ದಳು. ವಿಧಿಗೆ ಇದು ಹಿಡಿಸಲಿಲ್ಲವೇನೊ? ಒಲಿದು ಬಂದವನನ್ನು ಜೀವಸಮೇತ ಕಿತ್ತುಕೊಂಡಿತು. ಬ್ರಾಹ್ಮಣರಿಗೆ ಕನ್ಯತ್ವವನ್ನು ಮೀಸಲಿಡುವ ತನ್ನ ಕುಲ

ಸಂಪ್ರದಾಯವನ್ನು ಧಿಕ್ಕರಿಸಿ ಒಲಿದವನೊಂದಿಗೆ ಸಂಸಾರಹೂಡಿದ ಭಾಗ್ಯಮ್ಮನ ಮೇಲೆ ಒಂಟಿಯಾಗಿ ಆರು ಮಕ್ಕಳ ಪೋಷಣೆಯನ್ನೊದಗಿಸುವ ಜವಾಬ್ದಾರಿ ಬಿತ್ತು. ತನ್ನ ಹನ್ನೆರಡನೇ ವಯಸ್ಸಿಗೆ ಸಂಗೀತ ಕಛೇರಿ ನಡೆಸಿ ಜನರನ್ನು ನಿಬ್ಬೆರಗಾಗಿಸಿದ ಅವಳಿಗೆ ಅದೇ ವಿದ್ಯೆಯಿಂದಲೇ ಸಂಸಾರ ನಡೆಸಬಹುದೆಂಬ ಆತ್ಮವಿಶ್ವಾಸವಿತ್ತು. ಹೀಗಾಗಿ ಅಲ್ಲಲ್ಲಿ ಸಂಗೀತ ಕಛೇರಿ ನಡೆಸಿದಳು. ನಿತ್ಯವೂ ಐದಾರು ಕುಟುಂಬಗಳಿಗೆ ಸಂಗೀತ ಪಾಠ ಹೇಳಿಕೊಟ್ಟಳು. ಆದರೆ ಆಕೆಯ ಶ್ರಮಕ್ಕೆ ದೊರೆತುದು ಅತ್ಯಲ್ಪ ದುಡ್ಡು. ಅಷ್ಟರಲ್ಲಿ ದೊಡ್ಡ ಗಾತ್ರದ ಸಂಸಾರವನ್ನು ಜಗ್ಗುವುದು ಬರುಬರುತ್ತಾ ಆಕೆಗೆ ಕಷ್ಟವೆನಿಸಿತು. ದಿನದಿನಕ್ಕೆ ಬೆಳೆಯುತ್ತಾ ಬಂದ ಮಕ್ಕಳ ಅಗತ್ಯವನ್ನು ಪೂರೈಸುವುದು ಸವಾಲಾಗಿ ಪರಿಣಮಿಸಿತು. ಆರನೆಯ ಇಯತ್ತೆಯವರೆಗೆ ಶಿಕ್ಷಣ ಪಡೆದು ಸೊಗಸಾಗಿ ಬೆಳೆದು ನಿಂತ ಸುಭದ್ರಮ್ಮ ಬಣ್ಣ ಹಚ್ಚಿಕೊಂಡು ಬದುಕ ಬವಣೆಗಳನ್ನು ಕಡಿಮೆ ಮಾಡಿಯಾಳು ಎಂದುಕೊಂಡಳು. ತಡಮಾಡಲಿಲ್ಲ. ಬಳ್ಳಾರಿಯಲ್ಲೇ ಇದ್ದ ಸುಮಂಗಲಿ ನಾಟಕ ಕಂಪನಿಗೆ ಆ ಪೋರಿಯನ್ನು ಕರೆದುಕೊಂಡು ಹೋದಳು. ಹನ್ನೆರಡರ ಎಳೆಪ್ರಾಯದ ಪುಟ್ಟ ಹುಡುಗಿ ಬದುಕಿಗಾಗಿ ಬಣ್ಣ ಹಚ್ಚಿಕೊಂಡಿತು. ಪ್ರಪ್ರಥಮವಾಗಿ ಟಿಪ್ಪುಸುಲ್ತಾನ ನಾಟಕದಲ್ಲಿ ಚೆನ್ನಿ ಪಾತ್ರವನ್ನಾಡಿ ಭೇಷ್ ಎನಿಸಿಕೊಂಡಳು. ಅಂದಿನಿಂದ ಕಲಾಬದುಕಿನಲ್ಲಿ ಅವಳು ಹಿನ್ನಡೆಯನ್ನು ಕಾಣಲೇ ಇಲ್ಲ.

ಸುಭದ್ರಮ್ಮನವರು ಮಾಸ್ತರ ಹಿರಣ್ಯಯ್ಯ, ಏಣಗಿ ಬಾಳಪ್ಪ ಮೊದಲಾದವರ ಕಂಪನಿಗಳಲ್ಲಿ ದುಡಿದರು. ಸುಭದ್ರಮ್ಮನವರ ಕಲಾ ಪ್ರತಿಭೆ ಕಂಪನಿಯ ಮಾಲಿಕರಿಗೆ ಅಸೂಯೆಯನ್ನುಂಟು ಮಾಡಿತು. ರಕ್ತ ರಾತ್ರಿಯಲ್ಲಿಯ ದ್ರೌಪದಿ, ಹರಿಶ್ಚಂದ್ರದಲ್ಲಿಯ ತಾರಾಮತಿ ಪಾತ್ರಗಳೂ ಜನಮನವನ್ನು ಗೆದ್ದವು. ಕಂಪನಿಮಾಲಿಕರ ಅಸೂಯೆ, ಕಿರುಕುಳಗಳನ್ನು ತಾಳಲಾರದೆ ಮರಳಿ ಬಳ್ಳಾರಿಗೆ ಬಂದರು. ಬಳ್ಳಾರಿಯ ಸುತ್ತಮುತ್ತಲಿನ ಹಳ್ಳಿಯ ಜನತೆ ಅವರ ಕಲೆಯನ್ನು ಗೌರವಿಸಿದರು. ಕಂಪನಿ ಬಿಟ್ಟು ಬಂದ ಸುಭದ್ರಮ್ಮನವರಿಗೆ ಸುತ್ತಲಿನ ಗ್ರಾಮಸ್ಥರು ಹನ್ನೆರಡೂ ತಿಂಗಳೂ ಪ್ರೀತ್ಯಾದರದಿಂದ ಕರೆದು ನಾಟಕವಾಡಿಸಿ ಅವರ ಬದುಕಿಗೆ ಒಂದು ನೆಲೆಯನ್ನೊದಗಿಸಿದರು. ಅವರ ಪ್ರೀತಿ ಅಭಿಮಾನಗಳ ಮಹಾಪೂರದಲ್ಲಿಯೇ ಸುಭದ್ರಮ್ಮ ಕರ್ನಾಟಕದ ವೃತ್ತಿರಂಗಭೂಮಿಯ ಶ್ರೇಷ್ಠಕಲಾವಿದೆಯಾಗಿ ಬೆಳೆದು ನಿಂತಿದ್ದಾರೆ. ಸುಭದ್ರಮ್ಮನವರು ಆ ಎತ್ತರವನ್ನು ಸುಲಭವಾಗಿ ಏರಿಲ್ಲ. ಅವರ ಸಾಧನೆಯ ಹಾದಿ ಅಷ್ಟು ಸುಲಭವಾಗಿರಲಿಲ್ಲ. ನಾಟಕವಾಡಲು ಒಪ್ಪಿಕೊಂಡ ಊರುಗಳಿಗೆ ಹೋಗುವ ಸಂದರ್ಭದಲ್ಲಿ ಬಸ್ ನಿಲ್ದಾಣದಲ್ಲಿ ಅನೇಕ ಹಿಂಸೆಗಳನ್ನು ಅನುಭವಿಸಿದರು. ಅದೆಷ್ಟೋ ಬಾರಿ ಹೊಟ್ಟೆಯನ್ನು ಉಪವಾಸ ಹಾಕಿ ಬದುಕಿನ ಮೂಲಭೂತ ಅಗತ್ಯಗಳಿಗಾಗಿ ಪರದಾಡಿದರು. ಕೌಟುಂಬಿಕ ಬದುಕಿನಲ್ಲೂ ಅನೇಕ ಏರುಪೇರುಗಳನ್ನು ಕಂಡರು. ಈ ಎಲ್ಲ ಕಠಿಣ ಸವಾಲುಗಳನ್ನು ಗೆದ್ದಿದ್ದರಿಂದಲೇ ಅವರು ಇಂದು ಈ ಉತ್ತುಂಗದಲ್ಲಿದ್ದಾರೆ. ಕಲಾರಂಗದಲ್ಲಿ ಅದೂ ಈ ಬಣ್ಣದ ಪ್ರಪಂಚದಲ್ಲಿ ಯಶಸ್ಸು ಎನ್ನುವುದು ಅಷ್ಟು ಸುಲಭವಾಗಿ ದೊರೆಯುವುದಿಲ್ಲ.

ಯಾವ ಸಮಾಜದಲ್ಲಿ ಬಣ್ಣ ಹಚ್ಚಿಕೊಂಡ ಕಾರಣಕ್ಕಾಗಿಯೇ ಅಪಮಾನಗಳನ್ನು, ನೋವುಗಳನ್ನು ಅನುಭವಿಸಿದರೋ, ಇಂದು ಆ ಬಣ್ಣದಿಂದಾಗಿಯೇ ಅದೇ ಸಮಾಜದಲ್ಲಿ ಗೌರವಿಸಲ್ಪಡುತ್ತಿದ್ದಾರೆ. ವೃತ್ತಿರಂಗಭೂಮಿ ಮುಂದೊಂದು ಕಾಲಕ್ಕೆ ತಮಗೆ ಇಂತಹ ಒಳ್ಳೆಯ ಹೆಸರು ತಂದೀತೆಂದು ಸ್ವತ: ಸುಭದ್ರಮ್ಮನವರೇ ಎಣಿಸಿರಲಿಲ್ಲ. ಇಡೀ ಜೀವನವನ್ನು ಕಲೆಗಾಗಿ ತೇಯ್ದ ಅವರಿಗೆ ಆ ಕಲೆಯೇ ಬದುಕಾಗಿದೆ, ಉಸಿರಾಗಿದೆ. ೭.೧೨.೯೫ರಂದು ಬೆಳಗಿನ ಹನ್ನೊಂದು ಗಂಟೆಯಿಂದ ಸಾಯಂಕಾಲದ ಮೂರು ಗಂಟೆಯವರೆಗೆ ಅವರ ಜೊತೆ ಅನೇಕ ಬಗೆಯ ಮಾತುಕತೆ, ಚರ್ಚೆ ನಡೆಸಿದೆನು. ಅವುಗಳಲ್ಲಿ ಮುಖ್ಯ ಎನಿಸಿದ ಕೆಲವು ಭಾಗಗಳನ್ನು ಓದುಗರ ಜೊತೆ ಹಂಚಿಕೊಳ್ಳುವುದು ಸೂಕ್ತ ಎನಿಸಿ ತಮ್ಮ ಮುಂದೆ ನಿರೂಪಿಸುತ್ತಿದ್ದೇನೆ.

❑ **ನಿಮ್ಮ ಬಾಲ್ಯ ನಿಮ್ಮ ರಂಗಭೂಮಿಯ ಸಾಧನೆಗೆ ಎಷ್ಟು ಪೂರಕ?**

ಕೌಟುಂಬಿಕವಾಗಿ ನನಗಾವ ರಂಗಭೂಮಿಯ ಹಿನ್ನೆಲೆಯಿರಲಿಲ್ಲ. ನನ್ನ ತಾಯಿ ಪಾತರದವರು. ನನ್ನ ಹತ್ತನೆಯ ವಯಸ್ಸಿಗೆ ನನ್ನ ತಂದೆ ತೀರಿಹೋದರು. ನನ್ನ ತಾಯಿಗೆ ಆರು ಜನ ಮಕ್ಕಳನ್ನು ಕಟ್ಟಿಕೊಂಡು ಸಂಸಾರ ಜಗ್ಗುವುದು ಕಷ್ಟವಾಯ್ತು. ಎರಡು ವರ್ಷಗಳವರೆಗೆ ನಿರಂತರ ಕಷ್ಟಪಟ್ಟೆ. ಈ ಸಂದರ್ಭದಲ್ಲಿ ಲಿಂಗರಾಜ ಮನ್ಸೂರರು ನಮ್ಮ ಕುಟುಂಬಕ್ಕೆ ಸಹಾಯ ಮಾಡುವ ಮೂಲಕ ನಮಗೆ ಹತ್ತಿರವಾದರು. ಅವರೂ ನಾಟಕ ಮಾಡುತ್ತಿದ್ದರು. ಒಂದರ್ಥದಲ್ಲಿ ತಾಯಿಯನ್ನೊಳಗೊಂಡಂತೆ ಅಣ್ಣ, ತಂಗಿ, ತಮ್ಮಂದಿರನ್ನು ಸಾಕುವ ಜವಾಬ್ದಾರಿ ನನ್ನ ಮೇಲೆಯೇ ಬಿತ್ತು. ಹೀಗಾಗಿ ರಂಗಭೂಮಿಯನ್ನು ಪ್ರವೇಶಿಸಿದೆ. ಹೊಟ್ಟೆಗಾಗಿ ಬಣ್ಣ ಹಚ್ಚುವುದು ಅನಿವಾರ್ಯವಾಗಿತ್ತು.

❑ **ಬಾಲ್ಯದಲ್ಲಿ ನೀವೇನಾಗಬೇಕೆಂದು ಕನಸು ಕಂಡದ್ದು?**

ದೊಡ್ಡ ಸಂಗೀತಗಾರಳಾಗುವ ಕನಸು ಇತ್ತು. ನನ್ನ ತಾಯಿ ದಕ್ಷಿಣಾದಿ ಸಂಗೀತದಲ್ಲಿ ಪರಿಣತಳು. ಆದರೆ ನನಗೆ ಹಿಂದೂಸ್ತಾನಿ ಸಂಗೀತದ ಬಗ್ಗೆ ಬಹಳ ಹುಚ್ಚಿತ್ತು. ನಾನೇನಾದರೂ ಸಂಗೀತದ ಕುರಿತು ಆಸಕ್ತಿ ತೋರಿಸಿದರೆ ನನ್ನ ತಾಯಿ ಗದರಿಸಿ ಸುಮ್ಮನಾಗಿಸುತ್ತಿದ್ದರು. "ಇದಕ್ಕ ನನ್ನದ ಕೊನಿ ತಲೆಮಾರಾಗಿರ್ಲಿ. ನೀವು ಕಲಿಯುವ ಅಗತ್ಯವಿಲ್ಲ" ಎನ್ನುತ್ತಿದ್ದರು. ಪಾತರ ಸಂಪ್ರದಾಯವನ್ನು ಅವರು ಇಷ್ಟಪಡುತ್ತಿರಲಿಲ್ಲ. ಆಗ ನಮ್ಮ ಜನಾನಾ ಸಂಗೀತ ಕಲಿತಿದ್ದರಲ್ಲಾ? ಅದಕ್ಕ ನಮ್ಮ ತಾಯಿ ಸಂಗೀತ ಕಲಿಯಲು ಅವಕಾಶ ನೀಡಲಿಲ್ಲ. ಅದ್ರೂ ನನಗೆ ಸಂಗೀತದ ಹುಚ್ಚು ಬಿಡಲಿಲ್ಲ. ನಮ್ಮ ತಾಯಿ ನನ್ನನ್ನು ಕಾಫಿ ತರಲು ಹೊಟೇಲಿಗೆ ಕಳುಹಿಸುತ್ತಿದ್ದಳು. ಆಗ ತಾನೆ ಗ್ರಾಮೋಫೋನಗಳು ಬಂದಿದ್ದವು. ಅಲ್ಲಿ ಹಾಡುಗಳನ್ನು ಹಾಕಿರುತ್ತಿದ್ದರು. ಹಾಡುಗಳನ್ನೆಲ್ಲ ಕೇಳಿ ಮನೆಗೆ ಕಾಫಿ ತರುತ್ತಿದ್ದೆ. ತಡವಾಗಿ ಬಂದದ್ದಕ್ಕೆ ತಾಯಿಯಿಂದ ಬೈಗುಳ-ಬಡತ ತಪ್ಪುತ್ತಿರಲಿಲ್ಲ. ಬಡಿಸಿಕೊಂಡು ನಂತರ ತಂಗಿ, ತಮ್ಮಂದಿರನ್ನು ತೊಡಮೇಲೆ ಹಾಕಿಕೊಂಡು ಬೆನ್ನುಚಪ್ಪರಿಸುತ್ತಾ ಅದಾಗಲೇ ಕೇಳಿ ಬಂದ ಹಾಡುಗಳನ್ನು ಗುಣಗುಣಿಸುತ್ತಿದ್ದೆ. ನಾನು ಅತಿ ಚಿಕ್ಕವಳಿದ್ದಾಗ ನನ್ನ ತಂದೆ ಇಷ್ಟಪಟ್ಟಾಗ ನನ್ನ ತಾಯಿ ಹಾಡುತ್ತಿದ್ದಳು. ಅದನ್ನ ಕೇಳ್ತಾನೇ ಮಲಗ್ತಿದ್ದೆ. ಆದರೆ ಆಗ ನನಗೆ ಸಂಗೀತದ ಕಲ್ಪನೆ ಇರಲಿಲ್ಲ.

❑ **ರಂಗನಟಿಯಾಗಿ ಹೆಸರಿದ್ದಂತೆ ರಂಗಗಾಯಕಿಯಾಗಿ ಪ್ರಸಿದ್ಧರಾಗಿರುವಿರಿ. ಏಕಕಾಲ ದಲ್ಲಿ ನಾಟಕ ಮತ್ತು ಸಂಗೀತ ಕ್ಷೇತ್ರದಲ್ಲಿ ನಿಮ್ಮನ್ನು ನೀವು ಹೇಗೆ ತೊಡಗಿಸಿ ಕೊಂಡಿರಿ?**

ನಾಟಕದ ಪೂರ್ವತಯಾರಿಯಲ್ಲೇ ನನ್ನ ಬದುಕಿನ ಹೆಚ್ಚಿನ ವೇಳೆ ಕಳೆಯಿತು. ರಂಗಾಭಿನಯದಲ್ಲಿ ನನ್ನನ್ನು ಪೂರ್ಣ ಪ್ರಮಾಣದಲ್ಲಿ ಪಳಗಿಸಿದವರೆಂದರೆ ನನ್ನ ಕೈಹಿಡಿದ ಲಿಂಗರಾಜ ಮನ್ನೂರರು. ಇದರಲ್ಲೆ ಬಿಡುವು ಸಿಕ್ಕಗಲೆಲ್ಲಾ ಹಾಡುತ್ತಿದ್ದೆ. ನಮ್ಮ ಕಂಪನಿಯಲ್ಲಿದ್ದ ಜಂಬಣ್ಣ ಮಾಸ್ತರು ಮೊದಲು ನನಗೆ ಸಂಗೀತ ಕಲಿಸಿದವರು. ಅವರು ನನ್ನ ರಾಗವನ್ನು ಕೇಳಿದ ತಕ್ಷಣ ಮತ್ಸರದ ಇರಿಸುಮುರಸನ್ನು ತೋರಿಸುತ್ತಿದ್ದರು. ಸಂಗೀತ ಕಲಿತ ಮೇಲೆ ನೀನು ಮಲ್ಲಿಕಾರ್ಜುನ ಮನ್ಸೂರರ ಹೆಸರ ಹೇಳಿದ್ರೆ ಹೇಗೆ? ಎಂದು ತಳಬುಡ ವಿಲ್ಲದ ಪ್ರಶ್ನೆ ಹಾಕುತ್ತಿದ್ದರು. ಎಷ್ಟು ದುಂಬಾಲು ಬಿದ್ದರೂ ಅವರು ಹೇಳಿಕೊಡಲಿಲ್ಲ.

ನನಗೆ ಸಂಗೀತದ ನಿಜವಾದ ಅರಿವು ಮಾಡಿಸಿದವರು ಚಂದ್ರಶೇಖರ ಗವಾಯಿಗಳು. ನನಗಾಗ ಇಪ್ಪಾತ್ತಾರು ವರ್ಷ ವಯಸ್ಸಿರಬಹುದು. ಬಳ್ಳಾರಿಯಲ್ಲಿ ನೆಲೆ ನಿಂತ ಮೇಲೆ ಅವರು ನನಗೆ ದೊರೆತರು. ಅವರು ಬಹಳ ಅಂತಃಕರಣದಿಂದ ಕಲಿಸಿದರು. ಶಾಸ್ತ್ರೀಯ ಸಂಗೀತದ ವಿದ್ಯೆ ನನ್ನ ತಲೆಗಿಳಿಯಲಿಲ್ಲ. ಬದುಕಿಗಾಗಿ ಬಣ್ಣ ಹಚ್ಚಿಕೊಂಡ ನನ್ನಲ್ಲಿ ಶಾಸ್ತ್ರೀಯ ಸಂಗೀತ ಕಲಿಯುವ ವ್ಯವಧಾನ ಇರಲಿಲ್ಲ. ಕಂಠದುಡಿಸಲು ವೇಳೆ ಸಿಗುತ್ತಲೇ ಇರಲಿಲ್ಲ. ಅದಕ್ಕಾಗಿ ಸರಳವಾಗಿ ಹಾಡಲು ಬರುವ ಭಾವಗೀತೆಗಳನ್ನು ಕಲಿಸಿದರು. ಈಗಲೂ ಪ್ರತಿದಿನ ಬಳ್ಳಾರಿಯ ಕಲಾಪ್ರೇಮಿಗಳ ಸಂಘಕ್ಕೆ ಹೋಗಿ ಸಂಜೆ ಆರು ಗಂಟೆಯಿಂದ ಎಂಟು ಗಂಟೆಯವರೆಗೆ ಸಂಗೀತದ ತಾಲೀಮು ಮಾಡುವೆ.

ಬಿಲಂಬಿತ ಏಕತಾಲರಾಗದ ಹಿಡಿತ ಈಗ ನನಗೆ ಸಿಕ್ಕಿದೆ. ಈ ರಾಗಕ್ಕಾಗಿ ಮೊದಲಿ ನಿಂದಲೂ ಪ್ರಯತ್ನಿಸುತ್ತಿದ್ದೆ. ಅದರ ಪ್ರವೇಶ ಈಗ ಸಿಕ್ಕಿದೆ. ಸಂಗೀತದಲ್ಲಿ ರಾಗಜ್ಞಾನ ಇರಬೇಕು. ನನಗೆ ಶಾಸ್ತ್ರೀಯವಾಗಿ ಹಾಡಲು ಬರದಿದ್ದರೂ, ಹಾಡುವವರ ರಾಗಗಳನ್ನು ಅರ್ಥಮಾಡಿಕೊಳ್ಳಲು ಈಗಲೂ ಸಂಗೀತ ಕಲಿಯುತ್ತಿರುವೆ. ಸಂಗೀತವನ್ನು ಪ್ರೀತಿಸಿದ್ದರೂ ಪ್ರೀತಿಸುತ್ತಿದ್ದರೂ ನನಗೆ ಜೀವದಾನ ಮಾಡಿದ್ದು ರಂಗಭೂಮಿಯೇ. ಅದಕ್ಕಾಗಿಯೇ ನನ್ನ ಜೀವನದ ದೀರ್ಘ ಅವಧಿಯನ್ನು ರಂಗಭೂಮಿಗೆ ಮೀಸಲಿಟ್ಟಿರುವೆ.

❑ **ನಿಮ್ಮ ಸಮಕಾಲೀನ ನಟಿಯರು ಹೆಚ್ಚಾಗಿ ಯಾವ ಜಾತಿ ಧರ್ಮಕ್ಕೆ ಸೇರಿದವರಿರು ತ್ತಿದ್ದರು? ಈಗಲೂ ಅದೇ ನಿರ್ದಿಷ್ಟ ಜಾತಿಗೆ ಸೇರಿದ ನಟಿಯರೇ ಕಾಣಿಸುತ್ತಾರೆಯೆ? ಅಥವಾ ....**

ಆಗ ಹೆಚ್ಚಾಗಿ ದೇವದಾಸಿಯರೇ ರಂಗಭೂಮಿಯಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಹೀಗಾಗಿ ಎಲ್ಲ ನಟಿಯರನ್ನು ಒಂದು ಬಗೆಯ ಗುಮಾನಿಯಿಂದಲೇ ಗಮನಿಸುತ್ತಿದ್ದರು. ಹಳ್ಳಿಗಳಲ್ಲಿ ನಾಟಕದವರು ಬಂದ್ರು ಅಂದರೆ ಹ್ಯಾಂಗ ಮಾತಾಡ್ತಿದ್ರು? (ಸ್ವಲ್ಪ ಮೌನ. ಕಣ್ಣಂಚಿನಲ್ಲಿ ತೆಳುವಾಗಿ ನೀರು ನಿಂತಿತ್ತು) ಅದನ್ನ ನೆನಪ ಮಾಡಿಕೊಂಡ್ರೆ ಈಗಲೂ ಮನಸ್ಸು ಕಹಿಯಾಗ್ತದ.

ಸೂಳೇರು ಬಂದ್ರು ಅಂತಿಂದ್ರು. ಪಾತರದವರು ಬಂದ್ರು ಅಂತಿದ್ರು. ಗುಲ್ಬರ್ಗಾದ ಕಡೆಗೆ ಚಿಮಣೇರು ಬಂದ್ರು ಅಂತಿದ್ರು. ಆಗ ಕೆಲವು ನಟಿಯರು ಇಂತಹ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದ್ದರು. ಒಂದೊಂದು ಹಳ್ಳಿಯಲ್ಲಿ ತಿಂಗಳಾನುಗಟ್ಟಲೆ ಉಳಿಯಬೇಕಾದ ಪ್ರಸಂಗ ಬರುತ್ತಿತ್ತು. ಅಂತಹ ಸಂದರ್ಭದಲ್ಲಿ ಇದ್ದುಳ್ಳವರ ಜೊತೆ ಸಂಬಂಧ ಹೊಂದಿ ಹಣ ಸಂಪಾದಿಸಿಕೊಂಡು ಹೋಗುತ್ತಿದ್ದರು. ಅಂಥವರು ಮಾಡಿದ ತಪ್ಪಿಗೆ ನಮ್ಮಂತಹ ಸಾತ್ವಿಕರು ನೋವು, ಅಪಮಾನಕ್ಕೊಳಗಾಗಬೇಕಾಯಿತು. ಹಳ್ಳಿಯವರು ನಾಟಕವಾಡಲು ಕರೆದರೆ "ಎಲ್ಲರ ಜೊತೆ ನಡದುಕೊಂಡ ಹಾಗೆ ನನ್ನ ಜೊತೆ ನಡೆಯಲು ಪ್ರಯತ್ನಿಸಬಾರದು, ಅಪಮಾನಿಸಬಾರದು, ಅಂದರೆ ಬರ್ತಿನಿ" ಎಂದು ತಾಕೀತು ಮಾಡಿಯೇ ನಾಟಕವಾಡಲು ಹೋಗುತ್ತಿದ್ದೆ "ಹಾಡು - ಅಭಿನಯವನ್ನು ಬಿಟ್ಟು ನಾನೇನೂ ಮಾಡುವುದಿಲ್ಲ. ಕುಣಿ ಅಂದ್ರ ಕುಣಿಲಿಕ್ಕೆ ಆಗುವುದಿಲ್ಲ" ಎಂದು ಸ್ಪಷ್ಟಪಡಿಸುತ್ತಿದ್ದೆ. ಈಗ ಕಲಾವಿದನನ್ನು ಗೌರವಿಸುವುದ ರಿಂದ ಎಲ್ಲ ಜಾತಿಯ, ಧರ್ಮದ ಹೆಣ್ಣುಮಕ್ಕಳು ರಂಗಭೂಮಿಯನ್ನು ಪ್ರವೇಶಿಸುತ್ತಿದ್ದಾರೆ. ಈಗ ಜಾತಿಯ ಪ್ರಶ್ನೆ ಬರುವುದಿಲ್ಲ.

❑ **ಅಂದರೆ ಕುಣಿಯುವುದು ಅಂದು ಅಶ್ಲೀಲವೆನಿಸಿತ್ತಾ?**

ಹಾಗೇನಿಲ್ಲ. ಪಾತ್ರಕ್ಕೆ ತಕ್ಕ ಹಾಗೆ ಕುಣಿಯಬೇಕಾಗಿತ್ತು. ಪ್ರಾರಂಭದಲ್ಲಿ ಸಾಮಾಜಿಕ ನಾಟಕಗಳನ್ನು ಅಭಿನಯಿಸುತ್ತಿದ್ದೆ. ಆಗ ಕುಣಿಯುತ್ತಿದ್ದೆ. ನನ್ನ ಇಪ್ಪತ್ತೈದು ಇಪ್ಪತ್ತಾರು ವರ್ಷ ವಯಸ್ಸಿನ ತನಕ ಕುಣಿದಿರುವೆ. ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಲು ಪ್ರಾರಂಭಿಸಿದ ಮೇಲೆ ಕುಣಿಯುವುದನ್ನು ನಿಲ್ಲಿಸಿದೆ. ಮೊದಲು ನಾನು ಅಭಿನಯಿಸಿದ ಪೌರಾಣಿಕ ನಾಟಕ ರಕ್ತರಾತ್ರಿ.

❑ **ನಿಮ್ಮ ಕಾಲದ ರಂಗಭೂಮಿಯ ಕಲ್ಪನೆ ಹೇಗಿತ್ತು? ಈಗ ಹೇಗಿದೆ?**

ಊರಿಗೇನಾದರೂ ಕೇಡಾದರೆ, ಮಳೆ ಬರದೆ ಇದ್ದರೆ ಪೌರಾಣಿಕ ನಾಟಕಗಳನ್ನು ಹಳ್ಳಿಗಳಲ್ಲಿ ಆಡಿಸುತ್ತಿದ್ದರು. ರಂಗಭೂಮಿಯ ಬಗ್ಗೆ ಒಂದು ಬಗೆಯ ಧಾರ್ಮಿಕ ಕಲ್ಪನೆಯೇ ಇತ್ತು. ಹೀಗಾಗಿ ಹಳ್ಳಿಗಳಲ್ಲಿ ಪೌರಾಣಿಕ ನಾಟಕಗಳೇ ಜಾಸ್ತಿ. ಕಂಪನಿ ನಾಟಕಗಳಲ್ಲಿ ಸಾಮಾ ಜಿಕ ನಾಟಕಗಳೇ ಹೆಚ್ಚು. ಕಾರಣ ಪೌರಾಣಿಕ ನಾಟಕಗಳಿಗೆ ಖರ್ಚು ಜಾಸ್ತಿ ಮಾಡಬೇಕಿತ್ತು. ಪಾತ್ರಗಳೂ ಹೆಚ್ಚಿಗೆ ಇರುತ್ತಿದ್ದವು. ಇದನ್ನೆಲ್ಲ ಕಂಪನಿಯವರಿಗೆ ನಿಭಾಯಿಸಲಿಕ್ಕೆ ಆಗ್ತಿರಲಿಲ್ಲ. ಅದಕ್ಕಾಗಿ ಕಂಪನಿಯವರು ಸಾಮಾಜಿಕ ನಾಟಕಗಳಿಗೇ ಹೆಚ್ಚು ಒತ್ತು ಕೊಡುತ್ತಿದ್ದರು. ಅಂದು ಕಂಪನಿಯವರೇ ಕಲಾವಿದರಿಗೆ ನಿರಂತರವಾಗಿ ತರಬೇತಿ ನೀಡುತ್ತಿದ್ದರು. ಕಲಾವಿದರ ಖರ್ಚುವೆಚ್ಚುವೆಲ್ಲವನ್ನೂ ಅವರೇ ನೋಡಿಕೊಳ್ಳುತ್ತಿದ್ದರು. ಈಗ ಹಾಗಿಲ್ಲ. ನಾಟಕ ಪುಸ್ತಕವನ್ನು ನೀಡಿ ನೀನು ಈ ಪಾತ್ರವನ್ನಾಡಬೇಕೆಂದು ಹೇಳಿ ಹೋಗುವರು. ಹಿಂದಿನ ಶ್ರಮ ಇಂದಿನ ಕಲಾವಿದರಲ್ಲಿ ಕಾಣುತ್ತಿಲ್ಲ. ಒಂದು ನಾಟಕವಾಡಬೇಕಾದರೆ ಮೂರು ತಿಂಗಳವರೆಗೆ ತರಬೇತಿ ಸಿಗುತ್ತಿತ್ತು. ಕಲಾವಿದರು ನಿರಂತರ ರಂಗ ತಾಲೀಮು ನಡೆಸುತ್ತಿದ್ದರು. ಅದೆಲ್ಲ ಈಗೆಲ್ಲಿದೆ? ನಾಟಕ ಪುಸ್ತಕ ನೀಡಿ ಕೈತೊಳೆದುಕೊಳ್ಳುತ್ತಾರೆ. ಅದೂ ಅಲ್ಲದೆ ಇಂದಿನ

ಯುವಪೀಳಿಗೆಯವರಲ್ಲಿ ರಂಗಭೂಮಿಯ ಕುರಿತಂತೆ ಆಸಕ್ತಿ ಕಡಿಮೆಯಾಗ್ತಿದೆ. ಸಿನಿಮಾ, ಟಿ.ವಿ.ಯಂತಹ ಹೊಸಹೊಸ ಮಾಧ್ಯಮಗಳು ಬಂದಾಗ ಇವನ್ನಾರು ಕೇಳ್ತಾರೆ.

❑ **ಅಂದರೆ ಸಿನಿಮಾ ದೂರದರ್ಶನದಂತಹ ಮಾಧ್ಯಮಗಳಿಂದ ರಂಗಭೂಮಿಗೆ ಪೆಟ್ಟಾಗಿದೆ ಎನ್ನುವಿರಾ?**

ಹೌದು. ಮನೆಯಲ್ಲೆ ಕೂತು ಎಲ್ಲವನ್ನು ನೋಡುವ ಆಧುನಿಕ ಸವಲತ್ತು ಇರುವಾಗ ಈಗ್ಯಾರು ನಾಲ್ಕ ಐದು ತಾಸುಗಳವರೆಗೆ ಕೂತುಕೊಂಡು ನಾಟಕ ನೋಡ್ತಾರೆ? ಸಿನಿಮಾದಲ್ಲಿ ಅಶ್ಲೀಲ ಸನ್ನಿವೇಶಗಳನ್ನು ಬೇಕಾಬಿಟ್ಟಿಯಾಗಿ ತೋರಿಸ್ತಾರೆ. ಅಲ್ಲಿಯ ನಟಿಯರು ಸಾಮಾನ್ಯವಾಗಿ ಅರೆಬೆತ್ತಲೆಯಲ್ಲೇ ಕಾಣಿಸಿಕೊಳ್ಳುವರು. ನಾಟಕರಂಗದಲ್ಲಿ ಇವೆಲ್ಲ ಇಲ್ಲ. ಆ ಮಟ್ಟದ ಧೈರ್ಯ ನಮ್ಮವರಲ್ಲಿಲ್ಲ.

ಹಿಂದೆ ಎಲ್ಲಿ ನೋಡಿದಲ್ಲಿ ನಾಟಕ ಕಂಪನಿಗಳು ಕಾಣ್ತಾ ಇದ್ದವು. ಈಗ ಆ ಪ್ರಮಾಣ ದಲ್ಲಿ ಇಲ್ಲವೇ ಇಲ್ಲ. ಬೆರಳೆಣಿಕೆಯಷ್ಟು ಮಾತ್ರ ಇವೆ. ನಾಟಕಗಳ ಸ್ಥಾನವನ್ನು ಸಿನಿಮಾ, ದೂರದರ್ಶನಗಳು ಕಬಳಿಸಿವೆ. ನಾವಿನ್ನು ಬಣ್ಣ ಹಚ್ಚುವ ವೇಳೆಯಲ್ಲೇ ಹೌಸ್ ಫುಲ್ ಆಗಿರುತ್ತಿತ್ತು. ಈಗ ಹಾಗಲ್ಲ. ಜನಾ ಬರೂದು ಕಡಿಮೆಯಾಗಿದೆ. ಇಂದು ಹಳ್ಳಿಗಳಲ್ಲಿ ನಾಟಕ ಪ್ರಾರಂಭವಾದಾಗ ಎಲ್ಲಾ ಸೇರ್ತಾರೆ. ಅದೂ ತನ್ನ ಮಗಾನೊ ಗಂಡನೊ ಅದರಲ್ಲಿ ಪಾತ್ರ ಮಾಡಿದ್ದಾರೆ ಎಂದು ಸೇರ್ತಾರೆ. ಕೊನೆಕೊನೆಗೆ ಅವ್ರೂ ಜಾಗ ಖಾಲಿ ಮಾಡತಾರೆ. ಮೊದಲು ಹಾಗಿದ್ದಿದ್ದಿಲ್ಲ. ಮಂಗಳ ಮುಗಿಯುವವರೆಗೆ ಏಳ್ತಿರಲಿಲ್ಲ.

❑ **ನಿಮಗೆ ಸಿನಿಮಾದಲ್ಲಿ ಅಭಿನಯಿಸಲು ಅಹ್ವಾನ ಬಂದಿತ್ತಾ?**

ಬಂದಿತ್ತು. ಆಗ ನಾನು ಮಾಸ್ಟರ್ ಹಿರಣಯ್ಯನವರ ಕಂಪನಿಯಲ್ಲಿದ್ವೆ. ಕಂಪನಿಯ ಮಾಲಿಕರು ನಮ್ಮನ್ನು ತುಂಬಾ ಹೆದರಿಸುತ್ತಿದ್ದರು. ಅಂದ್ರೆ ಸಿನಿಮಾ ಅಂತ ಹೇಳಿಕೊಂಡು ಯಾರಾದ್ರೂ ಕರಿಯಾಕ ಬಂದ್ರೆ ಹೋಗಬ್ಯಾಡ್ರಿ. ಅವ್ರು ನಿಮ್ಮನ್ನ ಮೋಸಮಾಡಿ ಮತ್ತೆಲ್ಲೊ ಕರೆದುಕೊಂಡು ಹೋಗುತ್ತಾರೆ ಅಂತ ಹೆದರಿಸುತ್ತಿದ್ದರು. ಅವರು ಹೇಳಿದ ಹಾಗೆ ಒಂದಿಬ್ಬರು ಬಂದು ರಾಧಮ್ಮನವರ ಪಾತ್ರಕ್ಕೆ ನಿಮ್ಮನ್ನು ಆಯ್ಕೆ ಮಾಡಿದ್ದಾರೆ. ಸದ್ಯ ನಮ್ಮ ಜೊತೆನೇ ಬಂದುಬಿಡಿ ಎಂದರು. ನನಗೆ ಬಹಳ ಹೆದರಿಕಿಯಾಯ್ತು. ಹಿರಣಯ್ಯನವರು ಹೇಳಿದ ಮಾತುಗಳು ನೆನಪಿಗೆ ಬಂದವು. ಅವರ ಬಗ್ಗೆ ನನಗೇನೂ ಪರಿಚಯವಿರಲಿಲ್ಲ. ಹೆದರಿಕೊಂಡು ಹೋಗಲಿಲ್ಲ. ಸಿನಿಮಾದಲ್ಲಿ ಹಾಡಬೇಕೆಂದು ಬಹಳ ಅಭಿಲಾಷೆ ಇತ್ತು. ಅದಕ್ಕ ಅವಕಾಶ ಕೂಡಿ ಬರಲಿಲ್ಲ. ಇತ್ತೀಚೆಗೆ ಸಿರುಗುಪ್ಪೆಯವರು ತಯಾರಿಸಿದ 'ಮುರಳೀಗಾನ ಅಮೃತಪಾನ' ಚಲನಚಿತ್ರದಲ್ಲಿ ತಾಯಿ ಪಾತ್ರವನ್ನು ಮಾಡಿರುವೆ. ಆದರೆ ಅದಿನ್ನೂ ತೆರೆಕಂಡಿಲ್ಲ. ಸಿನಿಮಾದಲ್ಲಿ ಬಂಧನ ಜಾಸ್ತಿ ಅನಿಸಿತು. ಅಲ್ಲಿ ಸ್ವತಂತ್ರತೆ ಎನ್ನುವುದು ಇರುವುದಿಲ್ಲ. ಹಲವಾರು ವರ್ಷಗಳಿಂದ ರಂಗಭೂಮಿಯಲ್ಲಿದ್ದು ಸಾಧನೆಯ ತುತ್ತತುದಿಯನ್ನು ಮುಟ್ಟಿದವರು ಸಿನಿಮಾದಲ್ಲಿ ಮತ್ತೆ ಪ್ರಾರಂಭದ ಹಂತವನ್ನು ಪ್ರವೇಶಿಸುವುದೆಂದರೆ ಕಷ್ಟ.

❑ **ಸಿನಿಮಾ ಮಾಧ್ಯಮದವರಿಗೂ ನಾಟಕ ಮಾಧ್ಯಮದವರಿಗೂ ಒಂದು ಒಳ್ಳೆಯ ಸಂಬಂಧವನ್ನು ಹೇಗೆ ಕಟ್ಟಬಹುದು?**

ಇಲ್ಲ ಇಲ್ಲ. ಅದ್ಹೇಗೆ ಕಟ್ಟೋಕೆ ಆಗುತ್ತೆ ಹೇಳಿ? ಎರಡು ರಂಗಗಳೂ ಬೇರೆ ಬೇರೆಯೇ. ಒಂದಕ್ಕೊಂದು ಹೊಂದಿಕೆಯಾಗುವುದಿಲ್ಲ. ರಂಗಭೂಮಿಯಿಂದ ಸಿನಿಮಾಕ್ಕೆ ಹೋದವರಿದ್ದಾರೆ. ಆದರೆ ಸಿನಿಮಾದಿಂದ ಯಾರೂ ರಂಗಭೂಮಿಗೆ ಬಂದವರಿಲ್ಲ.

❑ **ಸಿನಿಮಾ ಕಲಾವಿದರೆಂದರೆ ಮೇಲು, ಅವರಿಗೆ ಸ್ಟಾರ್ ಪಟ್ಟ ಇರ್ತದೆ. ಆದರೆ ನಾಟಕದವರಿಗೆ ಅಂತಹ ಗ್ಲಾಮರಸ್ ಲೋಕ ಇಲ್ಲವಲ್ಲ.......**

ನಮಗೆ ಜನಸಂಪರ್ಕ ಬರುವುದೇ ಇಲ್ಲ. ಮೊದಲು ನಾಟಕಗಳು ಹತ್ತು ಗಂಟೆಗೆ ಪ್ರಾರಂಭವಾಗುತ್ತಿದ್ದವು. ಹೀಗೆ ಪ್ರಾರಂಭವಾದ ನಾಟಕ ಬೆಳಗಿನ ಮೂರು ಗಂಟೆಗಳವರೆಗೆ ನಡೆಯುತ್ತಿತ್ತು. ದಣಿದ ನಾವು ನಿದ್ದೆ ಹೋಗುತ್ತಿದ್ದೆವು. ಮತ್ತೆ ಬೆಳಿಗ್ಗೆ ಎದ್ದು ಸ್ನಾನಮಾಡಿ ಊಟ ಮಾಡುವುದರೊಳಗಾಗಿ ಹತ್ತು ಗಂಟೆಯಾಗುತ್ತಿತ್ತು. ಆಗ ರಂಗತಾಲೀಮಿಗೆ ಹೋಗುತ್ತಿದ್ದೆವು. ಒಂದೂವರೆ ಎರಡು ಗಂಟೆಗೆ ಊಟ. ಸ್ವಲ್ಪ ವಿಶ್ರಾಂತಿ. ಮತ್ತೆ ರಂಗತಾಲೀಮು. ಇಷ್ಟಾಗುವುದರೊಳಗೆ ನಾಟಕ ಮಾಡುವ ವೇಳೆಯಾಗುತ್ತಿತ್ತು. ನಿತ್ಯದ ಈ ಚಕ್ರದಲ್ಲಿ ನಮ್ಮನ್ನು ಜನ ಮೆಚ್ಚಿದ್ದೂ ಗೊತ್ತಾಗುತ್ತಿರಲಿಲ್ಲ. ನಾವು ಸೂರ್ಯ ಹುಟ್ಟುವುದನ್ನು ನೋಡಲಿಲ್ಲ. ಚಂದ್ರ ಮಿಣುಗುವುದನ್ನು ಕಾಣಲಿಲ್ಲ. ನಮ್ಮೆಲ್ಲರ ಶ್ರಮದ ಕೀರ್ತಿ ಕಂಪನಿಯ ಮಾಲಿಕರಿಗೆ ಮುಟ್ಟುತ್ತಿತ್ತು. ಈಗಲೂ ವೃತ್ತಿರಂಗಭೂಮಿ ಇದಕ್ಕಿಂತ ಭಿನ್ನವೆನಿಸುವುದಿಲ್ಲ. ಇಂತಹ ಪರಿಸರದಲ್ಲಿದ್ದವರಿಗೆ ಗ್ಲಾಮರಸ್ ಲೋಕ ಹ್ಯಾಗೆ ಗೊತ್ತಾಗಬೇಕು ಹೇಳಿ? ಹಾಗೆ ನೋಡಿದರೆ ಸಿನಿಮಾದಲ್ಲಿದ್ದಂತೆ ನಾಟಕದಲ್ಲೂ ಹೆಸರು ಮಾಡಿದ ಕಲಾವಿದರಿಗೆ ಸ್ಟಾರ್ ಪಟ್ಟ ಇರುತ್ತದೆ. ಅವರದೇ ಆದ ಗ್ಲಾಮರಸ್ ಲೋಕಾನೂ ಇರುತ್ತೆ.

❑ **ನೀವು ಒಂದು ಪಾತ್ರವನ್ನು ಹೇಗೆ ಪ್ರವೇಶ ಮಾಡ್ತೀರಿ?**

ಪಾತ್ರಕ್ಕನುಗುಣವಾದ ಭಾವನೆಗಳನ್ನು ತುಂಬಿಕೊಳ್ಳುತ್ತೇನೆ. ಪಾತ್ರವೇ ನಾನಾಗಿರ್ತೀನಿ. ಅಲ್ಲಿ ಯಾವ ವೈಯಕ್ತಿಕ ಚಿಂತೆ, ದುಃಖ ದುಮ್ಮಾನಗಳೂ ಕಾಲಿಡುವುದಿಲ್ಲ. ನಾನು ಸುಭದ್ರಮ್ಮ ಅನ್ನುವುದನ್ನೇ ಮರೆತಿರುತ್ತೇನೆ. ಪಾತ್ರ ಪ್ರವೇಶಿಸಿದಾಗ ಬಹಳ ಆನಂದವಾಗಿರುತ್ತೇನೆ. ಅದನ್ನು ಬಾಯಿಬಿಟ್ಟು ಹೇಳಾಕ ಆಗೊಲ್ಲ. ಮೊದಮೊದಲು ಹರಿಶ್ಚಂದ್ರ ನಾಟಕದಲ್ಲಿಯ ತಾರಾಮತಿ ಪಾತ್ರವನ್ನು ತಾರಾಮತಿಯಾಗಿಯೇ ಅಭಿನಯಿಸುತ್ತಿದ್ದೆ. ಯಾವಾಗ ನನ್ನ ಮಗಳ್ನ ಕಳೆದುಕೊಂಡೆನೋ ಅಂದಿನಿಂದ ಆ ಪಾತ್ರವನ್ನು ಅಭಿನಯಿಸಲಿಕ್ಕೆ ಆಗುತ್ತಿಲ್ಲ. ತಾರಾಮತಿಯ ಮಗನ ಬದಲು, ಸುಭದ್ರಮ್ಮನ ಮಗಳ ಹೆಣವೇ ಕಾಣುತ್ತಿತ್ತು. ಹೀಗಾಗಿ ಕರಳು ಕಿತ್ತು ಬರುವಂತೆ ಬಿಕ್ಕಿಬಿಕ್ಕಿ ಅಳುತ್ತಿದ್ದೆ. ಅದನ್ನು ನೋಡಿದ ಹಿರಿಯರನೇಕರು ಆ ಪಾತ್ರವನ್ನೇ ಆಡಬೇಡವೆಂದು ಬಿಡಿಸಿದರು. ಈಗ ಆ ಪಾತ್ರವನ್ನಾಡುತ್ತಿಲ್ಲ.

❑ **ನಿಮ್ಮ ವೈಯಕ್ತಿಕ ಬದುಕು ....**

ಬಹಳ ಕಷ್ಟದ ಹಾದಿಯನ್ನು ತುಳಿದು ಬಂದಿದ್ದೇನೆ. ನಮ್ಮ ತಂದೆಯ ಸಾವಿನ ನಂತರ ಬದುಕುವುದೇ ಕಷ್ಟವೆನಿಸಿತ್ತು. ನನಗಾಗ ಹತ್ತು ವರ್ಷ ವಯಸ್ಸು. ನನ್ನ ತಾಯಿ ನಾಲ್ಕೈದು ಮನೆಗಳಿಗೆ ಸಂಗೀತ ಪಾಠ ಹೇಳಿ ಕೊಡುತ್ತಿದ್ದರು. ಅವರು ತಿಂಗಳಿಗೆ ಐದು ರೂಪಾಯಿಗಳಂತೆ ಫೀಜ್ ಕೊಡುತ್ತಿದ್ದರು. ಒಂಧು ವೇಳೆ ಅವರು ಸರಿಯಾಗಿ ಪಾಠ ಹೇಳಿಸಿಕೊಳ್ಳದಿದ್ದರೆ ಅದನ್ನೂ ಕೊಡುತ್ತಿರಲಿಲ್ಲ. ಎಡಬಿಡದೆ ಅವರ ಮನೆಗೆ ಎಡತಾಕಿದಾಗ ಫೀಜು ನಮ್ಮ ಕೈ ಸೇರುತ್ತಿತ್ತು. ಇಪ್ಪತ್ತೈದು ರೂಪಾಯಿಗಳಲ್ಲೆ ತಿಂಗಳಪೂರ್ತಿ ಜೀವನ ಸಾಗಿಸುವುದು ಕಷ್ಟವೆನಿಸಿತ್ತು. ಮನೆಯಲ್ಲಿ ಬಡತನ ಎಷ್ಟಿತ್ತೆಂದರೆ ಉಗಾದಿಯ ಹಬ್ಬದಂದು ತಿನ್ನಲು ಒಂದು ತುತ್ತು ಅನ್ನ ಇರಲಿಲ್ಲ. ಅದನ್ನ ತಿಳಿದ ಲಿಂಗರಾಜ ಮನ್ಸೂರರು ತಮ್ಮಲ್ಲಿದ್ದ ಹತ್ತು ರೂಪಾಯಿಗಳನ್ನು ಕೊಟ್ಟು ಕಳುಹಿಸಿದರು. ಈ ಕಿತ್ತುತಿನ್ನುವ ಬಡತನವೇ ನನ್ನನ್ನು ಬಣ್ಣದ ಬದುಕಿಗೆ ನೂಕಿತು. ಬಣ್ಣದಿಂದಲೇ ಮನೆಯವರೆಲ್ಲರನ್ನೂ ಸಾಕಿಸಲುಹಿದೆ. ನಮ್ಮ ಮನೆಯ ಕಷ್ಟಗಳಿಗೆ ಯಾವಾಗಲೂ ಸಹಾಯವಾಗುತ್ತಿದ್ದ ಲಿಂಗರಾಜ ಮನ್ಸೂರರ ಜೊತೆಯೇ ಸಂಸಾರ ಹೂಡಿದೆ. ನನಗಾಗ ಹದಿನಾಲ್ಕು ವರ್ಷ ವಯಸ್ಸು. ಅವರಿಗೆ ೩೮ ವರ್ಷ ವಯಸ್ಸಿತ್ತು. ನೋಡಿದವರೆಲ್ಲಾ ನಮ್ಮನ್ನು ತಂದೆ ಮಗಳು ಎಂದು ಗುರುತಿಸುತ್ತಿದ್ದರು. ಈ ನೋವನ್ನು ನಾನು ಬದುಕಿನುದ್ದಕ್ಕೂ ಎದುರಿಸಬೇಕಾಯ್ತು. ಹೆಣ್ಣಿಗೆ ಹದಿನಾಲ್ಕನೆಯ ವಯಸ್ಸಿಗೆ ಎಲ್ಲ ತಿಳುವಳಿಕೆ ಬಂದಿರತದೆಯಲ್ಲವಾ? ಅವರೊಂದಿಗೆ ನಾನು ಸುಖವಾಗಿಯೇ ಇದ್ದೆ. ನನಗೇನೂ ವಯಸ್ಸಿನ ಅಂತರ ಕಾಡಲಿಲ್ಲ. ಅವರು ನನ್ನಲ್ಲಿದ್ದ ಕಲಾ ಪ್ರತಿಭೆಯನ್ನು ಗೌರವಿಸಿ ಬೆಳೆಸಿದರು. ಅವರು ನನ್ನ ಜೀವನದಲ್ಲಿ ಪ್ರವೇಶಿಸದಿದ್ದರೆ ಏನಾಗಿರುತ್ತಿದ್ದೆನೊ ಗೊತ್ತಿಲ್ಲ. ನನ್ನ ಇಬ್ಬರು ಗಂಡುಮಕ್ಕಳು ವರ್ಕ್‌ಶಾಪ್ ನಡೆಸಿಕೊಂಡು ಸುಖವಾಗಿದ್ದಾರೆ. ಇಬ್ಬರು ಹೆಣ್ಣು ಮಕ್ಕಳಿದ್ದರು. ಅವರಲ್ಲಿ ಒಬ್ಬಳು ಈಗ ಇಲ್ಲ. (ಸ್ವಲ್ಪ ಹೊತ್ತು ಮೌನ ಒಂದು ದೀರ್ಘವಾದ ನಿಟ್ಟುಸಿರು) ಏನೇನೋ ಆಸೆಗಳನ್ನಿಟ್ಟುಕೊಂಡು ಅವರಿಬ್ಬರ ಮದುವೆ ಮಾಡಿದೆ. ಮದುವೆ ಶ್ರೇಷ್ಠ ಎನ್ನುವ ಕಲ್ಪನೆ ಇತ್ತು. ಇಬ್ಬರೂ ಗಂಡನ ಮನೆಯಲ್ಲಿ ಸುಖವಾಗಿರಲಿಲ್ಲ. ಒಬ್ಬಳು ಆ ಕಷ್ಟದಲ್ಲೇ ತೀರಿಹೋದಳು. ನನ್ನಂತೆ ನನ್ನ ಹೆಣ್ಣುಮಕ್ಕಳು ಜೀವನ ಸಾಗಿಸಿದ್ದರೆ ಸುಖವಾಗಿರುತ್ತಿದ್ದರೇನೋ ಎಂದು ಸಾವಿರ ಬಾರಿ ಹಳಹಳಿಸಿದ್ದೇನೆ. ಮದುವೆ ಶ್ರೇಷ್ಠ ಎಂದುಕೊಂಡು ನನ್ನ ಹೆಣ್ಣುಮಕ್ಕಳಿಗೆ ಎಂಥಾ ಅನ್ಯಾಯ ಮಾಡಿದೆ ಅನಿಸ್ತಿದೆ.

❑ **ಅಂದರೆ ನಿಮ್ಮದು ಸಾಂಪ್ರದಾಯಿಕ ವಿವಾಹವಲ್ಲವೇನು?**

ಇಲ್ಲ. ನನ್ನದು ಸಾಂಪ್ರದಾಯಿಕ ಮದುವೆ ಅಲ್ಲ. ಅವರು ನನಗೆ ತಾಳಿಕಟ್ಟಲಿಲ್ಲ. ನಾನೇ ನಾಟಕದಲ್ಲಿ ತಾಳಿಕಟ್ಟಿಕೊಂಡೆನು. ಅವರು ಕಟ್ಟಿದರೆಷ್ಟು? ಬಿಟ್ಟರೆಷ್ಟು? ಜೊತೆಗೂಡಿ ಬಾಳಬೇಕು ಎನ್ನುವ ನಂಬಿಕೆಯೇ ತಾಳಿ. ಯಾರಹತ್ರ ಮಾಡಿದ್ದು ಯಾರಹತ್ರ ಕಟ್ಟಿದ್ದು ಏನಾಗಬೇಕಾಗಿದೆ? ನಡಿಯೋ ಮನಸ್ಸು ಇಲ್ಲದ ಮೇಲೆ ಕಟ್ಟಿಕೊಂಡರೆಷ್ಟು ಬಿಟ್ಟರೆಷ್ಟು? ಇಬ್ಬರೂ ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳಬೇಕು. ಅದಕ್ಯಾಕ ತಾಳಿ ಬೇಕು?

❑ **ರಂಗಭೂಮಿಯೊಳಗಿನ ಮಹಿಳಾ ಶೋಷಣೆ ಹೇಗಿರುತ್ತದೆ?**

ಅವ್ನೆಲ್ಲಾ ಹೇಳಾಕ್ಕಾಗೊಲ್ಲ. ಹೇಳುವಂಥವೂ ಅಲ್ಲ (ಮೌನ)

❑ **ಒಬ್ಬ ಕಲಾವಿದೆಯಾಗಿ ಕಲಾವಿದರ ಕುರಿತು ನಿಮ್ಮ ಅಭಿಪ್ರಾಯ....**

ವೃತ್ತಿರಂಗಭೂಮಿಯನ್ನು ಅವರು ಅರ್ಥ ಮಾಡಿಕೊಳ್ಳುತ್ತಿಲ್ಲ. ಅದಕ್ಕಾಗಿ ಶ್ರಮ ಪಡುತ್ತಿಲ್ಲ. ನಮ್ಮ ಕಾಲದ ಕಲಾವಿದರಂತೆ ಈಗಿನವರು ಇಲ್ಲ. ನಮ್ಮ ಕಾಲ ಮುಗೀತಾ ಬಂತು. ಅಭಿನಯವನ್ನು ಕಷ್ಟಪಟ್ಟು ಕಲಿತು ರಂಗಭೂಮಿಯನ್ನು ಉಳಿಸಿ ಎಂದು ಹೇಳಿದರೂ ಯಾರೂ ಕೇಳುತ್ತಿಲ್ಲ. ನನ್ನನ್ನು ಬಿಟ್ಟರೆ ವೃತ್ತಿರಂಗಭೂಮಿಯಲ್ಲಿ ಹಾಡುವವರು ಯರೂ ಇಲ್ಲ. ನನ್ನ ಸ್ಥಾನವನ್ನು ತುಂಬುವ ವ್ಯಕ್ತಿಗಾಗಿ ಕಾಯುತ್ತಿರುವೆ. ನಾಗರತ್ನಮ್ಮ ಅಭಿನಯಿಸ್ತಾಳೆ, ಹಾಡಲು ಬರುವುದಿಲ್ಲ. ಕೂಡ್ಲಿಗಿಯ ಪದ್ಮನಿಗೆ ಒಳ್ಳೆಯ ಕಂಠವಿದೆ. ಆದರೆ ಅವಳು ಅದನ್ನು ಸರಿಯಾಗಿ ದುಡಿಸಿಕೊಳ್ಳುತ್ತಿಲ್ಲ. ಅವಳು ನಮಗ್ಯಾರು ಕಲಿಸ್ತಾರೆ ಎಂದು ಸುಮ್ಮಸುಮ್ಮನೆ ಹಲಬುತ್ತಾಳೆ. ಕಲಿಸುವವರು ಎಲ್ಲಿದ್ದಾರೆ ಎಂದು ಹುಡುಕುವ ಕಷ್ಟವನ್ನು ಅವಳು ತೆಗೆದುಕೊಳ್ಳುತ್ತಿಲ್ಲ. ಹಾಡಿದ ಕ್ಯಾಸೆಟ್‌ಗಳನ್ನು ಕೇಳಿ ಕಲಿಯುವ ಹವ್ಯಾಸವೂ ಅವಳಲ್ಲಿ ಇಲ್ಲ. ಅದಕ್ಕೆ ಸಲ್ಲುವ ಗೌರವ ಪುರಸ್ಕಾರಗಳೆಲ್ಲಾ ಬೇಕೆನ್ನುವವರು, ಅದಕ್ಕಾಗಿ ಎಷ್ಟು ಅವಧಿಯವರೆಗೆ ದುಡೀತಾ ಇದ್ದೇವೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ನಾಟಕ ಇಲಾಖೆಯವರು ಹಳೆ ರಂಗ ಗೀತೆಗಳನ್ನು ಉಳಿಸಿಕೊಳ್ಳುವ ಯೋಜನೆ ಹಾಕಿಕೊಂಡಿದ್ದಾರೆ. ಅದಕ್ಕಾಗಿ ನಮ್ಮ ಕಲಾವಿದರನ್ನೇ ಕರೆದುಕೊಂಡು ಹೋಗುವ ಆಸೆ ಇತ್ತು. ಆದರೆ ಅವರು ಆಸಕ್ತಿ ತೋರಲಿಲ್ಲ. ರಂಗಭೂಮಿ ನಿಮ್ಮ ಹೊಟ್ಟೆ ಬಟ್ಟೆಗೆ ಕೊರತೆ ಮಾಡ್ಲಿಲ್ಲ. ನಿಮಗೊಂದು ಐಡೆಂಟಿಟಿ ತಂದುಕೊಟ್ಟು. ರಂಗಭೂಮಿಗೆ ನೀವೇನು ಕೊಟ್ಟಿರುವಿರಿ ಎಂದು ಜನ ನಾಳೆ ನಮ್ಮನ್ನು ಪ್ರಶ್ನಿಸಬಹುದು. ಅದಕ್ಕೆ ಉತ್ತರಿಸುವ ನೈತಿಕ ತಾಕತ್ತನ್ನು ರಂಗ ಕಲಾವಿದರು ಬೆಳೆಸಿಕೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ಅವರು ದುಡಿಯಬೇಕಾಗಿದೆ. (ಸ್ವಲ್ಪ ಮೌನ) ರಂಗಭೂಮಿ ನಟಿಯರು ವೈಯಕ್ತಿಕ ಸಮಸ್ಯೆಗಳಲ್ಲಿ ತೊಳಲಾಡ್ತಾರೆ. ಅವರೆಲ್ಲ ನನ್ನನ್ನು ಅಮ್ಮಾ ಅಂತಲೇ ಕರೆಯುವುದು. ಹಲವಾರು ಬಾರಿ ತಮ್ಮ ಸಮಸ್ಯೆಗಳನ್ನು ನನ್ನ ಹತ್ರ ಹೇಳಿಕೊಂಡಿದ್ದಾರೆ. ಅನೇಕ ವೇಳೆ ಅವರ ಖಾಸಗಿ ಕಷ್ಟಗಳು ರಂಗಭೂಮಿಯಲ್ಲಿ ಬೆಳೆಯದಂತೆ ತಡೆಹಿಡಿಯುತ್ತವೆ ಎನಿಸುತ್ತೆ.

❑ **ನಿಮ್ಮ ಸಹನಟಿಯರು ನಿಮ್ಮೊಂದಿಗೆ ಹಂಚಿಕೊಳ್ಳುವ ನೋವುಗಳು ಸಾಮಾನ್ಯವಾಗಿ ಎಂಥವಿರುತ್ತಿದ್ದವು?**

ಅವ್ನೆಲ್ಲಾ ಹ್ಯಾಗೆ ಹೇಳೋಕಾಗುತ್ತೆ? ನಮಗೆ ಮದುವೆ ಮಾಡಿದ್ರೆ ಈ ಸಮಸ್ಯೆ ಇರ್ತಿರಲಿಲ್ಲ ಅನ್ತಿದ್ರು. ಪ್ರೀತಿ ಪ್ರೇಮದ ಹೆಸರಿನಲ್ಲಿ ಗಂಡಸರು ಅವರಿಗೆ ಮಕ್ಕಳನ್ನು ನೀಡಿ ಹೋಗುತ್ತಿದ್ದರು. ಅವುಗಳ ಪೋಷಣೆಯ ಜವಾಬ್ದಾರಿ ಇವರ ಮೇಲೆಯೇ ಬೀಳುತ್ತಿತ್ತು. ನೋವಿನ ಜೊತೆಗೆ ಮಕ್ಕಳನ್ನು ಸಾಕುವ ಹೊಣೆಯನ್ನು ಅವರ ಮೇಲೆಯೇ ಹೇರಿ ಹೋಗ್ತಿದ್ರು. ಎಲ್ಲಾ ನೋವು ಅಪಮಾನಗಳು ಹೆಣ್ಣಿಗೇ ಯಾಕೆ ತಳಕ ಹಾಕತಾವು

ಅಂತ ಅನಿಸ್ತದ. ಮದುವೆಯಾಗದಿದ್ರೂ ಒಬ್ಬನೊಂದಿಗೆ ನಿಯತ್ತಿನಿಂದಿದ್ರೆ ಈ ಸಮಸ್ಯೆಗಳನ್ನು ಅವರು ಎದುರಿಸುತ್ತಿರಲಿಲ್ಲ.

❑ **ಪಾತ್ರಗಳ ಆಯ್ಕೆಯನ್ನು ನೀವೇ ಮಾಡಿಕೊಳ್ಳುತ್ತೀರಾ?**

ಇಲ್ಲ. ನಿರ್ದಿಷ್ಟ ಪಾತ್ರಗಳಿಂದ ನಾನು ನನ್ನನ್ನು ಗುರುತಿಸಿಕೊಂಡಿದ್ದರಿಂದ ಜನರು ನನ್ನನ್ನು ಆ ಪಾತ್ರಕ್ಕಾಗಿಯೇ ಆಯ್ಕೆ ಮಾಡ್ತಾರೆ.

❑ **ರಂಗಭೂಮಿ ಕಲಾವಿದರಿಗೆ ಪ್ರತ್ಯೇಕವಾದ ಒಂದು ಅಕಾಡೆಮಿ ಬೇಕಲ್ಲವೆ? ಉದಾಹರಣೆಗೆ ಸಾಹಿತಿಗಳಿಗೆ ಸಾಹಿತ್ಯ ಅಕಾಡೆಮಿ ಇದೆ. ಸಿನಿಮಾದವರಿಗೆ ಫಿಲಮ್ ಚೇಂಬರ್ ಅಕಾಡೆಮಿ ಅಂಥಾವೆಲ್ಲ ಇವೆ. ಆದರೆ ಈ ವೃತ್ತಿ ರಂಗಭೂಮಿ ಕಲಾವಿದರಿಗೆ ವಿಶೇಷವಾದ ಅಕಾಡೆಮಿ ಬೇಕಲ್ಲವೆ? ನಾಟಕ ಅಕಾಡೆಮಿ ಇದ್ದೂ ಕೂಡ ನಾಟಕ ಕಲಾವಿದರನ್ನು ಸೂಕ್ತವಾಗಿ ನಡೆಸಿಕೊಳ್ತಿದೆಯಾ?**

ಎಲ್ಲ ಅಕಾಡೆಮಿಗಳಂತೆ ನಾಟಕ ಅಕಾಡೆಮಿಯೂ ಕೆಲಸ ಮಾಡ್ತಾ ಇದೆ. ಈ ಅಕಾಡೆಮಿಗಾಗಿ ಕಲಾವಿದರು ಬಹಳ ಹೋರಾಡಿದ್ರು. ರಂಗಭೂಮಿಗಾಗಿಯೇ ಜೀತ ತೇಯ್ದ ನಮ್ಮಂತವರನ್ನು ಗುರುತಿಸಿ ಗೌರವಿಸಬೇಕಾದದ್ದು ನಾಟಕ ಅಕಾಡೆಮಿಯ ಕರ್ತವ್ಯ. ಅದಕ್ಕಾಗಿ ನಟರು ಹೋರಾಡುವ ಅಗತ್ಯವಿಲ್ಲ. ಸಾಮಾನ್ಯವಾಗಿ ರಂಗಭೂಮಿಯ ನಟ - ನಟಿಯರೆಲ್ಲ ಬಡವರು. ಅವರಿಗೆ ಬೆಂಗಳೂರಿನತನಕ ಹೋಗಿ ಹೋರಾಡುವ ಶಕ್ತಿಯಿಲ್ಲ. ಅದೂ ಅಲ್ಲದೆ ರಂಗಕಲಾವಿದರು ಹೆಚ್ಚು ವಿದ್ಯಾವಂತರಲ್ಲ. ನಮಗೆ ಇವೆಲ್ಲ ಅರ್ಥವಾಗುವುದಿಲ್ಲ. ಸರ್ಕಾರ ಇದನ್ನೆಲ್ಲ ಅರ್ಥಮಾಡಿಕೊಳ್ಳಬೇಕು. ಪಿಂಚಣಿಗೋಸ್ಕರ ಒದ್ದಾಡುವ ನಮಗೆ ಪ್ರಶಸ್ತಿ ಗೌರವುಗಳು ದೂರದ ಮಾತಾಗುತ್ತವೆ.

❑ **ಅಂದಹಾಗೆ ನಿರಂತರವಾಗಿ ವೃತ್ತಿ ರಂಗಭೂಮಿಯಲ್ಲಿ ಸೇವೆಸಲ್ಲಿಸಿದವರಿಗೆ ಸರ್ಕಾರ ಪಿಂಚಣಿ ನೀಡ್ತಿದೆಯಾ?**

ಹೂಂ. ಕೊಡ್ತಾ ಇದ್ದಾರೆ ಮೊದಲು ಕಲಾವಿದರ ಸಾಧನೆಗನುಗುಣವಾಗಿ ತಿಂಗಳಿಗೆ ೧೦೦, ೧೫೦, ೨೦೦, ೨೫೦ ರೂಪಾಯಿಗಳವರೆಗೆ ಪಿಂಚಣಿ ಕೊಡ್ತಾ ಇತ್ತು. ಆಮೇಲೆ ೫೦೦ರೂ. ಮಾಡಿದ್ರು. ಈ ಪಿಂಚಣಿ ಜೀವನ ಪರ್ಯಂತ ಬಣ್ಣಹಚ್ಚಿಕೊಂಡು ಬದುಕಿದವರಿಗೆ ಮಾತ್ರ ಸಿಗುತ್ತಿತ್ತು. ಈಗ ಎಲ್ಲರಿಗೂ ಒಂದೇ ರೀತಿಯಲ್ಲಿ ೨೫೦ ರೂಪಾಯಿಗಳನ್ನು ಕೊಡ್ತಿದ್ದಾರೆ. ಅವರು ಬಣ್ಣ ಹಚ್ಚಿದ್ರೂ ಬಂತು ಹಚ್ಚದೆ ಇದ್ದರೂ ಬಂತು, ದೊಡ್ಡ ದೊಡ್ಡ ಜನಗಳ ವಶೀಲಿಯಿಂದ ಕಲಾವಿದರಲ್ಲದವರೂ ಪಿಂಚಣಿ ತೆಗೆದುಕೊಳ್ತಿದ್ದಾರೆ. ಅಂತವರನ್ನು ನೋಡಿ ನಾವು ಕಲಾವಿದರೂ ಅಂತ ಹೇಳಿಕೊಳ್ಳಲಿಕ್ಕೆ ನಮಗೇ ನಾಚಿಕೆಯಾಗ್ತಿದೆ. ನಿಜವಾದ ಎಷ್ಟೋ ಕಲಾವಿದರಿಗೆ ಇನ್ನೂ ಪಿಂಚಣಿ ದೊರೆತಿಲ್ಲ. ಇದು ಒಂದು ದುರಂತವೇ ಸರಿ. ಕುಡುತಿನಿ ರಾಮಣ್ಣ ಮೊದಲಾದವರಿಗೆ ನಾನೇ ಓಡಾಡಿ ಪಿಂಚಣಿ ಕೊಡಿಸಿದ್ದೆ. ಈಗಿನ ಕಾಲದಲ್ಲಿ ೨೫೦ ರೂಪಾಯಿಗಳು ಎದಕ್ಕೆ ಆಗುತ್ತೆ ಹೇಳಿ? ಸರ್ಕಾರ ಅರ್ಥಾಮಾಡ್ಕೋಬೇಕು. ನಿಜವಾದ ಕಲಾವಿದರಿಗೆ ಪಿಂಚಣಿ ಕೊಡಬೇಕು. ಪಿಂಚಣಿಗಾಗಿ ಹೋರಾಡೋ ಕಲ್ಪನೆ ನಮ್ಮ

ಕಲಾವಿದರಲ್ಲಿ ಇಲ್ಲ. ನನಗೆ ರಾಜ್ಯ ಸರ್ಕಾರದಿಂದ ತಿಂಗಳಿಗೆ ೨೫೦ ರೂಪಾಯಿಗಳೂ ಕೇಂದ್ರ ಸರ್ಕಾರದಿಂದ ೧೫೦೦ ರೂಪಾಯಿಗಳು ಪಿಂಚಣಿ ದೊರೆಯುತ್ತಿದೆ.

❑ **ನಿಮಗೆ ನಿಮ್ಮದೇ ಆದ ಸ್ವಂತ ಕಂಪನಿ ತೆಗೆಯುವ ಆಸೆಯಿತ್ತಾ?**

೨೫ ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದ ನನಗೆ ಅದೆಂತಹ ಆಸೆ ಇರುತ್ತೆ ಹೇಳಿ? ಕಲಾವೇದಿಕೆಯನ್ನು ನಿರ್ಮಿಸಲು ಲಕ್ಷಾಂತರ ರೂಪಾಯಿಗಳು ಬೇಕಾಗುತ್ತದೆ. ಅಷ್ಟು ದುಡ್ಡು ನನ್ನ ಹತ್ತಿರ ಎಲ್ಲಿತ್ತು? ಎಲ್ಲಿದೆ? ಇನ್ನೊಂದು ಸಂಗತಿ ನಿಮಗೆ ಹೇಳಬೇಕೆಂದ್ರೆ ನನ್ನ ಇಪ್ಪತ್ತೈದನೆಯ ವಯಸ್ಸಿನವರೆಗೆ ನಾನು ನೂರರ ನೋಟನ್ನು ನೋಡೇ ಇರಲಿಲ್ಲ. ವಾರಕ್ಕೆ ಇಪ್ಪತ್ತೈದು ರೂಪಾಯಿಗಳು ಸಿಗುತ್ತಿತ್ತು. ಅದರಲ್ಲೇ ವೈಯಕ್ತಿಕ ಖರ್ಚಿಗೆ ಇಟ್ಟುಕೊಂಡು, ಮನೆಗೂ ಕೊಟ್ಟು ಕಳುಹಿಸುತ್ತಿದ್ದೆನು. ಇಂತಹದರಲ್ಲಿ ನಾನ್ಹೇಗೆ ಒಂದು ನೂರು ರೂಪಾಯಿಯನ್ನು ನೋಡಲು ಸಾಧ್ಯ? ಒಂದು ಸಲ ನಾನೇ ಕುತೂಹಲದಿಂದ ತರಿಸಿ ನೋಡಿದೆ.

ದುಡ್ಡಿಲ್ಲದ ನಾನು ಕಂಪನಿ ತೆಗೆಯುವ ಆಸೆಯನ್ನು ಹ್ಯಾಗೆ ಇಟ್ಟುಕೊಳ್ಳಲಿ? ದುಡ್ಡಿನ ಜೊತೆಗೆ ದೊಡ್ಡ ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಹೋಗುವ ತಾಕತ್ತು ಬೇಕು. ಈಗ ಚಿಕ್ಕೇನು ಕೊಪ್ಪದ ಶರಣರ ಕಲಾಬಳಗವನ್ನು ನಡೆಯಿಸಿಕೊಂಡು ಹೋಗುತ್ತಿರುವೆ. ನಾಟಕದಲ್ಲಿಯ ಉಡುಪು ವೇದಿಕೆಯ ಖರ್ಚಿಗಾಗಿ ಸಂಸ್ಕೃತಿ ಇಲಾಖೆಯವರು ೨೫೦೦ ರೂಪಾಯಿಗಳನ್ನು ಕೊಡ್ತಾರೆ. ಕಲಾವಿದರ ತಂಡವನ್ನೇನೂ ನಾನು ಕಟ್ಟಿಕೊಂಡಿಲ್ಲ. ಕಲಾವಿದರೆಲ್ಲ ನಮಗೆ ಪರಿಚಿತರು. ಅವ್ರಿಗೆ ಇಂತಿಂಥ ಪಾತ್ರವನ್ನಾಡಬೇಕೆಂದು ನಾಟಕ ಪುಸ್ತಕ ಕೊಟ್ಟರೆ ಸಾಕು ತಾವೇ ತಯಾರಾಗಿ ನಾಟಕಕ್ಕೆ ಬರುತ್ತಾರೆ.

❑ **ರಂಗನಟಿಯಾಗಿ ಅಭಿನಯಿಸಿದ ನೀವು ಇಂದು ಸ್ವತಂತ್ರವಾಗಿ ಸಂಸ್ಥೆಯನ್ನು ನಡೆಸುತ್ತಿದ್ದೀರಿ. ಈಗ ನಿಮಗೆ ಏನೆನ್ನಿಸುತ್ತದೆ?**

ನಟಿಯಾಗಿ ಅಭಿನಯಿಸಿದ ನಾನು ಈಗ ಒಂದು ಸಂಸ್ಥೆಯನ್ನು ನಡೆಸುತ್ತಿದ್ದೇನೆ ನಿಜ. ಅದರಲ್ಲೇನೂ ಅಂತಹ ಭಿನ್ನತೆ ಕಾಣುವುದಿಲ್ಲ. ಕಲಾವಿದರನ್ನು ಕರೀಬೇಕು, ಕರಕೊಂಡು ಹೋಗಬೇಕು ಅನ್ನುದನ್ನು ಬಿಟ್ರೆ ಬೇರೇನೂ ಅನ್ನಿಸುವುದಿಲ್ಲ. ಇದು ಕಂಪನಿ ಅಲ್ಲ. ವರ್ಷಕ್ಕೆ ಒಂದು ಬಾರಿ ಎಲ್ಲರೂ ಸೇರಿ ನಾಟಕ ಆಡ್ತೀವಿ. ಅದು ಚಿಕ್ಕೇನಕೊಪ್ಪದ ಅಜ್ಜನವರ ಆಜ್ಞೆ. ವರ್ಷಾ ವರ್ಷ ನಾಟಕ ತಪ್ಪಿಸಲಾರ್ದೆ ಆಡ್ರಿ ಅಂತ ಹೇಳಿದ್ರು. ಅದನ್ನೇ ಮುಂದುವರಿಸಿಕೊಂಡು ಹೊರಟಿರುವೆ.

❑ **ನಿಮ್ಮಂತೆಯೇ ನಿಮ್ಮ ಮಕ್ಕಳು, ಮೊಮ್ಮಕ್ಕಳು ವೃತ್ತಿರಂಗಭೂಮಿಯಲ್ಲಿ ಮುಂದುವರಿಯಲು ಬಯಸುತ್ತೀರಾ?**

ಇಲ್ಲ. ನಾನದನ್ನು ಇಷ್ಟುಪಡುವುದಿಲ್ಲ. ನನ್ನ ಬಣ್ಣದ ನೆರಳೂ ಅವರ ಮೇಲೆ ಬೀಳಬಾರದೆಂದು ನನ್ನ ಮಕ್ಕಳನ್ನೆಲ್ಲ ನನ್ನ ತಾಯಿಯ ಅಣ್ಣನ ಹತ್ತಿರವಿಟ್ಟೇ ದೊಡ್ಡವರನ್ನಾಗಿ ಬೆಳೆಸಿದೆ. ರಂಗಭೂಮಿಯಲ್ಲಿ ಹುಡುಗರು ಬಹುಬೇಗನೆ ನಡತೆ ಕಳೆದುಕೊಳ್ಳುತ್ತಾರೆ. (ಸ್ವಲ್ಪ

ಮೌನ) ಹೆಣ್ಣುಮಕ್ಕಳನ್ನು ಆ ಕ್ಷೇತ್ರಕ್ಕೆ ಇಳಿಸಲು ನನ್ನ ಮನಸ್ಸು ಒಪ್ಪಲಿಲ್ಲ. ನನ್ನ ಗಂಡ ಬಹಳ ನಿಯತ್ತಿನಿಂದ ಬದುಕಿದವರು. ಅವರ ಹೆಸರಿಗೆ ದಕ್ಕೆ ತರಬಾರದು ಎಂಬ ಕಾರಣಕ್ಕಾಗಿಯೇ ರಂಗಭೂಮಿಗೆ ಬಿಡಲಿಲ್ಲ. ಅಲ್ಲದೆ ನಟಿಯರ ಅನೇಕ ದುರಂತ ಬದುಕನ್ನು ಕಂಡಿದ್ದೆ. ಅದಕ್ಕಾಗಿ ನನ್ನ ಮನಸ್ಸು ಹೆಣ್ಣುಮಕ್ಕಳನ್ನು ರಂಗಭೂಮಿಗೆ ಬಿಡಲು ಒಪ್ಪಲಿಲ್ಲ.

❑ **ವೃತ್ತಿ ಜೀವನದ ಕುರಿತು ನಿಮಗೆ ಸಂತೃಪ್ತಿ ಇದೆಯೆ?**

ತೃಪ್ತಿಯಿದೆ. ರಂಗಭೂಮಿ ನನ್ನನ್ನು ಕರೆಯದಿದ್ದರೆ ನಾನೇನಾಗಿರುತ್ತಿದ್ದೆನೋ ಗೊತ್ತಿಲ್ಲ. ಬಣ್ಣ ನನಗೆ ಬದುಕು ನೀಡಿದೆ. ಅದಕ್ಕೆ ಕೃತಜ್ಞಳಾಗಿರುವೆ.

❑ **ನಿಮಗೆ ಸಿಕ್ಕ ಪ್ರಶಸ್ತಿಗಳು....**

ಖಾಸಗಿಯವರು ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿದ್ದಾರೆ. ೧೬.೮.೧೯೯೮ ರಂದು ಕೊಟ್ರಪ್ಪಗೌಡ ಪಾಟೀಲ ಕಲಾರಾಧಕ ಪ್ರಶಸ್ತಿ ನೀಡಿದರು. ಬಸವಕೇಂದ್ರ ಶ್ರೀ ಮುರುಘ ರಾಜೇಂದ್ರಮಠ ಚಿತ್ರದುರ್ಗದವರು ೨೦.೧೦.೧೯೯೬ ರಲ್ಲಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಿದ್ದಾರೆ. ಸರಕಾರದವರೂ ನನ್ನನ್ನು ಗೌರವಿಸಿದ್ದಾರೆ. ೧೯೮೬ರಲ್ಲಿ ಕರ್ನಾಟಕ ನಾಟಕ - ಅಕಾಡೆಮಿ ಅವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ೧೯೯೬ರಲ್ಲಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟಿದೆ. ೬೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿದ್ದಾರೆ. ಇವೆಲ್ಲ ಜೀವನದಲ್ಲಿ ಅವಿಸ್ಮರಣೆಯ ಸಂತಸದ ಕ್ಷಣಗಳನ್ನು ತಂದಿವೆ.

❑ **ನಿಮ್ಮ ಮುಂದಿನ ಯೋಜನೆಗಳು....**

ಆ ತರಹದ ಯಾವ ಯೋಜನೆಗಳಿಲ್ಲ. ಹೀಗೆ ಯೋಜನೆ ಹಾಕುವ ತಲೆಯಿದ್ದರೆ ನನ್ನನ್ನಾರು ಹಿಡೀತಿದ್ರು. (ದೊಡ್ಡ ನಗು).

❖ ❖

ಇದೇ ಲೇಖಕರ 'ಪಾತರದವರು' ಕೃತಿ ಕುರಿತು ...

'ಪಾತರದವರು' ಕೃತಿಗೆ ದೊರೆತ ಪ್ರಶಸ್ತಿಗಳು

ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೯

ಅತ್ತಿಮಬ್ಬೆ, ೧೯೯೯

ಸಾಹಿತ್ಯ ಅಕಾಡೆಮಿ ೧೯೯೯ರ ಬಹುಮಾನಕ್ಕೆ ಆಯ್ಕೆ ಮಾಡಿದ ವಿದ್ವಾಂಸರ ಅಭಿಪ್ರಾಯ

(ಬಹುಮಾನಿತ ಕೃತಿಗಳು, ೨೦೦೧, ಸಂ. ಗಿರಡ್ಡಿ ಗೋವಿಂದರಾಜ, ಪು.೭೫-೮೨)

ಸಮಾಜದಲ್ಲಿ ಉಪೇಕ್ಷಿಸಲ್ಪಟ್ಟ ಅಷ್ಟೆ ಅಲ್ಲ ಕೀಳಾಗಿ ನೋಡಲ್ಪಟ್ಟ ಅವರ ಜೀವನಶೈಲಿ, ಸ್ಥಾನ, ಮಾನ ಹೆಮ್ಮೆಯಿಂದ ಹೇಳಿಕೊಳ್ಳುವಂಥಾದ್ದಲ್ಲ. ಹೀಗಿದ್ದರೂ ಕೂಡ ಶ್ರೀಮತಿ ಶೈಲಜ ಹಿರೇಮಠ ಅವರು ತಮ್ಮ ಗ್ರಂಥದ ಅನುಬಂಧದಲ್ಲಿ ವಿವರಿಸಿದಂತೆ (ಪು. ೧೨೬-೧೯೫), ಒಂದು ರೀತಿ ಛಲದಿಂದ, ಧೈರ್ಯದಿಂದ ಸುಮಾರು ೧೫ ಮನೆತನಗಳಿಂದ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಿರುವುದು ಸಾಹಸವೇ ಸರಿ. ಮತ್ತು ಇವರ ದೃಢ ನಿರ್ಧಾರ, ಪ್ರಯತ್ನಶೀಲತೆ ಮೆಚ್ಚುವಂಥದ್ದು.

ಗ್ರಂಥಕರ್ತರು ತುಂಬಾ ಪ್ರಯಾಸಪಟ್ಟು ಸಂಗ್ರಹಿಸಿದ ಮಾಹಿತಿಯನ್ನು ಕ್ರಮಬದ್ಧವಾಗಿ ಸಂಯೋಜಿಸಿ ಸಂಕೋಚವಿಲ್ಲದೆ ನೇರವಾಗಿ ಪಾತರದವರ ಬಗ್ಗೆ ಇತಿಹಾಸದ ಸ್ಥೂಲ ಹಿನ್ನಲೆಯಲ್ಲಿ ಯಥಾಸ್ಥಿತಿ ಜೀವನ ಚಿತ್ರವನ್ನು ಕೊಡುವ ಒಳ್ಳೆಯ ಹೊತ್ತಿಗೆ.

ಅ.ಸುಂದರ

ಇಲ್ಲಿಯ ಸಂಶೋಧನೆ ಉತ್ತರ ಕರ್ನಾಟಕದ ಪಾತರದವರಿಗೆ ಸೀಮಿತವಾಗಿದ್ದರೂ ಒಟ್ಟು ಕರ್ನಾಟಕ ಹಾಗೂ ಭಾರತದ ಸಂದರ್ಭದಲ್ಲಿ ಪ್ರಚಲಿತವಿದ್ದ ಈ ಸಂಪ್ರದಾಯದ ಕಡೆಗೆ ಹರಡಿಕೊಂಡಿದೆ.

'ಪಾತರದವರು' ಎಂಬುದರ ಅರ್ಥ, ಉಗಮ, ಬೆಳವಣಿಗೆ, ಅವರ ಕುಟುಂಬ ಜೀವನ, ಸಾಮಾಜಿಕ ಜೀವನ, ಕಲಾಜೀವನ, ಸಾಂಸ್ಕೃತಿಕ ಪಲ್ಲಟಗಳು, ಸ್ಥಿತ್ಯಂತರಗಳು ಇತ್ಯಾದಿ ಅಂಶಗಳ ವಿಶ್ಲೇಷಣೆಗಾಗಿ ನಡೆಸಿದ ಶ್ರದ್ಧಾವಂತ, ಸಾಹಸಮಯ ಕ್ಷೇತ್ರಕಾರ್ಯ ವಿರಳ ರೀತಿಯದು. ಚರಿತ್ರೆಯಲ್ಲಿ ಬಿಟ್ಟುಹೋದ ಮಹಿಳಾ ನೆಲೆಗಳನ್ನು ಶೋಧಿಸುವುದರೊಂದಿಗೆ ಪುರಷ ಪ್ರಧಾನ ವ್ಯವಸ್ಥೆಯನ್ನು ಅಳಿಸಿಹಾಕಿ ಮಾನವತಾವಾದದ ಮೇಲೆ ಸಮಾಜವನ್ನು ಕಟ್ಟುವ ಗುರಿ ನಮ್ಮದಾಗಬೇಕು ಎಂಬುದೇ ಇಲ್ಲಿಯ ಸಂಶೋಧನೆಯ ಉದ್ದೇಶ. ಇಲ್ಲಿಯ ವಿಶ್ಲೇಷಣೆ ಆಳವಾದುದು, ಸೂಕ್ಷ್ಮವಾದುದು.

ಎಸ್.ಆರ್.ಮಳಗಿ

ಇದೊಂದು ವಿಶಿಷ್ಟ ವೃತ್ತಿಯವರ ವಿಶಿಷ್ಟ ಜನಾಂಗದ ಅಧ್ಯಯನ. ಲೇಖಕರು ಶ್ರಮವಹಿಸಿ ಕೆಲಸ ಮಾಡಿದ್ದಾರೆ. ಸಮಕಾಲೀನ ಜೀವನದ ಚಿತ್ರವನ್ನು ತುಂಬಾ ಕಷ್ಟವಹಿಸಿ ವಿಷಯಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಇದು ಶ್ಲಾಘನೀಯ ಕೆಲಸ.

ಸೀತಾರಾಮ ಜಾಗೀರ್‌ದಾರ್

ಎಲ್ಲ ದೃಷ್ಟಿಯಿಂದಲೂ ಇದೊಂದು ವಿಶಿಷ್ಟ ವಿಷಯದ ವಿನೂತನ ನಿರೂಪಣೆಯ ಪುಸ್ತಕ. 'ಪಾತರದವರು' ಎನ್ನುವ ವಿಷಯದಲ್ಲಿ ಏನೆಲ್ಲ ಒಳಪದರುಗಳಿವೆ. ಸ್ತ್ರೀಯ ಲೈಂಗಿಕ ಶೋಷಣೆ ಎಂದು ಕರೆದರೂ - ಸಖಿ-ಸಖ ಸಂಬಂಧ, ಸೂಳೆತನ ಸಂಸಾರತನ -ಇವೆರಡೂ ಕಲಾಸೇವೆಗೆ-ಸಂಗೀತ-ನೃತ್ಯಕ್ಕೆ ಅಲ್ಲದ ದಾಂಪತ್ಯ, ಅವರನ್ನು ದೇವರ ಹೆಸರಿನಲ್ಲಿ ಕಲಾಸೇವೆಗೆ-ಸಂಗೀತ-ನೃತ್ಯಕ್ಕೆ ಬಳಸಿಕೊಂಡದ್ದು; ಆದರೆ ಈಗ ಆರ್ಥಿಕವಾಗಿ ಕಲಾಸೇವಾ ರಹಿತವಾಗಿ ಜೀವನ ಸಾಗಿರುವ ಕರುಣಾಮಯಿ ಪರಿಸ್ಥಿತಿ.

ಮೇಲಿನ ಅಂಶಗಳನ್ನು ಈ ಪುಸ್ತಕ ರೇಖೆ ರೇಖೆಯಾಗಿ ಚಿತ್ರಿಸಿದೆ. ಸೂಳೆ, ಬಸವಿ, ದೇವದಾಸಿ, ಆಗಿರದ ವಿಶಿಷ್ಟ ಮಹಿಳಾ ವರ್ಗವೊಂದನ್ನು ಮನ ತಟ್ಟುವಂತೆ ಪರಿಪೂರ್ಣ ವೆನಿಸುವ ರೀತಿಯಲ್ಲಿ ನಾವು ಕಾಣುತ್ತೇವೆ.

ಇದನ್ನು ನಿರೂಪಿಸಿದ ಬಗೆಯೂ ಹೊಸತು. Case Study ತರಹ ವಿಷಯ ಮಂಡನೆ ಯಿದೆ. ಅವರ ಕೌಟುಂಬಿಕ, ಕಲಾತ್ಮಕ ಹಾಗೂ ಸಾಮಾಜಿಕ ಜೀವನವನ್ನು ಹೇಳಿದ ರೀತಿ ಮನೋಜ್ಞವಾದುದು. ಭಾವನಾವಶತೆಯ ಅಂಶಗಳು ಅಲ್ಲಲ್ಲಿ ಕಂಡುಬರಬಹುದು. ಆದರೆ ಸ್ಪಷ್ಟ ಚಿತ್ರಣಕ್ಕೆ ಸಹಾಯಕವಾದುದು.

ಸಂಶೋಧನಾ ಗ್ರಂಥವೊಂದು ಶುಷ್ಕವೂ ಶತಶಃ ಪರನಿಷ್ಠವೂ (Objectivity) ಆಗಿರಲೇ ಬೇಕೆಂದಿಲ್ಲ ಎಂಬುವುದನ್ನು ಈ ಕೃತಿಯು ಸಾಬೀತು ಮಾಡುವಂತಿದೆ.

ಶ್ರೀನಿವಾಸ ಹಾವನೂರ

"ಪಾತರದವರು" ಎಂಬ ಕೃತಿ ಶ್ರೀಮತಿ ಶೈಲಜಾ ಹಿರೇಮಠ ಅವರ ರಚನೆಯಾಗಿದ್ದು, ಈಚಿನ ಕಾಲದ ಸಾಮಾಜಿಕ ಅಧ್ಯಯನಗಳಲ್ಲಿ ಗಣ್ಯವಾದುದಾಗಿದೆ.

ಪಾತರದವರ ಜೀವನವಿಧಾನ, ನೋವು-ನರಳಿಕೆಗಳು, ಪುರುಷ ಸಮಾಜದ ಶೋಷಣೆಯ ಮನೋಭೂಮಿಕೆ ಇವನ್ನೆಲ್ಲ ಹೃದಯಂಗಮವಾಗಿ ನಿರೂಪಿಸಿದೆ.

ಪಾತರದವರ ಬದುಕಿನಲ್ಲಿ, ವ್ಯವಹಾರದಲ್ಲಿ ಬಳಸುವ ಪಾರಿಭಾಷಿಕ ಪದಗಳನ್ನು ಹೆಚ್ಚು ವಿಮರ್ಶಿಸಲು ಹೋಗಿಲ್ಲವಾದರೂ, ಅವುಗಳನ್ನು ಕ್ರೋಢೀಕರಿಸಿ ಪರಿಚಯಿಸಿರುವುದು ಮೆಚ್ಚತಕ್ಕುದಾಗಿದೆ.

ಮುಖ್ಯವ್ಯಕ್ತಿಗಳ ಬದುಕಿನ ವಿವರಗಳನ್ನು ಅಲ್ಲಲ್ಲಿ ಅವರ ನಿರೂಪಣೆಗಳಾಗಿಯೇ ಕಥನದಲ್ಲಿ ಬಳಸಿರುವುದರಿಂದ ಅಧ್ಯಯನಕ್ಕೆ ಹೆಚ್ಚಿನ ಲವಲವಿಕೆ ಬಂದಿದ್ದು, ಒಂದು ಜೀವಂತ ಕಥನವಾಗಿ ಅಧ್ಯಯನ ಸಾರ್ಥಕವಾಗಿದೆ.

ಈ ಬಗೆಯ ಕೆಲಸ ದಕ್ಷಿಣ ಕರ್ನಾಟಕದ ಭಾಗದಲ್ಲಿ ಸಹ ನಡೆಯಬೇಕಾಗಿದ್ದು, ಅದಕ್ಕೆ ಈ ಗ್ರಂಥ ತಕ್ಕ ಪ್ರೇರಣೆ, ಮಾರ್ಗದರ್ಶನ ನೀಡಲು ಸಮರ್ಥವಾಗಿದೆ. ಇದೊಂದು ಶ್ಲಾಘನೀಯ ಪ್ರಯತ್ನ.

ಬರೆವಣಿಗೆಯ ಭಾಷೆ ಶೈಲಿ ಚೆನ್ನಾಗಿದೆ; ಭಾವುಕತೆ ಹೆಚ್ಚು.

ಟಿ.ವಿ.ವೆಂಕಟಾಚಲಶಾಸ್ತ್ರೀ

ಇತರ ವಿದ್ವಾಂಸರ ಅಭಿಪ್ರಾಯಗಳು

ಒಂದು ಹೊಸಬಗೆಯ ಪುಸ್ತಕ ಎಂದು ತಿಳಿಯುತ್ತೇನೆ. ಅದಕ್ಕೆ ಬೆಲೆ ಬಂದಿರುವುದು ನೀವು ನಡೆಸಿರುವ ಕ್ಷೇತ್ರಕಾರ್ಯದಿಂದ; ಅದರಿಂದ ಪಡೆದಿರುವ ಸಂದರ್ಶನ ಮೌಲ್ಯಗಳಿಂದ ಎಂದು ಹೇಳಬಯಸುತ್ತೇನೆ. ಈ ಅಧ್ಯಯನದಲ್ಲಿ ನೀವು ತೋರಿದ ಶ್ರದ್ಧೆ ಆಸಕ್ತಿಗಳನ್ನು ವಿಶೇಷವಾಗಿ ಹೇಳಲೇಬೇಕು. ಇಂಥ ಅಧ್ಯಯನಗಳಲ್ಲಿ ಒಮ್ಮೊಮ್ಮೆ ಹೀಗಾಗುತ್ತದೆ; ನೀವು ಎಷ್ಟು ಆಸಕ್ತಿ ತೋರಿದರೂ ಆ ಕಡೆಯಿಂದ ಉತ್ಸಾಹ ತೋರುವುದಿಲ್ಲ. ನಿಮ್ಮ ಅದೃಷ್ಟ ಚೆನ್ನಾಗಿದೆ. ಅವರು ಬಹಳ ಚೆನ್ನಾಗಿ ಸಹಕರಿಸಿದ್ದಾರೆ! ನಿಮ್ಮನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಹಾ.ಮಾ.ನಾಯಕ

೨.೨.೨೦೦೦

ನೀವು ನನಗೆ ಕೊಟ್ಟ 'ಪಾತರದವರು' ಎಂಬ ಸಂಶೋಧನಾತ್ಮಕ ಕೃತಿಯನ್ನು ನಾನು ಓದಿ, ಈ ವಿದ್ವತ್ ಸಾಹಸಕ್ಕಾಗಿ ಅಭಿನಂದಿಸುತ್ತಿದ್ದೇನೆ. ಧರ್ಮದ ಹೆಸರಿನಲ್ಲಿ ಪುರುಷಪ್ರಧಾನ ವ್ಯವಸ್ಥೆ ತನ್ನ ಮನರಂಜನೆ ಹಾಗೂ ಉಪಭೋಗಕ್ಕಾಗಿ, ಮಹಿಳೆಯರನ್ನು ನಿರಂತರವಾಗಿ ಶೋಷಿಸುತ್ತ ಬಂದ ಚರಿತ್ರೆಯ ಒಂದು ಮುಖವನ್ನು ನೀವು ತುಂಬ

ಸಮರ್ಥವಾಗಿ ಅನಾವರಣಗೊಳಿಸಿದ್ದೀರಿ. ಈ ಕೃತಿ ನಿರ್ಮಿತಿಯಲ್ಲಿ ನಿಮ್ಮ ವಿಸ್ತಾರವಾದ ಅಧ್ಯಯನ, ಕ್ಷೇತ್ರಕಾರ್ಯ ಹಾಗೂ ವಿಷಯವನ್ನು ವಿಶ್ಲೇಷಿಸಿ ನಿರೂಪಿಸಿರುವ ಕ್ರಮ, ಮತ್ತು ಅದರ ಹಿನ್ನಲೆಗಿರುವ ಮಹಿಳಾ ಅಧ್ಯಯನದ ದೃಷ್ಟಿಕೋನ ಈ ಬರಹದ ಮೌಲಿಕತೆಗೆ ಕಾರಣವಾಗಿದೆ. ನಾನು ಇತ್ತೀಚಿಗೆ ಓದಿದ ಗಂಭೀರವಾದ ಸಂಶೋಧನೆಯ ವಿರಳ ಕೃತಿಗಳಲ್ಲಿ ಇದೂ ಒಂದು.

ಜಿ.ಎಸ್.ಶಿವರುದ್ರಪ್ಪ

೨೮.೩.೨೦೦೦

ಅತ್ಯುತ್ತಮ ಪುಸ್ತಕದ ಮೂಲಕ ಹೊಸ ತಿಳುವಳಿಕೆ ಒದಗಿಸಿಕೊಟ್ಟ ನಿಮಗೆ ನಾನು ಕೃತಜ್ಞನಾಗಿದ್ದೇನೆ. ಹಾಗೇ ಅಭಿನಂದನೆಗಳು. ಪುಸ್ತಕ ತುಂಬಾ ಅದ್ಭುತವಾಗಿದೆ. ಸ್ತ್ರೀ ಕೇಂದ್ರಿತ ನೆಲೆಯಲ್ಲಿ ನಿಂತು ನೀವು ಪಾತರದವರನ್ನು ವಿಶ್ಲೇಷಿಸಿದ್ದರಿಂದ ಕೃತಿಗೆ ಕ್ರಿಯಾಶೀಲವಾದ ಆಯಾಮವೊಂದು ಪ್ರಾಪ್ತಿಸಿದೆ. ವಿಚಾರ ಮಂಡನೆಗೆ ನೀವು ಅನುಸರಿಸಿದ ವಿಧಾನ ಕೂಡ ಸಂಶೋಧನೆಯನ್ನು ಭಾರವಾಗಿಸದೆ ಸರಳಗೊಳಿಸದೆ, ಉಪಯುಕ್ತವಾಗಿಸಿದೆ. ನನ್ನ ಅರಿವಿನ ವಲಯವನ್ನು ವಿಸ್ತರಿಸಿದ ನಿಮಗೆ ಕೃತಜ್ಞನಾಗಿರುವೆ.

ಪುರುಷೋತ್ತಮ ಬಿಳಿಮಲೆ

೨೪.೧೨.೧೯೯೯

'ಮಹಿಳಾ ಅಧ್ಯಯನ'ವು ಒಂದು ಪ್ರಮುಖ ಜ್ಞಾನಶಿಸ್ತಾಗಿ ಬೆಳೆಯುತ್ತಿರುವ ಈ ಸಂದರ್ಭದಲ್ಲಿ, ಡಾ. ಶೈಲಜಾ ಹಿರೇಮಠ ಅವರ 'ಪಾತರದವರು' ಪುಸ್ತಕ ಈ ಕ್ಷೇತ್ರಕ್ಕೆ ಒಂದು ಹೊಸ ಸೇರ್ಪಡೆಯಾಗಿದೆ. ಅಲ್ಪಸಂಖ್ಯಾತರಾದ, ತುಂಬಾ ಉಪೇಕ್ಷೆಗೆ ಒಳಗಾಗಿದ್ದ ಈ ಜನಾಂಗದವರನ್ನು ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ.

ಇಲ್ಲಿ ಗಮನಿಸಬೇಕಾದ ವಿಶೇಷ ಸಂಗತಿಯೆಂದರೆ ಈ ಪುಸ್ತಕದಲ್ಲಿರುವುದು ಪಾತರದವರು ಕುರಿತಾದ ಕೇವಲ ಪರಿಚಯಾತ್ಮಕ, ವಿವರಣಾತ್ಮಕ ಅಧ್ಯಯನ ಅಲ್ಲ. ಪ್ರಖರವಾದ ಸ್ತ್ರೀ ದೃಷ್ಟಿಕೋನವೊಂದು ಇಲ್ಲಿನ ಅಧ್ಯಯನವನ್ನು ನಿಯಂತ್ರಿಸಿದೆ. ದೇವಾಲಯಗಳಲ್ಲಿ ಧರ್ಮದ ಪರದೆಯ ಹಿಂದೆ ನಡೆಯುತ್ತಿದ್ದ ಪಾತರದ ಸ್ತ್ರೀಯರ ಲೈಂಗಿಕ ಶೋಷಣೆಯನ್ನು ಈ ಪುಸ್ತಕ ಅನಾವರಣಗೊಳಿಸುತ್ತದೆ. ಧಾರ್ಮಿಕ ಸೇವೆಯ ಹೆಸರಿನಲ್ಲಿ ಪ್ರಧಾನ ಸಂಸ್ಕೃತಿಯು ಮುಚ್ಚಿಟ್ಟಿದ್ದ ಈ ಕಪ್ಪು ಸಂಗತಿಯು ಇಲ್ಲಿನ ಸ್ತ್ರೀ ದೃಷ್ಟಿಕೋನದ ಫಲವಾಗಿ ಕಪಾಟುಗಳಿಂದ ಹೊರಬಿದ್ದಿದೆ. ಮಹಿಳಾ ದೃಷ್ಟಿಕೋನದಿಂದ ಚರಿತ್ರೆಯನ್ನು ಪುನರ್ ವ್ಯಾಖ್ಯಾನಿಸಿದಾಗ ಆಗುವ ಸತ್ಯದರ್ಶನ ಇದು. ಇದನ್ನು ಮಾಡುವ ಮೂಲಕ ಲೇಖಕಿಯು ಸಾಂಸ್ಕೃತಿಕವಾಗಿ ಅತ್ಯಂತ ಜರೂರಾಗಿದ್ದ ಕೆಲಸವೊಂದನ್ನು ಮಾಡಿದಂತಾಗಿದೆ.

ಈ ಪುಸ್ತಕವು ಮೂಲತಃ ಕ್ಷೇತ್ರಕಾರ್ಯವನ್ನು ಆಧರಿಸಿದ ಒಂದು ಸಂಶೋಧನಾ ಬರಹ. ಹೀಗಾಗಿ ಇಲ್ಲಿನ ಪ್ರಬಂಧಗಳಿಗೆ ಅಕೆಡೆಮಿಕ್ ಅನ್ನಬಹುದಾದ ಶಾಸ್ತ್ರೀಯ

ಗುಣವಿದೆ. ತನ್ನ ಅನುಕೂಲಕ್ಕೆಂದೇ ಒಂದು ಜನಾಂಗವನ್ನು ಸೃಷ್ಟಿಸಿಕೊಂಡು ಪ್ರಧಾನ ಸಂಸ್ಕೃತಿಯು ಅದರಲ್ಲೂ ಮುಖ್ಯವಾಗಿ ರಾಜಶಾಹಿ ಮತ್ತು ಪುರೋಹಿತಶಾಹಿ ಹೇಗೆ ಸ್ತ್ರೀ ಶೋಷಣೆಯನ್ನು ಕೈಗೊಂಡಿತು ಎಂಬುದನ್ನು ಈ ಪುಸ್ತಕ ಸವಿವರವಾಗಿ ವರ್ಣಿಸಿದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ವಿದೇಶಿಯ ದೃಷ್ಟಿಕೋನದಿಂದ ಮಾಡಲ್ಪಟ್ಟ ಅಧ್ಯಯನಗಳು ಯುರೋಪಿಯನ್ ಸಾಂಸ್ಕೃತಿಕ ವಲಯದಲ್ಲಿ ಜನ್ಮ ಪಡೆದ 'ಪ್ರಾಸ್ಟಿಟ್ಯೂಟ'ನಂತಹ ಪದಗಳನ್ನು ಪಾತರದವರ ಸಂದರ್ಭದಲ್ಲಿ ಉಪಯೋಗಿಸಿರುವುದನ್ನು ಲೇಖಕಿ ಖಂಡಿಸಿದ್ದಾರೆ. ಹಾಗೆ ಕರೆದು ಪಾತರದ ಜನಾಂಗದವರನ್ನು ಅವಮಾನ ಮಾಡಬಾರದೆಂಬುದು ಅವರ ಕಳಕಳಿಯಾಗಿದೆ.

ಸ್ತ್ರೀ ಸಂವೇದನೆಯಿಂದ ಹೊರಟ ಅಧ್ಯಯನಗಳು ಸಂಸ್ಕೃತಿಯನ್ನು ಕುರಿತು ಎಂಥ ಸ್ತಂಭೀಭೂತಗೊಳಿಸುವ ಸತ್ಯಗಳನ್ನು ಹೇಳುತ್ತವೆ ಎಂಬುದಕ್ಕೆ ಈ ಪುಸ್ತಕ ಉದಾಹರಣೆಯಾಗಿದೆ. ಇಳಕಲ್ ಸೀರೆ ಮತ್ತು ಉತ್ತರ ಕರ್ನಾಟಕದ ಜನಪದೀಯ ಚಿತ್ರಗಳ ಆಶಯಗಳನ್ನು ಹೊಂದಿದ ಮನೋಹರವಾದ ಮುಖಪುಟವನ್ನು ಹೊಂದಿದ ಈ ಪುಸ್ತಕವು ಮಹಿಳಾ ಅಧ್ಯಯನವನ್ನು ಕುರಿತು ಆಸಕ್ತಿ ಇರುವವರು ಓದಲೇಬೇಕಾದ ಪುಸ್ತಕವಾಗಿದೆ.

ಎಲ್.ಜಿ.ಮೀರಾ

ವಿಜಯಕರ್ನಾಟಕ, ೯.೪.೨೦೦೦

ಈ ಹಿಂದೆ ಮಿತ್ರ ನಾಗರಾಜ 'ನಾಯಕಸಾನಿ' ಎಂಬ ಕೃತಿ ರಚಿಸಿ ಕುತೂಹಲ ಕೆರಳಿಸಿದ್ದರು. ಈಗ ನಿಮ್ಮ 'ಪಾತರದವರು' ವಿಶಾಲ ಅರ್ಥದಲ್ಲಿ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿದೆ. ನಿಮ್ಮ ಶ್ರಮ ಸಾರ್ಥಕವಾಗಿದೆ. ಕೊಟ್ಟೂರಲ್ಲಿ ಪಾತರದವರ ಓಣಿಯೇ ಇದೆ. ಇಂಥದೊಂದು ಕೃತಿಯ ಅಗತ್ಯ ಇತ್ತು. ನಿಮ್ಮ ಕೃತಿ ತಕ್ಕಮಟ್ಟಿಗೆ ತೀರಿಸಿದೆ. ಅಮಿನಾ, ಗೋಹರಜಾನ್, ಅಲ್ಲಾಸಾನಿಯರ ಕಥಾನಕಗಳಿಂದ ಕೃತಿಯ ಮೌಲ್ಯ ಹೆಚ್ಚಿದೆ. ನಿಮಗೆ ನನ್ನ ಅಭಿನಂದನೆಗಳು.

ಕುಂ.ವೀರಭದ್ರಪ್ಪ

೨೫.೧೧.೯೯

ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ಸಂಬಂಧಿಸಿದ ಒಂದು ಸೂಕ್ಷ್ಮ ವಿಷಯದ ಬಗ್ಗೆ ನೀವು ಆಳವಾಗಿ ಅಧ್ಯಯನ ಮಾಡಿ, ಕ್ಷೇತ್ರಕಾರ್ಯ ಕೈಗೊಂಡು ಬಹು ಶ್ರಮವಹಿಸಿ ಈ ಕೃತಿಯನ್ನು ರಚಿಸಿರುವಿರಿ. ನಿಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಪ್ರೊ. ಬಿ.ವಿ.ವೀರಭದ್ರಪ್ಪ

೬.೧೨.೯೯

◆

ಲೇಖನಗಳ ಸಂದರ್ಭ ಸೂಚಿ

ವಿವಾಹಬಾಹಿರ ಸಂಬಂಧಗಳಲ್ಲಿ ಲಿಂಗಸಮಾನತೆಯ ಪ್ರಶ್ನೆ : ಪಾತರದವರನ್ನು ಜೋಗತಿಯರನ್ನು ಅನುಲಕ್ಷಿಸಿ; ಬುಡಕಟ್ಟು ಅಧ್ಯಯನ, ೨೦೦೩, ಸಂಪುಟ ೧, ಸಂಚಿಕೆ ೧

ವಿವಾಹ-ವೈಧವ್ಯ-ವಾಟರ್; ಮಹಿಳಾ ಅಧ್ಯಯನ, ಜುಲೈ ೨೦೦೦, ಸಂಪುಟ ೨, ಸಂಚಿಕೆ ೨

ಮಂತ್ರವಿದ್ಯೆ ಮತ್ತು ಮಹಿಳೆ; ೧೬, ೧೭ ನವಂಬರ್ ೧೯೯೮ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವು ಗಂಗಾವತಿಯ ಶ್ರೀ ಚನ್ನಬಸವಸ್ವಾಮಿ ಪಟ್ಟಣ ಸಹಕಾರಿ ಬ್ಯಾಂಕ್ ಸಹಯೋಗದೊಂದಿಗೆ ನಡೆಸಿದ ದೇಶಿ ಸಮ್ಮೇಳನದಲ್ಲಿ, ಸಂವಾದಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ. ಇದು ಸಂಕ್ರಮಣ ಮೇ ೧೯೯೯, ಸಂಪುಟ ೩೪, ಸಂಚಿಕೆ ೫ ರಲ್ಲಿ ಮಂತ್ರವಿದ್ಯೆ ಮತ್ತು ಸಂಸ್ಕೃತಿ ಎನ್ನುವ ಶಿರೋನಾಮೆ ಅಡಿಯಲ್ಲಿ ಅಚ್ಚಾಗಿದೆ.

ಸ್ವಾತಂತ್ರ್ಯ ಯುದ್ಧ : ಮಹಿಳಾ ಜನಪದ ಸಾಹಿತ್ಯ; ಆಗಸ್ಟ್ ೧೯೯೮ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದಲ್ಲಿ ನಡೆದ 'ಕನ್ನಡ ಮಹಿಳೆ ಮತ್ತು ಸ್ವಾತಂತ್ರ್ಯ ಹೋರಾಟ' ಎನ್ನುವ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ. ಈ ವಿಚಾರ ಸಂಕಿರಣದ ಪ್ರಬಂಧಗಳು ಸಂಕಲನ ರೂಪದಲ್ಲಿ ೧೯೯೯ರಲ್ಲಿ ಪ್ರಕಟಗೊಂಡಿದೆ. ಅದನ್ನು ಇಲ್ಲಿ ಪರಿಷ್ಕರಿಸಲಾಗಿದೆ.

ದೇವಸ್ತ್ರೀಯರು; ಅಚಲ ಪತ್ರಿಕೆ, ಫೆಬ್ರುವರಿ ೨೦೦೩, ಸಂಪುಟ ೧೮, ಸಂಚಿಕೆ೨ ಮತ್ತು ಏಪ್ರಿಲ್ ೨೦೦೩, ಸಂಪುಟ ೧೮, ಸಂಚಿಕೆ ೩-೪.

ಸಿರಿ - ಸ್ತ್ರೀಶಕ್ತಿ ಚೈತನ್ಯ; ೨೬, ೨೭, ೨೮ ಡಿಸೆಂಬರ್ ೨೦೦೨ರಲ್ಲಿ Fossils ನವರು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗ ಹಾಗೂ ಜಾನಪದ ಅಧ್ಯಯನ ವಿಭಾಗದ ಸಹಯೋಗದೊಂದಿಗೆ ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಮಹಿಳಾ ಜನಪದ ಕಲೆಗಳು : ಹೊಸ ಹುಡುಕಾಟ; ೨೩ ಫೆಬ್ರುವರಿ ೨೦೦೩ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅವರು ಚೆಳ್ಳಗುರ್ಕಿಯಲ್ಲಿ ನಡೆಸಿದ ಸಂವಾದಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

ಅಥಣಿ ದೇವದಾಸಿ ವಿಮೋಚನಾ ಸಂಸ್ಥೆ; ಮಹಿಳಾ ಅಧ್ಯಯನ, ಜುಲೈ ೨೦೦೦, ಸಂಪುಟ ೨, ಸಂಚಿಕೆ ೨

ರಂಗಭೂಮಿಯ ಅಂಗಳದಲ್ಲಿ ಸುಭದ್ರಮ್ಮ ಮನ್ಸೂರು; ಮಹಿಳಾ ಅಧ್ಯಯನ ಜನವರಿ ೨೦೦೦, ಸಂಪುಟ ೨, ಸಂಚಿಕೆ ೧

ಸ್ತ್ರೀ ಕಥನ

ಡಾ. ಶೈಲಜ ಹಿರೇಮಠ

ಮಹಿಳಾಪರ ಸಾಂಸ್ಕೃತಿಕ ಹುಡುಕಾಟವನ್ನು ತಮ್ಮ ಪರಮ ಧ್ಯೇಯವನ್ನಾಗಿಸಿಕೊಂಡು ಗಂಭೀರ ಚಿಂತನೆಯಲ್ಲಿ ತೊಡಗಿರುವ ಡಾ. ಶೈಲಜ ಹೀರೆಮಠ ಇವರು ಇತ್ತೀಚೆಗಿನ ಪ್ರಖರ ಬರಹಗಾರ್ತಿಯರಲ್ಲಿ ಒಬ್ಬರು. ಬಹುಕಾಲದಿಂದ ವ್ಯಕ್ತಗೊಂಡ ಸ್ತ್ರೀಪರ ಪ್ರತಿರೋಧಗಳನ್ನು ಜಾನಪದ ಮತ್ತು ದೇಸಿ ಪರಂಪರೆಯಲ್ಲಿ ಹುಡುಕುತ್ತಿರುವ ಕೆಲವೇ ಸಂಶೋಧಕರಲ್ಲಿ ಇವರೂ ಒಬ್ಬರು ಎಂಬುದು ಹೆಮ್ಮೆಯ ವಿಚಾರ. ಇವರ 'ಪಾತರದವರು' ಪುಸ್ತಕ ಈಗಾಗಲೇ ಅಪಾರ ಮೆಚ್ಚುಗೆ ಗಳಿಸಿದ ವಿನೂತನ ಪ್ರಯತ್ನ. ಹಾಗೆಯೇ ಈ ' ಸ್ತ್ರೀ ಕಥನ ' ಪುಸ್ತಕ ಕೂಡ ಅವರ ಸೂಕ್ಷ್ಮಗ್ರಾಹಿ ಒಳನೋಟಗಳಿಗೆ ಹಿಡಿದ ಕನ್ನಡಿ. ಶಿಸ್ತುಬದ್ಧ ಹಾಗೂ ಪ್ರಾಮಾಣಿಕ ಕಳಕಳಿಯಿಂದ ಅಧ್ಯಯನ ಕೈಗೊಂಡಿರುವ ಡಾ. ಶೈಲಜ ಅವರ ಭವಿಷ್ಯ ಮತ್ತಷ್ಟು ಉಜ್ವಲವಾಗಲಿ ಎಂದು ಹಾರೈಸುತ್ತೇನೆ.

◆ ಡಾ. ಹಿ. ಚಿ. ಬೋರಲಿಂಗಯ್ಯ

ಸ್ತ್ರೀ ಕಥನ

ಭುವನ ಪ್ರಕಾಶನ
ವಿದ್ಯಾರಣ್ಯ ೫೮೩ ೨೭೬